ಹಾಗಾದರೆ ಒಮ್ಮೆ ಕೈಸರರನ್ನು ಅಧಿಕಾರದಿಂದ ತೆಗೆದು ಹಿಟ್ಲರನನ್ನು ಅದಕ್ಕೆ ಏರಿಸುವುದೂ, ಆ ಮೇಲೆ ಹಿಟ್ಲರನನ್ನು ಕಳಚಿ ಕೈಸರನನ್ನು ಸಿಂಹಾಸನದಲ್ಲಿ ಇರಿಸುವುದೂ, ಹೀಗೆ ಯಾವುದರ ಸಲುವಾಗಿ ಜರ್ಮನರು ಆಗಾಗ ಮಾಡುತ್ತಿರುವರೋ ತಿಳಿಯದು ಅಂತೂ ಅವರಿಗೆ ತಮ್ಮ ಒಡೆಯರ ಕುರಿತು ಯಾವಾಗಲೂ ತೃಪ್ತಿ ಇರುವುದಿಲ್ಲ!

◈

ಅಂಥ ಭಕ್ತಿಯು ಜರ್ಮನರ ಒಂದು ರಾಷ್ಟ್ರೀಯ ದೌರ್ಬಲ್ಯವಾಗಿದೆ. ಆ ದೌರ್ಬಲ್ಯವು ವಿನಾಶಗೊಳ್ಳುವ ತನಕ ಜರ್ಮನಿಯು ಸ್ಥಿರವಾದ ಶಾಂತಿಯನ್ನು ಹೊಂದಲು ಸಾಧ್ಯವಾಗಲಾರದು.

◈

ಲಂಡನಿನಲ್ಲಿ ಜನರಿಗೆ ಯುದ್ಧದ ಚಟುವಟಿಕೆಗಳ ಕುರಿತು ಇತ್ತೀಚೆಗೆ ಕುತೂಹಲಗಳು ಕಡಿಮೆಯಾಗಿದೆಯೆಂದು ತಿಳಿಯುತ್ತದೆ!

◈

ಇದು ವರೆಗೆ ಯುದ್ಧವು ಆಗುತ್ತಿರುವುದರ ನಿದರ್ಶನವಾಗಿ ಯಾವುದೊಂದು ವಿಶೇಷಗಳೂ ಅಲ್ಲಿ ನಡೆದಿಲ್ಲವೆಂದು ಬಹಳ ತಮಾಷೆಯ ಸುದ್ದಿಗಳೇ ಕೇಳಿ ಬರುತ್ತಿವೆ.

◈

ಗ್ಯಾಸ್ ಮಾಸ್ಕುಗಳನ್ನು ಮುಖಕ್ಕಿಟ್ಟು ತಿರುಗಾಡುವುದನ್ನು ಅಲ್ಲಿ ಜನರು ಈಗೀಗ ಬಿಟ್ಟಿರುವರು. ಯುದ್ಧವು ಆರಂಭವಾದಾಗ, ಬೇರೆ ಹಳ್ಳಿ ಗ್ರಾಮಗಳಿಗೆ ಸರಕಾರದಿಂದಲೇ ಕಳುಹಿಸಲಾದ ಹೆಂಗುಸರು ಮಕ್ಕಳು, ಅಸಂಖ್ಯರಾಗಿ ತಿರಿಗಿ ಲಂಡನಿಗೆ ಬಂದು ಸಂತಾನ ಸಂಸಾರ ಹೂಡುತ್ತಿರುವರು

◈

ಕಾವಾಗಿಯೇ ಲಂಡನನ್ನು ಬಿಟ್ಟು ಹೋದವರೆಲ್ಲರೂ ಅಲ್ಲಿಗೆ ಮರಳಿ ಬಂದಿರುವರು!

◈

ಇತ್ತೀಚೆಗೆ ಜರ್ಮನರು ಸಮುದ್ರದಲಿ ಓಡಾಡುವ ಹಡಗುಗಳಿಗೆ ಬಹಳ ತೊಂದರೆಗಳನ್ನು ಕೊಡುವಂತೆ ಸುರುಮಾಡಿದ್ದಾರೆ. ಅನೇಕ ಹಡಗುಗಳನ್ನು ಧ್ವಂಸಗೊಳಿಸಿದ್ದಾರೆ! ಇವುಗಳಲ್ಲಿ ಹಲವು ಜಪಾನು ಇಟಲಿ ಮೊದಲಾದ ತಟಸ್ಥ ರಾಷ್ಟ್ರಗಳಿಗೆ ಸೇರಿದ್ದೂ ಇವೆ! ಕಡೆಗೆ ಜರ್ಮನರ ತೋಟಿಗಳು, ಜರ್ಮನ್ ನೌಕಾ ಪಡೆಯನ್ನೇ ವಿನಾಶಗೊಳಿಸದಿದ್ದರೆ ಸಾಕು!

CANARA BANK LIMITED.

Head Office **Mangalore.**

A net work of 37 branches.

Alleppey	Calicut	Karkala
Arsikere	Cannanore	Kasaragode
Badagara	Cherai	Kayamkulam
Bangalore	Chickmagalur	Kumbla
Bantwala	Cochin	Mangalore-Bander
Belgaum	Coondapoor	Mangalore-City
Belthangady	Davangere	Manjeshwar
Bombay-Fort	Dharwar	Moolky
Bombay-Mandvi	Doddballapur	Payyannur
Bombay-Girgaum	Ernakulam	Puttur
Bombay-Kalbadevi	Gangulli	Quilon
Bombay-Parel	Hubli	Udipi
		Uppinangady

ವಿಜ್ಞಾನಯುಗ

ಸಿಡಿಯುವ ಮದ್ದುಗಳು ಮತ್ತು ಅವುಗಳ ಉಪಯೋಗಗಳು

ಇಂದಿನ ಯುದ್ಧದಲ್ಲಿ ವಿಜ್ಞಾನದ ಉಪಯೋಗವು ಅಮಿತವಾಗಿ ಆಗುತ್ತದೆ. ಯುದ್ಧವಾರ್ತೆಯನ್ನು ತಿಳಿಯುವುದೆಂದರೆ, ಇಂದಿನ ಅನೇಕ ವೈಜ್ಞಾನಿಕ ವಿಷಯಗಳ ಜ್ಞಾನ ಪಡೆದಂತೆ. ಎಷ್ಟು ಹೆಚ್ಚಾಗಿ ನಾವು ವಿಜ್ಞಾನದ ವಿಷಯ ತಿಳಿದಿದ್ದೋ, ಅಷ್ಟು ಹೆಚ್ಚು ಯುದ್ಧದ ಪರಿಚಯವೂ ಆಗುವುದು. 'ಅತಿ ಪರಿಚಯವಾದರೆ ಅವಜ್ಞೆ'ಯುಂಟಾಗುವುದೆಂಬ ಮಾತು ಇಲ್ಲಿಗೂ ಅನ್ವಯಿಸದೆ ಇಲ್ಲ. ಇಂದಿನ ವೈಜ್ಞಾನಿಕ ವಿಷಯಗಳ ಅನುಭವಗಳನ್ನು ಮಾಡಿಕೊಂಡವನಿಗೆ, ಇಂದು ಜನರು ಯುದ್ಧದ ವಿಷಯವಾಗಿ, ಕೊಡುತ್ತಿರುವ ಈ ವ್ಯಾಮುಖ್ಯತೆಗಳ ಕುರಿತು ಸಹಜವಾಗಿ ತಿರಸ್ಕಾರ ಹುಟ್ಟದೆ ಇರದು. ಬಾನಿನಲ್ಲಿ, ನೆಲದಲ್ಲಿ, ನೀರಿನಲ್ಲಿ ಸುತ್ತಲಿನ ಎಲ್ಲಾ ವಾತಾವರಣದಲ್ಲಿ ಇಂದು ಸಿಡಿಮದ್ದುಗಳು ನಾನಾ ವಿಧದಿಂದ ಸಿಡಿಯುತ್ತಿವೆ! ಅವುಗಳ ಗುಟ್ಟೇನು?

'ಸಿಡಿಮದ್ದು' ಎಂದಕೂಡಲೇ ನಮಗೆ ಕೋವಿಗಳ ನೆನಪಾಗುವುದು. ಗುಂಡುಗಳನ್ನು ದೂರವಾಗಿ ಸಿಡಿಸಂತೆ ಇವುಗಳೇ ಮಾಡುವವು. ದೂರ ಸಿಡಿಯುವುದು ಮಾತ್ರವಲ್ಲ; ಸುತ್ತು ಹರಡುವಂತೆಯೂ ಮಾಡುವವುಗಳು ಇವುಗಳೇ ಆಗಿವೆ.

೧೯೧೩-೧೪ರಲ್ಲಿ ಫ್ರೆಂಚರು, ಹೈಡ್ರೋ ಇಲೆಕ್ಟ್ರಿಕ್ ಪವರು ಸಿಗುವಲ್ಲಿ ದೊರೆಯತಕ್ಕ ಶಕ್ತಿಯಿಂದ ಸಿಡಿಮದ್ದನ್ನು ತಯಾರಿಸಿದರು.

೧೯ನೇ ಶತಮಾನದಲ್ಲಿ ಹೊಸ ತರದ ಸಿಡಿಮದ್ದು ಕಂಡುಹಿಡುಕಲಾಗಿತ್ತು. ಸಾಧಾರಣ ಕೋವಿಯ ಮದ್ದಿನಲ್ಲಿ ಪೊಟೇಶಿಯಂ ನೈಟ್ರೇಟ್, ಕಾರ್ಬನ್ ಮತ್ತು ಸಲ್ಫರ್ ಇವುಗಳ ಮಿಶ್ರವಿದೆ. ಇವುಗಳು ಒಂದೊಂದಾಗಿ ಸಿಡಿವ ಗುಣವುಳ್ಳವುಗಳಾಗಿಲ್ಲ. ಇತ್ತೀಚೆಗೆ ಕೋವಿಯ ಸಿಡಿಮದ್ದಿನ ಶಕ್ತಿಯು ಭಯಂಕರವಾಗಿ ಹೆಚ್ಚಾಗಿದೆ. ಆದುದರಿಂದಲೇ ಇಂದಿನ ಯುದ್ಧದಲ್ಲಿ ಸಿಡಿಮದ್ದಿನ ರುದ್ರ ಕಾರ್ಯಗಳ ವಾರ್ತೆಯು ಕೇಳಿ ಬರುತ್ತದೆ.

ಪ್ರತಿಯೊಂದು ಸಿಡಿಮದ್ದಿನ ಆಸ್ಫೋಟವೂ ಒಂದೇ ರೀತಿಯಿಂದ ಆಗುತ್ತದೆ. ಕೈಕನೆ ಬಿಸಿಗ್ಯಾಸಿನ ಒತ್ತಾಟವು ತೀವ್ರವಾಗಿ ತಾಗಿದ್ದರೆ ಸಿಡಿಮದ್ದು ಸಿಡಿಯುವುದು.

ಒಬ್ಬ ಸಿಪಾಯಿಯು ತನ್ನ ಕೈಯ ರೈಫಲ್‌ಬಿಟ್ಟಾಗ ಹೇಗೆ ಸಿಡಿಮದ್ದು ಸ್ಫೋಟನವಾಗುತ್ತದೆಂದು ಗೊತ್ತಾಗುವುದು. ಸಿಡಿಮದ್ದಿಗೆ ಬಿಸಿ ಗ್ಯಾಸಿನ ಒತ್ತಾಟನನ್ನು ಕೊಡುವುದೆಂದರೆ ಕೋವಿ ಹೊಡೆಯುವುದು. ಹಲವು ಸಲ ಕೋವಿ ಹೊಡೆಯದೆ ಅಂತಹ ಗ್ಯಾಸಿನ ಒತ್ತಾಟವು ಸಿಕ್ಕಿದರೆ ಅಕಸ್ಮಾತ್ತಾಗಿ ಕೋವಿ ಸಿಡಿಯುವುದೂ ಉಂಟು.

ಹೀಗೆ ಸಿಡಿಮದ್ದುಗಳಿಂದಲೇ ಬಾಂಬುಗಳನ್ನು ತಯಾರಿಸಿ ಬಿಡುತ್ತಾರೆ. ಊರಿಗೆ ಊರೇ, ಜನರ ಜಂಗುಳಿಯೇ ನಾಶವಾಗುತ್ತದೆ. ಸಮುದ್ರದಲ್ಲಿರುವ ಹಡಗುಗಳನ್ನು ಧ್ವಂಸಮಾಡುವ ಸಿಡಿಮದ್ದುಗಳೂ ಇಂತಹವುಗಳೇ ಆಗಿವೆ. ಬೇರೆ ಬೇರೆ ದೇಶಗಳ ಕ್ರಾಂತಿಕಾರರು, ತಾವು ದ್ವೇಷಿಸುತ್ತಿರುವ ಜನಾಂಗಗಳನ್ನು, ಸರಕಾರಗಳನ್ನು ಹದಗೆಡಿಸುವಲ್ಲಿ ಸಿಡಿಮದ್ದನ್ನು ಬಹಳವಾಗಿ ಉಪಯೋಗ ಮಾಡಿಕೊಂಡಿದ್ದಾರೆ. ಹಿಂದೆ ಜಾರನನ್ನು ಪದಚ್ಯುತನನ್ನಾಗಿ ಮಾಡಲು ಅವನ ವಿರೋಧಿಗಳು ಬಹಳ ಇಂತಹ ಕೃತ್ಯಗಳನ್ನು ಮಾಡಿದ್ದಾರೆ. ಜರ್ಮನಿಯ ಹಿಟ್ಲರನ ವಿರುದ್ಧ ದಂಗೆಯೇಳುವವರೂ ಹಾಗೆಯೇ ಯತ್ನಿಸುತ್ತಿರುವರು! ಭಾರತ ದೇಶದಲ್ಲಿಯೂ ಅಂತಹ ಹಲವು ಘಟನೆಗಳು ನಡೆದುದಿವೆ.

ಇಂದಿನ ಯುದ್ಧವನ್ನು ಭಯಂಕರ ರೂಪಕ್ಕೆ ತರುವಲ್ಲಿ ಈ ಸಿಡಿಮದ್ದುಗಳ ನಾನಾ ಉಪಯೋಗಗಳನ್ನು ಮಾಡಿಕೊಂಡಿದ್ದಾರೆ. ಅವುಗಳನ್ನು ಸಂಶೋಧಿಸಿ ಬೋಧಿಸಿದ ವೈಜ್ಞಾನಿಕರನ್ನು ಜಗತ್ತಿನ ಶಾಂತಿಪ್ರಿಯರು ದೂಷಿಸುತ್ತಿದ್ದಾರೆ.

ಸಿಡಿಮದ್ದಿನ ಉಪಯೋಗವೇ ಗೊತ್ತಿರದಿದ್ದರೆ ಜರ್ಮನರು ಪೋಲೆಂಡನ್ನು ಕೈಯಲ್ಲಿ ಕತ್ತಿ ಹಿಡಿದು ನುಗ್ಗಿಬರುತ್ತಿದ್ದರು. ಇಂದು ಆದಂತೆಯೇ ಹಾಗಿದ್ದರೂ ಭಯಂಕರ ರಕ್ತದ ಪ್ರವಾಹವು ಹರಿಯದೆ ಇರುತ್ತಿರಲಿಲ್ಲ. ಹಿಂದಿನ ರೋಮನ್ ದುರ್ಗಗಳಂತೆ ಇಂದಿನ ಸಿಜ್‌ಫಿಡ್ ದುರ್ಗವಾದರೂ ಇದ್ದರೆ, ಇಂದಿನಂತೆಯೇ ಅನೇಕರುಂದಿ ವೀರರಿಗೆ ದುರ್ಗವನ್ನೊಡೆದು ಮುಂದೆ ಹೋಗುವುದು ಕಷ್ಟವಾಗದೆ ಇರುತ್ತಿರಲಿಲ್ಲ. ಆದುದರಿಂದ ಸಿಡಿಮದ್ದು ತಾನಾಗಿ ಒಳ್ಳೆಯದಿದ್ದರೂ, ಕೆಟ್ಟದೆನಲೂ ಆಗುವುದಿಲ್ಲ; ಎಲ್ಲಾ ಅದರ ಉಪಯೋಗವನ್ನೂ ಉಪಯೋಗಿಸುವವನನ್ನೂ ಹೊಂದಿಕೊಂಡಿದೆ.

ಗಂಡುಸರಿಗಿಂತ ಹೆಂಗಸರು ಹೆಚ್ಚು!

ಹೆಚ್ಚು ದೇಶಗಳಲ್ಲಿ ಸ್ತ್ರೀಯರ ಸಂಖ್ಯೆಯೇ ಗಂಡುಸರಸಂಖ್ಯೆಗಿಂತ ಹೆಚ್ಚಾಗಿದೆ. ಬ್ರಿಟನಿನಲ್ಲಿ ಪ್ರತಿ ೧೦೦೦ ಗಂಡುಸರಿಗೆ ೧೦೬೮ ಹೆಂಗುಸರಂತೆಯೂ; ಫ್ರಾನ್ಸಿನಲ್ಲಿ ೧೦೬೧ರಂತೆಯೂ; ಜರ್ಮನಿಯಲ್ಲಿ ೧,೦೫೮ರಂತೆಯೂ; ರಶ್ಯಾದಲ್ಲಿ ೧೧೦೩ ರಂತೆಯೂ; ಪೋರ್ಚುಗಲಿನಲ್ಲಿ ೧೦೯೬ ರಂತೆಯೂ; ಎಸ್ಟೋನಿಯಾದಲ್ಲಿ ೧೧೩೯ ರಂತೆಯೂ ಇದೆ. ಹೆಂಗುಸರಿಗಿಂತ ಗಂಡಸರು ಹೆಚ್ಚಿರುವ ದೇಶಗಳು ಕೆಲವು ಮಾತ್ರ. ಅಮೇರಿಕದಲ್ಲಿ ೧೦೦೦ ಗಂಡುಸರಿಗೆ ೯೭೬ ಹೆಂಗುಸರಂತೆ ಇದ್ದಾರೆ. ಕ್ಯೂಬಾದಲ್ಲಿ ೧೦೦೦ ಗಂಡುಸರಿಗೆ ೮೮೮ ಹೆಂಗುಸರಂತೆಯೂ ಇದ್ದಾರೆ!

ಅಮರಕೀರ್ತಿಶಾಲೀ ಮೆಜಿನೊ

'ಮೆಜಿನೊ' ದುರ್ಗದಿಂದ ಇಂದು ಜಗತ್ತಿನಲ್ಲಿ ಮೆಜಿನೋ ಶಬ್ದವು ಅಮರವಾಗಿದೆ. ಪ್ರತಿಯೊಂದು ಮನೆಯ ಮಾತಾಗಿದೆ. ಆ ದುರ್ಗವನ್ನು ಕಟ್ಟಿಸುವ ಮಹಾ ಯೋಜನೆಯದು ಅದನ್ನೇ ಆದುದರಿಂದ ಆ ದುರ್ಗಕ್ಕೆ ಆ ಹೆಸರು ಬಿತ್ತು. ಆತನು ಫ್ರಾನ್ಸಿನ ಯುದ್ಧ ಮಂತ್ರಿಯಾಗಿದ್ದನು.

ಆತನಿಗೆ ಜರ್ಮನರ ಬುದ್ಧಿಗೊತ್ತಿತ್ತು; ವರ್ಸಲೆ ಒಪ್ಪಂದವಾದ ಮೇಲೆ, ಎಂದಾದರೊಂದು ದಿನ ಜರ್ಮನರು ಫ್ರಾನ್ಸಿಗೆ ದಾಳಿಯಿಡಲಿರುವರೆಂದು ಆತ ತಿಳಿದಿದ್ದ. ಹಾಗೆ ಜರ್ಮನರನ್ನು ತಡೆಗಟ್ಟಲು ಈ ಯೋಜನೆಯನ್ನು ಮಾಡಲು ಒತ್ತಾಯಪಡಿಸಿದನು. ದೀರ್ಘ ಆಕಾರ, ಪ್ರಸನ್ನ ಮುಖದ ತೇಜಸ್ಸು ಆಗಿದ್ದ ಸಭೆಗಳಲ್ಲಿ ಆತನು ಎಲ್ಲರಿಗೂ ಗಣನೀಯನಾಗಿದ್ದನು.

ಹಿಂದಿನ ಯುದ್ಧದಲ್ಲಿ ಆತನು ಕಾಲು ಕಳಕೊಂಡಿದ್ದನು. ಆ ಮೇಲೆ ೧೯೧೭ರ ತರುವಾಯ ಆತನು ರಾಜಕೀಯದಲ್ಲಿ ಬಹಳ ಹೆಸರು ಪಡೆದನು.

THE PIE-MONEY BANK LTD.,
Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction Lit Funds ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

Apply for particulars—

K. R. GURU, *Managing Director*

೩೬ ತಾಸುಗಳೊಳಗೆ ನಿಃಶ್ಚಯು ಮಾಯವಾಯಿತು

ಹೆಂಗಸಿನ ಪಿತ್ತ ಬಾಧೆಯು ದೀರ್ಘಕಾಲ ಸಂಭವಿಸಿತು

ಕ್ರುಶನ್ ಲವಣವು ಅವಳನ್ನು ಸಂಪೂರ್ಣ ತೊಂದರೆಗಳಿಂದ ಪಾರುಮಾಡಿತು

ಒರ್ವ ಮಹಿಳೆಯು ಹೀಗೆ ಬರೆಯುತ್ತಾಳೆ—

'ನಾನು ನನ್ನ ಜೀವಮಾನವೆಲ್ಲ ಪಿತ್ತ ಬಾಧೆಯಿಂದ ನರಳುತಿದ್ದೆನು. ಇದರಿಂದ ನಾನು ಪ್ರತಿ ಸಲ ಸುಮಾರು 12 ಗಂಟೆಯಿಂದ 46 ಗಂಟೆಗಳ ತನಕ ಸಂಪೂರ್ಣ ಕಳೆಗುಂದತ್ತಲಿದ್ದೆನು. ಕಳೆದ ವರ್ಷ 8 ದಿವಸದಲ್ಲಿ ಎರಡು ಸಲ ಇದಕ್ಕೆ ತುತ್ತಾದೆನು. ನನ್ನ ಪತಿಯ ನನಗಾಗಿ ಒಂದು ಬಾಟ್ಲಿ ಕ್ರುಶ ಲವಣವನ್ನು ತಂದನು. ಅದನ್ನು ಸ್ವಲ್ಪ ಬೆಳಗ್ಗಿನ ಕಾಫಿಯಲ್ಲಿ ಮಿಶ್ರ ಮಾಡಿ ಸೇವಿಸಲು ಪ್ರಾರಂಭಿಸಿದಂದಿನಿಂದ ನನಗೆ ಅಂಥಾ ತೊಂದರೆಗಳೇ ಇರದ್ದನ್ನು ನೋಡಿ ತುಂಬಾ ಆಶ್ಚರ್ಯವೂ ಸಂತೋಷವೂ ಆಗುತ್ತದೆ.'

ವಿ. ಇ. ಡಿ.

ಪಿತ್ತ ಬಾಧೆಯು ಅಜೀರ್ಣದಿಂದ ಉಂಟಾಗುತ್ತದೆ. ಇದಕ್ಕೆ ನಾವು ಕ್ರಮತಪ್ಪಿ ತೆಗೆದುಕೊಳ್ಳುವ ಆಹಾರವೇ ಕಾರಣ. ಈ ಆಹಾರವು ಅನ್ನಕೋಶದಲ್ಲಿ ಜಮೆಯಾಗಿ, ಕೆಟ್ಟ ವಾಯುವನ್ನು ಉಂಟುಮಾಡುತ್ತದೆ. ಇದನ್ನು ನಾಶಮಾಡಲು ಸಾ

ವಣಗಳಾಗಲೀ ಬೇ ಈವಾರು ಲವಣಗಳು ಲವಣದಲ್ಲಿ ಕಾಣಬ ಒಂದು ಲವಣವು ಬೇಕಾದುವು.

ಅವು ರಾಶಿ ಅಜೀರ್ಣ ಲಾಡಿ

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿಮತ್ತು ದಿ ಜೊಯಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಯಾತ್ರಾರ್ಥಿಗಳಿಗೆ -- ಪುಣ್ಯಾರ್ಜನೆಗೆ -- ಮಹೋತ್ಸವದ -- ಅತ್ಯುತ್ತಮ ಸಂದರ್ಭ

ಬರುವ ತಾರೀಕು
6-12-39ರಿಂದ ತಾ-10-12-39ರ ವರೆಗೆ
ಶ್ರೀ ಧರ್ಮಸ್ಥಳ ದೀಪೋತ್ಸವ.
ಅತ್ಯುಜ್ವಲ ಸ್ಥಳಮಹಿಮೆ—ಅನ್ನದಾನದ ಉದಾರತೆ—ವಿಜೃಂಭಣೆಯ ದೀಪಾಲಂಕಾರ ಮತ್ತು ಉತ್ಸವದ ಸೊಬಗು
ಪಾಪನಾಶಿನಿ ನೇತ್ರಾವತಿ ನದಿಯ ತೀರ್ಥಸ್ನಾನದ ಅತ್ಯನುಕೂಲದ ಸಮಯ

ಶ್ರೀ ಧರ್ಮಸ್ಥಳ
ಲಕ್ಷದೀಪೋತ್ಸವ ಸಮಾರಂಭ
ಮತ್ತು
ಶ್ರೀ ಸುಬ್ರಮ್ಹಣ್ಯ
ಷಷ್ಠಿ ಮಹೋತ್ಸವ

ಬರುವ ತಾರೀಕು
8-12-39ರಿಂದ ತಾ 17-12-39ರ ವರೆಗೆ
ಲಕ್ಷದೀಪೋತ್ಸವ 10-12-39
ಹೂವಿನ ತೇರು 11-12-39
ಪಂಚಮಿ ರಥೋತ್ಸವ 16-12-39
ಶ್ರೀ ಸುಬ್ರಮ್ಹಣ್ಯ ಚಂಪಾಷಷ್ಠಿ ಮಹಾರಥೋತ್ಸವ 17-12-39
ಆದಿ ಸುಬ್ರಮ್ಹಣ್ಯದ ದಿವ್ಯ ಸಂದರ್ಶನ
ಕುಮಾರ ಪರ್ವತದ ಸುಮನೋಹರ ನೋಟ—ಶ್ರೀ ಕುಮಾರ ಪರ್ವತದಿಂದ ಹರಿದು ಬರುವ ಪವಿತ್ರ ಕುಮಾರಧಾರಿ ನದಿಯ ಪುಣ್ಯ ದರ್ಶನ!

ಸಮಗ್ರ ಹಿಂದೂಗಳಿಂದ ಶ್ರೀ ಧರ್ಮಸ್ಥಳ ಮತ್ತು ಶ್ರೀ ಸುಬ್ರಮ್ಹಣ್ಯ ಕ್ಷೇತ್ರಗಳು ಮಹಾಪವಿತ್ರ ಯಾತ್ರಾಸ್ಥಳಗಳೆಂದು ಪರಿಗಣಿಸಲ್ಪಟ್ಟು ಪ್ರತಿ ವರ್ಷವೂ ಅನೇಕ ಕಡೆಗಳಿಂದ ಲಕ್ಷಾಧಿಕ ಭಕ್ತವೃಂದವು ನೆರೆದುಬಂದು ಶ್ರೀ ದೇವರ ದರುಶನವನ್ನು ಪಡೆದು ಕೃತಾರ್ಥರಾಗುವರು—ಇಂಥಾ ಪುಣ್ಯ ಕ್ಷೇತ್ರಗಳನ್ನು ಸಂದರ್ಶಿಸಲು ಅಮೋಘವಾದ ಸುಸಮಯ

ಯಾತ್ರಾರ್ಥಿಗಳ ಸೌಕರ್ಯಕ್ಕಾಗಿ ಜಾತ್ರಾ ದಿವಸಗಳಲ್ಲಿ ನಮ್ಮ ಜಿಲ್ಲೆಯ ಎಲ್ಲಾ ಕಡೆಗಳಿಂದಲೂ ಸ್ಪೆಶಲು ಸರ್ವಿಸುಗಳನ್ನು ಚಾಲುಮಾಡುವ ಯೋಗ್ಯ ಏರ್ಪಾಡನ್ನು ಮಾಡಿರುತ್ತದೆ

ಹೆಚ್ಚಿನ ವಿವರಕ್ಕೆ ಈ ಕೆಳಗಿನ ಸಂಸ್ಥೆಗಳ ಜೊಯಂಟ್ ಮೆನೇಜರರವರಿಗೆ ಬರೆದು ಅಥವಾ ಸ್ವತಃ ಕೇಳಿ ತಿಳಿಕೊಳ್ಳುವುದು—

JOINT MANAGERS.

The Combined Booking Agency, MANGALORE

The Joint Booking Office, KODIALBAIL.

(Regd

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ ಭಾಗ, ಹಲ್ಲುವೇದನೆಗಳಿಗೂ ಎದೆನೋವು ಶ್ವಾಸಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಪಕ್ಕವಾತ ಪೆಗ್ಗಿಮ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ಕುರಿಕಜ್ಜಿ, ಹುಳುಕಡ್ಡಿ ನಿತ್ಯ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ

ಮಂಗಳೂರಿನಲ್ಲಿ ಶಾ ಕಂಪೆನಿಯಲ್ಲಿ ದೊರೆಯುತ್ತದೆ

HOUNSA

ಹಂಸಾ ಸ್ನೋ
ಮತ್ತು
ಬ್ರಿಲ್ಲಂಟೈನ್
ಉಪಯೋಗಿಸಿರಿ

ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟೆ ಬಜಾರ್, ಮಂಗಳೂರು.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ತೇಜ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 3 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಆಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಿಡೇಪಿ,
P. O. Peridepi (ಸೆಲ್ಲಿಪುರಂ ಡಿ.)

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ--ಅವ್ವಲ್ ತರದ ಗುಡ್ಡು ಮುಡಿಗೆ	1 9—0	1—10—0
,, ದುಯಂ ,, ,,		—
,, ಅವ್ವಲ್ ಸುಗ್ಗಿ ,,		—
,, ದುಯಂ ,, ,,		—
ಅಕ್ಕಿ ಅವ್ವಲ್ ಗುಡ್ಡ ,,	5—0 0	
,, ದುಯಂ ,, ,,	4—12—0	
,, ಅವ್ವಲ್ ಸುಗ್ಗಿ ,,	4—11—0	4—11—
,, ದುಯಂ ,, ,,	4—6—0	4—8—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	30—0—0	45—0—0
,, ಸಿಪ್ಪೆ ಇದ್ದದ್ದು ,,	33—0—0	48—0—0
ಕೊಬ್ಬರಿ ಆಫೀಸು ಖಂಡಿಗೆ	62—8—0	—
,, ದಿಲ್‌ಪಸಂದಿ ,,	—	—
ತೆಂಗಿನ ಎಣ್ಣೆ ಮಣಕ್ಕೆ	4—5—0	4—5—0
ಸಿಪ್ಪೆಯದ್ದ ಅಡಿಕೆ 1000ಕ್ಕೆ	1—12—0	2—8—0
ಗೇರುಬೀಜ ಮುಡಿಗೆ	3—12—0	4—0—0
ಕಲ್ಲಿನ ಬೆಲ್ಲ ಖಂಡಿಗೆ	37—8—0	42—8—0
ಒಳ್ಳೇಮೆಣಸು ಹಂದ್ರಡ್ಡೇಟಿಗೆ	15—0—0	16—8 0

Date 1-12-1939 ವಾರ್ಷಿಕ ಚಂದಾ ರೂ. 2-0-0 ಅಂಚೆ ವೆಚ್ಚ ಸೇರಿ ರೂ.2-12-0 Regd.No. M 3406

ಸ್ವದೇಶಾಭಿಮಾನಿ

SWADESHABHIMANI

ಸಂಪುಟ 33] ತಾರೀಕು 1-12-1939 [ಸಂಚಿಕೆ 47

The Bombay Life Assurance Company, Ltd.,

(Estd. 1908)

COMPARE

Your Life Assurance with any other property you possess

What is its Guaranteed Value

If you live-today-a few years more-when you are old?

If you die-to your family and dependants?

REMEMBER THAT

If you live, Life Insurance takes the place of your professional income during your old age.

If you die, it provides your family with enough income for their maintenance and the education of your children.

"BOMBAY LIFE" offers all that is best in LIFE ASSURANCE.

1938 RECORD

Completed Business	Rs. 1,44,91,000
Life Assurance Fund	Rs. 1,17,69,748
Total Assets	Rs. 1,31,28,998

To insure or to represent it pays you to consult

KOCHIKAR BROTHERS LTD.,

MADRAS BRANCH SECRETARIES,

Bombay Life Building,

Sir Lalubhai Samaldas Road,

Gandhi Nagar, UDIPI

OR ANY OF THEIR FOLLOWING OFFICES,

Puthiyara, Calicut. Car Street, Mangalore. Visweswarapuram Circle, Bangalore City. Post Box No. 337 Mount Road, Madras. Gautam Nivas, Charni Road, Girgaum, Bombay No. 4. Central Station Road, Trivandrum.

PHYSICAL FITNESS

is the first essential in games and in every social activity.

You need not worry hereafter for your impaired vitality premature old age and nervous break-down if you try

"BHUVANENDRA AMRITHPRASH"

which will tone the nervous system, build healthy tissues and enrich the blood.

Thus keeps you fresh and sprightly.

Bhuvanendra Products, Ltd.,

Katapady, S, Kanara.

(BRANCH—KUMTA, N. KANARA.)

Stockist: **U. Panduranga Nayk**, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹಪಾರ್ಶ್ವತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು. ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್

ಕಟಪಾಡಿ, - ದ. ಕನ್ನಡ

ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.

Edited Printed & Published by A. S. Kamath at the Sharada Press, Car Street, Mangalor

ಸ್ವದೇಶಾಭಿಮಾನಿ

ಂಪುಟ ೩೩] ತಾರೀಕು ೮ನೇ ದಶಂಬರ ೧೯೩೯ [ಸಂಚಿಕೆ ೪೮



ಕಾಪು ದೀಪಸ್ತಂಭ

ಕಾಂಗ್ರೆಸನ್ನು ಸಂಗ್ರಾಮ ರಂಗಕ್ಕೆ ಇನ್ನೊಮ್ಮೆ ಬಿಳಿಯುತ್ತಿರುವರೆ?

'ಹೌದು ಬಸವಣ್ಣ' ಎಂಬವರ ಮಾತಿಗೆ ಬೆಲೆಯಿಲ್ಲ

ಗಾಂಧಿಜಿಯವರು ಭಾರತದ ಅನಭಿಷಿಕ್ತ ರಾಜರು

ಬ್ರಿಟನಿಗೆ ಬ್ರಿಟಿಷರ ಎಚ್ಚರಿಕೆ

ಬ್ರಿಟನು ಹೂಡುವಲೇಕೋದ್ದಾರಿಕ ಯುದ್ಧಗಳಲ್ಲಿ ಸ್ವತಂತ್ರ ಹಿಂದುಸ್ಥಾನವು ಮಾತ್ರ ತನ್ನ ಹಾರ್ದಿಕ ಸಹಕಾರವನ್ನು ಕೊಡಬಲ್ಲುದೆಂಬ ಕಾಂಗ್ರೆಸಿನ ಧೋರಣೆ ಕಾರ್ಯಕ್ರಮಗಳು ಸಮಯಾನುಕೂಲವಾಗಿರುವವೆಂದು ಅವರೇ ಈಗ ಅನ್ನತೊಡಗಿದ್ದಾರೆ.

ಸರಕಾರ ಧೋರಣೆಯ ನಿಷೇಧ

ಬ್ರಿಟಿನ ಜನತೆಯ ಅಭಿಪ್ರಾಯವು ಹಿಂದುಸ್ಥಾನಕ್ಕೆ ಅನುಕೂಲವಾಗಿ ಇರುವದಾದರೂ, ಸರಕಾರದ ಧೋರಣೆಯಲ್ಲಿ ಮಾತ್ರ ಯಾವ ಬದಲಾವಣೆಯೂ ಆದ್ದು ಕಂಡು ಬರುವದಿಲ್ಲ. ಬ್ರಿಟಿಷ ಸರಕಾರದ ಕಡೆಯಿಂದ ಲಾರ್ಡ ಝೆಟ್ಲೆಂಡರು ವಾಯ್ಸರಾಯರ ಭಾಷಣವನ್ನೇ ಸಮರ್ಥಿಸುವದನ್ನು ನೋಡುವಾಗ, ಸರಕಾರವು ಕಾಂಗ್ರೆಸಿನ ಕೇಳಿಕೆಗಳನ್ನು ತಿರಸ್ಕರಿಸಿದಂತೆ ಸ್ಪಷ್ಟವಾಗುತ್ತದೆ. ಬ್ರಿಟಿಷ ಸರಕಾರದ ಮನೋಗತಿ ನೋಡಿ ನಡೆಯಲೇಬೇಕಾಗಿರುವ ದೇಶೀ ರಾಜರು ಮತ್ತು ವಾಯ್ಸರಾಯರು ನಾಮಕರಣ ಮಾಡುವ ಕೆಲವು ಜನ 'ಹೌದು—ಬಸವಣ್ಣನವರು' ಕೂಡಿ ರಚಿಸುವ ರಾಜಕೀಯ ಘಟನೆಯನ್ನು ಒಲ್ಲದ ಹಿಂದುಸ್ಥಾನದ ಬಾಯೊಳಗೆ ತುರುಕುವ ವ್ಯರ್ಥ ಪ್ರಯತ್ನವು ಈಗ ನಡೆಯುತ್ತಾ ಇದೆ. ಆದರೆ ಈ ಪ್ರಯತ್ನಗಳ ನಿಷ್ಪ್ರಯೋಜಕತೆಯು ತೀಸ್ರದಲ್ಲಿಯೇ ಗೊತ್ತಾಗುವದೆಂದೇ ಬ್ರಿಟಿಷ ಪ್ರಮುಖರೇ ಸರಕಾರಕ್ಕೆ ಎಚ್ಚರಿಕೆಕೊಟ್ಟಿದ್ದಾರೆ.

ಗಾಂಧಿಯವರು ಅನಭಿಷಿಕ್ತ ರಾಜರು

'ಮಹಾತ್ಮಾ ಗಾಂಧಿಯವರು ಶಾಂತಿ ಸ್ಥಾಪನೆಯ ಪ್ರಯತ್ನಗಳನ್ನು ಇನ್ನೂ ಬಿಟ್ಟಿರುವದಿಲ್ಲ. ಹಿಂದುಸ್ಥಾನವು ಪೂರ್ಣ ಸ್ವತಂತ್ರವೆಂದೂ, ಅದುರಚಿಸುವ ರಾಜಕೀಯ ಘಟನೆಗೆ ಯುದ್ಧಾನಂತರ ಬ್ರಿಟಿಷ ಸರಕಾರವು ತನ್ನ ಸಮ್ಮತಿಯನ್ನೀಯಬೇಕೆಂದೂ ಕಾಂಗ್ರೆಸು ಸರಕಾರದ ಮುಂದಿಟ್ಟ ಕೇಳಿಕೆಗಳನ್ನು ಸರಕಾರವು ಒಪ್ಪಿ ಅವುಗಳೊಳಗೆ ಒಂದು ಒಪ್ಪಂಬಡಿಕೆಯಾಗುವಂತೆ ಮಹಾತ್ಮರು ಶತಪ್ರಯತ್ನಮಾಡುವರು. ವಾಯ್ಸರಾಯರು ಕಾಂಗ್ರೆಸಿನೊಂದಿಗೆ ಸಂಗ್ರಾಮವನ್ನು ಹೂಡಬಹುದು. ಆದರೆ ಲೋಕ ಯುದ್ಧದಲ್ಲಿ ಬ್ರಿಟನಿಗೆ ಹಿಂದುಸ್ಥಾನದ ಸಹಾಯ ಸಂಪತ್ತು ಪ್ರಾಪ್ತವಾಗಬೇಕಾದರೆ, ಅದು ಮಹಾತ್ಮಾ ಗಾಂಧಿಯವರೊಡನೆ ಒಪ್ಪಂದಿಕೆ ಮಾಡಿಕೊಳ್ಳುವದು ಅಗತ್ಯ. ಯಾಕಂದರೆ ಹಿಂದುಸ್ಥಾನದ ಅನಭಿಷಿಕ್ತ ರಾಜರು ಅವರೇ ಆಗಿರುವರು. ಮಿಲಿಯಾಂತರ ಭಾರತೀಯರಿಗೆ ಅವರ ಮಾತುಬೇದವಾಕ್ಯ ಆಗಿದೆ.' ಎಂದು 'ಅಮೆರಿಕದ ಅತಿದೊಡ್ಡ ಪತ್ರಿಕೆ ಟೈಮ್' ಎಂಬುದು ಹೇಳಿದೆ.

ಸಂಗ್ರಾಮವು ಅವಶ್ಯಂಭಾವಿ

ಪರಂತು ಸರಕಾರದೊಡನೆ ಕಾಂಗ್ರೆಸಿನ ಸಂಗ್ರಾಮವು ಅವಶ್ಯಂಭಾವಿ ಎಂಬಂತೆ ತೋರುತ್ತದೆ. ಯಾಕಂದರೆ ಶಾಂತಿ ಪ್ರಯತ್ನಗಳು ನಡೆಯುತ್ತಿರುವಾಗಲೂ ಸರಕಾರದ ವಿಚಿತ್ರ ಧೋರಣೆಗೆ ಪಂಡಿತ ಜವಾಹರಲಾಲ ನೇಹರೂ ಅವರು ಸರಿಯಾದ ಉತ್ತರವನ್ನು ಕೊಟ್ಟಿದ್ದಾರೆ. ಕಾಂಗ್ರೆಸಿನೊಂದಿಗೆ ಸರಕಾರದ ವಿವಾದರೊಂದು ಒಡಂಬಡಿಕೆಯಾಗಿ ಸ್ನೇಹ ಸಂಬಂಧವು ಕೂಡಿ ಬಾರದಿದ್ದರೆ, ಮುಂದಾಗುವ ದುಷ್ಪರಿಣಾಮಗಳು ಏನೆಂಬುದನ್ನು ತೋರಿಸಿ ಮಹಾತ್ಮರು ಎಚ್ಚರಿಕೆಯನ್ನೂ ಕೊಟ್ಟಿದ್ದಾರೆ. ಈ ಮಾತುಗಳು ಸರಕಾರಕ್ಕೆ ಹಿತಕರವಾಗಿ ಕಂಡಿಲ್ಲ.

ವಾಯ್ಸರಾಯರ ನಿರೂಪಣೆಯನ್ನು ತಿರಸ್ಕರಿಸುವಲ್ಲಿ ಕಾಂಗ್ರೆಸಿನೊಳಗಿನ ಎಲ್ಲ ಪಕ್ಷ ಪ್ರತಿಪಕ್ಷಗಳು ಏಕ ಮುಖವಾಗಿ ಮಾತನಾಡಿವೆ. ಕಾಂಗ್ರೆಸ್ಸಲ್ಲದ ಇತರ ಪಕ್ಷಗಳು ಕೂಡ ಬಹು ಮಟ್ಟಿಗೆ ಕಾಂಗ್ರೆಸ್ಸನ್ನೇ ಸಮರ್ಥಿಸಿವೆ. ಆದ್ದರಿಂದ ಬ್ರಿಟಿಷ ಸರಕಾರದ ಧೋರಣೆಯ ಕುರಿತ. ಅತೃಪ್ತಿಯೂ ವಿರೋಧವೂ ಹಿಂದುಸ್ಥಾನದಲ್ಲಿ ಸಾರ್ವತ್ರಿಕವಾಗಿದೆ ಎಂದು ನಿಸ್ಸಂದೇಹವಾಗಿ ಹೇಳಬಹುದು. ಕೆಲವು ಜನ 'ಹೌದು ಬಸವಣ್ಣ'ನವರು ಮತ್ತು ಸರಕಾರದ ಹಂಗಿಕಯ ಮಾತ್ರ ಅದು ಹೇಳುವದಲ್ಲ ಸರಿಯಾಗಿದೆ ಎಂದಿರುವರು. ಇಂಥ ಸಂಭ್ರದಲ್ಲಿ ಕಾಂಗ್ರೆಸ-ಸರಕಾರಗಳೊಳಗೆ ಸಂಗ್ರಾಮವಾಗುವದಿಲ್ಲವೆಂದು ಹೇಳುವದು ಕಷ್ಟದ ಮಾತಾಗಿದೆ.

ನೋಟೀಸು

1940-41ನೇ ಇಸ್ವಿಯ ಡಿಸ್ಟ್ರಿಕ್ಟ ಬೋರ್ಡ ರಸ್ತೆಗಳ ಕಾಮಗಾರಿ ಬಗ್ಗೆ ರಿಜಿಸ್ಟ್ರಿಗೆ ದಾಕ್ಲುಮಾಡಲ್ಪಟ್ಟ ಕಂಟ್ರಾಕ್ಟದಾರರಿಂದ ಮೊಹರು ಮಾಡಲ್ಪಟ್ಟ ಟೆಂಡರಯಾನಿ ದರಪಾಸ್ತಗಳು ದಕ್ಷಿಣಕನ್ನಡ ಡಿಸ್ಟ್ರಿಕ್ಟ ಬೋರ್ಡ ಇಂಜಿನಿಯರರ ಆಫೀಸಿನಲ್ಲಿ ತಾ. 10-1-40ನೇ ಅವರಾಹ್ನ ಘಂಟೆ 4ರ ತನಕ ತೆಗೆದುಕೊಳ್ಳೋಣಾಗುವುದು.

ಕಂಟ್ರಾಕ್ಟಿಗೆ ಸಮ್ಬಂಧಪಟ್ಟ ಅಂದಾಜು ಪಟ್ಟಿಗಳು ವಗೈರೆ ಡಿಸ್ಟ್ರಿಕ್ಟ ಬೋರ್ಡ ಇಂಜಿನಿಯರರ ಆಫೀಸಿನಲ್ಲಿ ಆಫೀಸು ಸಮಯದಲ್ಲಿ ನೋಡಬಹುದು.

ಮಂಗಳೂರು 30-11-39 (Sd) **P. O. Matthew,** ಡಿಸ್ಟ್ರಿಕ್ಟ ಬೋರ್ಡ ಇಂಜಿನಿಯರು, ದಕ್ಷಿಣ ಕನ್ನಡ.

'ಓವಲ್ಟಿನ್' ಮಿದುಳನ್ನೂ ನರವನ್ನೂ ಪೋಷಿಸುವುದು

ಆರೋಗ್ಯವನ್ನೂ ಬಲವನ್ನೂ ವೃದ್ಧಿಸುವುದು!

ನೀವು ಆಯಾಸಪಟ್ಟಾಗ, ಉಪವಾಸಿನಪಟ್ಟಾಗ ನಿಮ್ಮ ನರನಾಡಿಗಳು ಸೊರಗಿದ್ದಾಗ ಒಂದು ಕಪ್ 'ಓವಲ್ಟಿನ್' ಪಾನೀಯವು ದಣಿವನ್ನು ನಿವಾರಿಸಿ ನರನಾಡಿಗಳನ್ನು ಉತ್ತೇಜಿಸುವಂತೆ ಇನ್ನಾವ ಪಾನೀಯಗಳು ಮಾಡವು.

ಓವಲ್ಟಿನ್ ದೇಹಕ್ಕೆ, ಮಿದುಳಿಗೆ, ನರನಾಡಿಗಳಿಗೆ ತೀಸ್ರದಲ್ಲಿಯೇ ಶಕ್ತಿಯನ್ನು ಉಂಟುಮಾಡುವುದು. ಪ್ರಕೃತಿಯ ಅತ್ಯುತ್ಕೃಷ್ಟ ಶಕ್ತಿವರ್ಧಕ ಆಹಾರಗಳಿಂದ ತಯಾರಿಸಲ್ಪಟ್ಟದ್ದು. - ನೆನೆಹಾಕಿ ಹುರಿದ ಮಾಗಿದ ಬಾರ್ಲಿ, ದನದ ಹಸಿ ಹಾಲು ಅಮೂಲ್ಯವಾದ ನೈಸರ್ಗಿಕ ಶಕ್ತಿವರ್ಧಕ ಜೀವಾತು ಮತ್ತು ಫೊಸ್ಫೆಟೈಡ್ಸಿನಿಂದ ತಯಾರಿಸಿಟ್ಟ 'ಓವಲ್ಟಿನ್' ಸುಪುಷ್ಟವಾದ ದೇಹವನ್ನು ಚುರುಕಾದ ಬುದ್ಧಿಯನ್ನುಂಟುಮಾಡುವಂತೆ ನಿಮ್ಮನ್ನು ಪೋಷಿಸುವುದು.

ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ಮಾರಲ್ಪಟ್ಟಿದೆ.

ವಿತರಣಾಕಾರರು:

ಜೇಮ್ಸ್ ರೈಟ್ ಲಿಮಿಟೆಡ್

ಕಲ್ಕತ್ತಾ, ಬೊಂಬಾಯಿ, ಮದ್ರಾಸು ಮತ್ತು ಕರಾಚಿ

'ಓವಲ್ಟಿನ್'

'OVALTINE ಒಂದು ಪರಿಪೂರ್ಣವಾದ ಆಹಾರಪಾನೀಯ'

'ಓವಲ್ಟಿನ್' ಬಿಸ್ಕುಟುಗಳು:

ರುಚಿಕರ, ಜೀರ್ಣಕರ ಮತ್ತು ಪೋಷಣಯುಕ್ತವಾದುವು. ಎಲ್ಲ ಸಮಯಗಳಿಗೂ ಉತ್ತಮವಾದ ಬಿಸ್ಕುಟುಗಳು. ಇವುಗಳಲ್ಲಿ ಪೈಶಿಷ್ಟ್ಯ ಬೆಲೆಯ 'ಓವಲ್ಟಿನ್' ಸೇರಿರುವುದು. 4 ಮತ್ತು 8 ಔನ್ಸುಗಳ ಪೆಟ್ಟಿಗೆಗಳಲ್ಲಿ ಮತ್ತು ಒಂದು ರಾತ್ಲಿನ ಟಿನ್ನುಗಳಲ್ಲಿ ಮಾರಲ್ಪಡುತ್ತದೆ.

ಈ ವಾರದ ಕತೆ:

ಕೃಷ್ಣವೇಣಿ

[ಕನ್ನಡಿಸಿದವರು: ಕಟಿಪಾಡಿ ಶ್ರೀನಿವಾಸ ಶೆಣೈ, ಅಧ್ಯಾಪಕ, ಕಾರ್ಕಳ]

ಅವಳು ಇನ್ನೂ ಕನಸಿನ ರಾಜ್ಯದಲ್ಲಿ ವಿಹರಿಸುತ್ತಿದ್ದಳು. ತನ್ನ ಕೈಗಾಡಿಯ ಮೇಲೆ ಕೂತು ಕೃಷ್ಣವೇಣಿ ತೋಟಕ್ಕೆ ನಡೆದಳು. ನಂಧನಸನದೊತ್ತೆ ಶೋಭಾಯಮಾನವಾದ ಹೊತೋಟವದು. ಗಾಡಿಯಲ್ಲಿ ಕೂತು ಕೃಷ್ಣವೇಣಿ ಗಂಟೆ ತುಂಬ ಸುಂದಾರವಾಡಿದಳು. ತಾನೂ ಬರುತ್ತೇನೆಂದು ಲೀಲೆ ಹೇಳಿದರೂ ಗಾಡಿಯಲ್ಲಿ ಸ್ಥಳವಿರಲಿಲ್ಲ. ಕೃಷ್ಣವೇಣಿ ತಲೆಯಾಡಿಸಿದಳು ಅವಳು ಗಾಡಿಯಲ್ಲಿ ಕೂತು ತನ್ನ ಕರ್ಪೂರದ ಗೊಂಬೆಗೆ ಹೂ ಮುಡಿಸಿದಳು, ಗವನು ಹಾಕಿದಳು, ರವಕೆ ತೊಡಿಸಿದಳು, ಹಣೆಗೆ ಕುಂಕುಮವಿಟ್ಟು, ಒಂದು ಬಾರಿಗೆ ಅದರ ಸೊಬಗನ್ನು ಕಂಡಳು ಮತ್ತೆ ತಾನು ಪೊಟ್ಟಣ ತಂದ ಸಕ್ಕರೆ ಮಿಠಾಯಿಯನ್ನೂ ಆ ಗೊಂಬೆಗೂ ತಿನ್ನಲಿಕ್ಕೆ ಅದನ್ನು ತನ್ನ ತೊಡೆಯ ಮೇಲೆ ತೆಗೆದುಕೊಂಡಳು. ಅಷ್ಟರಲ್ಲಿಯೇ ತಾಯಿ—'ಕಿಟ್ಟೀ, ಕಿಟ್ಟೀ' ಏಳು, ತಾನು ಎಂ ಹೊಯಿತು. ಮತ್ತೆಲ್ಲ ಶಾಲೆಗೆ ಹೊರಟರು ಎಂದು ಕೂಗುವ ಸ್ವರವು ಅವಳಿಗೆ ಕೇಳಿಸಿತು

ಕೃಷ್ಣವೇಣಿಯ ಕನಸು ನಿಂತಿತು ಅವಳು ಎರಡೂ ಕಣ್ಣುಗಳನ್ನು ಬರುಸಿಕೊಳ್ಳುತ್ತ ಹಾಸಿಗೆಯಿಂದ ಎದ್ದು ಕೂತಳು 'ಅಮ್ಮಾ! ನನ್ನನ್ನೇಕೆ ಎಬ್ಬಿಸಿದಿ? ಇನ್ನೂ ಆ ತೋಟದಲ್ಲಿ ನಾನು ಆಡಬೇಕೆಂದಿದ್ದೆ. ಗೊಂಬೆಗೆ ನಿದ್ದೆ ಬಂದಿತ್ತು!' ಎಂದು ಅವಳು ಹೇಳಿದಳು

'ಕಿಟ್ಟೀ! ಈಗಲೇ ಅವರು ಬರುವರು. ಹೋಗಿ ಕೈ, ಮೋರೆ ತೊಳಕೊಂಡು ಬಾ ಅವರು ಮೆಚ್ಚಿದರೆ ನಿನಗೆ ಬಹಳ ಹಣ ಕೊಡುವರು ಆ ಮೇಲೆ ನಿನ್ನದೇ ತೋಟದಲ್ಲಿ ನೀನು ಓಡಾಡಬಹುದು''ಎಂದು'ಕೃಷ್ಣವೇಣಿಯ ತಾಯಿ ಅಂದಳು.

'ನಿಜವೇ, ಅಮ್ಮಾ?'

'ಹೌದು, ನನ್ನ ತಾಯೀ! ಹೋಗಿ ಕೈಕಾಲು ತೊಳೆದು ಬಾ'

'ಅವರೆ ಅತ್ತಾ' ಅವರು ಮಾಳ್ಕೊಟ್ಟರೆ, ಎಲ್ಲವನ್ನು ನೀನೇ ತೆಗೆದುಕೊಳ್ಳುವಿ

'ಇಲ್ಲ ಮಗೂ' ಎಲ್ಲ ಹಣವನ್ನು ನೀನೇ ಇಟ್ಟುಕೊಳ್ಳುವಿಯಂತೆ ಅದರೆ ಮಾತ್ರ—ಅವರು ಹೇಳಿದಂತೆ ನೀನು ಹಾಡಬೇಕು, ನಟಿಸಬೇಕು, ಮಗು!'

ಶಾಲೆ ದಿನದಂದು ಅದೇ ನಾಟಕದಲ್ಲಿ 'ಕೃಷ್ಣವೇಣಿ ಬಹಳ ಸುಂದರವಾಗಿ ಹಾಡಿ ನಟಿಸಿದ್ದನ್ನು ಸಿನೇಮದವರು ನೋಡಿ ಮುಗ್ಧರಾಗಿದ್ದರು ಈಗ ಅದೇ ಕೃಷ್ಣವೇಣಿಯನ್ನು ನೋಡಲಿಕ್ಕೆ ಬರುವುದಕ್ಕೆ ಸಮಯವಾಯಿತು

ಅವರು ಕೃಷ್ಣವೇಣಿಯನ್ನು ಪುನಃ ಘೋಷಿಸಿದರು, ಎಲ್ಲಿಯೋ ಇದ್ದ ಸ್ವಲ್ಪ ಸೌಂದರ್ಯವನ್ನು ಮುಂದಕ್ಕೆ ಹಚ್ಚಿದರು. ಗವನು ರವಕೆಯನ್ನು ಹಾಕಿ ಇಡೆಯನ್ನು ಬಿಚ್ಚಿದರು ಹಣೆಗೆ ಕುಂಕುಮದ ಚಿಕ್ಕ ಬೊಟ್ಟನ್ನು ಇಟ್ಟರು ಕೈಗೆ ನಾಲ್ಕು ಸಿಲ್ಕಿನ ಬಳೆಗಳನ್ನು ತೊಡಿಸಿದರು 'ಅಮ್ಮಾ! ನನ್ನ ಜತೆ ಯಾಕೆ ಕಿಟ್ಟುವುದಿಲ್ಲ' ಕೂದಲು ಮುಡಿದ ಮೇಲೆ ಬೇಳುತ್ತದೆ' ಎಂದು ಕೃಷ್ಣವೇಣಿ ಹೇಳಿದಳು 'ಇಲ್ಲ ಮಗೂ' ಹಾಗೆ ಇರಲಿ, ಲಾಯಕ್ಕಾಗಿ ತೋರುತ್ತದೆ ಅವರು ಈಗಲೇ ಬರಬಹುದು ಅಷ್ಟರ ತನಕ ಅಂಗಳದಲ್ಲಿ ಅಡು ಮೈ ಮಾತ್ರ ಧೂಳು ಮಾಡಿಕೊಳ್ಳಬೇಡ' ಎಂದು ತಾಯಿ ಹೇಳಿ ಒಳಗೆ ನಡೆದಳು.

ಸರಿಯಾದ ಸಮಯಕ್ಕೆ ಸಿನೇಮಾದ ಇಬ್ಬರು ಕೃಷ್ಣವೇಣಿಯನ್ನು ಕಾಣಲಿಕ್ಕೆ ಬಂದರು. ಅವಳ ತಾಯಿತಂದೆಗಳು ಕೂಡಿ ಬಡವರು ಮಾಡಬಹುದಾದ ಸೇವೆ ಸತ್ಕಾರಗಳಿಂದ ಅವರನ್ನು ಸತ್ಕರಿಸಿ, ಕೃಷ್ಣವೇಣಿಯನ್ನು ಅವರ ಮುಂದೆ ನಿಲ್ಲಿಸಿದರು. ಕೃಷ್ಣವೇಣಿ ಹಳೆ ಸಂಪ್ರದಾಯದಂತೆ ತಲೆಯನ್ನು ಬಾಚಿ ಜಡೆಕಟ್ಟಿಕೊಂಡಿದ್ದಳು ಬಡವರ ಮನೆಯ ಸಣ್ಣದೊಂದು ಸೀರೆಯ ತುಂಡನ್ನು ಉಟ್ಟು ಶೃಂಗಾರವಾಗಿದ್ದಳು. ಸಿನೇಮದ ಆ ಇಬ್ಬರಲ್ಲಿ ಒಬ್ಬನು ಅವಳ ಕೈಗೆ ಕೆಲವು ಪೇಪರುನೋಟುಗಳನ್ನು ಕೊಟ್ಟು, 'ಅಮ್ಮಾ! ಕಿಟ್ಟೀ! ಒಂದು ಪದ ಹಾಡು' ಎಂದನು. ಅದರೆ ಕೃಷ್ಣವೇಣಿಯ ಬಾಯಿಯಿಂದ ಒಂದು ಸ್ವರವಾದರೂ ಹೊರಡಲಿಲ್ಲ. ಅವಳು ಕೈಯಲ್ಲಿದ್ದ ಪೇಪರಮಿಟನ್ನು ಕೈಯಲ್ಲೇ ಹಿಡಿಕೊಂಡು ತಾಯಿಯನ್ನು ನೋಡಲಾರಂಭಿಸಿದಳು. 'ಅಮ್ಮಾ! ಒಂದು ಪದ ಹಾಡು. ಅವರು ನಿನಗೆ ಬೇಕಾದನ್ನು ಕೊಡುವರು. ಅಂಜಬೇಡ' ಎಂದು ತಾಯಿ ಧೈರ್ಯ ಕೊಟ್ಟಳು. ಬಹಳ ಪುಸಲಾಯಿಸಿದ ಮೇಲೆ ಕೃಷ್ಣವೇಣಿ ಹಾಡತೊಡಗಿದಳು.

'ಅಯ್ಯೋ ನನ್ನ ಮಗು ಮಾತಾಡುವುದಿಲ್ಲ' ಎಂದು ಅವಳು ಅರಚಿದಳು

ಕತಿಬೇವನನ್ನು ಬಿಟ್ಟುಬಂದೆ ಭಕ್ತ ಮೀರೆಯು ಶ್ರೀ ಕೃಷ್ಣನ ಚರಣ ಸೇವೆಯಲ್ಲಿ ವಿನಯ ಭಾವದಿಂದ ಕೂತು ಅವನ ಗುಣಗಾನ ಮಾಡುತ್ತಿದ್ದ ಹಾಡನ್ನೇ ಕೃಷ್ಣವೇಣಿಯೂ ಹಾಡತೊಡಗಿದಳು. ಮೀರೆಯಂತೆ ಕೃಷ್ಣವೇಣಿಯ ಕಣ್ಣುಗಳಿಂದ ನೀರು ಧಾರಾಪೂರ್ವಕ ಹರಿಯಲಾರಂಭಿಸಿತು ಆ ಹಾಡನ್ನು ಹಾಡುವಾಗಿನ ಕೃಷ್ಣವೇಣಿಯ ಹಾವ ಭಾವ, ಸ್ವರ, ನಟನೆಗಳನ್ನು ನೋಡಿ ತಾಯಿತಂದೆಗಳಂತೆ ಸಿನೇಮದ ಆ ಇಬ್ಬರೂ ಮುಗ್ಧರಾದರು. ಅವರ ಅಂಗಾಂಗಗಳು ಪುಲಕಿತವಾದವು ಮೀರೆಯಂತೆಯೇ ಕೃಷ್ಣವೇಣಿ ಹಾಡಿ ಮುಗಿಸಿದಳು, ಅಲ್ಲ, ಅವಳು ಹಾಡುಗಾರಿಕೆಯಲ್ಲಿ ಪ್ರತ್ಯಕ್ಷ ಮೀರೆಯೇ ಆಗಿದ್ದಳು

ಸಿನೇಮದವರು—'ಬಹಳ ಸಂತೋಷ' ನಾವು ಸಾಯಂಕಾಲ ೪ ಗಂಟೆಗೆ ಬರುತ್ತೇವೆ ಒಮ್ಮೆ ಅವಳನ್ನು ನಮ್ಮ ಸ್ಟುಡಿಯೋಕ್ಕೆ ಕರಕೊಂಡು ಹೋಗಿ ಪರೀಕ್ಷಿಸುವೆವು. ಅವಳು ಅಲ್ಲಿ ತೇರ್ಗಡೆಯಾದರೆ ಮುಂದಿನ ನಿರ್ಣಯ ನೀವು ಹೇಳಿದ ಹಾಗೆ ಆಗುವುದು' ಎಂದು ಹೇಳಿ ಹೊರಟು ಹೋದರು

ಆ ದಿನವೆಲ್ಲ ಕೃಷ್ಣವೇಣಿಯ ತಾಯಿತಂದೆಗಳು ಕಲ್ಪನಾಲೋಕದಲ್ಲಿ ಕಳೆದರು ಭಾವೀ ಸುಖವನ್ನು ಕಲ್ಪಿಸಿಕೊಂಡು ದಂಪತಿಗಳ ಅಂಗಾಂಗಗಳು ಪುಲಕಿತವಾದುವು 'ಅಂದಿಲ್ಲ, ಸಾಂಬಿಲ್ಲ, ಹಿಟ್ಟಿಗೆ ಬೇಕುಬೇಕಾದನ್ನು ಹಣ' ಮತ್ತೆ ಯಾರಿಗೆ ಬೇಕು ಈ ಹಾಳು ಉಪಾಧ್ಯಾಯನ ಕೆಲಸ? ಇದ್ದಷ್ಟು ದಿನಗಳನ್ನು ಸುಖವಾಗಿ ಕಳೆಯೋಣವು ಉಪನಗರದಲ್ಲಿ ಕೃಷ್ಣವೇಣಿಗಾಗಿ ಒಂದು ಮನೆ-ತೋಟವನ್ನು ಕೊಂಡುಕೊಂಡು ಸುಖ ಜೀವನವನ್ನು ಕಳೆಯುವೆವು ಕೃಷ್ಣವೇಣಿಯೂ ಪ್ರಸಿದ್ಧ ಸಿನೇಮಾ ನಟಿಯಾಗಿ ಪ್ರಖ್ಯಾತಿಪಡೆದು ಹೋಗಿ ಸಂತೋಷಪಟ್ಟಾಳು' ಎಂದು ಮೊದಲಾಗಿ ಆಲೋಚಿಸುತ್ತಿದ್ದ ಹಾಗೆ ಸಾಯಂಕಾಲ ನಾಲ್ಕು ಹೊಡೆಯುವ ಸಮಯವಾಯಿತು

ಅವರು ಕೃಷ್ಣವೇಣಿಯನ್ನು ಪುನಃ ಘೋಷಿಸಿದರು, ಎಲ್ಲಿಯೋ ಇದ್ದ ಸ್ವಲ್ಪ ಸೌಂದರ್ಯವನ್ನು ಮುಂದಕ್ಕೆ ಹಚ್ಚಿದರು. ಗವನು ರವಕೆಯನ್ನು ಹಾಕಿ ಇಡೆಯನ್ನು ಬಿಚ್ಚಿದರು ಹಣೆಗೆ ಕುಂಕುಮದ ಚಿಕ್ಕ ಬೊಟ್ಟನ್ನು ಇಟ್ಟರು ಕೈಗೆ ನಾಲ್ಕು ಸಿಲ್ಕಿನ ಬಳೆಗಳನ್ನು ತೊಡಿಸಿದರು 'ಅಮ್ಮಾ! ನನ್ನ ಜತೆ ಯಾಕೆ ಕಿಟ್ಟುವುದಿಲ್ಲ' ಕೂದಲು ಮುಡಿದ ಮೇಲೆ ಬೇಳುತ್ತದೆ' ಎಂದು ಕೃಷ್ಣವೇಣಿ ಹೇಳಿದಳು 'ಇಲ್ಲ ಮಗೂ' ಹಾಗೆ ಇರಲಿ, ಲಾಯಕ್ಕಾಗಿ ತೋರುತ್ತದೆ ಅವರು ಈಗಲೇ ಬರಬಹುದು ಅಷ್ಟರ ತನಕ ಅಂಗಳದಲ್ಲಿ ಅಡು ಮೈ ಮಾತ್ರ ಧೂಳು ಮಾಡಿಕೊಳ್ಳಬೇಡ' ಎಂದು ತಾಯಿ ಹೇಳಿ ಒಳಗೆ ನಡೆದಳು.

ಸರಿ, ನಾಲ್ಕು ತಾಸು ಹೊಡೆಯುವಾಗ ಅವರು ಒಂದೇ ಬಿಟ್ಟರು ಕೃಷ್ಣವೇಣಿಯ ತಂದೆ ಹೋಗಿ ಅವರನ್ನು ಕಾರಿನಿಂದ ಇಳಿಸಿ ಒಳಗೆ ಕರೆಕೊಂಡು ಒಂದನು. ಅವರು—'ನಮಗೆ ಸ್ವಲ್ಪ ಅತ್ಯವಸರ ಕೆಲಸವಿದೆ. ಕೃಷ್ಣವೇಣಿ ಎಲ್ಲಿ?' ಎಂದು ಕೇಳಿದರು ಅವನು ಕೃಷ್ಣವೇಣಿ ಎಲ್ಲಿ ಎಂದು ಆಕೆಯನ್ನು ಕೇಳಿದ ಅದರೆ ಮನೆಯಲ್ಲಿ ಅವಳು ಎಲ್ಲಿಯೂ ಇಲ್ಲ. ಬಹಳ ಹುಡುಕಿದರು 'ಕಿಟ್ಟೀ ಕಿಟ್ಟೀ' ಎಂದು ಬಹಳ ಕರೆದರು ನೆರೆಕೆರೆ, ಹಾದಿ ಬೀದಿ ಎಲ್ಲವನ್ನೂ ನೋಡಿದರು ಅದರೆ ಕೃಷ್ಣವೇಣಿ ಎಲ್ಲಿಯೂ ಇಲ್ಲ ಅವರಿಗೆ ಬಹಳ ಗಾಬರಿಯಾಯಿತು. ಯಾರಾದರೂ ಮಗಳನ್ನು ಕದ್ದು ಹೋಗಿರಬಹುದೆ? ಯಾರೆ ಕೂಡಿದು? ಸೊಸೈಟಿ ತಾಸೇ ಶ್ರೀಮಂತ ಜಾಣ ಸಾಹೇಬರ ಮಗಳನ್ನು ಯಾರೋ ದುಷ್ಟನವರು ಹಾಸಿಕೊಂಡು ಹೋಗಿದ್ದರು—ಎಷ್ಟು ಪ್ರಯತ್ನವಾಡಿದರೂ ಮೊರೆಯಲಿಲ್ಲ ಪ್ರಸಿದ್ಧ ಸಿನೇಮಾ ನಟಿಯಾಗುವ ಕೃಷ್ಣವೇಣಿಯನ್ನು ಯಾರೋ ಕದ್ದುಹೋಗಿರಬೇಕು ಏನೆಂದು ಭಾವಿಸಿ ತಂದೆ ಪೋಲೀಸ ಸ್ಟೇಶನಿಗೆ ಓಡಿಹೋದನು ಸಿನೇಮದವರು 'ಅವಳು ಒಂದಾಗ ಸ್ಟುಡಿಯೋಪಿಕ್ಚರಕ್ಕಾಗಿ ಎಂದು ಹೇಳಿ ಹೊರಟು ಹೋದರು. ಮನೆಯಲ್ಲಿ ತಾಯಿ ಒಬ್ಬಳೇ ಅಳುವ ಅವಳಿಗೆ ಅತ್ತು ಅತ್ತು ಸಾಕಾಗಿತ್ತು ತನ್ನ ಮುದ್ದು ಮಗುವಿಗೆ ಏನಾಯಿತೋ ಎಂದು ಅವಳು ಪುನ: ಅತ್ತಳು ಅಳುತ್ತ ಪುನ: ಕೋಣೆಯ ಒಂದೊಂದು ಮೂಲೆಯನ್ನು ಹುಡುಕತೊಡಗಿದಳು ಒಂದು ಮೂಲೆಯಲ್ಲಿದ್ದ ಬೆತ್ತದ ದೊಡ್ಡ ಪೆಟ್ಟಿಗೆ ಸ್ವಲ್ಪ ಅಲುಗಾಡಿದಂತೆ ಅವಳಿಗೆ ಕಂಡಿತು ಅವಳು ಓಡಿಹೋಗಿ ಪೆಟಾರಿಯ ಬಾಯಿ ತೆರೆದಳು. ನಿಜವಾಗಿ ಕೃಷ್ಣವೇಣಿ ಅದರೊಳಗೆ ಬಿದ್ದುಕೊಂಡಿದ್ದಳು. ತಾಯಿ ಉತ್ಕಂಠಿತಳಾಗಿ—ಕಿಟ್ಟೀ ಕಿಟ್ಟೀ' ಎಂದು ಕರೆದಳು. ಅದರೆ ಕಿಟ್ಟಿ ಕಣ್ಣು ತೆರೆಯಲಿಲ್ಲ. ಅವಳು ಅವಸರದಿಂದ ಕೃಷ್ಣವೇಣಿಯನ್ನು ಎತ್ತಿಕೊಂಡಳು. ಆದರೆ ಕೃಷ್ಣವೇಣಿ ಮುಚ್ಚಿದ ಕಣ್ಣುಗಳನ್ನು ತೆರೆಯುವುದಿಲ್ಲ. 'ಅಯ್ಯೋ! ನನ್ನ ಮಗುವಿಗೆ ಏನಾಯಿತಪ್ಪಾ!' ಎಂದು ಕೂಗಿಕೊಳ್ಳುತ್ತ ಅವಳು ಬೀದಿಗೆ ಓಡಿದಳು. 'ಅಯ್ಯೋ! ನನ್ನ ಮಗು ಮಾತನಾಡುವುದಿಲ್ಲ. ಆಸ್ಪತ್ರೆಗೆ ಕೊಂಡು ಹೋಗಿರಪ್ಪಾ!'' ಎಂದು ಅವಳು ಅರಚಿಕೊಂಡಳು. ಕಾರಿನಲ್ಲಿ ಕೂತುಕೊಂಡು ಹೋಗುತ್ತಿದ್ದ ಬಟ್ಟಾತನು ಅವಳ ಮೇಲೆ ಕರುಣೆಪಟ್ಟು ಅವರಿಬ್ಬರನ್ನು ಆಸ್ಪತ್ರೆಗೆ ಸಾಗಿಸಿದನು.

ಡಾಕ್ಟರರು ಮಗುವನ್ನು ಚೆನ್ನಾಗಿ ಪರೀಕ್ಷಿಸಿದರು. ಕೃಷ್ಣವೇಣಿ ಸತ್ತಿರಲಿಲ್ಲ. ಉಸಿರು ಸಾಕಾಗದೆ ಅವಳು ಪೆಟ್ಟಿಗೆಯಲ್ಲಿ ಮೂರ್ಛೆ ಹೋಗಿದ್ದಳು. 'ಅಮ್ಮಾ! ನೀವು ಬರಬು ಒಂದು ನಿಮಿಷ ತಡವಾಗಿದ್ದರೆ . . .' ಎಂದು ಅರ್ಧದಲ್ಲೇ ಮುಗಿಸಿ—'ಈಗ ಭಯವಿಲ್ಲ ಅರ್ಧ ತಾಸಿನಲ್ಲಿ ಅವಳು ಹುಶ್ಶಾರಾಗುವಳು' ಎಂದು ಸಮಾಧಾನಪಡಿಸಿದರು. ಅರ್ಧ ತಾಸಿನ ಅನಂತರ ಕೃಷ್ಣವೇಣಿ ಮಲಗಿದ್ದವಳಂತೆ ಎದ್ದು ಕೂತು ನಾಲ್ಕೂ ಕಡೆ ನೋಡಿದಳು. ಅವಳು 'ಅಮ್ಮಾ! ನಾನೆಲ್ಲಿ? ಅವರೆಲ್ಲಿ? ಅವರು ಬಂದು ಹೋದರೆ'' ಎಂದು ತಾಯಿಯನ್ನು ತಬ್ಬಿಕೊಂಡಳು. ಹೌದು ಮಗು, ಅವರು ಒಂದುಹೋದರು, ಇನ್ನು ಬರುವುದಿಲ್ಲ' ಎಂದು ಕೃಷ್ಣವೇಣಿಯನ್ನು ಮುದ್ದಿಟ್ಟಳು. ಡಾಕ್ಟರರಿಗೆ ಕೃತಜ್ಞತೆಯನ್ನು ಹೇಳಿ ಅವರಿಬ್ಬರು ಮನೆಗೆ ಹೊರಟರು.

ಹೋಗುತ್ತಾ ದಾರಿಯಲ್ಲಿ—'ಅಮ್ಮಾ' ಅವರು ಇನ್ನು ಬರುವರೆ?' ಎಂದು ಕೃಷ್ಣವೇಣಿ ತಾಯಿಯನ್ನು ಕೇಳಿದಳು.

'ಯಾರು ಮಗೂ?'

'ಅವರು, ಸಿನೇಮದವರು'

ತಾಯಿ ಮಾತನಾಡಲಿಲ್ಲ. ಕೃಷ್ಣವೇಣಿ ಹೇಳಿದಳು—'ಅಮ್ಮಾ' ಅವರು ಪುನ: ಒಂದೆ ಸಾಸಿ ಪುನ: ಪೆಟಾರಿಯೊಳಗೆ ಮಲಗುವೆನು ಮೊರೆ ಒಮ್ಮುವುದೇ ಇಲ್ಲ. ನೋಡಿಕೊ''

'ಇಲ್ಲ ಮಗು ,ಅವರು ಬಾರದಂತೆ ನಾನು ನೋಡಿಕೊಳ್ಳುತ್ತೇನೆ' ಎಂದು ತಾಯಿ ಮಗಳನ್ನು ಎದೆಗೆ ಅಪ್ಪಿಕೊಂಡು ಒಂದು ದೀರ್ಘ ಶ್ವಾಸವನ್ನು ಬಿಟ್ಟಳು.

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ

O P 151/37
I. A No. 2003/39.

1 ಬಿ. ಕೆ. ಸದಾಶಿವರಾವ್
2 ಬಿ. ಕೆ. ರಾಮರಾವ್ } ಅರ್ಜಿದಾರರು
ಮತ್ತು

1 ಬಿ. ಶೀತಾರಾಮಯ್ಯ
2, B K ಮಂಜುನಾಥಯ್ಯ
ಬೇಕ್ಲ ಕಿಡುಪಿನ ಮಲ್ಲಿಕಾರ್ಜುನಯ್ಯನವರ ಮಕ್ಕಳು. 1ನೇಯವನು ಸಳ್ಳೆಕೆರೆ ಗ್ರಾಮ. 2ನೇಯವನು ತೆಂಕ ಮಲಬಾರ ಕಾಳೆಕಾವ P. W. D. ಸುಪರ್‌ವೈಜರ್—— } ಇತರರು

ಇತರೆಯರಿಗೆ

ಸದ್ರಿ ಅರ್ಜಿದಾರರು ತಿಳಿಸುವದೇನೆಂದರೆ —

ಸದ್ರಿ ಅರ್ಜಿದಾರರ ತಂದೆ ಮೃತಪಟ್ಟ ಬಿ. ರಾಮಚಂದ್ರರಾಯರಿಗೆ ಬರತಕ್ಕ ಐವತ್ತು ಎಕರೆ ಮೌಲುವಾದುವ ಬಗ್ಗೆ ಕೊಟ್ಟ ದೇಣಿಗೆಯ O. P. 151/37ನೇ ಸಪ್ಲೈಸ್ ಸರ್ಟಿಫಿಕೆಟಿನಲ್ಲಿ ಹಿಟ್ಟುಹೋದ 2230ರ 24ನೇ ಆಟೆಂಗಳನ್ನು ಶೇರಿಸಿ ಮೊದಲು ಕೊಟ್ಟೋಣಾದ ಸರ್ಟಿಫಿಕೆಟಿನ ದುರುಸ್ತಿಪಡಿಸಿ ಕೊಡಿಸಬೇಕಾಗಿ ದಾಖಲುಮಾಡಿದ ಮೇಲ್ಕಂಡ ಅರ್ಜಿಯು ತಾರೀಖು 16-12 39 ಕ್ಕೆ ಇಟ್ಟುಮಾಡಿದುದರಿಂದ ಆ ಸುರಿತು ಅಕ್ಷೇಪ ಬೇಕುವದಿದ್ದರೆ ಸದ್ರಿ ತಾರೀಕಿಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗತಕ್ಕದ್ದು. ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿರುವದೆ.

ಕಾಸರಗೋಡು, 2-12-1939. } (Sd) S. Lakshman Rao, Vakil for Petitioners

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ನುಕ್ಕಾಗುವುದರಿಂದ ದುಃಖವಾಗುತ್ತದೆ ಈ ಕಾರಣಗಳಿದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ಸೇವನದಂತೆ ಸುರುವಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗುವುದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೆಟು—ಡಾ ವೈದ್ಯ ಎಲ್. ಸಿ. ಪಿ. ಎಸ್. ಕೆಳವಾಮಾಸಿದ, ಇಷ್ಟೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು ಗರ್ಭಧಾರಣವೂ ಆಗುವದಿಲ್ಲ ಪೂರ್ಣ ಗುಣಕಾರಿ ಇಚ್ಛಿಸುವ ಕುರುಹೂ. ೪-೦-೦

ಬಿ ಬಿ ಅವಿ ಅ

ವಿಳಾಸ ಸಂಜೀವಿನೀ, ಔಷಧಾಲಯ ಮು. ಪೊ. ಮಿರಜಿ, S. M. C

ಸ್ವಾತಂತ್ರ್ಯಸಾಧನೆಗಾಗಿ ಇದೇ ಮುಂದಿನ ಹಾದಿ!

ಗಾಂಧಿಜಿ, ನೆಹರು, ರಾಷ್ಟ್ರಪತಿ ಈ ತ್ರಿಮೂರ್ತಿಗಳ ಕಾರ್ಯಕ್ರಮ!

ಗಾಂಧಿಜಿಯವರು ಈಗ ಯಾವ ಯೋಚನೆಯಲ್ಲಿದ್ದಾರೆ

ಈ ಮೇಲಿನ ಕುರಿತು ಕೇಳಿದಾಗ, ಅವರು, ಅಹಿಂಸಾಮಯ ಸತ್ಯಾಗ್ರಹದ ಪೂರ್ವಸಿದ್ಧತೆಗಳನ್ನು ಮಾಡುತ್ತಿದ್ದಾರೆ ಎಂದು ರಾಷ್ಟ್ರಪತಿಗಳಾದ ಡಾ ರಾಜೇಂದ್ರ ಪ್ರಸಾದರು ಪತ್ರಿಕಾ ಪ್ರತಿನಿಧಿಗಳಿಗೆ ಹೇಳಿದರು.

'ಬ್ರಿಟಿಷ್ ಸರಕಾರದೊಡನೆ, ನಾವು ಮಂತ್ರಿಮಂಡಲಗಳ ರಾಜೀನಾಮೆ ಕೊಡಿಸಿದ ವಿಷಯ ನ್ಯಾಯವೇ ಎಂಬ ಕುರಿತು ಏನನ್ನೂ ವಿವರಿಸಲು ಬಾಕಿಯುಳಿದಿಲ್ಲ. ಇಂದಿನ ಯುದ್ಧದಲ್ಲಿ ಬ್ರಿಟಿಷರು ಭಾರತದ ನೈತಿಕ ಸಹಾಯವನ್ನು ಅಪೇಕ್ಷಿಸಿದ್ದರು. ಅದನ್ನು ನಾವು ಹಿಂದೆಗೆದುಕೊಳ್ಳುವುದನ್ನು ಪ್ರಶ್ನೆಮಾಡಲು ಸಾಧ್ಯವಿಲ್ಲ. ಅದು ನಾವು ಮಾಡಿದ ಮಹತ್ವದ ಕೆಲಸ. ಬ್ರಿಟಿಷ್ ಸರಕಾರವು ಹಿಂದೂ ದೇಶದಲ್ಲಿ ಮಾಡುವ ಯುದ್ಧದ ಪ್ರಯತ್ನಗಳನ್ನು ತಡೆಯುವ ವಿಚಾರವೂ ಇದೆ. ಆ ವಿಷಯ ವಿಚಾರಿಸಲು ಸಮಯವಿದೆ. ಅಥವಾ ದೊಡ್ಡ ಪ್ರಮಾಣದಲ್ಲಿ ಸೈನಿಕರನ್ನು ಸೇರಿಸುವುದಾಗಲಿ, ಹಣ ಶೇಖರಿಸುವುದಾಗಲಿ ಮಾಡಿಲ್ಲ. ನಾವು ಯಾವುದನ್ನಾದರೂ ತಡೆಮಾಡಬೇಕಿದ್ದರೆ, ಪ್ರಸ್ತುತಕ್ಕೆ ಅಂತಹ ಕಾರ್ಯವು ಆಗುವುದಿಲ್ಲ. ಆಕಾಶದೊಡನೆ ಯುದ್ಧಮಾಡುವುದು ಪ್ರಯೋಜನವಿಲ್ಲ. ಇಂದು ನಮ್ಮೆದುರು ಶತ್ರುವು ಬಂದು ನಿಂತಿಲ್ಲ.

'ನಾವು ಸತ್ಯಾಗ್ರಹವೆಂಬಆಯುಧದಿಂದ ಕಾಳಗ ಮಾಡಬೇಕಾಗಿದೆ. ಅದಕ್ಕೆ ಕೆಲವು ವಿಧಿಗಳನ್ನು ಅನುಸರಿಸಬೇಕು. ನಾವು ಆ ವಿಧಿಗಳನ್ನು ಪೂರ್ಣಮಾಡಿ ಸಿದ್ಧರಾಗಲು ಯತ್ನಿಸುವ ಸಮಯವನ್ನು ಕಾಯುತ್ತಿದ್ದೇವೆ. ನಾವೆಲ್ಲರೂ ಕೂಡಿ ಏನೂ ಮಾಡಲಾರೆವೆಂದು ತಿಳಿಯಬಾರದು. ಆದರೆ ಒಬ್ಬರು ಸತ್ಯಾಗ್ರಹದ ವಿಷಯ ಚೆನ್ನಾಗಿ ತಿಳಿದವರಿದ್ದಾರೆ. ಅವರು ನಮಗೆ ತೋರಿಸಿದ ಮಾರ್ಗದಲಿ ನಾವು ನಡೆಯಲು ಯತ್ನಮಾಡುತ್ತೇವೆ. ಬೇರೆ ಜನರು ಬೇರೆ ಯೋಗ್ಯ ಕಾರ್ಯಕ್ರಮಗಳನ್ನು ಮುಂದೆ ತರದಿರುವರೋ ನನಗೆ ಗೊತ್ತಿಲ್ಲ. ಮಹಾತ್ಮಾಜಿಯವರು ಅವರು ತಿಳಿದ ರೀತಿಯಲ್ಲಿ ಹಿಂದು ನ್ಯಾಯದದಾರಿಯನ್ನು ಸೂಚಿಸಿದ್ದಾರೆ. ಅವುಗಳ ವಿಧಿಯನ್ನು ನಾವು ಅನುಸರಿಸುತ್ತೇವೆ''

ಸುಭಾಸರ ಮೇಲಿನ ಶಿಸ್ತನ್ನು ಹಿಂತೆಗೆಯುವರೇ?

ರಾಷ್ಟ್ರಪತಿ ರಾಜೇಂದ್ರ ಪ್ರಸಾದರೊಡನೆ 'ಇಂದಿನ ಪ್ರಸಂಗದಲ್ಲಿ ಐಕ್ಯಕ್ಕಾಗಿ ಸುಭಾಸರ ಮೇಲಿನ ಶಿಸ್ತು ಜಾರಿಯನ್ನು ಹಿಂತೆಗೆಯುವರೇ?' ಎಂದು ಪ್ರಶ್ನೆ ಕೇಳಿದಾಗ ಅವರು ಹೀಗೆಂದರು—''ಈ ಕುರಿತು ನನ್ನ ಸ್ವಂತ ಅಭಿಪ್ರಾಯವನ್ನು ಕೇಳುತ್ತೀರೋ ಇಲ್ಲವೇ ವರ್ಕಿಂಗ್ ಕಮಿಟಿಯ ನಿಶ್ಚಯವನ್ನು ಕೇಳುತ್ತೀರೊ?''

''ನಿಮಗೆ ಇಷ್ಟವಿದ್ದರೆ, ನಿಮ್ಮ ಅಭಿಪ್ರಾಯವನ್ನು ತಿಳಿಯಲು ಇಷ್ಟಪಡುತ್ತೇವೆ'' ಎಂದರು ಪತ್ರಿಕಾಪ್ರತಿನಿಧಿಗಳು.

''ಯಾವ ಕ್ರಮವನ್ನು ಸುಭಾಸರ ಮೇಲೆ ಜಾರಿ ಮಾಡಿದೆಯೋ ಅದು ವರ್ಕಿಂಗ್ ಕಮಿಟಿ ಮಾಡಿದ್ದು. ಆದುದರಿಂದ ಆ ಕುರಿತು ನನ್ನ ಅಭಿಪ್ರಾಯದಿಂದ ಏನು ಪ್ರಯೋಜನ''

ಜಾತೀಯ ದಂಗೆಗಳ ಕಾರಣವೇನು?

ಗಾಂಧಿಜಿಯವರ ವಿವರಣೆ

''ಮುಸ್ಲಿಂ ಲೀಗು ತಡೆಮಾಡಿದರೆ ಸತ್ಯಾಗ್ರಹವನ್ನು ಆರಂಭಿಸಲು ಸಾಧ್ಯವಿಲ್ಲವೆಂದು ನೀವು ಹೇಳುವುದನ್ನು ಕೇಳಿ ನಾನು ಬಹಳ ಸಂಗ್ಧನಾಗಿದ್ದೇನೆ. ಜಾತೀಯ ಜಗಳವು ರಾಜಕೀಯದಲ್ಲಿ ಯಾಕೆ ಆಗಬೇಕು?'' ಎಂದು ಎಡಪಕ್ಷದ ಒಬ್ಬ ಕಾಂಗ್ರೆಸು ಕೆಲಸಗಾರರು ಗಾಂಧಿಜಿಯವರೊಡನೆ ಪ್ರಶ್ನಿಸಿದರು.

''ಹಾಗಾದರೆ ಮೊನ್ನೆ ನೆಲ್ಲೂರಿನಲ್ಲಿ ಯಾಕೆ ಆಯಿತು'' ಗಾಂಧಿಜಿಯವರು ಪ್ರಶ್ನಿಸಿದರು.

''ಅದು ದೇಶಾವಳಿ ಜಿಲ್ಲೆಯದ ಸಲುವಾಗಿ, ಅದಕ್ಕೂ ರಾಜಕೀಯಕ್ಕೂ ಏನೂ ಸಂಬಂಧವಿಲ್ಲವಲ್ಲ.''

''ಎಲ್ಲವೂ ಆಗುವುದು ಜಾತೀಯ ಐಕ್ಯತೆಯು ಇಲ್ಲದಿರುವುದರಿಂದಲೇ'' ಗಾಂಧಿಜಿಯವರು ಅಂದರು.

''ಹಾಗಾದರೆ ನಾವು ಸ್ವಾತಂತ್ರ್ಯಕ್ಕಾಗಿ ಯತ್ನ ಮಾಡುವಲ್ಲಿ ಅವರು ತಡೆಯುವ ರೀತಿ ನೀವು ತಿಳಿಯುತ್ತೀರೋ?''

'ಇಲ್ಲ. ಆದರೆ ನಾವು ಸರಕಾರದೊಡನೆ ಕಾದಾಡುವಾಗ, ಅವರು ತಮ್ಮೊಡನೆ ಜಗಳವಾಡುವುದೆಂದು ತಿಳಿದು ಕೊಳ್ಳುವರು.'

'ನೀವು ಜನ್ನಾರೊಡನೆ ಮಾತನಾಡಿದಾಗ ಆ ರೀತಿಯ ಅಭಿಪ್ರಾಯವು ನಿಮಗೆ ಬಂದಿತ್ತೇ?'

'ಇಲ್ಲ. ಆದರೆ ನಾನು ಹೇಳಿದ್ದು ನಿಮಗೆ ಅರ್ಥವಾಗಲಿಲ್ಲವೆಂಬುದು ನನಗೆ ಆಶ್ಚರ್ಯವಾಗುತ್ತದೆ. ನಿಮ್ಮ ಪಕ್ಷದವರು ಅಂತಹ ತೊಂದರೆ ಬಂದರೂ ಅದನ್ನು ಮೀರಿದೆ ಸಾಧ್ಯವಿಲ್ಲವೆಂದು. ಅದನ್ನು ಸರಿಪಡಿಸಬಹುದೆಂದೂ ಹೇಳುತ್ತಾರೆ. ಆದರೆ ಮುಂದೆ ವಿಪತ್ತು ಬರಬಹುದೆಂದೂ ಅದನ್ನು ಸರಿಪಡಿಸಬಹುದೆಂದೂ ಹೇಳುವುದು ತಪ್ಪಭಿಪ್ರಾಯ.'

'ಆದರೆ. ನೀವು ಇನ್ನೊ ಕೆಲವು ತೊಂದರೆಗಳು ಉಂಟೆಂದು ಹೇಳಿದಿರಿ.'

'ಅದೇ ಮುಖ್ಯ ತೊಂದರೆ. ಆದರೆ ನಮ್ಮಲ್ಲಿಯೇ ಶಿಸ್ತುಪಾಲನೆಯಿರಬೇಕೆಂದು ನಾನು ಹೇಳಿಲ್ಲವೆ?'

'ನಮ್ಮಲ್ಲಿ ಶಿಸ್ತುಪಾಲನೆಯಿದೆ; ನಾವು ಕೆಲವರು ತೀವ್ರವಾಗಿ ಮಾತಾಡಿದರೂ ನಮ್ಮಲ್ಲಿಯೂ ಹಲವರು ಶಿಸ್ತುಪಾಲನೆಯವರೇ ಇದ್ದಾರೆ.'

ಗಾಂಧಿಜಿಯವರು ಅವರಲ್ಲಿ ಶಿಸ್ತುಪಾಲನೆಯಿಲ್ಲದಿರುವ ದೃಷ್ಟಾಂತಗಳನ್ನು ಕೊಟ್ಟರು. ಗಾಂಧಿಜಿಯವರ ಮಾತಿನಿಂದ ಆ ಕಾಂಗ್ರೆಸ್ ಕೆಲಸಗಾರರು ಸ್ವಲ್ಪ ಸಮಾಧಾನ ಪಟ್ಟಂತೆ ಕಂಡು ಬಂತು, ಕಡೆಗೆ ಅವರಂದರು.

''ಆದರೆ ಮಹಾತ್ಮಾಜೀ, ನೀವು ಇನ್ನೂ ಸಮಯ ಬರಲಿಲ್ಲವೆಂದು ಕಾಯುತ್ತಾ ಇದ್ದು, ಇತರರನ್ನೂ ಹಾಗೆಯೇ ಕಾಯಿಸುತ್ತಿರುವಿರಿ'' ಹೀಗೆಂದು ಶಿಸ್ತು ಇಲ್ಲದೆ ತನ್ನ ವಿಚಾರದ ಉದಾಹರಣೆಯನ್ನು ತೋರಿಸಿಯೇಬಿಟ್ಟರು.

'ಆದುದರಿಂದಲೇ ನಾನು ಹೇಳುವುದು, ನೀವು ಇಬ್ಬರು ಯಜಮಾನರನ್ನು ಅನುಸರಿಸಬೇಡಿ. ಒಂದೋ ನನ್ನನ್ನು ನಿಮ್ಮ ಪಕ್ಷಕ್ಕೆ ಒಪ್ಪುವಂತೆ ಮಾಡಬೇಕು. ಇಲ್ಲದಿದ್ದರೆ ನನ್ನನ್ನು ಬಿಟ್ಟು ಬಿಡಬೇಕು.

ಏನು ಬಂದರೂ ಎದುರಿಸುವೆವು

ನೆಹರುಗಳ ಹೇಳಿಕೆ

ಕಾಂಗ್ರೆಸಿನ ಮುಂದಿನ ಹೆಜ್ಜೆಯ ಕುರಿತು ಜವಾಹರಲಾಲರೂ ಸ್ಪಷ್ಟ ಹೇಳಿಕೆ ಕೊಟ್ಟಿಲ್ಲ, ಅವರೆ ಪತ್ರಿಕಾ ಪ್ರತಿನಿಧಿಯೊಡನೆ ಮೊನ್ನೆ ಹೀಗಂದರು:

''ನನ್ನ ಇಂದಿನ ನಿರ್ಣಯವೆಂದರೆ, ಬ್ರಿಟಿಷ್ ಸರಕಾರದೊಡನೆ ಪೂರ್ಣ ಅಸಹಕಾರ. ಅಸಹಕಾರವೆಂದರೆ ಅದು ಬರಿಯ ನಿಷೇಧ ವ್ರತವಲ್ಲ, ಅದೇ ನಿಜವಾದ ಕಾರ್ಯ ರೂಪವೂ ಆಗಿದೆ. ಆದುದರಿಂದಲೇ ಮುಂದಿನ ಕಾರ್ಯಗಳೂ ಒದಗುತ್ತವೆ. ಮುಂದಿನ ಹೆಜ್ಜೆಗಳ ಹೆಜ್ಜೆಗಳೇನೆಂಬುದನ್ನು ನಾವು ನಿರ್ಣಯಿಸಬೇಕಾಗಿದೆ. ಆದರೆ ಅಂತಹ ನಿರ್ಣಯವು ಯಾವಾಗ ಮಾಡಲ್ಪಡುವುದೆಂದು ನಾನು ಹೇಳಲಾರೆ. ಆದರೆ ವಾಸ್ತವಿಕ ಸರಕಾರಕ್ಕೆ ರಾಜಕೀಯ ಮೇಲೆ, ನಮಗೆ ಬ್ರಿಟಿಷ್ ಸರಕಾರದೊಡನೆ ಇದ್ದ ಆಕ್ಷಸ್ತಿಯಿಲ್ಲದ ಸಂಬಂಧವು ಈಗ ಮುರಿದಿದೆ. ಹಿಂದಿನಂತೆ ಅವರನ್ನು ಮುಂದಕ್ಕೆ ಹಿಂಬಾಲಿಸುವುದು ಸಾಧ್ಯವಿಲ್ಲ. ನಾವು ಹೊಸ ಸಾಹಸವನ್ನು ಆರಂಭಿಸಿದ್ದೇವೆ. ಈ ಮೂಲಕ ಏನೆಲ್ಲಾ ಆಗುವುದೋ ನೋಡಬೇಕಾಗಿದೆ. ಕಾಂಗ್ರೆಸು ಇಂದಿನ ಚಿತ್ರವನ್ನು ಸುಮ್ಮಗೇ ನೋಡುತ್ತಾ ಇರುವುದೆಂದು ಯಾರಾದರೂ ತಿಳಿದಿದ್ದರೆ ಅದರದು ತಮ್ಮಗ್ರಹಿಕೆ. ನಾವು ನನ ಗಾಗಲಿ ಕಾಂಗ್ರೆಸಿಗಾಗಲಿ ಏನಾದರೂ ಬೇಕೆಂದು ಇಚ್ಛಿಸುವುದಿಲ್ಲ. ನಮ್ಮ ಬಯಕೆ ಭಾರತದ ಜನತೆಯ ಬಯಕೆಯಾಗಿದೆ. ಜೆಟ್ಲೆಂಡರು ನಮ್ಮ ಕೇಳಿಕೆಗಳನ್ನು ಅಸಾಧ್ಯ ಕೇಳಿಕೆಗಳೆಂದಿದ್ದಾರೆ. ಇನ್ನು ಮುಂದಕ್ಕೆ ನಾವು ಜೆಟ್ಲೆಂಡರೊಡನೆ ಏನೂ ಮಾತನಾಡುವುದಿಲ್ಲ. ನಮ್ಮ ಜನರೊಡನೆಯೇ ನಾವು ಮಾತನಾಡುವೆವು. ಎಂತಹ ಪರಿಸ್ಥಿತಿಯೊದಗಿದರೂ ಅವುಗಳನ್ನು ಎದುರಿಸಲು ನಾವು ತಯಾರಿದ್ದೇವೆ. ಅವಸರಮಾಡುವುದಿಲ್ಲ. ಆದರೆ ನಮ್ಮ ನಿರ್ಣಯದ ಕುರಿತು ನಾವು ಬಹಳ ಆಗ್ರಹದಿಂದ್ದೇವೆ. ಆ ಕುರಿತು ಯಾರೂ ತಪ್ಪುಗ್ರಹಿಸುವುದು ಬೇಡ.''

ಲೋ ದ್ರ

ಸತೀಮಣಿಯರಿಗೆ ಸಂತತಿ ಸೌಖ್ಯಗಳು!

ಸತೀಮಣಿಯರ ಸಂತತಿ ಸೌಖ್ಯಗಳು
ಮನೆಗೆಲ್ಲಾ ಬೆಳಕು, ಬೆಳದಿಂಗಳು.
ಆದ್ದರಿಂದಲೇ ಸ್ತ್ರೀಯರ ಆರೋಗ್ಯವು
ಅಷ್ಟು ಮುಖ್ಯ.

ಸ್ತ್ರೀಯರಿಗೆ ಋತುಸಂಬಂಧವಾದ
ದೋಷಗಳಿಂದ ಶರೀರವು ಕೃಶಿಸಿ
ಸಂತಾನ ವಾಂಛೆಯು ಸಫಲತೆ
ಹೊಂದದು. ಆದರೆ ಲೋಧ್ರವನ್ನು
ಸೇವಿಸಿದರೆ ಸ್ತ್ರೀಯರಿಗೆ ಸತ್ಸಂ
ತಾನವೂ, ಸೌಖ್ಯ ಜೀವನವೂ ತಪ್ಪದು.

ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು.
ಸ್ಥಾಪಕಿಸ್ಥರು:—ಪೊಪ್ಯುಲರ್ ಸ್ಟೋರ್ಸ್ ರಥಬೀದಿ ಮಂಗಳೂರು

ಜಿಲ್ಲಾ ಸಮಾಚಾರ

ಮಂಗಳೂರು

"ದೀನಬಂಧು ಅನಾಥಾಶ್ರಮ" ಮಂಗಳೂರು

ಮೇಲಿನ ಅನಾಥಾಶ್ರಮವನ್ನು ಸ್ಥಾಪಿಸುವ ಸಮಯದಲ್ಲಿ ನಮ್ಮಲ್ಲಿ ಹೆಚ್ಚಿನವರನ್ನು ಯಾರೂ ವಿಚಾರಿಸಿರಲಿಲ್ಲ. ಆದು ಸ್ಥಾಪಿತವಾದ ಅನಂತರ ನಮ್ಮ ಹೆಸರುಗಳನ್ನು ಆಡಳಿತ ಸಮಿತಿಯ ಸದಸ್ಯರ ಪಟ್ಟಿಯಲ್ಲಿ ಸೇರಿಸಿದರು. ನಮ್ಮ ಪೂರ್ವಸಮ್ಮತಿ ಪಡೆಯದೆ ಸೇರಿಸಿದರೂ ಆಶ್ರಮದ ಏಳಿಗೆಯ ಮೇಲೆ ದೃಷ್ಟಿಯಿಟ್ಟು, ನಮ್ಮ ಕೈಲಾದ ಸೇವೆಯನ್ನು ಸಲಿಸಲು ಸದಸ್ಯರಾಗಿರಲು ಒಪ್ಪಿಕೊಂಡೆವು. ಆದರೆ ಆಶ್ರಮದ ಕೆಲಸವು ಸಂಚಾಲಕರೊಬ್ಬರ ಜವಾಬ್ದಾರಿಕೆಯ ಮೇಲೆಯೇ ನಡೆಯುತ್ತಿದೆಯಾದಕಾರಣ ಆಡಳಿತ ಮಂಡಳಿಯು ಅನಗತ್ಯವಾಗಿ ತೊಂದರೆಪಡಿಸದಂತೆ ನಾವು ನಮ್ಮ ಆಡಳಿತ ಸಮಿತಿಯ ಸದಸ್ಯತನಕ್ಕೆ ರಾಜೀನಾಮೆ ಕೊಟ್ಟಿದ್ದೇವೆ. ಇನ್ನು ನಮಗೂ ದೀನಬಂಧು ಅನಾಥಾಶ್ರಮಕ್ಕೂ ಯಾವ ಸಂಬಂಧವೂ ಇಲ್ಲ. ಯು. ಮಂಜಪ್ಪ, ಡಿ. ಪುಟ್ಟಸ್ವಾಮಿ, ಕೆ. ಅಣ್ಣಾಚಾರ್, ಕೆ ಕೃಷ್ಣರಾವ್ ಇವರು ತಿಳಿಸುತ್ತಾರೆ.

ಹೊಸ ಆಸ್ಪತ್ರೆ

ಈಶ್ವರಾನಂದ ಮಹಿಳಾ ಸೇವಾಶ್ರಮದ ಉಪಶಾಖೆಯಾಗಿ ಒಂದು ಹೊಸ ಆಸ್ಪತ್ರೆಯು ಕೆಲವು ಸಮಯದಿಂದ ತೆರೆದಿದೆ. ಅದನ್ನು ಸೇವಾಶ್ರಮದ ಬಳಿಯಲ್ಲಿಯೇ ಕದ್ರಿ ರಸ್ತೆಯಲ್ಲಿ ಬಂಟರ ಹೊಸ್ಟೆಲ್ ಬಳಿ ಒಂದು ವಿಸ್ತಾರವಾದ ಕಟ್ಟಡದಲ್ಲಿ ಸುರು ಮಾಡಿಯದೆ. ಸರ್ಟಿಫಿಕೇಟು ಪಡೆದು ಹೆಚ್ಚು ಅನುಭವಿಯಾದ ಒಬ್ಬ ಲೇಡಿ ಡಾಕ್ಟರೆಯ ಕಾರ್ಯಾನುಭವವುಳ್ಳ ಅನೇಕ ಸೂಚಿತ್ರಿಯರಿಂದಲೂ ತುಂಬಿದ ಈ ಹೊಸ ಸಂಸ್ಥೆಯು ಒಳ್ಳೇ ಮೇಲ್ಪಾರದಲ್ಲಿ ನಡೆಯುತ್ತದೆ. ಈ ಉದ್ಯೋಗಸ್ಥರು ಈ ಕಟ್ಟಡದ ಎರಡನೆಯ ಮೇಲ್ಮಹಡಿಯಲ್ಲಿ ವಾಸಿಸುತ್ತಿದ್ದು ಹಗಲೂ ರಾತ್ರಿಯೂ ಅನುಭವ ಕೇಂದ್ರಗಳಿಗೂ ಚಿಕಿತ್ಸೆ ನಡೆಸಲಿಕ್ಕೂ ಸಿದ್ಧರಾಗಿಯೇ ಇರುತ್ತಾರೆ. ಪ್ರಸವಕಾಲದ ಕೆಲವು ದಿನಗಳ ಮೊದಲೇ ಇಲ್ಲಿ ಬಂದು ವಾಸಿಸಬಹುದು. ಪ್ರಸವಕಾಲ ಸಮೀಪಿಸಿದಾಗ ಅಂಥಾ ಸ್ತ್ರೀಯರಿಗೆ ಪರೀಕ್ಷೆ ಮಾಡಿ ಚಿಕಿತ್ಸೆಯನ್ನು ಕೊಡಲಿಕ್ಕೆ ಅನುಕೂಲವಾಗುತ್ತದೆ. ಈ ಗೃಹದ ಸೌಕರ್ಯವನ್ನು ಪಡೆಯಲಿಚ್ಛಿಸುವವರಿಗೆ ಅವರವರ ದೃಷ್ಟಿಗನುಕೂಲ್ಯ ಸರಿಯಾಗಿ ಸರಿಯಾದ ದರಗಳನ್ನು ವಸೂಲು ತೆಗೆದುಕೊಳ್ಳುವಂತೆ ಏರ್ಪಡಿಸಿಯದೆ. ಬೆಳಗ್ಗೆ 8 ಗಂಟೆಯಿಂದ 11ರ ವರೆಗೂ ಮಧ್ಯಾಹ್ನ 3ರಿಂದ 6ರ ವರೆಗೂ ಹೊರಗಿನವರ ಚಿಕಿತ್ಸೆಗೆ ಸಮಯ ನಿಗಡಿಸಿಟ್ಟಿದೆ. ಇಲ್ಲಿ ಪರೀಕ್ಷೆಗೆ ಹಾಸಲು ತೆರಬೇಕಾಗಿಲ್ಲ. ಔಷಧದ ಬೆಲೆಯನ್ನು ಮಾತ್ರ ತೆರಬೇಕಾಗುವುದು. ವಿಶೇಷ ಮಾಹಿತಿಯನ್ನು ಮಂಗಳೂರು ಈಶ್ವರಾನಂದ ಮಹಿಳಾ ಸೇವಾಶ್ರಮದ ಮೇಲ್ವಿಚಾರದವರಿಂದ ಪಡೆಯಬಹುದು ಎಂದು ಆಶ್ರಮದ ಕಾರ್ಯದರ್ಶಿಯವರು ತಿಳಿಸುತ್ತಾರೆ.

ಸ್ಕೌಟ್‌ಮಾಸ್ಟರರ ತರಬೇತಿ

ಸ್ಕೌಟ್‌ಮಾಸ್ಟರುಗಳ ಪುನರ್ತರಬೇತಿಯ ಶಿಬಿರವನ್ನು ಇದೇ ದಶಂಬರತಾ 9ರಿಂದ 13ರ ವರೆಗೆ, ಕಿನ್ನಿಕಂಬಳದಲ್ಲಿ, ಮದರಾಸು ಪ್ರಾಂತದ ಅಸಿಸ್ಟಾಂಟ್ ಬೊರ್ಗಸ್ಕೌಟಿಂಗ್ ಕಮಿಶನರರಾದ (ಹಿಂದುಸ್ಥಾನ ಸ್ಕೌಟ್ ಏಸೊಸಿಯೇಶನ್) ಶ್ರೀಯುತ, ರಾಜಗೋಪಾಲನ್ ಇವರು ನಡೆಸುವರು.

ಕಳೆದ ತಿಂಗಳ ತಾರೀಕು 27ರಲ್ಲು ರಾತ್ರಿ 8 ಗಂಟೆಗೆ ಮಂಗಳೂರಲ್ಲಿರುವ ಮಹಾಜನಸಮಿತಿಯಲ್ಲಿ 'ಸಮಾಜ ಸೇವಾಸಮಿತಿ'ಯ ಆರೂಢೋತ್ಸವವು ಶ್ರೀಮಾನ್ ಕೆ. ಎಲ್ಲಾಣ್ಣ ಪೂಜಾರಿ B. A., B. L., Advocate, ಅವರ ಅಧ್ಯಕ್ಷತೆಯಲ್ಲಿ ಅತಿ ವಿಜೃಂಭಣೆಯಿಂದ ಜರಗಿತು.

ಕರ್ನಾಟಕದ ಏಕೀಕರಣ

ಸ್ಥಳೀಕ ಗವರ್ನಮೆಂಟ್ ಟ್ರೈನಿಂಗ್ ಶಾಲೆಯ ವಿದ್ಯಾರ್ಥಿ ಅಧ್ಯಾಪಕ ಸಂಘದ ಆಶ್ರಯದಲ್ಲಿ ತಾ. 6ರಂದು ಶ್ರೀ ಕಯ್ಯಾರ ಕಿಞ್ಞಣ್ಣ ರೈಗಳು ಕರ್ನಾಟಕದ ಏಕೀಕರಣದ ವಿಷಯ ಉಪನ್ಯಾಸವಿತ್ತರು. ಅಖಂಡವಾಗಿದ್ದ ಕರ್ನಾಟಕವು ಹಂಹಂಚಿ ಹೋದ ವಿಷಯವನ್ನು, ಅದರಿಂದ ಒದಗಿದ ದುರವಸ್ಥೆಗಳನ್ನೂ ವಿವರಿಸಿ, ಕನ್ನಡಿಗರ ರಾಜಕೀಯ, ಸಾಂಸ್ಕೃತಿಕ ಏಳಿಗೆಗೆ ಏಕೀಕರಣವಲ್ಲದೆ ಬೇರೆ ದಾರಿಯಿಲ್ಲವೆಂದೂ, ಆ ಕುರಿತು ಹಳ್ಳಿಹಳ್ಳಿಗಳಲ್ಲಿ ವಿದ್ಯಾಶಿಕ್ಷಣವನ್ನು ಕೊಡುವ ಅಧ್ಯಾಪಕರು ಹೆಚ್ಚಿನ ಭಾಗವನ್ನು ವಹಿಸುವುದು ಅವಶ್ಯವೆಂದೂ ತೋರಿದರು.

ಬೀಡಿ ಕೆಲಸಗಾರರ ಮುಷ್ಕರ

ಮಂಗಳೂರು ಶ್ರೀ ಪುತ್ತು ಸೈಯಂದ್ ಶೇಟ್ ಇವರ ಬೀಡಿ ಕಾರ್ಖಾನೆಯಿಂದ ಇಬ್ಬರು ಕೆಲಸಗಾರರನ್ನು ತೆಗೆದುಹಾಕಿದ ನಿಮಿತ್ತ ತಾ. 30-11-39ರಂದು ಬೀಡಿ ಯೂನಿಯನಿನವರು ಅನ್ನಸತ್ಯಾಗ್ರಹ ಹೂಡಿದರು. ಕೆಲಮಂದಿಯ ದಸ್ತಗಿರಿಯಾಯಿತು. ಆಮೇಲೆ ಪುರಪ್ರಮುಖರ ಕೆಲಸದ ಯತ್ನದಿಂದ ವಿವಾದವು ಇತ್ತಂದದವರಿಗೂ ನ್ಯಾಯವಾಗುವ ರೀತಿಯಲ್ಲಿ ತೀರ್ಮಾನವಾಗಿದೆ. ತೆಗೆದುಹಾಕಿದ ಕೆಲಸಗಾರರಿಗೆ ಕೆಲಸ ಕೊಟ್ಟಿದೆ. ದಸ್ತಗಿರಿಯಾದವರ ಬಿಡುಗಡೆಯಾಗಿದೆ.

ಶೋಚನೀಯ ನಿಧನ

ಮೃತರ ಪತ್ನಿಯರು ಆತ್ಮಹತ್ಯೆ!

ಬಂಟ್ವಾಳದ ಪ್ರಸಿದ್ಧ ಗೃಹಸ್ಥರೂ ಮಂಗಳೂರಿನ ವಕೀಲರೂ ಆಗಿದ್ದ ಟಿ. ನಾರಾಯಣ ಭಂಡಾರಿಗಳು ಕೆಲ ದಿನಗಳಿಂದ ಅಸ್ವಸ್ಥದಿಂದಿರಲು ಅವರು ಬದುಕುವುದು ನಿಶ್ಚಯವಿಲ್ಲವೆಂಬ ವಿಷಯವನ್ನು ಅವರ ಪತ್ನಿಯು ಕೇಳಿ, ಶೋಕಾಕುಲಳಾಗಿ ಕಳೆದ ಆದಿತ್ಯವಾರ ರಾತ್ರಿ ಅವರೂ ಬಾವಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡರು. ಶೋಮವಾರ ಬೆಳಗ್ಗೆ ನಾರಾಯಣ ಭಂಡಾರಿಗಳೂ ದಿವಂಗತರಾದರು ಎಂದು ತಿಳಿಸಲು ಕುಂಟಾ ವಿಷಾದ ಪಡುತ್ತೇವೆ. ಮೃತದಂಪತಿಗಳ ಬಂಧು ಬಳಗದ ಆಪಾರ ದುಃಖದಲ್ಲಿ ನಮ್ಮ ಸಹಸಂತಾಪವನ್ನು ಸೂಚಿಸುತ್ತೇವೆ.

ಉಡುಪಿ

ಬಾರಕೂರು: ಕಳೆದ ತಾ. 18ನೇ ಸಾಯಂಕಾಲ 5 ಗಂಟೆಗೆ ಇಲ್ಲಿಯ ಶ್ರೀ ಪಂಚಲಿಂಗೇಶ್ವರ ದೇವಸ್ಥಾನದ ಎದುರು ಮಠಂತ ಮಂಟಪದಲ್ಲಿ ಶ್ರೀ. ಶ್ರೀನಿವಾಸ ಸಾಲ್ಕುಂದರು ನಡೆಯಿಸಿಕೊಂಡು ಬರುವ 'ಭಾರತೀ ಸಂಗೀತ ಪಾಠಶಾಲಾ' ವರ್ಷಾಂತ್ಯೋತ್ಸವವು ಡಾ॥ ಎ ಶ್ರೀನಿವಾಸ ಹೆಬ್ಬಾರ್ ಅವರ ಅಧ್ಯಕ್ಷತೆಯಲ್ಲಿ ಜರಗಿತು.

ಶಿವಮೊಗ್ಗ: ಕಳೆದ ತಾ. 22ರಲ್ಲಿ ಶಿವಮೊಗ್ಗ ಪಂಚಾಯತ ಬೋರ್ಡು ಸಭೆಯ ಪ್ರೆಸಿಡೆಂಟರಾದ ಶ್ರೀ ಎಸ್. ಅಣ್ಣಯ್ಯ ಬೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಪಂಚಾಯತ ಬೋರ್ಡ ಆಫೀಸಿನ ಬಗ್ಗೆ ಸದ್ಯವೇ ಒಂದು ಕಟ್ಟೋಣವನ್ನು ಪ್ರಾರಂಭಿಸುವದೆ ಸ್ಥಳವನ್ನು ಸಂಬಂಧಪಟ್ಟವರಿಂದ ಎಲಿಸೇಶನ್ ಮಾಡಿಕೊಳ್ಳಬೇಕಾಗಿ ನಿರ್ಣಯಿಸಲಾಯಿತು. ಬರುವ ದಶಂಬರ ತಿಂಗಳಲ್ಲಿ ಆರೋಗ್ಯ ಮತ್ತು ಶಿಶುಸಪ್ತಾಹವನ್ನು ಆಚರಿಸುವದೆ ಹಣಮಂಜೂರುಮಾಡಲಾಯಿತು.

ಕಾರ್ಕಳ

ಮೈಸೂರು ಪ್ರಾಂತ್ಯದಿಂದ ಬಂದ ಒಂದು ಕುಟುಂಬದವರು ತಾತ್ಕಾಲಿಕವಾಗಿ ಕಾರ್ಕಳದಲ್ಲಿ ಮನೆವಾಡಿಕೊಂಡಿದ್ದುದರ ಕಾರಣ ಅಲ್ಲಿಯ ಪ್ಲೇಗಿನ ಸೋಂಕು ಇಲ್ಲಿಯೂ ತಗಲಿದ ಸಂದರ್ಭಕ್ಕಾದ ಪರಿಸ್ಥಿತಿಯಲ್ಲಿ ಕಳೆದ ವಾರ ಆ ಕುಟುಂಬದಲ್ಲಿ ಪ್ಲೇಗಿನ ಸಂಬಂಧ ಎರಡು ಮರಣಗಳಾದುವು. ಆದರೆ ಪ್ಲೇಗಿನ ಅಂಶ ಇತರರಿಗೆ ಬಾರದಂತೆಯೂ ಇಲ್ಲಿ ಮೊದಲಾದ ಚಿಕ್ಕ ಪ್ರಾಣಿಗಳ ನಾಶ ಮಾಡುವಂತೆಯೂ ಎಲ್ಲಾ ಮುಂಜಾಗ್ರತೆಗಳನ್ನು ತೆಗೆದುಕೊಂಡಿರುವುದರಿಂದ ಈ ಮಹಾ ರೋಗವು ಹರಡಿಕೊಳ್ಳುವ ಭಯವು ಸದ್ಯ ಇರುವುದಿಲ್ಲ.

ವರ್ಷಾವಧಿ ನಡೆಯುವ ಸ್ಥಳೀಯ ಶ್ರೀ ವೆಂಕಟ್ರಮಣ ದೇವಾಲಯದ ಲಕ್ಷದೀಪೋತ್ಸವವು ಈ ವರ್ಷವೂ 1-12-1939ರಿಂದ ಮೂರು ದಿನಗಳ ತನಕ ಬಹಳ ವಿಜೃಂಭಣೆಯಿಂದ ನಡೆಯಿತು. ವಾದ್ಯ ಸಂಗೀತ ಮೊದಲಾದ ಕುಶಲ ಕಲೆಗಳಲ್ಲಿ ಪ್ರವೀಣರಾದವರಿಗೆ ಈ ಸಂದರ್ಭದಲ್ಲಿ ಯಥೋಚಿತ ಸಂಭಾವನೆಯೂ ಶ್ರೀ ದೇವಸ್ಥಾನದ ಕಡೆಯಿಂದ ನಡೆಯಿತು.

ಬೋರ್ಡ್ ಮೈಸ್ ಎಲಿಮೆಂಟರಿ ಶಾಲಾ ವಿಶಾರದಲ್ಲಿ 4-12-39ರಿಂದ ಸ್ಥಳೀಯ ಡಿಸ್ಟ್ರಿಕ್ಟ್ ಮುನ್ಸಿಫ್ ಶ್ರೀ ಪೋಲಾ ರೆಡ್ಡಿ, ಬಿ.ಎ., ಬಿ.ಎಲ್. ರವರ ಅಧ್ಯಕ್ಷತೆಯಲ್ಲಿ ಆರೋಗ್ಯ ಮತ್ತು ಶಿಶುಸಪ್ತಾಹವು ಆರೋಗ್ಯ ಭಾಷಣಗಳು, ವ್ಯಾಯಾಮ ಪ್ರದರ್ಶನಗಳು, ಸಂಗೀತ ಸ್ಪರ್ಧೆಗಳು, ಮೊದಲಾದ ಯಥೋಚಿತ ಕಾರ್ಯಕ್ರಮಗಳಿಂದ ಒಂದು ವಾರದ ತನಕ ಪ್ರತಿದಿನವೂ ನಡೆಯುತ್ತಾ ಇದೆ.

ಉಳ್ಳಾಲ,

ಇದೇ ದಶಂಬ್ರ ತಿಂಗಳ ತಾ ೧ನೇ ಶುಕ್ರವಾರ ದಿನ ಉಳ್ಳಾಲ ಜಮಾಅತ್ ಪಳ್ಳಿಯಲ್ಲಿ ಸಾಖಿರ ಜಮಾತರ ಸಭೆಯು ಕೂಡಿ ಜರ್ಚಿಸಿ ಈ ಕೆಳಗಿನ ನಿರ್ಣಯಗಳನ್ನು ಮಂಜೂರುಮಾಡಲಾಯಿತು.

೧ ಜಮಾತ್ ಪಳ್ಳಿಯ ಬಾಬತು ಸನದು ಹೊಂದಿದ ಆಡಳಿತ ಮೊಕ್ತೇಶ್ವರರು ಮೃತಪಟ್ಟುದುದರಿಂದಲೂ, ಹೊಸ ಮೊಕ್ತೇಶ್ವರರನ್ನು ನೇಮಕಮಾಡುವರೆ ಸದ್ಯ ಅನುಕೂಲವಾದ್ದರಿಂದಲೂ, ಪಳ್ಳಿ ಭಂಡಾರದ ಬಾಬತು ಆಡಳಿತಯನ್ನು ಸಾಖಿರ ಜಮಾತರ ಪರವಾಗಿ ನಡಿಸಿಕೊಂಡು ಬರುವರೆ ಒಬ್ಬ ಆಡಳಿತದಾರನ್ನು ತತ್ಕಾಲಕ್ಕೆ ನೇಮಿಸಬೇಕಾಗಿ ಬಂದ ಸೂಚನೆಯನ್ನು ಸಾಖಿರ ಜಮಾತರು ಅನುಮೋದಿಸಿದುದರಿಂದ ತತ್ಕಾಲಕ್ಕೆ ಒಬ್ಬ ಆಡಳಿತದಾರನ್ನು ನೇಮಿಸಬೇಕಾಗಿ ನಿಶ್ಚಯಿಸಲಾಯಿತು. ಅ ಸ್ಥಾನಕ್ಕೆ ಜನಾಬ್ ಮಂಚಿಲ ಹಮ್ಮದ್ ಸಾಹೇಬರವರ ಹೆಸರು ಸೂಚಿಸಲ್ಪಟ್ಟು, ಸಾಖಿರ ಜಮಾತರೂ ವಿಕಲ್ಪವಾಗಿ ಒಪ್ಪಿಕೊಂಡದ್ದರಿಂದ, ಹೊಸ ಆಡಳಿತ ಮೊಕ್ತೇಶ್ವರರನ್ನು ಚುನಾಯಿಸುವವರೆಗೆ ಜನಾಬ್ ಮಂಚಿಲ ಹಮ್ಮದ್ ಸಾಹೇಬರವರನ್ನು ಪಳ್ಳಿ ಭಂಡಾರದ ಆಡಳಿತದಾರನ್ನಾಗಿ ನೇಮಿಸಲಾಯಿತು. ಸದ್ರಿ ಜನಾಬ್ ಹಮ್ಮದ್ ಸಾಹೇಬರವರು ಸಾಖಿರ ಜಮಾತರ ಪರವಾಗಿ ಪಳ್ಳಿ ಭಂಡಾರದ ಆಡಳಿತೆಯನ್ನು ಹೊಸ ಆಡಳಿತ ಮೊಕ್ತೇಶ್ವರರ ಚುನಾವಣೆಯ ಪರಿಯಂತ ನಡಿಸಿಕೊಂಡು ಬರುವುದಾಗಿ ಸಾಖಿರ ಜಮಾತರ ಮುಂದೆ ವಚನಗೆಯನ್ನು ಕೊಟ್ಟಿರುತ್ತಾರೆ. ಆದ್ದರಿಂದ ಮೇಲೆ ಪ್ರಸ್ತಾವಿಸಿದ ಭಂಡಾರದ ಆಡಳಿತ ವಗೈರೆಯ ಸರ್ವ ಅಧಿಕಾರಗಳನ್ನು ಸದ್ರಿ ಹಮ್ಮದ್ ಸಾಹೇಬರವರಿಗೆ ಈ ದಿನವೇ ಒಪ್ಪಿಸಿಕೊಡಲಾಯಿತು.

೨ ಸೈದ್ ಮುಹಮ್ಮದ್ ಶರೀಫುಲ್ ಮದನೀಯವರ ಉರುಸು ಎಂಬ ಇದು ವರ್ಷಕ್ಕೊಂದು ಸರ್ತಿಯಂತೆ ನೆರವೇರಿಸಿಕೊಂಡು ಬರುವ ನೇರ್ಚೆಯು ಇದೇ ಬರುವ ೧೯ನೇ ಇಸವಿ ಮಾರ್ಚ ತಿಂಗಳ ತಾ. ೨೪ನೇ ಆದಿತ್ಯವಾರಕ್ಕೆ ಸರಿಯಾಗುವ ಹಿಜರಿ ೧೩೫೮ನೇ ಸಫರ್ ತಿಂಗಳ ಚಾಂದ್ ೧೪ನೇ ದಿನ ಜರಗಿಸಬೇಕೆಂತಲೂ ನಿರ್ಣಯಿಸಲಾಯಿತು.

೩ ಸೈದ್ ಮುಹಮ್ಮದ್ ಶರೀಫುಲ್ ಮದನೀಯವರ ಹೆಸರಿನ ನೇರ್ಚೆ (ಪರಲೆ) ವಗೈರೆ ಹಣಗಳನ್ನೂ ಪತ್ರವ್ಯವಹಾರಗಳನ್ನೂ ಪರವೂರ ಗೃಹಸ್ಥರು ಕಳುಹಿಸುವುದಾದರೆ ಜನಾಬ್ ಮಂಚಿಲ ಹಮ್ಮದ್ ಸಾಹೇಬ್ ಅಧಿಕೃತ ಆಡಳಿತದಾರ, ಉಳ್ಳಾಲ ಜಮಾತ್ ಪಳ್ಳಿ, ಪೋಸ್ಟು ಉಳ್ಳಾಲ ಎಂಬ ವಿಳಾಸಕ್ಕೆ ಕಳುಹಿಸಬೇಕೆಂತಲೂ ಸಹ ನಿರ್ಣಯಿಸಲಾಯಿತು.

೪ ಇಂದಿನ ಸಭೆಯಲ್ಲಾದ ಎಲ್ಲಾ ನಿರ್ಣಯಗಳನ್ನೂ ತೀರ್ಮಾನಗಳನ್ನೂ ಲೋಕಲ್ ಪತ್ರಿಕೆಗಳಲ್ಲಿ ಪ್ರಕಟಿಸಬೇಕೆಂತಲೂ ನಿರ್ಣಯಿಸಿ, ಹಾಗೆ ಪ್ರಕಟಿಸುವ ಅಧಿಕಾರವನ್ನು ಜನಾಬ್ ಯು. ಕೆ. ಇಸ್ಮಾಯಿಲ್ ಸಾಹೇಬರವರಿಗೆ ಒಪ್ಪಿಸಿಕೊಡಲಾಯಿತು.

U. K. Ismail Sah
Ullal, 5—12—'39

ಕರ್ನಾಟಕ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರವರ ನಂಜನಗೂಡು ಸದ್ವೈದ್ಯಶಾಲೆಯಲ್ಲಿ ದಿನಂಬ ೯ ಆನೇ ಶುಕ್ರವಾರ 'ಶ್ರೀ ಧನ್ವಂತರಿ ಜಯಂತಿ' ಮಹೋತ್ಸವದಲ್ಲಿ ಮಂಗಳೂರಿನ ಸುಪ್ರಸಿದ್ಧ ವೈದ್ಯರಾದ ಆಯುರ್ವೇದ ಭೂಷಣ, ಎಂ. ವಿ. ಶಿಷ್ಟಿಗಳವರು ಉಪನ್ಯಾಸವೀಯಲು ಒಪ್ಪಿರುವರೆಂದು ತಿಳಿಯುತ್ತದೆ.

ಕೊಡಗು—ಇಲ್ಲಿನ ಸಿ. ಸಿ. ಕಂಪೆನಿಯ ಕೆಲಸಗಾರರು, ಆದರ ಮೇನೇಜಿಂಗ್ ಡೈರೆಕ್ಟರರಾದ ಶ್ರೀ ಪಿ. ಎಸ್. ಕುಡ್ಪರ ಒಳಿತಾಗಾರ್ಥವಾಗಿ ಒಂದು ಸತ್ಕಾರಕೂಟವನ್ನು ಕಳೆದ ತಿಂಗಳ ೧೧ನೇರಂದು ಏರ್ಪಡಿಸಿದ್ದರು.

ಸಾದರ-ಸ್ವೀಕಾರ

೧ ಭೇರುಂಡೇಶ್ವರ (ದೇವಮ) ಮೈಸೂರು ಇನ್ಸೂರೆನ್ಸ್ ಕಂಪನಿಯ ಪ್ರಕಟಣೆ.

೨ ಶಿಶುಗೀತ ಮಾಲೆ (ಜಿ. ಎಸ್. ಲಕ್ಷ್ಮಣ ಸ್ಕೂಲ್ ಬುಕ್ ಕಂಪನಿಯ ಪ್ರಕಟಣೆ.

೩ ಸುಂದರೀ ಬಾಯಿ[illegible] ಜಾ[illegible] ಬಂಧು ವಾರ ಕ್ಯಾಲೆಂಡರ್ ಮಾಲೆಯ ಪ್ರಥಮ ಕಟ್ಟ

೪ ಕುಮಾರ ವ್ಯಾಸ [illegible] ರಂಗಣ್ಣ ಮೈಸೂರು [illegible] ಟಿಕೆ.

೫ ಹಂ[illegible] [illegible]ಸಿಂಹ [illegible] [illegible]ಯದ ಸ್ವ[illegible] [illegible]

CAN
OLD
M.

NO

Is hereby giv[illegible] meeting of the G[illegible] Association will b[illegible] day the 27th D[illegible] 3 P M in the Memorial Hall, Mangalore

All members are earnestly requ[illegible]

Resolutions [illegible] meeting shou[illegible] tary by the 24 [illegible]

Canara High School, Mangalore, 5—12—'39.

ಯುದ್ಧವಾರ್ತೆ!



ಯೂರೋಪಿನಲ್ಲಿ ಇನ್ನೊಂದು ಘೋರ ಸಂಗ್ರಾಮವು ತೊಡಗಿದೆ!

—ರಶ್ಯಾ ಪಿನ್ಲೆಂಡುಗಳ ಕಾಳಗ—

ಪಿನ್ನರು ಸಾಹಸದಿಂದ ಕಾದಾಡುತ್ತಲಿದ್ದಾರೆ! ರಶ್ಯದ ಸೈನಿಕರ ದಯೆಯಿಲ್ಲದ ವರ್ತನೆ!

ಯೂರೋಪಿನಲ್ಲಿ ಪ್ರಚಂಡ ಗೊಂದಲ

ಯೂರೋಪಿನಲ್ಲಿ ಇಂದು ಗೊಂದಲ ತಿರೂಪ ಹೆಚ್ಚುತ್ತಿದೆ ಒಂದು ಕಡೆ ರಣರಂಗದಲ್ಲಿ ಎದುರಾಗಿ ಬ್ರಿಟನು ಫ್ರಾನ್ಸ್‌ಗಳು ಸೆಣಸುತ್ತಿವೆ! ಇತ್ತಲಕಡೆಯೇ ರಶ್ಯನ ಮೇಲೆ ಆಕ್ರಮಣ ಮಾಡಿದೆ ಯೂರೋಪಿನ ಪರಿಸ್ಥಿತಿ ಹದಿಂದ ವಿಷಮಗೊಂಡಲಗಳು ಪ್ರಪಂಚ ಜನತೆಯ ಮನಸ್ಸು ಕದಡಿದ್ದರೂ ಯುದ್ಧ ಪಿಡಿತರಾಗಿದ್ದಾರೆ ಸರ್ವಾಧಿಕಾರಿಗಳ, ಕಲಹಕಂಟಕರ ಹಾಗೂ ಸಾಮ್ರಾಜ್ಯ ಲಾಲಸೆಯ ಜನರ ಅನ್ಯಾಯದ ಬೀಜವು ಇಂದು ವಿಷಫಲವನ್ನು ಯೂರೋಪಿನಲ್ಲಿ ಉಣ್ಣುತ್ತಿದೆ

ಮಿತ್ರ ರಾಷ್ಟ್ರಗಳ ಪ್ರತೀಕಾರ

ಜರ್ಮನಿಯನ್ನು ಎಲ್ಲಾ ವಿಧದಿಂದಲೂ ಕೈಕಟ್ಟಬೇಕೆಂದು ಬ್ರಿಟನು ಫ್ರಾನ್ಸು ಮಿತ್ರ ರಾಷ್ಟ್ರಗಳು ಯತ್ನಿಸುತ್ತಿವೆ ಈ ಎರಡು ಸರಕಾರಗಳು ಒಂದು ಕಾನೂನನ್ನು ಹೊರಡಿಸಿವೆ ಅದರಲ್ಲಿ ಜರ್ಮನಿಯಿಂದ ಸಾಗಿ ಸಲಾಗುವ ಪ್ರತಿಯೊಂದು ಹಡಗನ್ನೂ ಹಿಡಿದು ಪರಿಶೋಧಿಸುವುದು ಮಾತ್ರವಲ್ಲದೆ ಜರ್ಮನಿಯಲ್ಲಿ ತಯಾರಾದ ಸಾಮಾನುಗಳನ್ನು ಅವಹರಿಸ ವರ ಇದರಿಂ[illegible] ಸಾಮಾನುವು ಜನತೆ ಇಂಕಹ ತೋಟಿಗಳಿಂದ ಭಗ್ನ ಮಾಡುವರು. ಬರ್ಕ್ ಎಂಬಲ್ಲಿ ಜರ್ಮನ್ ಸಮುದ್ರ ವಿಮಾನಗಳು ಹಾರಿ, ಅಲ್ಲಿದ್ದ ಸೈನಿಕರು ಬೇರೆ ಬೇರೆ ಕಡೆಗಳಲ್ಲಿ ತೋಟಿಗಳನ್ನು ನಡ್ಡುತ್ತಿದ್ದಾಗ, ಬ್ರಿಟಿಷ್ ಸೈನಿಕರು ಅವರನ್ನು ಮುತ್ತಿ ಸೆರೆ ಹಿಡಿದರು

ತಟಸ್ಥ ರಾಷ್ಟ್ರಗಳ ನಿಷೇಧ

ಇಂಗ್ಲಿಷರು ಜರ್ಮನ್ ಸಾಮಾನುಗಳ ಅವಹರಣೆಗೆ ಮಾಡಿದ ಈ ಕಾನೂನಿಗೆ ತಟಸ್ಥ ರಾಷ್ಟ್ರಗಳು ತಮ್ಮ ನಿಷೇಧಗಳನ್ನು ಸೂಚಿಸಿದ್ದಾರೆ ಹೋಲೆಂಡಿಗೆ ಇದರಿಂದ ಬಹಳ ನಷ್ಟವಾಗುವುದರಿಂದ ಅದು ಅಕ್ಷೇಪಗೊಂಡಿ[illegible] ಜನತಾನು ಇಟಲಿಗಳೂ ಎಚ್ಚರಗೊಂಡಿವೆ

ಪ್ರೆಸಿಡೆಂಟ್ ರೂಸ್‌ವೆಲ್ಟರು ಪಿನ್ಲೆಂಡು ರಶ್ಯಗಳ ಕಲಹಗಳನ್ನು ಇತ್ಯರ್ಥಿಸುವ ವಿಚಾರದಲ್ಲಿ ಆಗ್ರಹವುಳ್ಳವರಾಗಿದ್ದರು ಆದರೆ ರಶ್ಯವು ಅವರ ಮಾತಿಗೆ ಕಿವಿಗೊಟ್ಟಿಂತೆ ಕಂಡುಬರುವುದಿಲ್ಲ

ಹೊಗೆ ಹೊರಡಿಸುವ ಯುದ್ಧ

ಜರ್ಮನಿಯ ಸೈನ್ಯ ರಣಭೂಮಿಯಲ್ಲಿ ಹೊಸ ತರದ ಯುದ್ಧತ್ರಿಮುಖವೊಂದನ್ನು ಮಾಡಿದೆ ಸಮ ದ್ರಗಳಲ್ಲಿ ತೋಟಿಗಳನ್ನುಡುವಂತೆ, ಈ ಹೊಗೆ ಹೊರಡುವ ಶೆಲ್ಲುಗಳಿಂದ ಹೊಗೆ ಬಿಡುವರು ಇದರಿಂದ ಮುಂಬರುವ ಶತ್ರುಸೈನಿಕರ ಕಣ್ಣು ಕಟ್ಟಿ ಅವರಿಗೆ ಶತ್ರುಗಳ ಗತಿ ಸ್ಥಾನಗಳು ತಿಳಿಯುವುದಿಲ್ಲ

ರಶ್ಯ ಪಿನ್ಲೆಂಡುಗಳ ಕಲಹ

ಇದು ಯುರೋಪಿನಲ್ಲಿ ಉಂಟಾದ ಹೊಸತೊಂದು ಆಕ್ಷೇಯದ ಘಟನೆಯೂ ಗಿದೆ ಕೆಲಸಮಯಗಳಿಂದ ಈ ಉಭಯ ರಾಷ್ಟ್ರಗಳು ಸ್ವಲ್ಪ ಸ್ವಲ್ಪ ತಿಕ್ಕಾಟಕ್ಕೆ ತೊಡಗಿದ್ದುವು ಆದರೆ ಪಿನ್ಲೆಂಡು ತನ್ನ ಅಧಿಕಾರಿಗಳನ್ನು ರಶ್ಯಕ್ಕೆ ಕಳುಹಿಸಿ ಉಭಯ ರಾಷ್ಟ್ರಗಳ ಸೈನ್ಯಮಗಳು ಅಳಿಯುವಂತೆ ಮಾಡಲು ಯತ್ನಮಾಡಿತು ಪಿನ್ಲೆಂಡಿನಿಂದ ಹೆಚ್ಚಿನ ರಿಯಾಯಿತಿಯನ್ನು ಪಡೆಯಲು ರಶ್ಯವು ಅಪೇಕ್ಷೆಪಟ್ಟಿತು

ಕಡೆಗೆ ಈ ವಾರದ ಮೊದಲನೆಯ ದಿನ, ರಶ್ಯವು ಕೇಳಿದ ರಿಯಾಯಿತಿಯನ್ನು ಪಿನ್ಲೆಂಡು ಕೊಡಲು ಸಮ್ಮತಿಸದಿದ್ದರೆ ರಶ್ಯವು ಯುದ್ಧವನ್ನು ಹೂಡುವುದೆಂದು ಮೂರು ದಿನಗಳ ಮೊದಲು ಪ್ರಕಟಿಸಿತು ಈ ಕಡೆಯ ನುಡಿಯ ಎಚ್ಚರಿಕೆಯೊಡನೆ ರಶ್ಯದ ಕೆಂಪು ಸೈನಿಕರು ಪಿನ್ಲೆಂಡಿನ ಗಡಿಗೆ ಬಂದು ನಿಂತರು ಕೆಲವು ಸ್ಥಳಗಳನ್ನು ಸ್ವಾಧೀನ ಪಡಿಸಿಕೊಂಡರು

ಪಿನ್ಲೆಂಡಿನ ಸಂಕಲ್ಪ

ರಶ್ಯವು ಆ ರೀತಿಯಲ್ಲಿ ಉದ್ಧಟತನದಿಂದ ಮುಂದೊತ್ತಿ ಬರುತ್ತಿರಲು ಪಿನ್ಲೆಂಡು ರಶ್ಯದೊಡನೆ ಯುದ್ಧವ ಕಟನೆ ಮಾಡಿತು ಪಿನ್ಲೆಂಡಿನಲ್ಲಿ ಸಂಕ್ರಿಮಂಡಳ ಬದಲಾವಣೆಯಾಯಿತು ಈ ಮೊದಲು ವಿರುದ್ಧ ಪಕ್ಷಗಳಲ್ಲಿದ್ದ ಕೆಲವರು ಮಂತ್ರಿಮಂಡಳದಲ್ಲಿ ಸೇರಿಸಲ್ಪಟ್ಟರು ಈ ಹೊಸ ಮಂತ್ರಿಮಂಡಳವು ರಶ್ಯದೊಡನೆ ಒಪ್ಪಂದಮಾಡಲು ತಯಾರಿರುವುದಾಗಿ ಪ್ರಕಟಮಾಡಿತು

ಇನ್ನೂರಿಲ್ಲ ರಶ್ಯನರು ಹೆಲ್ಸಂಕಿ ಸರಕಾರನನ್ನು ತೆಗೆದುಹಾಕಿ ರಶ್ಯವು ಹೇಳಿದಂತೆ ಕುಣಿಯುವ ಹೊಸ ಸರಕಾರವನ್ನು ಪಿನ್ಲೆಂಡಿನಲ್ಲಿ ರಚಿಸಿದರು ಈ ಸರಕಾರದಲ್ಲಿ ಪಿನ್ಲೆಂಡಿನ ಉಗ್ರವಾದಿಗಳೂ ಸೇರಿದರು ಇದು ಪಿನ್ಲೆಂಡಿನ ಡೆಮೊಕ್ರಟಿಕ್ ರಿಪಬ್ಲಿಕ್ ಪ್ರಜಾ ಸರಕಾರ'ವೆಂದು ಕರೆಯಲ್ಪಟ್ಟಿತು ಪಿನ್ಲೆಂಡಿನ ಯುದ್ಧೋತ್ಸಾಹಿಗಳಿಗೆ ವಿರುದ್ಧ ಇವರು ದಂಗೆಯೇಳುವ ಕಾರ್ಯಕ್ರಮವನ್ನು ಮಾಡಲು ನಿಶ್ಚಯಿಸಿದರು

ರಶ್ಯದ ಶರತ್ತುಗಳು

ರಶ್ಯವು ಈ ಕೆಳಗಿನ ಶರತ್ತುಗಳನ್ನು ಪಿನ್ಲೆಂಡಿಗೆ ಕಳುಹಿಸಿತು ಮೊದಲನೆಯದಾಗಿ ಪಿನ್ಲೆಂಡಿನಲ್ಲಿ ಪ ಜಾಪ್ರಭುತ್ವ ಸರಕಾರವು ಆಗಬೇಕು ಎರಡನೆಯದಾಗಿ ರಶ್ಯ ಪಿನ್ಲೆಂಡುಗಳೊಡನೆ ಪರಸ್ಪರ ಸಹಾಯಕವಾಗುವ ಒಪ್ಪಂದವಾಗಬೇಕು ಮೂರನೆಯದಾಗಿ ಪಿನ್ಲೆಂಡಿನ ರಾಜ್ಯದ ಆಡಳಿತದಲ್ಲಿ ಕೆಲವು ಮಾರ್ಪಾಡುಗಳಾಗಬೇಕು

ರಶ್ಯದ ಸೈನಿಕರ ಪಿನ್ಲೆಂಡಿನಲ್ಲಿ ಹ ವು ಕಡೆ ನಿರ್ದಯರಾಗಿ ವಾಂಬು ಹಾಕಿದರು ಹಲವು ಸಲ ಪಿನ್ಲೆಂಡಿನ ಸೈನಿಕರು ರಶ್ಯದ ವಿಮಾನಗಳಿಗೆ ಗುಂಡಿಕ್ಕಿದರು

ಅಮೇರಿಕದ ಸಹಾನುಭೂತಿ

ಪಿನ್ಲೆಂಡಿನ ವಿಷಯವಾಗಿ ಅಮೇರಿಕದ ಅಧ್ಯಕ್ಷರಾದ ರೂಸ್‌ವೆಲ್ಟರು ಸಹಸಂತಾಪವುಳ್ಳವರಾಗಿದ್ದಾರೆ ಈ ಯುದ್ಧದಲ್ಲಿ ಶಾಂತರಾದ ಪ್ರಜೆಗಳನ್ನು ಬಾಂಬು ಹಾಕಿ ಕೊಲ್ಲುವ ಅನ್ಯಾಯವನ್ನು ಮಾಡಬಾರದೆಂದು ಅವರು ಪ್ರಕಟಿಸಿರುವರು ಈ ಬಿಕ್ಕಟ್ಟನ್ನು ಬಗೆಹರಿಸಲು ಅಮೇರಿಕವು ರಾಜಿ ಮಾತುಕತೆ ಮಾಡಲು ಇಷ್ಟಪಡುವುದಾಗಿ ತಿಳಿಸಿತು

ರಶ್ಯಕ್ಕೆ ಏನು ಬೇಕಾಗಿದೆ?

ಪಾರ್ಲಿಮೆಂಟು ಸಭೆಯಲ್ಲಿ ಪಿನ್ಲೆಂಡು ರಶ್ಯಗಳ ಗೊಂದಲದ ಕುರಿತು ಮಾತನಾಡುತ್ತಾ ಚೆಂಬರ್ಲೇನರು ಹೀಗೆಂದರು ರಶ್ಯವು ಪಿನ್ಲೆಂಡಿನಲ್ಲಿ ಕೆಲವು ಮರ್ಮಸ್ಥಾನಗಳನ್ನು ಕೇಳಿತು ಪಿನ್ಲೆಂಡ್ ಕೊಲ್ಲಿಯಲ್ಲಿರುವ ಕೆಲವು ದ್ವೀಪಗಳನ್ನು ಸಿಟ್ಟು ಕೊಡಬೇಕೆಂದು ಬಯಸಿತು. ಪಿನ್ಲೆಂಡಿನ ಒಂದೇ ಒಂದಾದ ಆರ್ಕ್ಟಿಕ್ ಬಂದರವಾದ ಏಟ್ಸಾಮೋವನ್ನು ರಶ್ಯವು ಬೇಕೆಂದ ಕೇಳಿತು ಅದರೆ ಪಿನ್ಲೆಂಡು ಈ ವಿಚಾರಗಳನ್ನು ಮೊದಲಿನಿಂದಲೇ ಶಾಂತರೀತಿಯಿಂದ ನೋಡಿಕೊಂಡು ತಮ್ಮ ವಿಚಾರಗಳನ್ನು ಪಕ್ಷಪಾತವಿಲ್ಲದ ಮೂರನೆಯ ಪಕ್ಷದ ಇತ್ಯರ್ಥಕ್ಕೆ ಬಿಡಬಹುದೆಂದು ಹೇಳತೊಡಗಿ, ಅದರೆ ರಶ್ಯದ ಸರಕಾರವು ಈ ಎರಡು ರಾಷ್ಟ್ರಗಳೊಳಗೆ ಇದ್ದ ಅನಾಕ್ರಮಣ ಒಪ್ಪಂದವನ್ನು ವಿರೋಧಿಸಿ ಮುಂದೆ ಬಂದರಿಯುವುದೆಂದೂ ವಿವರಿಸಿದರು ಈ ವಿಷಯದಲ್ಲಿ ಬ್ರಿಟಿಷರು ಪಿನ್ಲೆಂಡಿನ ವಿಷಯ ಸಹಸಂತಾಪವುಳ್ಳವರೆಂದೂ ಹೇಳಿದರು

ಇದು ಎಂತಹ ಒಪ್ಪಂದೆ?

ರಶ್ಯವು ಕೈಗೊಂಬೆ ಸರಕಾರದೊಡನೆ ಒಂದು ಒಪ್ಪಂದ ಮಾಡಿಕೊಂಡಿದೆ ಅದರಲ್ಲಿ ರಶ್ಯ ಪಿನ್ಲೆಂಡುಗಳು ಕೆಲವು ಪ್ರದೇಶಗಳನ್ನು ಅದಲುಬದಲು ಮಾಡಿಕೊಳ್ಳಬೇಕೂಂದೂ ಸೂಚಿಸಿದಾಗಿದೆ

ಪಿನ್ಲೆಂಡ್ ಸರಕಾರವು ಕಮ್ಮ ವಿವಾದವನ್ನು ತೀರಿಸಲು ಜನಾಂಗ ಸಂಘಕ್ಕೆ ಒಪ್ಪಿಗೆಯಿತ್ತಿರುವುದು

ಹಾಲೆಂಡು ಸ್ವಿಟ್ಜರ್‌ಲ್ಯಾಂಡ್ ರಾಷ್ಟ್ರಗಳು ರಶ್ಯದ ಧೋರಣೆಯನ್ನು ಖಂಡಿಸಿ ಪಿನ್ಲೆಂಡಿಗೆ ಬೆಂಬಲ ಕೊಡುವುದಾಗಿ ಹೇಳಿದುವು

ರಶ್ಯವು ರಾಜಿಗೆ ಇಷ್ಟಪಟ್ಟುವುದಿಲ್ಲ

ರಶ್ಯ ಮತ್ತು ಪಿನ್ಲೆಂಡುಗಳ ಕುರಿತು ವ ವಿವಾದದಲ್ಲಿ ಜನಾಂಗ ಸಂಘದ ನಿರ್ಣಯದಂತೆ ನಡೆಯಬಹುದೆಂದು ಪಿನ್ಲೆಂಡು ಹೇಳಿತ್ತು ಅದಕ್ಕೆ ರಶ್ಯವು ಒಪ್ಪುವುದಿಲ್ಲವಾಗಿ ತಿಳಿದಿದೆ. ಇದು ಕಂದಾದ ತ್ರಿರುವ ಗಲಿಕೆರವು ಪಿನ್‌ಲೆಂಡಿನ ಪ್ರಜೆಗಳ ಕರವಾಗಿರುವದಲ್ಲವೆಂದೂ ನಾವು ಎಲ್ಲಿ ದಿನೆಡೆಗೆ ಕಾದಾಡುವುದೇ ಇಲ್ಲವೆಂದೂ ರಶ್ಯವು ಪಿನ್‌ಲೆಂಡಿನ ಪ್ರಜಾಪ್ರಭುತ್ವ ಸರಕಾರದೊಡನೆ ರಾಜಿಯಾಗುವುದೆಂದೂ ತಾ ಮೊಲೊಟೋವರು ಹೇಳಿದರು

ಸ್ವೀಡನ್ ಸರಕಾರವು ಎಸ್ಟೊಂಡಿನ ವರಂಗಿ ಸಹಾನುಭೂತಿಯನ್ನು ತೋರಿಸಿ ಆಹಾರ ಮೊದಲಾದ ಸಹಾಯವನ್ನು ಕೊಡಲು ಸಿದ್ಧತೆ ಮಾಡಿತು

ಎಸ್ಟಿಷ್ ಕೂಲಿಗಾರರ ಪಕ್ಷದವರು ರಶ್ಯದ ದೌರಣೆಯನ್ನು ಖಂಡಿಸಿದರ ಇಟಲಿಯಲ್ಲಿ ಪಿನ್‌ಲೆಂಡಿಗೆ ಸಹಾನುಭೂತಿಯ ಮೆರವಣಿಗೆ ನಡೆಯಿತು

ಇದಕ್ಕೆ ಏನನ್ನ[illegible]ಬೇಕು?

ಒಂದೇ ದೇಶದಲ್ಲಿ ಎರಡು ಸರಕಾರ ಪಿನ್ಲೆಂಡು ರಶ್ಯಗಳು ಇಂದು ಕಾದಾಡುತ್ತಿವೆಯಷ್ಟೆ ಆದರೆ ರಶ್ಯನರ ಕುಟಕ ತನಕ್ಕೆ ಅಲ್ಲಿ ಮೀರಿಯಷ್ಟಿರುವಂತಿದೆ ಅಲ್ಲಿನ ಸರಕಾರವು ರಶ್ಯದ ಧೋರಣೆಯನ್ನು ಖಂಡಿಸಿ ಎದುರಾಡುತ್ತಿರಲು, ರಶ್ಯನರು ತಾವು ಹೇಳಿದ ಹಾಗೆ ಕೇಳುವ ಕೆಲ ಮಂದಿಯನ್ನು ಒಟ್ಟುಗೂಡಿಸಿ, ಪಿನ್ಲೆಂಡಿನ ನಿಜವಾದ ಸರಕಾರವನ್ನು ಕೈಗೊಂಬೆಯಾಗಿ ಕುಣಿಯುವಂತೆ ಮಾಡುವುದೇ ಎಂದು ಸಾರಿದ್ದಾರೆ ಪಿನ್ಲೆಂಡ್ ಸರಕಾರವು ರಾಜಿಯ ವಿಷಯವನ್ನು ಜನಾಂಗ ಸಂಘದ ತೀರ್ಮಾನಕ್ಕೆ ಒಪ್ಪುವುದೆ ಎಂದರೆ ನಾವು ಈಗ ಪಿನ್ಲೆಂಡಿನ ನಿಜವಾದ ಸರಕಾರದೊಡನೆ ಯುದ್ಧ ಮಾಡುವುದೇ ಇಲ್ಲವೆಂದು ರಶ್ಯವು ಹೇಳುತ್ತದೆ ಇಂಕಹ ಕುಟಲತನಕ್ಕೆ ಏನನ್ನಬೇಕು?

ಹಿಟ್ಲರ್ ನೀತಿಯನ್ನು ನಾಶಮಾಡುವುದೆಂತು?

ರಾಜಾಜಿಯ ವರ ಸಲಹೆ

ದಿಲ್ಲಿಯ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಭಾಷಣಮಾಡುತ್ತಾ ರಾಜಾಜಿಯವರು ಬ್ರಿಟಿಷರಿಗೆ ಹಿಟ್ಲರ್ ನೀತಿಯನ್ನು ನಾಶಮಾಡುವ ಒಂದು ಸಲಹೆಯನ್ನು ಸೂಚಿಸಿದ್ದಾರೆ

ಇಂಗ್ಲೆಂಡು ಈಗ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯವನ್ನು ಕೊಟ್ಟರೆ ಅವರು ಇಡೆಲೇ ಅ ಹುರಿಯನ್ನಕೊಂಡತಾಗುವುದು ಬ್ರಿಟಿಷರು ಹಿಟ್ಲರ್ ನೀತಿಯನ್ನು ನಾಶಮಾಡಲು ಯತ್ನಿಸುವರು ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ಕೊಟ್ಟರೆ ಅದ ಕಡಿಲೇ ಅ ಹುರಿಯನ್ನಕೊಂಡತಾಗ ವುದು ಯುದ್ಧದಂ ತಹ ಬಿಕ್ಕಟ್ಟಿನ ಸಮಯದಲ್ಲಿಯೂ ಇಂದ ಬ್ರಿಟನ ಕೈಯಲ್ಲಿದ್ದ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ಕೊಟ್ಟರೆ ಜಗತ್ತಿನಲ್ಲಿ ಯಾವ ರಾಷ್ಟ್ರವೂ ವ ಕ್ತಂದ ರಷ್ಟರ ಅಧೀನಂದರ್ಮದಲ್ಲಿ ಬಳಲುವುದು ಯೋಗ್ಯವಲ್ಲವೆಂದ ಕಾರ್ಯಕ್ರಮ ರೂಪಿಸಿದಂತಾಗುವುದೆಂದೂ ಹಿಟ್ಲರ್ ನೀತಿಯು ಇದರಿಂದ ನಾಶವಾಗುವುದೆಂದೂ ಹಿಟ್ಲರ್ ಹಲಿಯ ನಾಶವಾಗುವುದೆಂದೂ ಸೋಳಿದರು

ನೆಹರೂಗೆ ಸೂಚನೆಗೆ ಹಕ್ಕಿಲ್ಲ

ಉಸಿರಿಲ್ಲ

ಕಾಂಗ್ರೆಸು ಮಂತ್ರಿಮಂಡಳದ ಮೇಲೆ ಬಂಗಾಳದ ಪ್ರಧಾನ ಮಂತ್ರಿಗಳಾದ ಶ್ರೀಯುತ ಹಕ್ಕರ ಕಾಂಗ್ರೆಸು ಮಂತ್ರಿಮಂಡಳಗಳಿದ್ದ ಪ್ರಾಂತಗಳಲ್ಲಿ ಮುಸಲ್ಮಾನರಿಗೆ ಅನ್ಯಾಯವಾಗಿದೆಯೆಂದು ಆರೋಪವೆತ್ತಿದ್ದರು ಅದಕ್ಕೆ ಪಂಡಿತ ನೆಹರೂರವರ ಹೆಕ್ಕರು ಹೇಳುವುದುರಕ್ಕೂದೂ, ಅಲ್ಲವಾದರೆ, ಅವರು ಅದನ್ನು ಕೇವಲ ಬಾಯಿಮಾತಿನ ಆರೋಪವಾಗಿ ಹೇಳದೆ ಪ್ರಮಾಣಪೂರ್ವಕ ರುಜುವಾತು ಸಟೇಕಂದೂ ಉತ್ತರಿಸಿತ್ತಿದ್ದರು ಆ ಮೇಲೆ ಈ ಎರಡು ಜನರೊಳಗೆ ಆ ಕುರಿತು ವತ್ರವ್ಯವಹಾರಗಳು ನಡೆದ ವು ನೆಹರುಗಳು ಹಕ್ಕರೊಡನೆ, ಅವರು ಹೇಳಿದ ಆರೋಪಗಳು ರುಜುವಾತಿಗೆ ಬೇರೆ ಬೇರೆ ಸ್ಥಳಗಳನ್ನು ಸಂದರ್ಶಿಸುವ ಪ್ರಯತ್ನ ಕೈಂತ, ಅವರು ಮೊದಲೊಂದು ಆರೋಪ ಪತ್ರಿಕೆಯನ್ನು ತಯಾರಿಸಬೇಕೆಂದೂ, ಅದನ್ನು ಹಿಂದಿನ ಪ್ರಾಂತದ ಆಡಳಿತದವರಿಗೂ ಕಳುಹಿಸಿ ಅವರು ಪರಿಹಾರವನ್ನು ಮಾಡಲು ಅಪ್ಪದ ಕೊಡಬೇಕೆಂದೂ ಸೂಚಿಸಿದರು ಅದರೆ ಹಕ್ಕರು ಇದಕ್ಕೆ ಸಮ್ಮತಿಸಲಿಲ್ಲ ಅವರು ತಮ್ಮ ಆರೋಪಗಳನ್ನು ಹಿಂದಿನ ಮಂತ್ರಿಗಳಾಗಲಿ ಇಂದಿನ ಆಡಳಿತದವರಾಗಲಿ ಕಳ ಹಿಸುವ ಅವಶ್ಯವಿಲ್ಲವೆಂದೂ ಹಾಗಾದರೆ ಹಕ್ಕರಿಗೆ ಕಾಂಗ್ರೆಸ ಸರಕಾರದ ಕೆಲಸಗಳನ್ನ ದೂರುವುದು ಮಾತ್ರ ಅವಶ್ಯವಿತ್ತೆಂದು ತೋರುತ್ತದೆ

ಹಳ್ಳಿಗಳಲ್ಲಿ ಪ್ರಜಾಪ್ರಭುತ್ವ

ಶ್ರೀ ಪ್ರಕಾಶಂರ ಸಲಹೆ

ಅನಂತಪುರದ ಜಿಲ್ಲಾ ಪ್ರವಾಸದ ಸಮಯದಲ್ಲಿ ಶ್ರೀ ಪ್ರಕಾಶಂರವರು ಭಾಷಣಮಾಡುತ್ತಾ ಹಳ್ಳಿಗಳ ಉದ್ಧಾರವು ರಾಷ್ಟ್ರದ ಎಳ್ಳಿಗಳಲ್ಲಿ ಎಷ್ಟರ ಮಟ್ಟಿಗೆ ಪ್ರಾಪ ಪ್ತವಾದುದೆಂದೂ ಹಳ್ಳಿಗಳಲಿ ಪಂಚಾಯ ತಿಕ ವ ದಿಂದ ಪ್ರಜಾಪ್ರಭುತ್ವವು ಸ್ಥಾಪಿತವಾಗಿ ಸ ಸೂತ್ರವಾಗಿ ಸಾಗಿ ವುದೇ ದೇಶದ ಏಳಿಗೆಯ ಕ್ಷಣವೆಂದೂ ಹೇಳಿದರು

ಮೈಸೂರಿನ ಕಾಂಗ್ರೆಸು ಧುರೀಣರು

ಮೈಸೂರಿನ ಸತ್ಯಾಗ್ರಹದ ಕುರಿತು ಕಾಂಗ್ರೆಸು ಧುರೀಣರ ಹಕವಾದ[illegible]ನ್ನು ಕೇಳಲು ಮೈಸೂರು ಸ್ಟೇಟ್ ಕಾಂಗ್ರೆಸಿನ ಅಧ್ಯಕ್ಷರಾದ ಶ್ರೀ ಎಚ್ ಸಿ ದಾಸಪ್ಪನವರು ಮಹಾತ್ಮಾಜಿಯ ವರನ್ನು ಸಂದರ್ಶಿಸಲು ತೀರ್ಥಹಳ್ಳಿ ಶ್ರೀ ಕೆ ಸಿ ರೆಡ್ಡಿಯವರ ಬೊಂಬಾಯಿಗೆ ಹೋಗಿ ಸರ್ದಾರ್ ವಲ್ಲಭಭಾಯಿ ಪಟೇಲರನ್ನು ಕಂಡು ಮಾತನಾಡಿದರು

ಕೇಂದ್ರ ಎಸೆಂಬ್ಲಿಯಲ್ಲಿ ಸತ್ಯಾಗ್ರಹದ ಅಧಿವೇಶನವು ತಾ ೪ರಲ್ಲಿ ನಡೆಯಿತು

ಭಗತ್ಸಿಂಗ್ ಜಾಪಾ ಜಯಂತಿ

ಅಖಿಲಭಾರತ ಹರಿಜನ ಸೇವಾಸಂಘದ ಅಧ್ಯಕ್ಷರಾದ ಶ್ರೀ ಎ ಎ ಭಗತ್ಸಿಂಗರ ಹುತಾತ್ಮಿಕರ ಜಯಂತಿ ಬೊಂಬಾಯಿಯಲ್ಲಿ ಶ್ರೀ ಸಿ ರಾಜಗೋಪಾಲಾಚಾರಿಯವರ ಅಧ್ಯಕ್ಷತೆಯಲ್ಲಿ ಜರಗಿತು ಸರ್ದಾರ್ ಪಟೇಲ ಶ್ರೀ ಬಿ ಜಿ ಖೇರ್ ಮೊಲಾಖಾಯಿ ದೇಸಾಯಿ ಪ್ರಭೃತಿಗಳ ಹಾಜರಿದ್ದರು

ವರ್ಕಿಂಗ್ ಕಮಿಟಿಯ ಮುಂದಾಳುಗಳ ಮೇಲೆ ಬೋಸರ ಉಗ್ರಟೀಕೆ

ಬ್ರಿಟಿಷ್ ಸರಕಾರವು ಸಂಧಿಯ ಬಾಗಿಲು ಮುಚ್ಚಿದ್ದರೂ, ನಾವು ಕೊನೆಯ ವರೆಗೂ ಸಂಧಾನದ ಬಾಗಿಲು ತೆರೆದಿಟ್ಟಿದ್ದೇವೆ" ಹೀಗೆಂದು ನಿರ್ಣಯದಲ್ಲಿ ವಿವರಿಸಿದ ವರ್ಕಿಂಗ್ ಕಮಿಟಿಯ ಧೋರಣೆಯನ್ನು ಬೋಸರು ಖಂಡಿಸಿದ್ದಾರೆ ಕಾಂಗ್ರೆಸು ವರ್ಕಿಂಗ್ ಕಮಿಟಿಯು ಯಾರ ಸಂಗಡ ಯುದ್ಧ ಮಾಡುವುದು? ಎಂದು ಅವರು ಪ್ರಶ್ನಿಸಿದ್ದಾರೆ. ಮಹಾತ್ಮಾ ಸಿ ರಾಜಗೋಪಾಲಾಚಾರಿ, ಮಹಾತ್ಮಾ ಗಾಂಧಿಯವರು ಇನ್ನೂ ರಿಯಾಯಿತಿಯ ತಯಾರಿಲ್ಲವೆನ್ನುತ್ತಾರೆ, ಅದರೆ ಸಿದ್ಧರಿಲ್ಲದವರು ಯಾರು? ರಾಷ್ಟ್ರವೋ ವರ್ಕಿಂಗ್ ಕಮಿಟಿಯೊ ಮುಂದಾಳುಗಳೇ? ಗಾಂಧಿಯವರಿಲ್ಲದ ಯುದ್ಧ ಇಂದಿಯದ ಹೊಸ ಜೈಕನ್ನಡಕಾವಾದ ಲೇಖನಗಳಲ್ಲೂ ಇಂದಿನ ಹರಿಜನದ ಲೇಖನಗಳಲ್ಲೂ ತುಲನೆ ಮಾಡಿದರೆ ಸಮಂಜಸವಲ್ಲದಲಾವಣೆಯೂ ಗೊತ್ತಾಗುವುದು ಅದರಂತೆ ಮಹಾತ್ಮಾಜಿಯವರಲ್ಲಿಯೂ ಬದಲಾವಣೆಯಾಗಿದೆ ಎಂದರು

ಹಿಂದೂದೇಶಕ್ಕೆ ಬಂದಿದ್ದು ಇಲ್ಲಿನ ಧುರೀಣರನ್ನ ಕಂಡು ಮಾತನಾಡಿ ದೇಶದ ಪರಿಸ್ಥಿತಿಯ ಸ್ಥಾಪಿಕೆಗೆ ಮುಂದೆ ಹೋದ ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಎಡ್ವರ್ಡ್ ಥಾಮ್ಸನರು ಲಂಡನ್ನ ಸಕಲ ಪಕ್ಷದವರ ಮುಂದೆ ಮಾತನಾಡುತ್ತ



ಕಾಂಗ್ರೆಸಿನ ಕೇಳಿಕೆಗಳನ್ನ ಕೂಡ ಪ್ರಜಾಸ್ವಾಯವೆಂದು

ವ ದಾಸಿನ ತರಣ ಸಭೆದಲ್ಲಿ ಭಾಷಣಕೊಡುತ್ತಾ ಮಾಜಿ ಸಚಿವರಾಗಿದ್ದ ಶ್ರೀ ಎ ಎ ಹಿಂದ ಮಂದಗಳನ್ನ ಎಚ್ಚರಿಸಿದ್ದು ಗಾಂಧಿಯವರನ್ನು ಹಿಂಬಲಿಸುವುದರಿಂದ ದೇಶದ ಏಳಿಗೆಯ ಎಂದೂ ತಿಳಿದರು

ರಾಷ್ಟ್ರೀಯ ಯೋಜನಾಸಮಿತಿ

ರಾಷ್ಟ್ರೀಯ ಯೋಜನಾಸಮಿತಿಯ ಬೇರೆ ಬೇರೆ ಉಪಸಮಿತಿಗಳನ್ನು ನಿರ್ಪಡಿಸಿ ವರದಿ ತಯಾರಿಸಲು ಸೂಚಿಸಿರುವುದಷ್ಟೆ ಅವುಗಳಲ್ಲದಂ ವಿಸ್ತಾರ ವರದಿಯು ಬರುವ ವಾರ ಬೆಟ್ಟಗೂಡಿಸಿದ ವಿಚಾರಿಸಲಾಗುವುದೆಂದು ತಿಳಿಯುತ್ತದೆ

ಮಹಾತ್ಮರ ಭೇಟಿ

ಸದ್ಯದಲ್ಲಿಯೇ ಸರ್ದಾರ್ ಪಟೇಲ, ಸಿ ರಾಜಗೋಪಾಲಾಚಾರಿ, ಮಹಾ

ಬಾಲ್ಟಿಕ್ ರಾಜ್ಯಗಳ ಜೀವಾಳ ಆಲೆಂಡ್ ದ್ವೀಪ ಸಮುದಾಯ

ರಷ್ಯದ ವಕ್ರದೃಷ್ಟಿ ಫಿನ್ಲೆಂಡ್ ಆಕ್ರಮಣದ ಗೂಢ ಯುರೋಪಿನಲ್ಲಿ ಹೊಸತೊಂದು ಗೊಂದಲ

ರಷ್ಯವು ಫಿನ್ಲೆಂಡನ್ನು ಆಕ್ರಮಿಸಿ ರಾಜ ಧಾನಿಯ ಮೇಲೆ ಬಾಂಬಿನ ಸುರಿಮಳೆ ಯನ್ನು ಸುರಿಸಿದ ಉದ್ವೇಗಕಾರಿ ವರ್ತ ಮಾನವು ಕಳೆದವಾರ ತಾನೇ ಬಂದಿದೆ. ಫಿನ್ಲೆಂಡ-ರಷ್ಯ ಘರ್ಷಣವು ಆಕ್ರಮಣ ದಲ್ಲಿ ಯಾಕೆ ಪರ್ಯವಸಾಯಿಯಾ ಯಿತು? ಯೂರೋಪದ ಮತ್ತು ಅಮೇ ರಿಕದ ಪ್ರಬಲವಿರೋಧವು ಇದ್ದಿತಾದರೂ ಷ್ಯವು ಅದನ್ನು ಲೆಕ್ಕಿಸದೆ ಫಿನ್ಲೆಂಡಿನ ಮೇಲೆ ದಂಡೆತ್ತಿ ಹೋದುದೇಕೆ? ಇದರ ಗೂಢವು ಬಹಳಮಂದಿಗೆ ತಿಳಿದಿರುವು ದಿಲ್ಲ.

ಬಾಲ್ಟಿಕ ಸಮುದ್ರದಲ್ಲಿ ಫಿನ್ಲೆಂಡಿಗೆ ಒತ್ತಿಕೊಂಡು ಅದರ ಸ್ವಾಧೀನದಲ್ಲಿ ಆಲೆಂಡ ಎಂಬ ಕೆಲವು ಸಣ್ಣ ದ್ವೀಪಗಳ ಚಿಕ್ಕ ಸಮುದಾಯವು ಇರುತ್ತದೆ. ಈ ದ್ವೀಪಗಳನ್ನು ಒಂದೋ ರಷ್ಯದ ಸ್ವಾಧೀನ ಕೊಡಬೇಕು ಅಥವಾ ಅವುಗಳಲ್ಲಿ ಫಿನ್ಲೆಂಡು ಕೋಟೆ ಕೊತ್ತಳಗಳನ್ನು ಕಟ್ಟಿ ಸೈನ್ಯ ಸರಂಜಾಮು ಇಡಕೂಡದು ಎಂಬ ರಡು ಶರತುಗಳು ರಷ್ಯವು ಫಿನ್ಲೆಂಡಿನ ಮುಂದಿಟ್ಟ ಬೇರೆ ಕೆಲವು ಶರತುಗಳೊಂ ದಿಗೆ ಮುಖ್ಯವಾಗಿದ್ದುವು. ಫಿನ್ಲೆಂಡು ಉಳಿದ ಶರತುಗಳನ್ನು ಒಪ್ಪುವ ಹಾಗಿದ್ದಿ ತ್ತಾದರೂ ಆಲೆಂಡ ದ್ವೀಪಗಳನ್ನು ರಷ್ಯಕ್ಕೆ ಬಿಟ್ಟುಕೊಡುವ ಅಥವಾ ಅವುಗಳಲ್ಲಿ ಕೋಟೆ ಕೊತ್ತಳಗಳನ್ನು ಕಟ್ಟಕೂಡದ ನ್ನುವ ಎರಡು ಶರತುಗಳನ್ನು ಮಾತ್ರ ಅದು ಎಷ್ಟು ಮಾತ್ರಕ್ಕೂ ಒಪ್ಪಲಿಲ್ಲ. ಹಾಗಾಗಿ ರಷ್ಯವು ಫಿನ್ಲೆಂಡಿನ ಮೇಲೆ

ಸೈನ್ಯವನ್ನೇ ಕಳುಹಿಸಿ
ಚಿಕ್ಕವಾಗಿರುವ
ಮೇಲೆ ತನ್ನ ಅಧಿ
ಗ್ರಹಕ್ಕೆ ರಷ್ಯವು
ನ್ನು ಮಾಡುತ್ತ

ಳ ಮಹತ್ವ
ಸಿಜ ಅಥವಾ
ರನ್ನವಾಗಿರು
ಅವುಗಳನ್ನು
ಡಿಕೊಳ್ಳುವ ವಿಚಾರ
ವರಂತು ಯುದ್ಧಕಾ
ಅತಿಶಯ ಮಹತ್ವವು
ದ್ವೀಪಗಳು ಯಾವ
ವಾಗಿರುವವೋ, ಅ
ರಾಜ್ಯಗಳ ಮೇಲೂ
ನಡೆಸಬಲ್ಲದಾಗಿದೆ.
ಯನ್ನು ಬಿಟ್ಟು ಲಿಥುವೇ
ಲೆಟಿವಿಯಾ, ಎಸ್ಟೋನಿಯಾ,
ಸ್ಕೇಂಡಿನೇವಿಯಾ, ರಷ್ಯ ಮೊದ
ಗಳ ಸೈ ಶಕ್ತಿಗೆ ಧಕ್ಕೆ
ವುಗಳ ವ್ರಾಶ
ಮೆಯ ಈ ಧಕ್ಕೆ

ಯನ್ನು ಉಳಿಸಲಿಕ್ಕೆ ಉಳಿದ ರಾಜ್ಯಗಳ ಮೇಲೆ ತನ್ನ ಪ್ರಭಾವ ಪ್ರಾಶಸ್ತ್ಯಗಳನ್ನು ಬೆಳೆಸಿಕೊಳ್ಳಲಿಕ್ಕೂ ರಷ್ಯವು ಈ ದ್ವೀಪ ಸಮುದಾಯವನ್ನು ತನ್ನ ಸ್ವಾಧೀನ ಮಾ ಡಿಕೊಳ್ಳುವ ಪ್ರಯತ್ನ ಮಾಡಿರುವುದು. ಅದನ್ನು ಸ್ವಾಧೀನ ಮಾಡಿಕೊಳ್ಳಲಿಕ್ಕೆ ಅದು ಎಷ್ಟು ಬೆಲೆಯನ್ನು ಕೊಡಲಿಕ್ಕಾ ದರೂ, ಕೊನೆಗೆ ತನ್ನ ಅಸ್ತಿತ್ವವನ್ನು ಕಳೆ ಕೊಳಲಿಕ್ಕಾದರೂ ಅದು ಸಂಪೂರ್ಣ ಸಿದ್ಧವಾಗಿದೆ.

ಉಳಿದ ರಾಜ್ಯಗಳ ವಿರೋಧ

ಆಲೆಂಡ ದ್ವೀಪಗಳು ಮಾತ್ರ ಸ್ವಾಧೀ ನವಾದರೂ ಉಳಿದ ರಾಜ್ಯಗಳಿಗೆ ಅದು ಹಿತಕರವಾಗಿರುವುದಿಲ್ಲ. ಒಂದಲ್ಲ ಒಂದು ಸಮಯ ಬಾಲ್ಟಿಕ ರಾಜ್ಯಗಳಲ್ಲಿ ಪ್ರತಿಯೊಂದು ರಾಜ್ಯವೂ ಅದನ್ನು ತನ್ನ ಸ್ವಾಧೀನದಲ್ಲಿಟ್ಟುಕೊಳ್ಳಲಿಕ್ಕೆ ಪ್ರಯತ್ನಿಸಿ ದುದಿದೆ. ಜರ್ಮನಿಯು ಕೂಡ ಒಂದು ಕಾಲದಲ್ಲಿ ಅದು ಇತರರ ಅಂಕಿಗೆ ಬಿಳ ಪಡದಂತೆ ನೋಡಿಕೊಳ್ಳಲಿಕ್ಕೆ ತನ್ನದಲ್ಲ ವನ್ನೂ ಕೊಡಲಿಕ್ಕೆ ಸಿದ್ಧವಿತ್ತು. ಆದರೆ ಹಿಟ್ಲರನಿಗೆ ರಷ್ಯದ ಸ್ನೇಹವು ಈಗ ಬಿಸಿ ನೀರಿನ ಗುಟುಕು ಆಗಿರುವುದರಿಂದ ಅವ ನೀಗ ನಿರುಪಾಯನಾಗಿ ರಷ್ಯದ ಪ್ರಯತ್ನ ಗಳನ್ನು ವಿರೋಧಿಸದೆ ಇದ್ದಾನೆ. ಸ್ವೀಡನು ಕೂಡ ಆಲೆಂಡ ದ್ವೀಪಗಳನ್ನು ತನ್ನ ಸ್ವಾಧೀನ ಮಾಡಿಕೊಳ್ಳಲಿಕ್ಕೆ ಪ್ರಯತ್ನಿ ಸಿತ್ತು. ಆದರೆ ಜನಾಂಗ ಸಂಘದ ಸಿದ್ಧಾ ರವು ಅದಕ್ಕೆ ಪ್ರತಿಕೂಲವಾಗಿದ್ದದರಿಂದ ಅದು ಸುಮ್ಮಗಿರಬೇಕಾಯಿತು. ಈಗ ಈ ದ್ವೀಪಗಳು ರಷ್ಯದ ಸ್ವಾಧೀನವಾಗುವ ಕುರಿತು ಎಲ್ಲಾ ರಾಜ್ಯಗಳು ವಿರೋಧ ವನ್ನು ತೋರಿಸಿವೆ. ಜರ್ಮನಿಯು ನ್ಯಕ ಟವಾಗಿ ಏನೂ ಹೇಳದೆ ಇದ್ದರೂ, ಅದರ ಹಾರ್ದಿಕ ಇಚ್ಛೆಯು, ಈ ದ್ವೀಪಗಳು ರಷ್ಯದ ಸ್ವಾಧೀನವಾಗಬಾರದೆಂದೇ ಇರು ವುದು. ಯಾಕೆಂದರೆ ಆಲೆಂಡ ದ್ವೀಪ ಗಳು ರಷ್ಯದ ಸ್ವಾಧೀನವಾದಾಗ ಬಾಲ್ಟಿಕ ಸಮುದ್ರದ ಒಡೆತನವು ರಷ್ಯದಕ್ಕೆಗೆ ಬರು ವುದು. ರಷ್ಯದ ಶಕ್ತಿ ಸಾಮರ್ಥ್ಯಗಳು ಹೀಗೆ ಬೆಳೆದು ಬರುವುದು ಯಾರಿಗೂ ಇಷ್ಟವಾಗಿಲ್ಲ. ಮನೆವಠಾರದಲ್ಲಿ ಶತ್ರು ವಿನ ಉನ್ನತಿಯನ್ನು ಯಾರು ತಾನೇ ನೋಡಿಕೊಂಡಿರಬಹುದು?

ಯೂರೋಪದ ಫ್ರಾನ್ಸ್—ಜರ್ಮನಿ-ಇಂಗ್ಲೆಂಡುಗಳು ವರಸ್ಪರ ಯುದ್ಧದಲ್ಲಿ ತೊಡಗಿರುವಾಗ ರಷ್ಯವು ಬಾಲ್ಟಿಕದ ಎಲ್ಲಾ ರಾಜ್ಯಗಳ ಜೀವಾಳದಂತಿರುವ ಆಲೆಂಡ ದ್ವೀಪಗಳನ್ನು ತನ್ನ ಅಧೀನ ಮಾಡಿಕೊಳ್ಳಲು ಪ್ರಯತ್ನಿಸಿರುವುದು, ಇದರಿಂದ ಯೂರೋಪದ ಪ್ರತ್ಯಕ್ಷಿಣ್ಣ ವಾತಾವರಣದಲ್ಲಿ ಉರಿಯುವ ಬೆಂಕಿಗೆ ತು ಪ್ಪವನ್ನು ಹಾಕಿದಂತಾಗಿದೆ.

CANARA BANK LIMITED

Head Office: **Mangalore.**

A net work of 37 branches.

Alleppey	Calicut	Karkala
Arsikere	Cannanore	Kasaragode
Badagara	Cherai	Kayamkulam
Bangalore	Chickmagalur	Kumbla
Bantwala	Cochin	Mangalore-Bander
Belgaum	Coondapoor	Mangalore-City
Belthangady	Davangere	Manjeshwar
Bombay-Fort	Dharwar	Moolky
Bombay-Mandvi	Doddballapur	Payyannur
Bombay-Girgaum	Ernakulam	Puttur
Bombay-Kalbadevi	Gangulli	Quilon
Bombay-Parel	Hubli	Udipi
		Uppinangady

THE

Canara Banking Corporation Ltd.,

(INCORPORATED IN BRITISH INDIA)

THREE YEARS' CASH CERTIFICATES

bearing interest at 4%p. a.

in denominations of

RS. 50/-, 100/-, 500/-, 1,000/-, & 5,000/

are now issued at all our Branches.

For particulars call at or write to any of our nearest Branches.

THE

BANK OF MANGALORE LTD.,

MANGALORE.

ESTD. 1931

Branches:-

Mudabidri & Padubidri.

Fixed Deposits will be received at following rates of interest.

For	3 months		3½%
"	6 "		4%
"	12 "		5%
"	24 "	& upwards	5½%

Interest Payable Quarterly.

Savings Bank deposit 3½% on daily balances.

All kinds of bankingbusiness transacted

★ ಚೀನಿ ಯುದ್ಧದಲ್ಲಿ ★
ಜಪಾನಿಗೆ ಉಳಿಗಾಲ ಉಂಟೆ?

'ಗೋಮುಖ ವ್ಯಾಘ್ರರಿಂದ ಜಾಗರೂಕರಾಗಿ ಇರಿ'

ಚಿಯಾಂಗ್ ಕೈಶೇಖರ ವೀರ ವಾಣಿ

'ಯೂರೋಪದಲ್ಲಿ ಮಹಾಯುದ್ಧ ಪ್ರಾರಂಭವಾಗಿರುವುದು ನನಗೆ ಬಹಳ ಅನುಕೂಲವಾಗಿದೆ ಈ ಸಮಯದಲ್ಲಿ ಧೈರ್ಯಗುಂದದೆ ಕಾದಾಡುವುದಾದರೆ, ವಿಜಯ ಶ್ರೀಯು ಸಂಪೂರ್ಣ ನಮಗೇ ಒಲಿಯುವಳು. ಈಗ ಜಗತ್ತಿನ ನವ ನಿರ್ಮಾಣದಲ್ಲಿ ಚೀನಕ್ಕೆ ಯೋಗ್ಯ ಸ್ಥಾನಮಾನಗಳು ಪ್ರಾಪ್ತವಾಗುವುವು' ಎಂದು ಚೀನೀ ಸೇನೆಗಳ ಸರ್ವ ಸೇನಾಧಿಪತಿ ಚಾಂಗಕೇಶೇಖರ ಚಂಕ್ ಕಿಂಗ್ ರಾಜಧಾನಿಯಲ್ಲಿ ಮಾಗಿದ ಭಾಷಣದಿಂದ ಸ್ಪಷ್ಟವಾಗುತ್ತದೆ

ಚೀನೀ ಬಲವು ದ್ವಿಗುಣಿತವಾಗಿದೆ

'ಎರಡು ವರ್ಷಗಳ ಮೊದಲು ಚೀನೀ ಜಪಾನ ಸಂಗ್ರಾಮವು ಆರಂಭವಾಗುವಾಗ್ಗೆ ಚೀನೀ ಬಲವು ಎಷ್ಟಾಗಿತ್ತೋ, ಎರಡು ವರ್ಷಗಳ ಪ್ರಚಂಡ ಹೋರಾಟವು ಆದ ಮೇಲೆ, ಈಗ ಕಡಿಮೆಯಾಗುವುದರ ಬದಲಿಗೆ, ಅದಕ್ಕಿಂತ ದ್ವಿಗುಣಿತವಾಗಿರುವುದು ಕಳೆದ ಆರು ತಿಂಗಳ ಅವಧಿಯಲ್ಲಿ ಜಪಾನೀ ಸೇನೆಯು ಇದ್ದಲ್ಲಿಂದ ಮುಂದರಿಯದೆ ಇರುವುದು ಮಾತ್ರವಲ್ಲದೆ, ಎಷ್ಟೋ ಕಡೆಗಳಲ್ಲಿ ಅದನ್ನು ವೀರ ಚೀನಿಯರು ಹಿಮ್ಮೆಟ್ಟಿಸಿರುವರು ಇದಕ್ಕೆ ಜಪಾನಿಗಳನ್ನು ದೇಶದಿಂದ ಹೊರಗಟ್ಟಬೇಕಾದರೆ ಚೀನಿಯರು ತನ್ನ ಆರ್ಥಿಕ ಬಲವನ್ನು ಬೆಳೆಸಿಕೊಳ್ಳುವುದು ಅಗತ್ಯವಾಗಿದೆ

ಅಂತರ್ರಾಷ್ಟ್ರೀಯ ಸಮಸ್ಯೆ

'ಚಾಂಗ್ ಕೇಶೇಖರ ತಮ್ಮ ಭಾಷಣದಲ್ಲಿ ಹೀಗೂ ಹೇಳಿದ್ದಾರೆ—'ಚೀನೀ ಜಪಾನ ಸಮಸ್ಯೆಯು ಕೇವಲ ಆ ಎರಡು ದೇಶಗಳಿಗೆ ಸಂಬಂಧ ಪಟ್ಟದಲ್ಲ ಅದು ಇಡೀ ಜಗತ್ತಿಗೆ ಸಂಬಂದಪಟ್ಟ ವಿಷಯವಾಗಿದೆ. ಈಗ ಯೂರೋಪದಲ್ಲಿ ಯುದ್ಧವು ಆರಂಭವಾಗಲಿಕ್ಕಾದರೂ ಜಪಾನು ಚೀನವನ್ನು ಆಕ್ರಮಿಸಿದ್ದೇ ಕಾರಣವಾಗಿದೆ. ಜಪಾನು ಚೀನದ ಮೇಲೆ ದಂಡೆತ್ತಿ ಹೋಗಿ ಅದರ ಕೆಲವು ಪ್ರದೇಶಗಳನ್ನು ಸ್ವಾಧೀನ ಮಾಡಿಕೊಂಡುದರಿಂದ ಬೇರೆ ಬೇರೆ ರಾಷ್ಟ್ರಗಳ ಸಮತೋಲವು ಕೆಟ್ಟು ಹೋಯಿತು. ಇದ್ದರಿಂದ ಜಗತ್ತಿನಲ್ಲಿ ಅಶಾಂತಿ ಅನಮಾನಗಳು ಉಂಟಾಗಿರಲಿಕ್ಕೆ ಜಪಾನೇ ಮೂಲಕಾರಣವಾಗಿರುವುದು. ಜಪಾನನ್ನು ವಿರೋಧಿಸುವುದರಿಂದ ಚೀನವು ತನ್ನ ಸ್ವಾತಂತ್ರ್ಯ ರಕ್ಷಣೆಮಾಡಿಕೊಳ್ಳುವುದಲ್ಲದೆ ಅದು ಅಂತರ್ರಾಷ್ಟ್ರೀಯ ಶಾಂತಿ ಮತ್ತು ನ್ಯಾಯ ಸ್ಥಾಪನೆಗೂ ಪ್ರಯತ್ನಿಸಿದಂತಾಗುವುದು. ಜಗತ್ತಿನ ಜನಸಂಖ್ಯೆಯ ನಾಲ್ಕರಲ್ಲಿ ಒಂದು ಪಾಲು ಚೀನಿಯರು ಆಗಿರುವುದರಿಂದ, ಎಷ್ಟರ ತನಕ ಚೀನಿಯರು ಸ್ವತಂತ್ರರಾಗಿರುವುದಿಲ್ಲವೋ ಆಷ್ಟರ ತನಕ ಜಗತ್ತಿನಲ್ಲಿ ನಿಜವಾದ ಶಾಂತಿ ಉಂಟಾಗುವುದಿಲ್ಲ.

ಮುಂದಿನ ಉಪಾಯ

'ಜಪಾನಿನ ಸೈನಿಕ ಬಲವು ಕುಂದಿ ಹೋಗಿರುವುದರಿಂದ, ಅದು ಚೀನದಿಂದ ಸೋತ ಹಾಗೆಯೇ ಆಗಿದೆ. ಈಗಿನ್ನು ಅದು ಪ್ರಚಂಡ ಸೈನಿಕ ಯುದ್ಧಗಳನ್ನು ಮಾಡುವ ಸ್ಥಿತಿಯಲ್ಲಿ ಇರುವುದಿಲ್ಲ. ಇನ್ನು ಮುಂದೆ ಜಪಾನು ರಾಜಕೀಯ ಮತ್ತು ಆರ್ಥಿಕ ಒತ್ತಾಯವನ್ನು ತೋರಿಸಿ, ಅದನ್ನು ತನ್ನ ಸ್ವಾಧೀನ ಮಾಡಿಕೊಳ್ಳಲಿಕ್ಕೆ ಪ್ರಯತ್ನಿಸಬಹುದು. ಆದ್ದರಿಂದಲೇ ಅದು ಚೀನೀ ಪ್ರಮುಖರ ಮೇಲೆ ಗಾಳಹಾಕಲಿಕ್ಕೆ ನೋಡುತ್ತಾ ಇದೆ ತಾನು ಒಡ್ಡುವ ಮಾಯಾಜಾಲದಲ್ಲಿ ಕೆಲವು ಚೀನಿಯರನ್ನು ಸಿಕ್ಕಿಸಿ ಹಾಕಿ, ಅವರ ಮೂಲಕ ತನಗೆ ಅನುಕೂಲವಾದ ಹೊಸ ಚೀನೀ ಸರಕಾರವನ್ನು ಸ್ಥಾಪಿಸಲಿಕ್ಕೆ ನೋಡುತ್ತಲಿದೆ. ಸಂಕ್ಷೇಪ. ಯಾವ ರೀತಿಯಿಂದಾದರೂ ಜಪಾನಿನ ಈ ಪ್ರಯತ್ನಗಳಲ್ಲಿ ಸಹಕರಿಸುವ ಚೀನಿಯರನ್ನು ಚೀನವು ದೇಶದ್ರೋಹಿಗಳೆಂದೇ ತಿಳಕೊಳ್ಳುತ್ತದೆ.

ರಷ್ಯದ ಸಹಾಯ

ಚೀನಕ್ಕೆ ರಷ್ಯದಿಂದ ಪ್ರಚಂಡ ಸಹಾಯವು ದೊರಕಿದೆ ಸೈನ್ಯದ ಉಪಯೋಗಕ್ಕೆ ಬೇಕಾದ ೧೦೦ ಮೋಟರ ಲೋರಿಗಳು ಮತ್ತು ತಾನಾ ರಷ್ಯದಿಂದ ಚೀನಕ್ಕೆ ಬರುತ್ತಿವೆ ಚೀನದ ವಿಮಾನ, ಟಿಂಗ್ ಸ್ಟನ ಮೊದಲಾದ ಖನಿಜಗಳನ್ನು ಸ್ವಾಧೀನಪಡಿಸುವುದಕ್ಕೆ ಒಳ್ಳೆಯದಕ್ಕೆ ಇವನ್ನು ಉಪಯೋಗಿಸಬಹುದು. ಚೀನ ರಷ್ಯ ವ್ಯಾಪಾರದ ವರ್ಷದ ಮಿತಿಯ ೨ ಕೋಟಿ ಮಿಲಿಯ ಡಾಲರುಗಳಿಂದ ೩ ಕೋಟಿ ಮಿಲಿಯ ಡಾಲರುಗಳಿಗೆ ಏರಿದೆ. ಚೀನದಲ್ಲಿ ರಾಜಕೀಯ ಹಕ್ಕು ಅಧಿಕಾರಗಳನ್ನು ನಡೆಯುವ ನಿಮಿತ್ತ ರಷ್ಯವು ಚೀನಕ್ಕೆ ಈ ಸಹಾಯವನ್ನು ಕೊಟ್ಟಿದೆ ಎಂದು ಜಪಾನು ಅಪಪ್ರಚಾರ ಮಾಡಿದೆ. ಆದರೆ ರಷ್ಯ ಚೀನಗಳು ಪರಸ್ಪರ ಲಾಭದಾಯಕವಾಗುವಂತೆ ವ್ಯಾಪಾರ ಮಾಡಿಕೊಂಡಿರುವ ವಿನಃ ಅಲ್ಲದೆ ಚೀನದಿಂದ ರಾಜಕೀಯ ಹಕ್ಕು ಅಧಿಕಾರಗಳನ್ನು ನಡೆಯುವ ಉದ್ದೇಶವು ಜಪಾನಿಗೆ ಇರುವುದಿಲ್ಲವೆಂದೂ ಚೀನಿ ಜನರ ಮನಸ್ಸನ್ನು ಕೆಡಿಸಲಿಕ್ಕಾಗಿಯೇ ಜಪಾನು ಅಪಪ್ರಚಾರ ಮಾಡುತ್ತಿದೆ ಎಂದೂ ಈಗ ಗೊತ್ತಾಗುತ್ತದೆ.

Kenaresse No. 12

ಆರೋಗ್ಯ ಮತ್ತು ಸೌಂದರ್ಯಕ್ಕೆ.

ಈ ಇಮ್ಮಡಿ ಗುಣದ ಸಾಬೂನನ್ನೇ ಉಪಯೋಗಿಸಿರಿ

ಕಾಂತಿಯನ್ನುಂಟುಮಾಡುವ ಮತ್ತು ಔಷಧಿಯುಕ್ತವಾದ ಇಮ್ಮಡಿ ಗುಣಗಳಿರುವ ಸಾಬೂನು, ಕುಟಿಕೂರಾ ಟಾಯ್ಲೆಟ್ ಸಾಬೂನು (Cuticura Toilet Soap) ನಿಮ್ಮ ಮೈಯ ಚರ್ಮವನ್ನು ಸೌಂದರ್ಯಮಯವಾಗಿಯೂ ಆರೋಗ್ಯ ಸ್ಥಿತಿಯಲ್ಲಿರಿಸುವಂತೆಯೂ ಔಷಧಿಕರಿಸಿರುತ್ತದೆ. ಈ ಸಾಬೂನಿನಿಂದ ಹೊರಟ ಮಹತ್ತಾದ ನೊರೆಯು ಚರ್ಮರಂಧ್ರಯಗಳಿಂದ ಕಲ್ಮಶಗಳನ್ನು ತೆಗೆಯುತ್ತದೆ. ಈ ಇಮ್ಮಡಿ ಗುಣಗಳಿರುವ ಸೌಂದರ್ಯಯುಕ್ತವಾದ ಸಾಬೂನನ್ನು ಉಪಯೋಗಿಸಿ ಸೌಂದರ್ಯವನ್ನು ಗಳಿಸಿರಿ

ಕುಟಿಕೂರಾ ಸಾಬೂನು (Cuticura Soap) ಬೆಣ್ಣೆಯಂತೆ ಗುಣವುಳ್ಳದ್ದಾಗಿದೆ. ದೊರಗಾದ ಚರ್ಮವನ್ನು ನುಣುಪಾಗಿರುಸುತ್ತದೆ.

ಸೌಮ್ಯ ಕ್ರಿಮಿನಾಶಕ ಗುಣವುಳ್ಳದ್ದು—ಚರ್ಮವನ್ನು ಸ್ವಚ್ಛವಾಗಿರಸುವುದು. ಮುದ್ದಣ, ಚರ್ಮವ್ಯಾಧಿಗಳಿದ್ದರೆ ಕುಟಿಕೂರಾ ಮುಲಾಮನ್ನು (Cuticura Ointment) ಉಪಯೋಗಿಸಿರಿ. ಇದರ ಕ್ರಿಮಿನಾಶಕ ಗುಣಯುಕ್ತವಾದ ಔಷಧಿಯು ಚರ್ಮವ್ಯಾಧಿಯನ್ನು ಕೂಡಲೇ ಗುಣಪಡಿಸುವುದು ಸ್ನಾನದ ನಂತರ ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಬಹಳ ಉತ್ತಮವಾದದು.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಸಾಬೂನು
CUTICURA SOAP

THE PIE-MONEY BANK LTD.,
Maidan Road, MANGALORE.

Undertakes all kinds of Banking Business Current account at 2½% per annum Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction [illegible] from Rs. 100 to Rs. 5000/- run regularly [illegible] Unique Banking facilities to Businessmen and Interested Public

Apply for particulars

K. R. GURU, *Managing Director*

ಸಾವಕಾರ ಶ್ರೀನಿವಾಸರಂಗಪ್ಪ

[ಸ್ಥಾಪನೆ: ಕ್ರಿ ಶ 1858]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವಕಾರ ಮಹಾಲ್, ಮಂಗಳೂರು.

"ಹೊಟ್ಟೆಗೆ ಕೂಳಿಲ್ಲದೆ ಕಂಗೆಡುವವರಿಗೆ ಧರ್ಮವನ್ನು ತಿಳಿಸುವುದು ಸಾಧ್ಯವಿಲ್ಲ!—ಇಂದು ಪೌರ್ವಾತ್ಯ ರಾಷ್ಟ್ರದಲ್ಲಿನ ಪ್ರಾಮುಖ್ಯ ಸಮಸ್ಯೆಯೆಂದರೆ ದೈನ್ಯ ದಾರಿದ್ರಗಳು! ಧಾರ್ಮಿಕ ವಿಚಾರಗಳು ಅವರಿಗೆ ಕೇಳಿ ಸಾಕಾಗಿವೆ. ಒಣಗಿದ ಗಂಟಲೊಳಗಿಂದ, ಹಸಿದ ಹೊಟ್ಟೆಯ ಅಳದಿಂದ ಬರುವ ಕೂಗು 'ಅನ್ನ ನೀಡಿರಿ; ಅನ್ನ ನೀಡಿರಿ' ಎಂದು ರಣರಣಕವೆನ್ನು ಉಂಟುಮಾಡಿದೆ. ಆದುದರಿಂದ ನಮ್ಮ ಧಾರ್ಮಿಕ ವಿಚಾರ ತರಂಗಗಳನ್ನು ಸ್ವಲ್ಪ ಕಾಲ ದೂರವಿರಿಸಿ, ಜೀವನದ ಮೃದುಸ್ಥಿತಿಗಾಗಿ ಹೋರಾಡಿರಿ, ಇಂದಿನ ನಮ್ಮ ಜೀವನ ಮೃದುಸ್ಥಿತಿಯ ಸಲುವಾಗಿ, ಕೆಲವು ಅವಶ್ಯಕತೆಗಳು ಬೇಕಾಗಿವೆ, ಅವುಗಳನ್ನು ಹೊಂದಿದ ಮೇಲೆ ಪರಮ ಸತ್ಯವನ್ನು ಅರ್ಥ ಮಾಡಿಕೊಳ್ಳಲು ಜನರು ತಯಾರಾಗುವರು" ಹೀಗೆಂದು ಭಾರತದ ಆರ್ಥಿಕ ಸ್ಥಿತಿಯನ್ನು ವಿಚಾರಿಸಿ, ಆ ಕುರಿತು ಸ್ವಾಮಿ ವಿವೇಕಾನಂದರು ಒಂದು ನಿರ್ಧಾರವಾಣಿಯನ್ನು ಅಂದು ಸಾರಿದ್ದರು.

ದಾರಿದ್ರ್ಯವನ್ನು ಪರಿಹರಿಸಲು ಸ್ವಾಮಿಜಿಯವರು ಯಾವ ಸಾಧನವನ್ನು ಹೇಳಿದರು? ಅವರ ಕೃತಿ ಮತ್ತು ವಚನಗಳಿಂದ ಈ ಮಥಿತಾರ್ಥವನ್ನು ನಾವು ಸಂಗ್ರಹಿಸಬಹುದಾಗಿದೆ

ಅಧ್ಯಾತ್ಮ ವಿಚಾರವು ಎಂದರೆ ವೇದಾಂತ ಜ್ಞಾನವು ನಮ್ಮ ದಿನನಿತ್ಯದ ಜೀವನೋಪಾಯಕ್ಕೆ ಅನುಗುಣವಾಗಿ ಬರಬೇಕು. ಆ ಅನುಭವದ ಮೂಲಕ ಪವಿತ್ರ ಜ್ಞಾನವು ಜನತೆಯ ಹೃದಯದಲ್ಲಿ ನೆಲೆ ನಿಲ್ಲಬೇಕು ಇವೆರಡು ಅವರು ಸಾರಿದ ವಿಷಯಗಳಾಗಿವೆ

ಚಿತ್ರದರ್ಶನ

ಸ್ವಾಮಿಗಳು ಅಂದಿದ್ದರು "ಕೆಲವು ಚಿತ್ರಗಳನ್ನು, ಭೂಪಟಗಳನ್ನು, ಭೂಖಂಡದ ವಿವರಣೆಗಳನ್ನು ಆ ಮೇಲೆ ಕೆಲ ರಾಸಾಯನಿಕ ವಸ್ತುಗಳನ್ನೂ ಒಟ್ಟುಗೂಡಿಸಿರಿ ಅವುಗಳಿಂದ ಹಳ್ಳಿಹಳ್ಳಿಯ ಜನರ ಗುಡಿಸಲಿಗೆ ಹೋಗಿ ಅವರಿಗೆ ಪ್ರಪಂಚದ ಬೇರೆ ಭಾಗಗಳಲ್ಲಿ ಏನೇನು ನಡೆಯುತ್ತಿವೆಯೆಂಬುದನ್ನು ತಿಳಿಸಿರಿ ಯಾವುದು ಜೀವನಾಧಾರವೆಂದು ಸಾರಿರಿ, ಶ್ರೀ ರಾಮಕೃಷ್ಣ ಪರಮಹಂಸರ ಉದಾತ್ತಜೀವನವನ್ನು ಬೋಧಿಸಿರಿ. ಅವರ ಅಜ್ಞಾನದಿಂದ ಆವೃತವಾದ ದೃಷ್ಟಿಯನ್ನು ಬೆಳಗಿಸಲು ಯತ್ನಮಾಡಿರಿ. ಪುಸ್ತಕಗಳು ಅವರಿಗೆ ಪ್ರಯೋಜನವಿಲ್ಲ ಅವರಿಗೆ ಮುಖೋದ್ಗತವಾಗಿ ವಿಷಯಗಳನ್ನು ಕೂಲಂಕಷವೆನ್ನುವಂತೆ ವಿವರಿಸಿರಿ' ಎಂದರು.

ಧಾರ್ಮಿಕ ವಿಚಾರ:

ಬಡವರ ಗುಡಿಸಲೊಳಗೆ ★ ಅದ್ವೈತದ ಬೆಳಕು ಪಸರಿಸಬೇಕು

ಭಾಗ್ಯ ಭಾರತದ ನಿರ್ಮಾಣಕ್ಕೆ ಸ್ವಾಮಿ ವಿವೇಕಾನಂದಜೀಯವರ ಸಲಹೆ

[ಧರ್ಮ, ಅಧ್ಯಾತ್ಮ ಮರ್ಮ, ಅದ್ವೈತ ಬುದ್ಧಿ ಏನು ಇವೆಲ್ಲಾ ಮಾನವನ ಶ್ರೇಯಸ್ಸಿಗೆ ಸಾಧನೆಗಳೇ? ಹಾಗಾದರೆ ಅವುಗಳನ್ನು ಏಕಾಂತದಲ್ಲಿ, ಅರಣ್ಯಗಳಲ್ಲಿ, ಹಿಮಾಲಯದ ಹಿಮತಲದಲ್ಲಿ ಕುಳಿತು ಧ್ಯಾನಿಸಿ ಯೋಗಿ ರಾಜರು ಧ್ಯಾನಿಸಿದರೆ ಸಾಕೆ? ಬಡವರ ಗುಡಿಸಲಿಗೆ ಅದ್ವೈತ ಬೋಧನೆಯ ಸಂದೇಶವು ಮುಟ್ಟಿಬೇಕು ದಿನದ ಜೀವನದಲ್ಲಿ ಅವುಗಳು ಪ್ರಯೋಗಕ್ಕೆ ಬರಬೇಕು. ಪ್ರಪಂಚದ ಅರಿವು ಜನತೆಗೆ ಬರಬೇಕು. ವಿಜ್ಞಾನದ ತಿಳಿವು ಮಾನವಕೋಟಿಯಲ್ಲಿ ಪಸರಿಸಬೇಕು. ರಾಷ್ಟ್ರದ ದೈನ್ಯ ದಾರಿದ್ರ್ಯಗಳು ಅಂದು ಮಾಯವಾಗುವವು ಆ ರೂಪದಲ್ಲಿ ನಮ್ಮ ರಾಷ್ಟ್ರದ ಭವ್ಯನಿರ್ಮಾಣದ ಕಾರ್ಯವು ಆಗಬೇಕು]

ಅದ್ವೈತ ಬೋಧನೆಯಲ್ಲಿರುವ ಒಂದು ಮಹತ್ತಾದ ದೋಷವೆಂದರೆ, ಇದುವರೆಗೆ ಅದನ್ನು ಕೇವಲ ಜ್ಞಾನಿಗಳಿಗೆ ತಿಳಿಸುವ ಕೆಲಸ ಮಾತ್ರ ಮಾಡಲಾಗಿದೆ ಇಂದು ಆ ಜ್ಞಾನವನ್ನು ಕಾರ್ಯರೂಪದಲ್ಲಿ ಇಳಿಸಿ ಜನತೆಗೆ ಅದರ ವಿವರಣೆಯನ್ನು ತಿಳಿಸುವ ಕಾಲವು ಒದಗಿದೆ

ದಿನ ಜೀವನ

ಆ ಕುರಿತು ಸ್ವಾಮಿಜಿಯವರು ಹೀಗೆಂದರು

ಇನ್ನು ಮುಂದೆ ಅದು ಗುಪ್ತವಾಗಿರಲಾರದು, ಇನ್ನು ಮುಂದೆ ಅದು ಗುಹೆಗಳಲ್ಲಿ, ಹಿಮಾಲಯದ ತುದಿಯಲ್ಲಿ ಗೊಂಡಾರಣ್ಯಗಳಲ್ಲಿ ಏಕಾಂತನಾಸಿಗಳಲ್ಲಿ ಇರಲು ಸಾಧ್ಯವಿಲ್ಲ ಯಾವುದು ಜೀವನದ ಸಾರವೋ ಅದನ್ನು ಜನತೆಗೂ ಸಾರಬೇಕು ಅವರ ದಿನದ ಜೀವನದಲ್ಲಿ ಅದು ಹೇಗೆ ಸೇರುವುದೆಂದು ತಿಳಿಸಬೇಕು. ಏಕಾಂತ ತಪಸ್ಸಿಯ ಗುಹಾರಾಜಧಾನಿಯಿಂದ ಅದನ್ನು ಎಲ್ಲೆಲ್ಲೂ ಎಲ್ಲಾ ಗುಡಿಸಲುಗಳಲ್ಲೂ ತಂದಿರಿಸಬೇಕು

'ಎರಡನೆಯ ಸಾಧನೆಯೆಂದರೆ, ಈ ದಾರಿದ್ರ್ಯವನ್ನು ಪರಿಹರಿಸಲು ನಾವು ವೈಜ್ಞಾನಿಕ ಪ್ರಯೋಗ ರೀತಿಯ ಪಾಶ್ಚಾತ್ಯ ಕ್ರಮಗಳನ್ನು ಅನುಸರಿಸಬೇಕು ಜಗತ್ತಿನಲ್ಲಿ ಯಾವ ಯಾವ ಜನಾಂಗಗಳು ಎಷ್ಟು ಎಷ್ಟು ಉನ್ನತಿಗೆ ಬಂದಿವೆಯೋ ಅಷ್ಟಷ್ಟು ನಾವೂ ಉನ್ನತಿಯನ್ನು ಹೊಂದೋಣ ಅದರೊಡನೆ, ನಮ್ಮ ಪ್ರಾಚೀನ ಸಾಂಸ್ಕೃತಿಕ ವೈಭವವನ್ನು ಬೆಳಗಿಸಿ ಭಾರತೀಯರು ಎಷ್ಟು ಅಗಾಧ ಬುದ್ಧಿಶಾಲಿಗಳಾದವರು ಎಂಬುದನ್ನು ಜಗತ್ತಿಗೆ ಸಾರೋಣ

ಯಾವ ತಳಹದಿಯಲ್ಲಿ?

ಪಾಶ್ಚಾತ್ಯ ದೇಶದ ಸಂಸ್ಕೃತಿಯ ಪರಿಶೀಲನೆಯಿಂದ ನಾವು ಯಾವ ಯಾವುದನ್ನೆಲ್ಲಾ ಕಲಿಯುತ್ತೇವೋ ಅವೆಲ್ಲವನ್ನೂ ನಮ್ಮ ಭಾರತೀಯ ಸಂಸ್ಕೃತಿಯ ತಳಹದಿಯಲ್ಲಿಯೇ ಕಟ್ಟಲು ಯತ್ನಿಸುವ ನಮ್ಮ ರಾಷ್ಟ್ರೀಯ ಆದರ್ಶಕ್ಕೆ ಪ್ರತಿಯೊಂದೂ ಅನ್ವಯಿಸಿರಬೇಕು ನಮ್ಮ ರಾಷ್ಟ್ರೀಯ ಜೀವನದ ಆಧಾರವನ್ನು ಉಳಿಸಬೇಕು.'

ಸ್ವಾಮಿಜಿಯವರು ಸಮಾಜ ಸಮತಾವಾದದ ಪ್ರಚಾರದ ವಿಷಯದಲ್ಲಿ ಬಹಳ ಗಹನ ವಿಚಾರವನ್ನು ಮಾಡಿದ್ದರು. ಅವರು ಒಂದು ಕಡೆ ಹೀಗೆಂದು ಹೇಳಿರುವರು.—'ಸಮಾಜ ಸಮತಾವಾದವು ಅರಾಜಕವಾದವು, ಇವೆಲ್ಲಾ ಸಾಮಾಜಿಕ ಕ್ರಾಂತಿಯ ಸೂಚನೆಗಳು.'

ಆದುದರಿಂದ, ಮುಂದಿನ ನಮ್ಮ ಭಾರತ ರಾಷ್ಟ್ರವು ಹಿಂದಿನಂತೆ ಇರಲಾರದು. ಆದರೆ ಭವಿಷ್ಯದ ಭಾಗ್ಯ ನಿರ್ಮಾಣವನ್ನು ರಚಿಸುವ ಸಾಧನಗಳಾವುವು? ಸ್ವಾಮಿ ವಿವೇಕಾನಂದರವರ ಭಾಷಣಗಳು ಮತ್ತು ಲೇಖನಗಳು ಜೀವನದ ರಾಷ್ಟ್ರ ಜೀವನದ ಗುರಿಯನ್ನು ಸ್ಪಷ್ಟವಾಗಿ ವಿವರಿಸಿ ಹೇಳುತ್ತವೆ ನಮ್ಮ ಭವ್ಯ ಸ್ವರೂಪವಾಗಿರುವ ಭಾವೀ ರಾಷ್ಟ್ರದ ಚಿತ್ರದ ಮೂಲಗೆರೆಯನ್ನು ಅವರು ಅವುಗಳಲ್ಲಿ ಎಳೆದು ತೋರಿಸಿದ್ದಾರೆ. ಆ ಕಲ್ಪನೆ, ಆ ಅಭಿಪ್ರಾಯಗಳನ್ನು ಸತ್ಯಜೀವನಕ್ಕೆ ಇಳಿಸುವ ಕಾರ್ಯಚತುರರು ಮುಂದೆ ಬಂದಾಗ ಭಾರತದ ಭಾಗ್ಯಸೂರ್ಯನು ಸುವರ್ಣ ಕಿರಣಗಳನ್ನು ಪಸರಿಸಿ ಉದಯಿಸುವನು

The Auttur & Jawahar Bank, Limited.

ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್, ಮಂಗಳೂರು

ಹೆಡ್ ಆಫೀಸ್ ಕೆನರಾ ಹೈಸ್ಕೂಲ್ ರೋಡು ಬ್ರೆಂಚ್ ಸೆಂಟ್ರಲ್ ಮಾರ್ಕೆಟ್

ರಿಜಿಸ್ಟರ್ಡ್ ಮೂಲಧನ ರೂ. 1,00,000 ತೆರಲ್ಪಟ್ಟ ಮೂಲಧನ ರೂ 50,100

ಎಲ್ಲಾ ವಿಧದ ಬೇಂಕ್ ವ್ಯವಹಾರಗಳು ನಮ್ಮಲ್ಲಿ ನಡೆಯಲ್ಪಡುವವು ಚಿನ್ನಾಭರಣಗಳ ಅಡವಿನ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವ್ಯವಹಾರಗಳು ನಡೆಯುವವು ಸೇವಾಶುಲ್ಕಗಳ ಮೇಲಿನ ದರ

ಚಾಲ್ತಿ ಸೇವಾಶುಲ್ಕ 2% ಸೇವಿಂಗ್ಸ್ ಬೇಂಕ್ ಸೇವಾಶುಲ್ಕ ಪ್ರತಿದಿನದ ಶಿಲ್ಕಿನ ಮೇಲೆ 3%

ನಿರಖು ಸೇವಾಶುಲ್ಕ 3 ತಿಂಗಳಿಗೆ 3½% ನಿರಖು ಸೇವಾಶುಲ್ಕ 12 ತಿಂಗಳಿಗೆ 4½%

,, 6 ತಿಂಗಳಿಗೆ 4% ,, 24 ತಿಂಗಳಿಗೆ 5%

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು

ಅತ್ತೂರು ವೈಕುಂಠಪ್ರಭು, ಮೆನೆಜಿಂಗ್ ಡೈರೆಕ್ಟರ್

U. K. BHUJANGA NAYAK

CLOTH COMMISSION AGENT

SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರಕೊಳ್ಳಿರಿ

ಎಂಬ ಹೆಸರಿನಿಂದ ದಮ್ಮು ಕಡ್ಡಿ ಬಳಲುವವರು ಸಂಪೂರ್ಣ ಗುಣವಾಗುವ ಆಕಸ್ಮಿಕಕ್ಕೆ ಎಂದು ದಮ್ಮು ಸಮಸ್ಯೆಗಳಲ್ಲಿಯೇ ದಮ್ಮು ನೆಟ್ಟಗೆ ಆಗುವದು ಎಂದು ಪ್ರತಿಜ್ಞೆಕೊಡುವದೇ ಒಂದು ಉಪಾಯಗಳನ್ನು ಉಪಯೋಗಿಸಿ ಬೇಕಷ್ಟು ಹೊಗಳುವುದೇ ಆದರೆ ದಮ್ಮುನಿಳಿಕೆ ಶಿಲ್ಪಿದ ಚೀಸೆಯನ್ನು ಸಾಂಗೋಪಾಂಗ ಉಕ್ಕಿ ಮಾಡದೆ, ಬೇರು ಸಹಿತ ಕಾಸುವಾಗಿ ಸಿಗುವ ಅದರಲ್ಲಿ ಎಂದು ಅತಿ ಹಿರಿಯುವದು ಸೂಕ್ತ

ದಮ್ಮು ಕಡ್ಡಿದವರ ಪ್ರಕೃತಿಯು ಬಳಲಿಹೋಗಿರುವ ಕಾರಣ ಹೋಗಿರುತ್ತದೆ ದಮ್ಮು ದೂತ್ರ ಒಕ್ಕ ಹೊರಗೆ ಕೊಡುವದೇ ಉತ್ತಮ ಆದರೆಂದರೆ ಬಳಲುವದು ಸ್ವಲ್ಪ ಮೇಲೆ ಶಾಂತವಾದರೆ ದಮ್ಮು ಗುಣವಾಯಿತು ಎಂದು ಆತ್ಮರಿಳಿ ಒಂದರಿಲ್ಲಿ ಉಪಯೋಗಿಸುವದನ್ನು ನಿಲ್ಲಿಸುವದಾಗಿಯೂ ಪ್ರಯತ್ನಿಸಿಯೂ ದೂತುವಂತಹ ರೋಗಿಗಳು ದಮ್ಮನ್ನು ಸಿಟ್ಟಿಗೆ ಇಳಿಯುವುದು ಆದರೆ ಆ ರೋಗಿಗಳಿಂದ ಪೂರ್ಣ ಗುಣವಾಗಲಿ ಕಾದರೆ ಅಕ್ಕಿಗಳ ಚೀಸೆಗೆ ಸಿಂ ಕೌಚಕ್ಕುಂಟಾಗಿ ಬಹಳ ಕ್ರಮವು ಸುಧಾರಿಸುವಂತೆ ದಮ್ಮು ಕಡ್ಡಿಯನ್ನು ಹೆಚ್ಚಿ ಸಮಯವು ಆಗಬೇಕು

ಪುರೋಹಿತ ಶ್ವಾಸಹಾರಿಯಲ್ಲಿ ಇಂಥ ಗುಣ ಸಿಕ್ಕಿದರೆ ಸಿಕ್ಕಿದರೆ ದಮ್ಮಿನ ಮೂಲಾಧಾರವನ್ನು ಒಂದು ಅದರ ಮೇಲೆ ಕಡ್ಡಿ ಪ್ರಭಾವನ್ನು ತೋರಿಸಿ ಮಿಳ್ಳಿ ಆದರೆ ಹಿಂದೆಯಾಗಿ ದಮ್ಮನ್ನು ಸಿಟ್ಟಿಗೆ ಇಳಿಯುತ್ತ ಇಳಿಯುವ ಕಿಳಕಗಳಲ್ಲಿ ಇದು ಎಷ್ಟೋ ಕಡಿಗಳಿಂದ ಗುಣಗಳಿಂದ ಕೂಡಿದೆಂದು ಗುಣಗಳಿಂದ ಅತ್ಯಂತ ಸುಲಭ ಸುಲಭ ಇದ್ದರೆ ಗಂಟಲು ಅಂಬರ ಸಂಬಂಧ ಸಿಟ್ಟಿನ ಕಡ್ಡಿ ಭುಜಂಗದ ಎಲ್ಲ ಗೃಹಗಳಿಗೆ ಅದು ಗುಣವಾಗುವ ಇಂಥ ಔಷಧವು ಅಗಿದೆ

ರೂ. ೨, ಪೈಸೆ ೩—೦, ರೂ ೬ ಡಿಬಿಯ ಬೆಲೆಗಳಲ್ಲಿ ಎಲ್ಲ ಕಡೆಯಲ್ಲಿ ಸಿಗುತ್ತದೆ.

ಮಾಲ್ಕರ ಪುರೋಹಿತ ಫಾರ್ಮಸಿ ಕಂಪ್ಲಾಂಕ

ಪುರೋಹಿತ ಶ್ವಾಸಹಾರಿ ದಮ್ಮಿಗೆ ಗುಣಕಾರಿ

ಹಿಟ್ಲರನನ್ನೂ ಹೆದರಿಸಿದ ಆಂಗ್ಲ ಮುತ್ಸದ್ದಿ ಯಾರು?

ಹಿಟ್ಲರನ ಆಜನ್ಮ ವೈರಿ! ನಿರ್ಭಯ ವಿಚಾರ ಕ್ರಾಂತಿಕಾರಿ!

ರಾಷ್ಟ್ರದ ಹಿತದಲ್ಲಿ ಪಕ್ಷದ ಹಂಗಿಲ್ಲ

ತಾನು ತಿಳಿಯದ ಕಾರ್ಯಕ್ಷೇತ್ರವಿಲ್ಲ!

ಹಿಟ್ಲರನು ಅಧಿಕಾರಕ್ಕೆ ಏರಿಬಂದೊಡನೆ, ಆತನು ಆನವರತವೆಂಬಂತೆ, ಬ್ರಿಟಿಷರ ವಿಷಯವಾಗಿ ರೌದ್ರವಚನಗಳ ಸುರಿಮಳೆಯನ್ನೇ ಸುರಿಸಿದ್ದಾನೆ! ಅದು ಯಾಕಿಗೊತ್ತೇ? ಹಿಟ್ಲರನ ಒಳಗುಟ್ಟನ್ನು ಕಲಹಕಂಟಕ ಘೋರಣೆಯನ್ನು ಪ್ರಪಂಚದ ಇತರ ಭಾಗದವರು ತಿಳಿಯುವುದಕ್ಕಿಂತ ಮೊದಲು ತಿಳಿದು ಪ್ರಚುರಪಡಿಸಿದವರು ಬ್ರಿಟಿಷರು! ತನ್ನ ಆತ್ಮಕಥೆಯನ್ನು ಬರೆವಾಗ ಹಿಟ್ಲರನು ಅದರಲ್ಲಿ ಬ್ರಿಟಿಷರ ಪರವಾಗಿ ಸ್ವಲ್ಪ ಮೃದುತ್ವದ ಮಾತುಗಳನ್ನೇ ಹೇಳಿದ್ದರೂ, ಆತನ ಅಂದಿನ ಇಂದಿನ ವರ್ತನೆಗಳನ್ನು ಕಾರ್ಯವಚನಗಳನ್ನು ಪರಿಶೀಲಿಸಿದವರಿಗೆ ಹಿಟ್ಲರನಲ್ಲಿ ಎಷ್ಟರ ಮಟ್ಟಿಗೆ ಬ್ರಿಟಿಷ್ ದ್ವೇಷವು ಘನೀಭವಿಸಿದೆಯೆಂದು ತಿಳಿಯದಿರದು.

ಚರ್ಚಿಲ್ಲರ ಭವಿಷ್ಯ ವಾಣಿ!

ಬಹಳಕಾಲದ ಹಿಂದೆಯೇ, ಹಿಟ್ಲರನ ಯುದ್ಧ ಘೋರಣೆಯನ್ನು ಕಂಡು, ಅದರಿಂದ ಮುಂದಕ್ಕೆ ಪ್ರಚಂಡ ಅಖಿಲ ಜಗತ್ತಿನ ಯುದ್ಧವೇ ಆರಂಭವಾಗದಿರಲಿಂದು ಸಾರಿದವರು ಮಿ ಚರ್ಚಿಲ್ಲರು. ಇಂಗ್ಲೆಂಡಿನ ಕನ್ಸರ್ವೇಟಿವ್ ಪಕ್ಷದವರು ಮಂತ್ರಿಮಂಡಳದಲ್ಲಿದ್ದು, ಇನ್ನು ಕೆಲವರೂ ಕೂಡಾ ಜಗತ್ತಿನಲ್ಲಿ ಪ್ರಚಾರಕ್ಕೆ ಬರುತ್ತಿರುವ ಕಮ್ಯುನಿಸಂ ತತ್ವವು ಅಪಾಯಕರವೆಂದು ತಿಳಿದು, ಕನ್ಸರ್ವೇಟಿವ್ ತತ್ವಕ್ಕೆ ಸಮೀಪ ವರ್ತಿಯಾಗಿ ಹಿಟ್ಲರನ ನಾಜಿ ತತ್ವವೂ ಇದೆಯೆಂದು ತಪ್ಪು ತಿಳಿಕೊಂಡಿದ್ದ ಕಾಲದಲ್ಲಿ ಅವರನ್ನು ಆ ಪ್ರಮಾದದಿಂದ ಚರ್ಚಿಲ್ಲರು ಎಚ್ಚರಿಸಿದ್ದರು

ಅಂದಿನ ಅಂತಹ ಎಚ್ಚರಿಕೆಯೊಡನೆ ತನ್ನ ತಾಯ್ನಾಡನ್ನು ಹಿಟ್ಲರ್ ಭೂಕದ ಬಾಯಿಯಿಂದ ತಪ್ಪಿಸಿದ ಕೀರ್ತಿಯು ಚರ್ಚಿಲ್ಲರದೆಂಬಂತೆ ಬ್ರಿಟಿಷ ಪರಕಾರವು ಶಾಂತಿಸಾಧನೆಯ ಸಲುವಾಗಿ ಕಾರ್ಯಮಾಡುತ್ತಿದ್ದರೂ, ಅಕ್ಕ ಸೈನ್ಯ ತಯಾರಿಯ ಕೆಲಸವೂ ಜತೆಜತೆಗೆ ನಡೆಯಬೇಕೆಂದು ಎಚ್ಚರವಿತ್ತವರು ಚರ್ಚಿಲ್ಲರೇ ಆದಕಾರಣವೇ, ಮೊದಲಿನಿಂದಲೇ ಹಿಟ್ಲರನು ಚರ್ಚಿಲ್ಲರನ್ನು ಅಷ್ಟೊಂದು ದ್ವೇಷಿಸುತ್ತಿದ್ದುದು ಯಾಕೆ ಎಂಬ ವಿಚಾರ ತಿಳಿಯಬಹುದಾಗಿದೆ

ಅಧಿಕಾರದಲ್ಲಿ ಚರ್ಚಿಲ್ಲರು

ಈ ವಿಷಯಕ್ಕಾಗಿಯೇ ಇತ್ತೀಚೆಗೆ ಅವರನ್ನು ಯುದ್ಧ ಮಂತ್ರಿಮಂಡಳದಲ್ಲಿ ಸೇರಿಸಿ ಅದರಲ್ಲಿ ಅವರಿಗೆ ಆಗ್ರಸ್ಥಾನವನ್ನು ಸಲ್ಲಿಸಿ ಬ್ರಿಟಿಷ್ ಸರಕಾರವು ಅವರ ಸೇವೆಯನ್ನು ಬಹುಮಾನಿಸಿದೆ ಬ್ರಿಟಿನಿನ ಯುದ್ಧ ಕುದ್ದೇಶವೂ ಅಲ್ಲಿನವರಿಗೆ ಅದರಿಂದ ಸ್ಪಷ್ಟವಾಗಿದೆ.

ಚರ್ಚಿಲ್ಲರ ಶಾಂತಿಯ, ಘೋರಣೆಯಲ್ಲಿ ಬದಲಾವಣೆಯಾಗಬೇಕು, ಉಗ್ರ ನೀತಿಯು ಬರಬೇಕು ಎಂಬ ಕುರಿತು ಜನತೆಯಲ್ಲಿ ಉದ್ವಿಗ್ನತೆ ಹುಟ್ಟಿತ್ತು ಚರ್ಚಿಲ್ಲರನ್ನು ಮಂತ್ರಿಮಂಡಳದಲ್ಲಿ ಸೇರಿಸಿದ್ದರಿಂದ ಬ್ರಿಟಿಷರಲ್ಲಿ ಈಗ ಯುದ್ಧ ಪ್ರೋತ್ಸಾಹವು ಹೆಚ್ಚಾಗಿದೆ! ಏಕೆಂದರೆ ಬ್ರಿಟಿಷರಲ್ಲಿ, ಹಿಟ್ಲರನಿಗೆ ಅರ್ಥವಾಗುವ ಭಾಷೆಯಲ್ಲಿ ಮಾತನಾಡ ಬಲ್ಲವರೆಂದರೆ ಚರ್ಚಿಲ್ಲರು ಮಾತ್ರ! ಆದ್ದರಿಂದಲೇ ಚರ್ಚಿಲ್ಲರು ಮಂತ್ರಿಮಂಡಳದಲ್ಲಿರುವುದನ್ನು ಏನೇನೂ ಇಷ್ಟಪಡುವುದಿಲ್ಲ.

ಸಾಮರ್ಥ್ಯ ವ್ಯಕ್ತಿತ್ವಗಳು

ಬ್ರಿಟನಿನಲ್ಲಿ ಜನ್ಮವೆತ್ತಿದ ಮಹಾವ್ಯಕ್ತಿಗಳಲ್ಲಿ ಚರ್ಚಿಲ್ಲರೂ ಒಬ್ಬ ಅಸಾಮಾನ್ಯ ಪುರುಷರೆಂದು ಖಂಡಿತವಾಗಿ ಹೇಳಬಹುದು. ಅವರು ಸಿಪಾಯಿಗಳಾಗಿದ್ದಾರೆ, ಪತ್ರಿಕೋದ್ಯಮಿಗಳಾಗಿದ್ದಾರೆ, ಗ್ರಂಥಕರ್ತರಾಗಿದ್ದಾರೆ, ಚರಿತ್ರಾಭ್ಯಾಸಿಯಾಗಿದ್ದಾರೆ, ಆ ಮೇಲೆ ರಾಜಕೀಯ ಮುಖಂಡರಾಗಿದ್ದಾರೆ. ಈ ಪ್ರತಿಯೊಂದು ಕಾರ್ಯಕ್ಷೇತ್ರದಲ್ಲಿಯೂ ಅವರು ಸಿದ್ಧಹಸ್ತರೇ ಇದ್ದಾರೆ ರಾಜಕೀಯದಲ್ಲಿ ಬ್ರಿಟಿನಿನಲ್ಲಿ ಬಹಳ ಪ್ರಾಮುಖ್ಯ ಸ್ಥಾನವನ್ನು ಪಡೆದಿದ್ದಾರೆ. ಒಂದು ದಿನ, ಇನ್ನು ಬಾಕಿಯುಳಿದಿರುವ ಆ ಪ್ರಧಾನ ಮಂತ್ರಿ ಸ್ಥಾನವನ್ನೂ ಅವರು ಪಡೆಯದಿರಲಾರದೆಂದು ಹಲವರು ಊಹಿಸುತ್ತಾರೆ

ಇಂಗ್ಲೆಂಡಿನ ಯುದ್ಧ ಮಂತ್ರಿಮಂಡಳದ ಪ್ರಧಾನರಾದ ಚರ್ಚಿಲ್ಲರು-ಎಡಗಡೆಯಲ್ಲಿ ಚರ್ಚಿಲ್ಲರು ಕಳೆದ ಬೋರ್ ಯುದ್ಧದಲ್ಲಿ ಲೆಫ್ಟಿನೆಂಟರಾಗಿದ್ದಾಗಿನ ಅವರ ಭಾವಚಿತ್ರ

ರಶ್ಯದೊಡನೆ ಸಂಬಂಧ

ಬ್ರಿಟಿಷ್ ಕನ್ಸರ್ವೇಟಿವ್ ಪಕ್ಷಕ್ಕೆ ಚರ್ಚಿಲ್ಲರು ಸೇರಿದ್ದಾರೆ. ರಶ್ಯದ ಕಮ್ಯುನಿಸಂತತ್ವವನ್ನು ಕನ್ಸರ್ವೇಟರುಉದ್ಘೋಷಿಸುತ್ತಿರುವರೆಂದು ಜಗತ್ತಿಗೇಗೊತ್ತು ಆದರೆ ಚರ್ಚಿಲ್ಲರು ರಶ್ಯದೊಡನೆ ಸ್ನೇಹಸಂಬಂಧಕ್ಕೆ ಅನುವಾಗಿದ್ದಾರೆ ನಾಜೀ ತತ್ವವನ್ನು ಅಲ್ಲಗಳೆಯಲು ಮನಸ್ಸಿಲ್ಲದ ಕನ್ಸರ್ವೇಟಿವರನ್ನು ಈಗ ಒಪ್ಪಿಸಿ, ಹಿಟ್ಲರನು ಲೋಕಕಂಟಕನೆಂದೂ ತನ್ನ ಪಕ್ಷದವರಿಗೇ ಸಮ್ಮತಿಯಾಗುವಂತೆ ಮಾಡಿರುವುದೆಂಬುದು ನಿಜವಾಗಿ ಚರ್ಚಿಲ್ಲರ ಮಹತ್ವವಲ್ಲವೇ?

ದೇಶವು ಪಕ್ಷಕ್ಕಿಂತಲೂ ಮಹತ್ವವಾದುದು!

ತಾನು ಸೇರಿರುವ ಕನ್ಸರ್ವೇಟಿವ್ ಪಕ್ಷವನ್ನೇ ಚರ್ಚಿಲ್ಲರು ಅನೇಕ ಸಲ ಕಟುವಾಗಿ ಟೀಕಿಸಿದ್ದಾರೆ. ಒಂದು ಸಮಯದಲ್ಲಿ ತನ್ನ ಮಗನನ್ನು ಕನ್ಸರ್ವೇಟಿವ್ ಪಕ್ಷದ ವಿರುದ್ಧ ಉಮೇದ್ವಾರನಾಗಿ ಚುನಾವಣೆಗೆ ನಿಲ್ಲಿಸಿದ್ದುಂಟು! ಹಾಗೆ ಅವರು ತನ್ನ ಪಕ್ಷಕ್ಕೆ ವಿರುದ್ಧ ಮಾಡಿದ್ದಿದ್ದರೆ, ಅವರ ಹೃದಯದಲ್ಲಿ ಪಕ್ಷಕ್ಕಿಂತಲೂ ಹೆಚ್ಚು ದೇಶದ ಅಭಿಮಾನವು ಪ್ರಚಂಡವಾಹಿನಿಯಾಗಿ ಹರಿಯುತ್ತಿತ್ತು ಎಂಬುದನ್ನು ಮರೆಯಬಾರದು. ಅವರ ಪಕ್ಷದವರು ಚರ್ಚಿಲ್ಲರ ಈ ಎಲ್ಲಾ ಕಾರ್ಯಗಳನ್ನೂ ಯಾತಕ್ಕಾಗಿ ಸಹಿಸಿದ್ದರೆಂದರೆ, ಇವೆಲ್ಲಾ ಅವರ ಪ್ರಚಂಡ ದೇಶಾಭಿಮಾನದಿಂದ ಮಾತ್ರ ಆಗುವ ಕಾರ್ಯಗಳೆಂದು ಎಲ್ಲರಿಗೂ ಖಚಿತವಿತ್ತು.

ಅವರ ಮಾತ ಗಾರಿಕೆ, ಲೇಖನಗಳಲ್ಲಿ ಆ ಉಜ್ವಲ ದೇಶಾಭಿಮಾನದ ಕಿರಣಗಳು ಸಿಡಿಯುವುದನ್ನು ಕಾಣಬಹುದು. ಡ್ಯೂಕ್ ಓಫ್ ಮಾರ್ಲ್ಬರೋ ಬೊರೋರವರ ಉಜ್ವಲ ಸಂತಾನದವರೆಂದು ಅವರು ಸಹಜವಾಗಿ ಅಭಿಮಾನ ಪಟ್ಟುಕೊಳ್ಳುತ್ತಾರೆ.

ಚರ್ಚಿಲ್ಲರ ಸರ್ವಶಕ್ತತೆ

ಚರ್ಚಿಲ್ಲರ ತಮ್ಮ ಪೂರ್ವಜರಾದ ಡ್ಯೂಕ್ ಓಫ್ ಮಾರ್ಲ್ಬರೋ ಬೊರೋರವರ ವಿಷಯವಾಗಿ ಕೂಲಂಕಷ ಇತಿಹಾಸವನ್ನು, ಯುದ್ಧ ವಿವರಣೆಗಳನ್ನು, ಭೂಪಟ ಸಹಿತ, ಅಂಕೆ ಸಂಖ್ಯೆಗಳನ್ನು ಉಜ್ವಲವಾಗಿ ವರ್ಣಿಸ ಬಲ್ಲರು. ಪತ್ರಿಕೆಯಲ್ಲಿಯೇ ಬಹ್ಮೊಮ್ಮೆ ಉದಾತ್ತ ಲೇಖನಗಳನ್ನು ಬರೆವರು. ಹೌಸ್ ಓಫ್ ಕೋಮನ್ಸಿನಲ್ಲಿ ಹೊಸ ಹೊಸ ವಿಚಾರ ಕ್ರಾಂತಿಯು ಭಾಷಣಮಾಡಿ ಬ್ರಿಟಿನಿನ ವಿದೇಶೀ ಘೋರಣೆಯ ಕುರಿತು ಅಧಿಕಾರಯುತವಾಣಿಯಿಂದ ನುಡಿವರು. ಸಭೆಯಲ್ಲಿ ಸಾಧನವಿಲ್ಲದಾಗ ತನ್ನ ಸಂಭಾಷಣೆಗಳಿಂದ, ಮೃದುಹಾಸ್ಯದ ಮಾತುಗಳಿಂದ ಎಲ್ಲರನ್ನೂ ಸಾಗಿಸ ಬಲ್ಲರು.

ನಿಜವಾಗಿ ಹಿಟ್ಲರ ಮುದುಕನು ಇನ್ನೊಂದು ಉತ್ಸಾಹವರನಾಗಿರುವುದ ವಿಶೇಷತರವಾಗಿದೆ! ಅಭ್ಯಾಸದ ಯುದ್ಧದಲ್ಲಿ ಸಣ್ಣದಿರುವಾಗ ಕಾದಾಡಿದರು ಒಂದೊಂದು ಬೋರ್ ಸೆರೆಮನೆಯಿಂದ ತಪ್ಪಿಸಿ ೩೦೦ ಮೈಲುಗಳು ದಾಟಿ ಸ್ವದೇಶಕ್ಕೆ ಬಂದಿದ್ದರು. ಗ್ರೀಕರಲ್ಲಿ ನಾವಿಕನಾಗಿ ಅದೇ ಸಾಹಸಗಳನ್ನು ತೋರಿಸಿದ್ದರು. ಇಂದು ಕಾಲಗಳು ಕಳೆದಿದ್ದರೂ, ತಲೆಗೂದಲು ನರೆತಿದ್ದರೂ ಅವರಲ್ಲಿ ಅದೇ ಉತ್ಸಾಹವು ಚಲಿಸುತ್ತಿದೆ. ತಮ್ಮ ಕಾರ್ಯಗಳಿಂದ ಅವರು ರಚನಾತ್ಮಕ ಮುತ್ಸದ್ದಿಯೆಂಬುದನ್ನು ಜಗತ್ತಿಗೆ ತಿಳಿಸಿದ್ದಾರೆ. ಬ್ರಿಟಿಷರಲ್ಲಿ ಹಲವರು ಚೆಂಬರ್ಲಿನರಂತೆ ವ್ಯಾಪಾರೀ ಘೋರಣೆಯುಳ್ಳವರು ತಂಟೆಯನ್ನು ತಪ್ಪಿಸಿ ಶಾಂತಿಗೆ ಬಾಯಿತೆರೆದಿರುತ್ತಾರೆ. ಆದರೆ ಚರ್ಚಿಲ್ಲರು ತಂಟೆಗೆ ಎದುರಾಡಿ ಸೆಣಸಬಯಸುತ್ತಾರೆ. ಬ್ರಿಟಿಷರ ರಾಜಕೀಯದಲ್ಲಿ ಚರ್ಚಿಲ್ಲರು ಹೃದ್ಗತವನ್ನು ಬಿಚ್ಚಿ ಹೇಳುವರು, ಇದರಿಂದಲೇ ಅವರಿಗೆ ವಿರೋಧಿಗಳು ಹುಟ್ಟಿದ್ದು. ಹಿಂದೆ ಹೇಳಿದಂತೆ ನಾಜಿಗಳ ಕುರಿತು ಮೊದಲನೆಯದಾಗಿ ಎಚ್ಚರಿಕೆ ಕೊಟ್ಟವರು ಅವರು! ಇಂದು ಚರ್ಚಿಲ್ಲರ ಭವಿಷ್ಯವು ನಿಜವಾಯಿತು!

ಹಿಟ್ಲರನಿಗೆ ಭಯಂಕರ ತಡೆ!

ಹಿಟ್ಲರಶಾಹಿಯನ್ನು ಖಂಡಕುಂಡ ಖಂಡಿಸುವುದರಿಂದ ಇಂದು ಬ್ರಿಟಿಷರಲ್ಲಿ ಚರ್ಚಿಲ್ಲರಿಗೆ ಹಿಟ್ಲರನು ಹೆದರಿದಂತೆ ಇನ್ನು ಯಾರಿಗೂ ಅಂಜುವುದಿಲ್ಲ. ಕಳೆದ ಮೂರು ವರ್ಷಗಳಿಂದ ಚರ್ಚಿಲ್ಲರ ಕುರಿತು ಹಿಟ್ಲರನು ಉಪಯೋಗಿಸುತ್ತಿದ್ದ ಹಿಂಸಾವಾಯು ಮಾತಿನ ಗುಟ್ಟೆಂದರೆ ಅದೇ ಆಗಿದೆ. ಚರ್ಚಿಲ್ಲರು ಬ್ರಿಟಿಸಿನಲ್ಲಿ ಅಧಿಕಾರಕ್ಕೆ ಬರುವುದೆಂದರೆ ಹಿಟ್ಲರನಿಗೆ ಎದೆಗೆ ಅಣಿಯೊತ್ತಿದಂತೆ ಎಂಬುದು ಆತನಿಗೆ ಚೆನ್ನಾಗಿ ಗೊತ್ತು.

DIAMONDS! DIAMONDS!
BEST BRILLIANCY!

K. R. K. SHET,

MANGALORE.

ಮಂಗಳೂರಿನ ಪ್ರಸಿದ್ಧ ವಜ್ರವ್ಯಾಪಾರಿ.

ವಜ್ರಗಳು!

ಎಮ್ ಸ್ಟ್ಯಾಡಮ್ಮಿನಿಂದ ಬರುವ ವಜ್ರಗಳು. ಬಜಾರ ಧಾರಣೆಗಿಂತ ಬದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಒಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ ಆಗ ತಾನೇ ನಿಮಗೆ ಖುಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,

ಹಿಂದುಸ್ಥಾನದಂತೆ ಸ್ಕಾಟ್ಲೆಂಡಿಗೂ ಸ್ವರಾಜ್ಯ ಬೇಕು

ಯುದ್ಧದ ಧ್ಯೇಯೋದ್ದೇಶಗಳನ್ನು ಸ್ಪಷ್ಟಮಾಡಿರಿ

ಯೂರೋಪದ ಮಹಾ ಯುದ್ಧದಲ್ಲಿ ಹಿಂದುಸ್ತಾನವು ಅರ್ಥಾತ್ ಕಾಂಗ್ರೆಸು ತೆಗೆದುಕೊಂಡ ಧೋರಣೆ ಮತ್ತು ಕಾರ್ಯ ನಿಯಮದಿಂದ ಬ್ರಿಟಿಷ ದ್ವೀಪಗಳಿಗೆ ಸೇರಿದ ಸ್ಕಾಟ್ಲೆಂಡು ಪೂರ್ಣ ತೃಪ್ತವೂ ಸಂತುಷ್ಟವೂ ಆಗಿದೆ. ಅದೂ, ತನಗೂ ಸ್ವರಾಜ್ಯವೂ ಸ್ವಾತಂತ್ರ್ಯವೂ ಬೇಕಾಗಿರುವದೆಂದು ಬ್ರಿಟಿಷ ಸರಕಾರವನ್ನು ಕೇಳಿರುವದು.

ಸ್ಕಾಟ್ಲೆಂಡಿನ ವರವಾಗಿ ಬ್ರಿಟಿಷ ಸರಕಾರದ ಮಂತ್ರಿಯಾಗಿರುವ ಮಿ. ಜೆಫ್ರೀಸ್ ಕೊಲ್‌ವಿಲ್ಲರಿಗೆ ಒಂದು ಪತ್ರವನ್ನು ಬರೆದು,—ಸ್ಕಾಟಿಶ್ ನೇಶನಲ್ ಪಾರ್ಟಿಯು — 'ಲೋಕ ಶಾಂತಿಯು ಸ್ಥಾಪಿತವಾಗಬೇಕಾದರೆ, ಯೂರೋಪದಲ್ಲಿ ಸಂಯುಕ್ತ ರಾಜ್ಯಮಂಡಲಿಯು ಸ್ಥಾಪಿತವಾಗುವ ಉದ್ದೇಶವನ್ನಿಟ್ಟುಕೊಂಡು ಜನಾಂಗಸಂಘದ ಪುನರ್ರಚನೆಯಾಗಬೇಕು. ಯೂರೋಪದ ರಾಷ್ಟ್ರಗಳ ಅಧಿಕಾರಗಳನ್ನು, ಅವು ಯೂರೋಪದ ಸಾಮೂಹಿಕ ಹಿತಕ್ಕೆ ಬಾಧಕವಾಗದ ಹಾಗೆ ಮಿತಗೊಳಿಸಬೇಕು. ಈ ಅಧಿಕಾರದ ಪರಿಮಿತಿಯೊಳಗೆ ಬ್ರಿಟಿಷ ದ್ವೀಪಗಳು ಮತ್ತು ಜರ್ಮನ್ ಕೂಡಿ ಎಲ್ಲಾ ಯೂರೋಪದ ರಾಜ್ಯಗಳಿಗೆ ರಾಜಕೀಯ ಸ್ವಾತಂತ್ರ್ಯವೂ ಪ್ರಾಪ್ತವಾಗಬೇಕು.' ಎಂದು ಹೇಳಿದೆ. ಹೀಗೆ ಮಾಡಿದ್ದುದಾದರೆ ವಸಾಹತುಗಳಿಗೆ ಸ್ವರಾಜ್ಯವನ್ನು ಕೊಡುವ ಪ್ರಶ್ನೆಯನ್ನು ವಿಚಾರಿಸಲಿಕ್ಕೂ ಅವಕಾಶವು ದೊರೆಯುವದೆಂದು ನೇಶನಲ್ ಪಾರ್ಟಿಯು ಹೇಳಿರುವದು

ಹೃದಯ ಪರೀಕ್ಷೆ

ಮಹಾ ಯುದ್ಧದಲ್ಲಿ ತೊಡಗಿರುವ ಇಂಗ್ಲಾಂಡಿನ ನಿಜ ಉದ್ದೇಶಗಳು ಯಾವುವಾಗಿರುವದೆಂಬುದು ಆಗ ತಾನೇ ಸ್ಪಷ್ಟವಾಗಿ ಜನಜನಿತವಾಗುವದು. ಮೇಲೆ ನೇಶನಲ್ ಪಾರ್ಟಿಯು ಬರೆದ ಪತ್ರದಲ್ಲಿ ನಮೂದಿಸಿರುವ ಸ್ವಕಾರವೇ ನಡೆಯುವದು ತಾನು ಯುದ್ಧದಲ್ಲಿ ತೊಡಗಿರುವ ಆಶಯವಾಗಿರುವದೆಂದು ಬ್ರಿಟಿಷ ಸರಕಾರವು ಘೋಷಿಸುವದಾದರೆ— ಜಗತ್ತಿನ ರಾಷ್ಟ್ರಗಳ ಸ್ವಾತಂತ್ರ್ಯ ರಕ್ಷಣೆಗೆ ಮಿತ್ರ ಮಂಡಲಿಯು ಯುದ್ಧಾಸಕ್ತರಾಗಿರುವದೆಂಬ ಬ್ರಿಟಿಷನ ಮಾತಿನ ಸತ್ಯ ಪರೀಕ್ಷೆ ಮಾಡಲಿಕ್ಕೆ ಬೇರೆ ಒರೆಗಲ್ಲು ಬೇಕಾಗುವದಿಲ್ಲ. ಬ್ರಿಟಿಷ ಸರಕಾರವು ರಾಷ್ಟ್ರಗಳ ಸ್ವಾತಂತ್ರ್ಯ ರಕ್ಷಣೆಗಾಗಿಯೇ ಈ ಯುದ್ಧವನ್ನು ಹೂಡಿರುವದು ನಿಜವಾದರೆ, ಹಿಂದುಸ್ತಾನ, ಸ್ಕಾಟ್ಲೆಂಡಗಳಂಥ ಪರತಂತ್ರ ರಾಷ್ಟ್ರಗಳಿಗೆ ಸ್ವರಾಜ್ಯ ಕೊಡುವದೂ ಇಂಗ್ಲಾಂಡಿನ ಧೋರಣೆಯಾಗಿರುವದೆಂದು. ಹೇಳಿದ್ದು ಮಾತ್ರಕ್ಕೆ ಯಾವ ಹಾನಿಯೂ ಉಂಟಾಗಲಾರದು ಎಂಬಭಿಪ್ರಾಯವು ಸ್ಕಾಟ್ಲೆಂಡಿನಲ್ಲಿ ಕೂಡ ಬಲಗೊಳ್ಳುತ್ತಲಿದೆ.

ಕನ್ನಡ ಸಾಹಿತ್ಯ ಸಮ್ಮೇಲನ

ಒಳನೆಯ ಅಧಿವೇಶನ ಬೆಳಗಾವಿ ೧೯೪೯

ಅಖಿಲ ಕನ್ನಡ ನಾಡಿನ ಸಾಹಿತಿಗಳಲ್ಲಿ ಬಿನ್ನಹ

ಈ ಸಾರಿ ಕೂಡಲಿರುವ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಲನದ ಕಾರ್ಯಕ್ಕೆ ಜರಗುವ ಸಾಹಿತ್ಯ ಗೋಷ್ಠಿಯಲ್ಲಿ ಕನ್ನಡ ನಾಡಿನ ಎಲ್ಲ ಸಾಹಿತಿಗಳೂ ಭಾಗ ವಹಿಸಬೇಕೆಂದು ನಮ್ಮ ಇಚ್ಛೆ. ಅದಕ್ಕಾಗಿ ಕವಿಗಳು, ಗಮಕಿಗಳು, ಬೇಖಕರು, ಲಾವಣಿಕಾರರು, ಯಕ್ಷಗಾನದವರು, ಮೇಳದವರು, ಮೊದಲಾದ ಸಾಹಿತ್ಯಭಕ್ತರೆಲ್ಲ ತಮ್ಮ ಕೃತಿಗಳೊಂದಿಗೆ ಇಲ್ಲಿಯ ಸಾಹಿತ್ಯ ಸಮಾರಾಧನೆಗೆ ಬರಬೇಕೆಂದು ನಮ್ಮ ಆಗ್ರಹದ ವಿಶಣವಿದೆ

ಸಾಹಿತ್ಯ ಗೋಷ್ಠಿಯಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಲಿಚ್ಛಿಸುವವರು ತಮ್ಮ ಕೃತಿಗಳನ್ನು ಕೆಳಗಿನ ವಿಳಾಸಕ್ಕೆ ಈ ತಿಂಗಳ ೧೫ನೇಯ ತಾರೀಕಿನ ಒಳಗಾಗಿ ಕಳಿಸಬೇಕಾಗಿ ಪ್ರಾರ್ಥನೆ ಈ ಬಿನ್ನಹವನ್ನು ಎಲ್ಲರೂ ಮಾನ್ಯಮಾಡಬೇಕಾಗಿ ಅಪೇಕ್ಷಿಸುವ,

ಕೆ. ಟಿ ಪುರಾಣಿಕ,
ಎಸ್. ಎಂ. ದೇಸಾಯಿ
ಗೌರವ ಕಾರ್ಯದರ್ಶಿಗಳು,
ಸಾಹಿತ್ಯ ಗೋಷ್ಠಿ

ಮಹಿಳಾಗೋಷ್ಠಿ

ಕನ್ನಡನಾಡಿನ ಮಹಿಳೆಯರಲ್ಲಿ ಬಿನ್ನಹ

ಇದೇ ತಿಂಗಳಲ್ಲಿ ಜರಗಲಿರುವ ಅಖಿಲ ಕನ್ನಡ ಸಾಹಿತ್ಯ ಸಮ್ಮೇಲನದ ಕಾಲಕ್ಕೆ ಜರಗುವ ಮಹಿಳಾಗೋಷ್ಠಿಯನ್ನು ನಾವು ಯಶಸ್ವಿಯಾಗಿ ಕೂಡಿಗಾಣಿಸಬೇಕಾದರೆ ತಮ್ಮೆಲ್ಲರ ಸಹಾಯವು ಅನಿವಾರ್ಯವಾದುದು. ಕೇವಲ ತಮ್ಮ ಸಹಾನುಭೂತಿಯಲ್ಲದೆ, ತಮ್ಮ ಬರುವಿಕೆಯು ಅತ್ಯಂತ ಮಹತ್ವದ್ದಾಗಿದೆ ಕನ್ನಡನಾಡಿನಲ್ಲಿ ಸಾಹಿತ್ಯಾಭಿಮಾನವು ಮಹಿಳೆಯರಲ್ಲಿಯೂ ತುಂಬಿತುಳುಕುತ್ತದೆಂಬುದು ನಾವೆಂದು ಕಾರ್ಯಮಾಡಿ ತೋರಿಸಬೇಕಾಗಿದೆ ತಮಗೆ ಸಮ್ಮೇಲನದಲ್ಲಿ ಏನಾದರೂ ಗೊತ್ತುವಳಿಗಳನ್ನು ಮಂಡಿಸಬಿದ್ದರೆ ಅವುಗಳನ್ನು ದಯವಿಟ್ಟು ೧೫ನೇಯ ತಾರೀಕಿನ ಒಳಗಾಗಿ ಕಳುಹಿಸಿಕೊಡಿರಿ.

ಕನ್ನಡನಾಡಿನಲ್ಲಿ ಅಗಿಹೋದ ಸಾಹಿತಿಗಳಲ್ಲಿ ಮಹಿಳೆಯರೂ ಇದ್ದಾರೆ ಇಂದಿನ ಸಾಹಿತ್ಯದಲ್ಲಿ ಅನೇಕ ಅಕ್ಕತಂಗೆಂದಿರೂ ಸಾಹಿತಿಗಳಿದ್ದಾರೆ. ಆದರೆ ಒಟ್ಟಿಗೆ ಪರಿಚಯ ಒಂದೂ ಸುಸಂಬದ್ಧ ರೀತಿ ಇಲ್ಲದಾಗಿದೆ. ಆದುದರಿಂದ ನಾವೆಲ್ಲರೂ ಕೂಡಿ ನಮ್ಮ ಗೋಷ್ಠಿಯನ್ನು ಯಶಸ್ವಿಯಾಗಿ ಮಾಡಲು ತಾವು ಬರಬೇಕಾಗಿ ಅಪೇಕ್ಷಿಸುವ,

ಕುಮಾರಿ ಭಾಗೀರಥಿದೇವಿ, ಶಿಗ್ಲಿ
ಶ್ರೀಮತಿ ಚನ್ನದೇವಿ, ಉಣಕಲ್ಲ
ಶ್ರೀಮತಿ ಪದ್ಮಾವತಿಬಾಯಿ, ಅಂಗಡಿ
ಗೌರವ ಕಾರ್ಯದರ್ಶಿಗಳು,
ಮಹಿಳಾಗೋಷ್ಠಿ

ಎದೆಯ ಬಾಧೆ, ಕೆಮ್ಮು, ಕಫಗಳನ್ನು ಗುಣಪಡಿಸಿರಿ!

ಕೆಮ್ಮು, ಶ್ವಾಸಕೋಶಗಳನ್ನು ದುರ್ಬಲಗೊಳಿಸುವ ಶೀತ ಫಕ್ಕನೆ ಬರುವ ಥಂಡಿಯಿಂದ ನೀವು ನರಳುವಿರಾದರೆ ಖಂಡಿತವಾಗಿಯೂ ಪೆಪ್ಸ್‌ನ್ನು ಸೇವಿಸಿರಿ!

ಪೆಪ್ಸ್ ನಿಮ್ಮ ಬಾಯಲ್ಲಿ ಕರಗುತ್ತಿರುವಾಗ ಅದರಿಂದ ಹೊರಟ ಔಷಧೀಯ ಧೂಮವು ನಿಮ್ಮ ಶ್ವಾಸಕೋಶಗಳಿಗೆ ಆಳವಾಗಿ ಹೋಗುತ್ತದೆ. ಈ ಪ್ರಕಾರವಾಗಿ ಪೆಪ್ಸ್ ನಿಮ್ಮ ಶ್ವಾಸಕೋಶಗಳಲ್ಲಿರಬಹುದುದಂಥ ಶೀತದ ಮತ್ತು ಕಫದ ಕ್ರಿಮಿಗಳನ್ನು ನಾಶಪಡಿಸುತ್ತದೆ. ಕೆಮ್ಮಿನಿಂದಾಗಿ ಹುಟ್ಟಿದಂತಾದ ಎದೆಯ ತೆಳುವಾದ ಚರ್ಮದ ಪರದೆಯನ್ನು ಸರಿಗೊಳಿಸುತ್ತದೆ. ಗಂಟಲ್ಕುನೋವನ್ನು ಗುಣಪಡಿಸುತ್ತದೆ ಬ್ರೊಂಕ್ಯಾಯಿಟಿಸ್, ಶೀತ, ಕೆಮ್ಮು ಮೊದಲಾದ ಶ್ವಾಸಕೋಶಗಳನ್ನು ದುರ್ಬಲಗೊಳಿಸುವ ಬಾಧೆಗಳಿಗೆ ಖಂಡಿತ ಗುಣಕಾರಿ ಔಷಧಿ. ಪೆಪ್ಸ್ ಸೀಲು ಹಾಕಲ್ಪಟ್ಟ ಬಾಟ್ಲಿಗಳಲ್ಲಿ ರೂ. 1ರಂತೆ ದೊರಕುತ್ತಾರೆ. ಪಿಜಂಟ್ಸ್.

ವೆಸರ್ಸ್ ದಾಫಾ ಮತ್ತು ಕಂಪನಿ ಸಾರ್ಕ್‌ಪುರ್ ಮದರಾಸ್.

ಯಾವಾಗಲೂ ಪೆಪ್ಸನ್ನೇ ಉಪಯೋಗಿಸಿರಿ

PEPS

ವಿಷಹಾರಿ ಕ್ರಿಮಿನಾಶಕ ಗುಳಿಗೆಗಳು

ನೋಟಗಳು

ಸಿನ್‌ಲೆಂಡಿನ ಸಮಸ್ಯೆಯು ಇಂದು ರಾಜಕೀಯ ಪ್ರಪಂಚದಲ್ಲಿ ಬಹಳಗೊಂದಲ ಹುಟ್ಟಿಸಿದೆ.

◆

ಸ್ಟಾಲಿನನ ಕುಟಿಲತೆಯನ್ನು ಸರಿಗಟ್ಟುವಂತಹುದು ಈಗ ಪ್ರಪಂಚದಲ್ಲಿ ಬೇರೆಯಾರದೂ ಇಲ್ಲವೆನ್ನಬೇಕು. ರಶ್ಯದ ಆಕ್ರಮಣವು ಅನ್ಯಾಯವೆಂದು ಯಾರೂ ಕೂಡಾ ಹೇಳಬಾರದು! ಹಾಗಿದೆ ಅತನ ಉಪಾಯ!

◆

ಸಿನ್‌-ರಶ್ಯಾಗಳ ಕಲಹ ಆರಂಭವಾದ ಮೇಲೆ ರಶ್ಯದ ಸೇನಾಪತಿಯು ಇಂಗ್ಲೆಂಡಿಗೆ ಅನೇಕ ಸಲ ಹೋಗಿ, ಬ್ರಿಟಿಷ್ ವಿದೇಶ ಮಂತ್ರಿಗಳನ್ನು ಕಂಡು ಮಾತನಾಡಿದನು ಹಾಗಾಗಿ ಚರ್ಚಿಲ್ಲರೂ ಕೂಡಾ ರಶ್ಯದ ಆಕ್ರಮಣದ ವಿಷಯವು ಅನ್ಯಾಯವಲ್ಲವೆಂದು ಸಮ್ಮತಿ ಕೊಟ್ಟಂತಿದೆ! ಹಿಟ್ಲರನ ಮೇಲೆ ಸುರಿಯುವ ಅವರ ಹರಿತ ಮಾತಿನ ಗುಂಡುಗಳು ಈಗ ಮುಗಿದು ಹೋಗಿರಬೇಕು!

◆

ಅಮೇರಿಕದ ಪತ್ರಿಕೆಗಳು ಪ್ರತಿಯೊಂದನ್ನೂ ನಿರ್ಭಯವಾಗಿ ಸಾರುತ್ತಿವೆ ಆದರೆ ಸ್ಟಾಲಿನನ ಇಂದಿನ ಹೆಜ್ಜೆಯ ನ್ಯಾಯಾನ್ಯಾಯವು ಅಮೇರಿಕಕ್ಕೂ ಸ್ಪಷ್ಟ ತಿಳಿದಿಲ್ಲವೆಂಬ ಹಾಗೆ ಸಾರಿಸುತ್ತಿದೆ

◆

ಆದರೆ, ಹೊರಗಡೆ ಸ್ಟಾಲಿನನ ಈ ಘೋರಕೃತ್ಯದ ಕುರಿತ ತೀವ್ರ ನಿಷೇಧಗಳು ಸೂಚಿಸಲ್ಪಡದಿದ್ದರೂ, ರಶ್ಯದಲ್ಲಿಯೇ ಭಿನ್ನಾಭಿಪ್ರಾಯಗಳ ಕೂಗು ಇಂದು ಕೇಳಿಬರುತ್ತದೆ

◆

ನಿಜವಾಗಿ ಕೆಂಪು ರಶ್ಯದ ಇಂದಿನ ಘೋರಕೃತ್ಯವೇ ನೆಂದುಕೊಳ್ಳುವುದು ಕಷ್ಟವಾಗಿದೆ. ಫಿನ್ಲೆಂಡಿನ ಪತನದಿಂದ ಉತ್ತರ ಯೂರೋಪಿನಲ್ಲಿ ರಶ್ಯದ ಪ್ರಭಾವವು ಇದರಿಂದ ತಾತ್ಕಾಲಿಕವಾಗಿ ಹೆಚ್ಚಬಹುದೇನೋ ನಿಜ ಆದರೆ ಇದರಿಂದ ಇತರ ಕಡೆಗಳಲ್ಲಿ ರಶ್ಯದ ಕುರಿತು ಕೆಟ್ಟ ಅಭಿಪ್ರಾಯಗಳು ಇದರಿಂದ ಹರಡದಿರಲು ಸಾಧ್ಯವಿಲ್ಲ. ಯೂರೋಪಿನ ಪ್ರಬಲರಾಷ್ಟ್ರಗಳೂ ಸುಮ್ಮಗಿರಲಾರವು!

◆

ಆದರೆ ಸ್ಟಾಲಿನನು ಇದಕ್ಕೆಲ್ಲಾ ಹೊಸ ಮುರುಗನ್ನು ಕೊಟ್ಟು ಜಗತ್ತನ್ನು ಮೆಚ್ಚಿಸುವಂತೆ ಕಂಡುಬರುತ್ತದೆ.

◆

ಸಿನ್‌ಲೆಂಡಿನ ಮೇಲೆ ಆಕ್ರಮಣ ಮಾಡುವ ಅಧಿಕಾರವಿಲ್ಲವೆಂದು ಸಾರಿ ಇಬ್ಬರೂ ತಮ್ಮ ವಿವಾದವನ್ನು ಜನಾಂಗ ಸಂಘಕ್ಕೆ ಒಪ್ಪಿಸುವ ಮನಸ್ಸು ಮಾಡುವರೇ?

◆

ಇತ್ತ ರಶ್ಯಕ್ಕೆ ಸಿನ್‌ಲೆಂಡಿನಲ್ಲಿ ಸಿಗಬೇಕಾದದು ರಾಜಧಾನಿಯಂದಲೇ ಸಿಗುವಂತಾಗಬೇಕು ರಶ್ಯವು ಆಕ್ರಮಣಮಾಡಿ ದುರ್ಬಲ ಜನಾಂಗವನ್ನು ಸೀಡಿಸಿ ತೆಂದು ಯಾರೂ ದೂರಬಾರದು; ಹಾಗೆಯೇ ಅತ್ತ ಬಹುಕಾಲದ ವರೆಗೆ ರಶ್ಯದ ದಂಡಿನದಾಳಿಗೆ ನಿಲ್ಲಲು ಸಾಮರ್ಥ್ಯವಿಲ್ಲದ ಸಿನ್ಲೆಂಡೂ ರಾಜಿಯ ಮೂಲಕವೇ ಎಲ್ಲವನ್ನೂ ವ್ಯವಸ್ಥೆಗೊಳಿಸುವ ಮನಸ್ಸು ಮಾಡಿದಂತೆ ತೋರುತ್ತದೆ.

◆

ಜರ್ಮನಿಯ ತೋಟಿ ಕಾಳಗವನ್ನು ಇಂಗ್ಲೆಂಡು ಪ್ರಾನ್ಸುಗಳು ಇಂದು ಎಲ್ಲಾ ವಿಧಗಳಿಂದಲೂ ಕಡೆಗಟ್ಟಿ ಜಯಶಾಲಿಗಳಾಗುತ್ತಿವೆ

◆

ಜರ್ಮನರ ಸಮುದ್ರ ವಿಮಾನಗಳು ಆಕಾಶದಲ್ಲಿ ಹಾರಾಡಿ ಬಂದು, ಸಮುದ್ರದ ಎಲ್ಲಾ ಕಡೆಗಳಲ್ಲಿಯೂ ತೋಟಿಗಳನ್ನು ಹರಡುವುದರಿಂದ, ಅಂತಹ ಹಾರಾಡುವ ವಿಮಾನಗಳನ್ನೇ ಧ್ವಂಸಮಾಡುವ ಕಾರ್ಯದಲ್ಲಿ ಬ್ರಿಟಿಷರು ಪ್ರಬಲ ಸಾಹಸ ಮಾಡುತ್ತಿದ್ದಾರೆ. ಇದರಿಂದ, ಹಿಟ್ಲರನ ಹೊಸ ಅಸ್ತ್ರದ ಬತ್ತಳಿಕೆಯು ಬೇಗನೇ ಬರಿದಾಗಬಹುದೇ ಎಂದು ವಿಚಾರಿಸಬೇಕಾಗಿದೆ.

◆

ಹಿಟ್ಲರನ ಹೊಸ ಆಯುಧದಿಂದ ಬ್ರಿಟನಿಗೆ ಇಂದು ಇರುವ ಸಮುದ್ರ ಪ್ರಭುತ್ವವು ಯಾವ ರೀತಿಯಿಂದಲೂ ಕಡಿಮೆಯಾಗಲಿಲ್ಲ. ಒಟ್ಟಲಾಗಿ ತಟಸ್ಥ ರಾಷ್ಟ್ರಗಳಾದ ಇಟಲಿ ಜಪಾನುಗಳು ಜರ್ಮನಿಯ ವಿಷಯ ಉದ್ರೇಕಗೊಳ್ಳುವಂತೆ ಮಾತ್ರ ಆಗಿದೆ.

◆

ಬೋಸರು ಕಾಂಗ್ರೆಸ್ ಪಕ್ಷದವರೇ ಆಗಿದ್ದುಕೊಂಡು, ಹೊರಗಿನವರೂ ಕೂಡಾ ಖಂಡಿಸದಷ್ಟು ತೀವ್ರವಾದ ಮಾತುಗಳಿಂದ ಕಾಂಗ್ರೆಸು ಧುರೀಣರೇಕರನ್ನು ಟೀಕಿಸುತ್ತಿದ್ದಾರೆ! ತನ್ನ 'ಫಾರ್ವರ್ಡ್‌ಬ್ಲಾಕ್' ಬಹಳ ತೀವ್ರಗಾಮಿ ಯಾಗಿದೆಯೆಂದು ಅವರ ಅಭಿಪ್ರಾಯ!

◆

ನಿಜವಾಗಿ ಬೋಸರನ್ನು ಹೆಚ್ಚು ಕಳವಳಗೊಳಿಸಿದ ವಿಷಯವೆಂದರೆ ಗಾಂಧಿಯವರ ಕಾಲದ ಗಾಂಧಿಯವರ ಕಾರ್ಯಕ್ರಮಗಳು ಮತ್ತು ಇಂದಿನ ಅವರ ಕಾರ್ಯಕ್ರಮಗಳು!

◆

'ಗಾಂಧಿಯರಲ್ಲಿ ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ಗಾಂಧಿಜಿಯವರು ಬರೆಯುತ್ತಿದ್ದ ಆವೇಶಪೂರ್ಣವಾದ ಲೇಖನಗಳೊಡನೆ, ಇಂದು ಅವರು ಹರಿಜನದಲ್ಲಿ ಬರೆಯುವ ನಿಷ್ಪ್ರಯೋಜಕ ಲೇಖನಗಳನ್ನು ಹೋಲಿಸಿ ನೋಡಿ' ಎನ್ನುತ್ತಾರೆ ಬೋಸರು.

◆

ನಾವು ಹಾಗಾದರೆ ಇಂದು ಏನು ಮಾಡಬೇಕಾಗಿದೆ? ಸೀದಾ ಶೀಗುಮಿಗೆ ಬರೆದು ಗಾಂಧಿಜಿಯವರ ಅಭಿಪ್ರಾಯವನ್ನು ಕೇಳಿದರೆ, ಅವರು ಹಲವು ಸಾರಿ ಹೇಳಿದಂತೆ ಅಂದಿಗೂ ಇಂದಿಗೂ ತನ್ನಲ್ಲಿ ಏನೇನೂ ಭೇದವಿಲ್ಲವೆಂದು ಹೇಳಬಹುದು. ತನ್ನದು ಅಂದಿನಿಂದ ಇಂದಿನ ವರೆಗೆ ಅದೇ ಚರಕದ ಕಾರ್ಯಕ್ರಮವೆಂದೇ ಅವರು ಹೇಳುವರು.

◆

ನುಡಿಗಟ್ಟು, ಕೊಮ, ಅರ್ಥಗಳಾದಿ ಇವುಗಳಲ್ಲಿ ಈಗ ಬದಲಾವಣೆ ಬಂದಿರಬಹುದೆ? ಅಲ್ಲದೆ ಗಾಂಧಿಜಿಯವರ ರಚನಾತ್ಮಕ ಕಾರ್ಯಕ್ರಮದಲ್ಲಿ ಅಂದಿಗೂ ಇಂದಿಗೂ ಏನು ವ್ಯತ್ಯಾಸವುಂಟೋ ತಿಳಿಯುವುದಿಲ್ಲ. ಅದರೊಡನೆ ತೀವ್ರಗಾಮಿಗಳಾದ ಬೋಸರು ರಾಷ್ಟ್ರಕ್ಕೆ ಯಾವ ರಚನಾತ್ಮಕ ಕಾರ್ಯಕ್ರಮವನ್ನು ಮುಂದಿಟ್ಟಿದ್ದಾರೋ ಅವರೊಡನೇ ಕೇಳಿ ತಿಳಿಯಬೇಕಾಗಿದೆ.

Grand Xmas Offers

15 Cash Prizes to be won from—

1st to 31st December 1939

Rs. 31 to the highest purchaser at a time

14 PRIZES 2nd Rs. 25–3rd Rs. 20–4thRs. 15–5th Rs. 10 & 10 prizes of Rs. 5 to the Lucky Numbers on cash Bills

Smartest Designs in piecegoods and Silk Sarees have lately received

Dont Fail to see them at—

JAYANTILAL BROS.,

CLOTH MERCHANT,

Hampankatta, MANGALORE

N. B.—Drawing date will be 5th January 1940 at 5 30 P. M. Sjt Dr K Vittal Shetty President, Dt. B. Office has kindly consented to present on this day.

NACET ರೇಜರು ಮತ್ತು ಬ್ಲೇಡುಗಳು



ನೆಸೆಟ್ ಸೆಟ್—ಒಂದು ನೆಸೆಟ್ ರೇಜರು ಮತ್ತು ಎರಡು ಹೊಸತಾದ ನಡುವಿನಲ್ಲಿ ಸಿಗಿಯುವಷ್ಟು ನೆಸೆಟ್ ಡಿ ಲಕ್ಸ್ ಬ್ಲೇಡುಗಳು ಒಂದು ಅಚ್ಚುಕಟ್ಟಾದ ಪೆಟ್ಟಿಗೆಯಲ್ಲಿರುತ್ತವೆ ಬಲಿ ಮತ್ತು ವಿಶಿಷ್ಟತೆಗಳು ಇದನ್ನು ಸರಿಗಟ್ಟಿದವುಗಳಿಲ್ಲ. ನಿಮ್ಮ ವ್ಯಾಪಾರಿಗಳಿಗೆ ಇದನ್ನು ತೋರಿಸುವಂತೆ ಕೇಳಿರಿ.

ನೆಸೆಟ್ ಡಿ ಲಕ್ಸ್—ನಮ್ಮ ಅಚ್ಚುಮೆಚ್ಚುಗೆ ಪಡೆದ ಹಿಂದಿನ ನೆಸೆಟ್ ಬ್ಲೇಡುಗಳಲ್ಲಿಯೇ ಉತ್ತಮ ಮಾರ್ಪಾಟು ಪಡೆದವುಗಳು ಇವು ಹಳೆಯ ಮತ್ತು ಹೊಸ ರೇಜರುಗಳಿಗೆ ಅಚ್ಚುಕಟ್ಟಾಗುವುವು.

★ ಧರ್ಮಾರ್ಥದ ಇಸ್ಪೇಟು ಪೆಟ್ಟಿಗೆ ★

ಇದನ್ನು ಪಡೆಯಲು ಉಪಯೋಗಿಸಿದ ಬ್ಲೇಡುಗಳು 'NACET BLADE' ಎಂದು ಬರುವಂತೆ ಕೂಡಿಸಿ ಇದ ಪೆಟ್ಟಿಗೆ ಮುಲ್ಲರ್ ಎಂಡ್ ಪಿಫ್ಸ್ (ಇಂಡಿಯಾ) ಲಿಮಿಟೆಡ್, 15 ಸಂಕುರಂಮ ಚೆಟ್ಟಿ ಸ್ಟ್ರೀಟ್ ಮದ್ರಾಸು ಇವರಿಗೆ ಕಳುಹಿಸಿರಿ.

ಬೋಸರ ಸಂಶೋಧನೆಯು ಅಮೇರಿಕದಲ್ಲಿಯೂ ರುಜುವಾಯಿತು

ಗತಿಸಿದ ಸರ್. ಜಗದೀಶಚಂದ್ರಬೋಸರು, ಸಸ್ಯ ಜಾತಿಗಳಿಗೂ ಭಾವನೆಗಳು, ಹೃದಯಕ್ರಿಯೆ, ನೋವು ಮೊದಲಾದವುಗಳ ಅನುಭವಗಳು ಇವೆಯೆಂದು ಹೇಳಿದಾಗ ಅನೇಕರು ಬೇರೆ ಬೇರೆ ಕಡೆಗಳಲ್ಲಿ ವಿರೋಧವೆತ್ತಿದ್ದರು. ಗಾಯಗೊಂಡ ಸಸಿಗಳು, ರಹಸ್ಯಮಯ ರಸದಿಂದ ಸ್ವತಃ ಗುಣಹೊಂದುವ ವಿಷಯ ಅವರು ತಿಳಿಸಿದ್ದರಷ್ಟೆ?

ಇದೇ ಮೂಲಾಧಾರ ವಿಚಾರದಿಂದ, ಕೆಲಿಫೋರ್ನಿಯದ ಮಿ. ಏರ್ ಚೇನ್ ಹೇಗ್ಗನ್‌ಸ್ಮಿತ್ತರು ಈ ಸಮಸ್ಯೆಯನ್ನು ನಿವಾರಿಸಲು ಯತ್ನಮಾಡಿ ಜಯಶೀಲರಾಗಿದ್ದಾರೆ. ಅವರು ಮಾಡಿದ ಸಂಶೋಧನೆಯಿಂದ ಒಕ್ಸಾಲಿಕ್ ಏಸಿಡ್ ಎಂಬ ವಸ್ತುವು ಸಸ್ಯಗಳಲ್ಲಿ ಉಂಟಾಗಿ, ಮನುಷ್ಯನ ದುರ್ವರ್ತನೆಗಳಿಂದ ಸಸಿಗಳ ಮೇಲೆ ಆಗುವ ಪೆಟ್ಟಿನ ಗಾಯಗಳು ಗುಣಹೊಂದುತ್ತವೆಯೆಂದು ದೃಷ್ಟಾಂತಪೂರ್ವಕವಾಗಿ ತಿಳಿದುಬಂದಿದೆ.

ನೋವನ್ನು ವಿಷವು ಗುಣಪಡಿಸಿತು!

ಪೇರಿಸಿನ ಒಬ್ಬ ಕುಷ್ಠರೋಗಿಯು ಕೈಯಲ್ಲಿ ಎದ್ದ ಒಂದು ಬೊಕ್ಕೆಯ ನೋವಿನಿಂದ ಸಹಿಸಲಾಗದೆ ಸಂಕಷ್ಟಪಡುತ್ತಿದ್ದನು. ಆತನಿಗೆ ಅಕಸ್ಮಾತ್ತಾಗಿ ಒಮ್ಮೆ ವಿಷಪ್ರಯೋಗವುಳ್ಳ ಒಂದು ಚೇಡರ ಹುಳು ಕಚ್ಚಿತು, ಆಶ್ಚರ್ಯಕರವೆನ್ನುವಂತೆ, ಆ ದಿನ ಮೊದಲ್ಗೊಂಡು ಅವನ ನೋವೂ ಕಡಿಮೆಯಾಗುತ್ತಾ ಬಂತು. ಈ ವಿಚಾರವು ಪೇರಿಸಿನ ವಿಜ್ಞಾನ ಸಂಘದವರಲ್ಲಿ ವಿಚಾರಕ್ರಾಂತಿಯನ್ನು ಹುಟ್ಟಿಸಿ, ಅವರು ಹಾಗೆ ಆಗಲು ಕಾರಣವೇನಿರಬಹುದೆಂದು ಸಂಶೋಧನೆ ತೊಡಗಿದರು. ಅವರು ಸಂಶೋಧನೆ ಮಾಡುತ್ತಾ ಮನುಷ್ಯನ ತಡೆಯಲಾರದ ನೋವಿಗೆ ಪ್ರಾಣಿಗಳ ವಿಷಪ್ರಯೋಗ ಮಾಡಿ ಗುಣಪಡಿಸಬಹುದಾಗುತ್ತದೆಯೆಂದು ಈಗ ಕಂಡು ಹಿಡಿದ್ದಾರೆ.

ಈ ಪ್ರಯೋಗದ ಗುಣಾವಗುಣಗಳು ಒಂದು ವಾರದ ವರೆಗೆ ಇರುತ್ತದೆ. ವಾರದ ಮೊದಲನೆಯ ಕೆಲವು ದಿನಗಳಲ್ಲಿ ಇಂಟ್ರಾಮಸ್ಕ್ಯುಲರ್ ವೆನಂ ಇಂಜೆಕ್ಷನ್ ಕೊಡಲಾಗುತ್ತದೆ. ಈ ದಿನಗಳಲ್ಲಿ ಎಲ್ಲಾ ನೋವು ಮೊದಲಿನಂತೆಯೇ ಇರುತ್ತದೆ. ಆದರೆ ನಾಲ್ಕನೇ ಐದನೇ ದಿನಗಳಿಂದ ಕ್ರಮಪ್ರಕಾರ ನೋವು ಇಳಿಯುತ್ತಾ ಬರುತ್ತದೆ. ಕಡೆಗೆ ಸಂಪೂರ್ಣನೋವೂ ನಿಂತುಹೋಗುವುದು.

ಆದರೆ ವೈದ್ಯರು ಮೊಟ್ಟಮೊದಲು, ಇಂಜೆಕ್ಷನ್ ಕೊಡುವಾಗ ಯಾವ ಪ್ರಮಾಣದಲ್ಲಿ ಕೊಡಬಹುದು ಎಂಬುದನ್ನು ಪರೀಕ್ಷಿಸಿ ತಿಳಿದು ಜಾಗರೂಕತೆಯಿಂದ ಕೊಡಬೇಕು.

ಮೂರು ನಾಲು ಹೆಚ್ಚು ಭತ್ತದ ಉತ್ಪತ್ತಿ

ರುಷಿಯ ಇಲಾಖೆಯಲ್ಲಿ ಆಶ್ಚರ್ಯವಾದ ಸಂಶೋಧನೆಯು ನಡೆದಿದೆ. ಟೋಕಿಯೋ ಇಂಪೀರಿಯಲ್ ಯುನಿವರ್ಸಿಟಿಯ ಪ್ರೊಫೆಸರರಾದ ಪ್ರೊ–ಶ್ಚಿಂಚಿನೋಕಾಸುಗೆಯವರು ಒಂದು ಹೊಸ ರೀತಿಯನ್ನು ಕಂಡುಹುಡುಕಿದ್ದಾರೆ. ಹಿಂದಿನ ಕ್ರಮದಲ್ಲಿ ಬೆಳೆಸುತ್ತಿದ್ದ ಭತ್ತಕ್ಕಿಂತ ಮೂರುಪಾಲು ಹೆಚ್ಚು ಬೆಳೆಯುವಂತೆ ಅವರು ಅದರ ಉಪಾಯಗಳನ್ನು ಈ ರೀತಿ ತಿಳಿಸಿದ್ದಾರೆ.

ಕಳೆದ ಹತ್ತು ವರ್ಷಗಳ ಪ್ರಯತ್ನದಿಂದ ಈ ಸಂಶೋಧನೆಯು ಆಗಿದೆ. ಆ ಪ್ರೊಫೆಸರರು ಈ ಭತ್ತದ ಬೆಳೆಗೆ ಒಂದು ರಾಸಾಯನಿಕ ದ್ರವವನ್ನು ಕಂಡುಹುಡುಕಿದ್ದಾರೆ. ಇದನ್ನು ಹಾಕುವುದರಿಂದ ಬೆಳೆಯು ಹೆಚ್ಚುತ್ತದೆ.

ಆದರೆ ಇಂದು ಆ ರಾಸಾಯನಿಕ ದ್ರವದ ಬೆಲೆಯು ಅಪರಿಮಿತವಾಗಿದ್ದು, ಸಾಮಾನ್ಯರು ಅದನ್ನು ಉಪಯೋಗಿಸಿ ಲಾಭ ಪಡೆಯುವಂತಿಲ್ಲ. ಆದರೆ ಕೆಲವೇ ಸಮಯದಲ್ಲಿ ಸಾಮಾನ್ಯರಿಗೂ ಸಿಗುವ ರೀತಿಯಲ್ಲಿ ಆ ದ್ರವವನ್ನು ತಯಾರಿಸಬಹುದೆಂದು ಪ್ರೊಫೆಸರರು ಆಶಾವಾದಿಗಳಾಗಿದ್ದಾರೆ.

ಕ್ರಿಮಿಗಳು ಹಾಳುಮಾಡದ ಗೋಧಿ

ಕೆಲಿಫೋರ್ನಿಯೋ ಯುನಿವರ್ಸಿಟಿಯ ಪ್ರೊಫೆಸರರಾದ ಪ್ರೆಡ್ ಎಸ್ ಬ್ರಿಗ್ಗರವರು ಇನ್ನು ಮೂರು ನಾಲ್ಕು ವರ್ಷಗಳಲ್ಲಿ ಹೊಲಗಾರರಿಗೆ ಯಾವ ಕ್ರಿಮಿಗಳೂ ಹಾನಿಮಾಡದ ಹೊಸ ರೀತಿಯ ಗೋಧಿಯ ಬೀಜವೊಂದನ್ನು ಕೊಡುವುದಾಗಿ ಪ್ರಕಟಿಸಿದ್ದಾರೆ ಮಾತ್ರವಲ್ಲದೆ, ಈ ಸಂಶೋಧನೆಯಲ್ಲಿ ಅವರು ಯಶಸ್ವಿಯಾದರೆ, ಮುಂದಕ್ಕೆ ಗೋಧಿಯ ಉತ್ಪನ್ನವು ಹೆಚ್ಚಾಗಿ ದೇಶದ ಬೆಳೆಯಿಂದ ಸಂಪತ್ತು ಅಧಿಕವಾಗುವುದು. ಅವರು ಸೂಚಿಸುವ ರೀತಿಯ ಬೀಜವನ್ನು ತಯಾರಿಸುವಲ್ಲಿ ಏಳು ಕರದ ಬೀಜಗಳ ಸಸಿಯನ್ನು ನಟ್ಟು ಅ ಮೇಲೆ ಅಗತಕ್ಕದ್ದಿದೆಯೆಂದು ತಿಳಿದುಬರುತ್ತದೆ. ಏಳನೆಯಸಸಿಯ ಫಲಿತಾಂಶವೇ ಅವರು ಹೇಳುವಬೀಜವಾಗಿದೆ

ಒಳಗೆ ಕಾಣಿಸುವ ಚೀಲ

ಇತ್ತೀಚೆಗೆ ಹೆಂಗುಸರು ಕೈಯಲ್ಲಿ ಹಿಡಕೊಂಡು ತಿರುಗಾಡುವ ಬೇಗುಗಳಲ್ಲಿ ಒಳಗಡೆ ಕಾಣಿಸುವಂತಹ ಒಂದು ಕರದ ಚೀಲ ತಯಾರಾಗಿದೆ ಅದರ ಒಳಗಿರುವ ಪ್ರತಿಯೊಂದು ಸೂಕ್ಷ್ಮ ವಸ್ತುವೂ ಹೊರಗಡೆಯಿಂದ ಎಷ್ಟು ಸ್ಪಷ್ಟವಾಗಿ ಕಾಣಬಹುದೋ ಅಷ್ಟೇ ಸ್ಪಷ್ಟವಾಗಿ ಅದರೊಳಗಡೆಯಿಂದಲೂ ತೋರುತ್ತದೆ

ಬಾಳೆಹಣ್ಣಿನಲ್ಲಿ ಖನಿಜ ಗುಣಗಳು

ಬಾಳೆಹಣ್ಣಿನಲ್ಲಿ ಮುಕ್ಕಾಲು ಪಾಲು ತೇವ ಮತ್ತು ಕಾಲು ಪಾಲು ಶಾರೀರಿಕ ವರ್ಧಕ ವಸ್ತುಗಳೂ ಇವೆ.

ಉಳಿದ ಕಾಲು ಪಾಲಿನಲ್ಲಿ ನಾಲ್ಕನೇ ಒಂದಂಶ ಹಣ್ಣು ಸಕ್ಕರೆ ಅಥವಾ ಗ್ಲುಕೋಸ್. ಅದು ಬೇಗನೇಕರಗ ವಂತಹುದಾಗಿರುತ್ತದೆ. ದಿನದಿಂದ ದಿನಕ್ಕೆ ಶಕ್ತಿಪುಷ್ಟಿಗಳನ್ನು ಅದು ಹೆಚ್ಚಿಸುತ್ತದೆ.

ಸಂಪೂರ್ಣ ಹಣ್ಣಾದ ಬಾಳೆಹಣ್ಣಿನಲ್ಲಿ ಗ್ಲುಕೋಸ್ ಪ್ರಾಕೃತಿಕವಾಗಿ ತುಂಬಾ ಪ್ರಮಾಣದಲ್ಲಿ ಇರುತ್ತದೆ. ಪ್ರೊಟೀನ್, ಕೊಬ್ಬು, ಸ್ಟಾರ್ಚ್ ಮತ್ತು ಭಸ್ಮ ಮೊದಲಾದ ತುಂಬಾ ಖನಿಜ ಗುಣಗಳಿರುವ ವಸ್ತುಗಳು ಅದರಲ್ಲಿ ಇದೆ

ತಯಾರಾಗಿವೆ!
1940ನೇ
ಇಸವಿಯ
ಶಾರದಾ ಡೈರಿಗಳು
ಸಣ್ಣ ಮತ್ತು ದೊಡ್ಡ
ಸೈಜುಗಳಲ್ಲಿ
ಈಗಾಗಲೇ ಮಾರಾಟಕ್ಕೆ
ಸಿದ್ಧವಾಗಿವೆ!
ದೊರೆಯುವ ಸ್ಥಳ:–
ಶಾರದಾ ಛಾಪಖಾನೆ,
ಮಂಗಳೂರು.

SAVING & SPENDING

Every Rupee that you save adds materially to your present wealth for the satisfaction of a future want; while every Rupee that is spent leaves you poorer to that extent. Life's stormy voyage is a smooth sailing only for those who know this difference between SAVING and SPENDING and who have, by sheer force of will, built up a bulky Savings Bank Account.

The Canara Industrial & Banking Syndicate Ltd.

(Incorporated in British India)

ESTD) (1925

Head Office: UDIPI (S. India)

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಯಾತ್ರಾರ್ಥಿಗಳಿಗೆ — ಪುಣ್ಯಾರ್ಜನೆಗೆ — ಮಹೋತ್ಸವದ — ಅತ್ಯುತ್ತಮ ಸಂದರ್ಭ

ಬರುವ ತಾರೀಕು
6-12-39ರಿಂದ ತಾ 10-12-39ರ ವರೆಗೆ
ಶ್ರೀ ಧರ್ಮಸ್ಥಳ ದೀಪೋತ್ಸವ.
ಅತ್ಯುಜ್ವಲ ಸ್ಥಳಮಹಿಮೆ—ಅನ್ನದಾನದ ಉದಾರತೆ—ನಿಜ್ರಂಭಣೆಯ ದೀಪಾಲಂಕಾರ ಮತ್ತು ಉತ್ಸವದ ಸೊಬಗು
ಪಾಪನಾಶಿನಿ ನೇತ್ರಾವತಿ ನದಿಯ ತೀರ್ಥಸ್ನಾನದ ಅತ್ಯನುಕೂಲದ ಸಮಯ

ಶ್ರೀ ಧರ್ಮಸ್ಥಳ
ಲಕ್ಷ ದೀಪೋತ್ಸವ ಸಮಾರಂಭ
ಮತ್ತು
ಶ್ರೀ ಸುಬ್ರಮ್ಹಣ್ಯ
ಷಷ್ಠಿ ಮಹೋತ್ಸವ

ಬರುವ ತಾರೀಕು
8 12 39ರಿಂದ ತಾ 17-12-39ರ ವರೆಗೆ
ಲಕ್ಷದೀಪೋತ್ಸವ 10-12-39
ಹೂವಿನ ತೇರು 11-12-39
ಪಂಚಮಿ ರಥೋತ್ಸವ 16-12-39
ಶ್ರೀ ಸುಬ್ರಮ್ಹಣ್ಯ ಚಂಪಾಷಷ್ಠಿ ಮಹಾರಥೋತ್ಸವ 17-12-39
ಆದಿ ಸುಬ್ರಮ್ಹಣ್ಯದ ದಿವ್ಯ ಸಂದರ್ಶನ ಕುಮಾರ ಪರ್ವತದ ಸುಮನೋಹರ ನೋಟ—ಶ್ರೀ ಕುಮಾರ ಪರ್ವತದಿಂದ ಹರಿದು ಬರುವ ಪವಿತ್ರ ಕುಮಾರಧಾರಿ ನದಿಯ ಪುಣ್ಯ ದರ್ಶನ!

ಸಮಗ್ರ ಹಿಂದೂಗಳಿಂದ, ಶ್ರೀ ಧರ್ಮಸ್ಥಳ ಮತ್ತು ಶ್ರೀ ಸುಬ್ರಮ್ಹಣ್ಯ ಕ್ಷೇತ್ರಗಳು ಮಹಾಪವಿತ್ರ ಯಾತ್ರಾಸ್ಥಳಗಳೆಂದು ಪರಿಗಣಿಸಲ್ಪಟ್ಟು ಪ್ರತಿ ವರ್ಷವೂ ಅನೇಕ ಕಡೆಗಳಿಂದ ಲಕ್ಷಾಧಿಕ ಭಕ್ತವೃಂದವು ನೆರೆದುಬಂದು ಶ್ರೀ ದೇವರ ದರುಶನವನ್ನು ಪಡೆದು ಕೃತಾರ್ಥರಾಗುವರು—ಇಂಥಾ ಪುಣ್ಯ ಕ್ಷೇತ್ರಗಳನ್ನು ಸಂದರ್ಶಿಸಲು ಅಮೋಘವಾದ ಸುಸಮಯ

ಯಾತ್ರಾರ್ಥಿಗಳ ಸೌಕರ್ಯಕ್ಕಾಗಿ ಜಾತ್ರಾ ದಿವಸಗಳಲ್ಲಿ ನಮ್ಮ ಜಿಲ್ಲೆಯ ಎಲ್ಲಾ ಕಡೆಗಳಿಂದಲೂ ಸ್ಪೆಶಲು ಸರ್ವಿಸುಗಳನ್ನು ಚಾಲುಮಾಡುವ ಯೋಗ್ಯ ಏರ್ಪಾಡನ್ನು ಮಾಡಿರುತ್ತದೆ

ಹೆಚ್ಚಿನ ವಿವರಕ್ಕೆ ಈ ಕೆಳಗಿನ ಸಂಸ್ಥೆಗಳ ಜೊಯಿಂಟ್ ಮೆನೇಜರವರಿಗೆ ಬರೆದು ಅಥವಾ ಸ್ವತಃ ಕೇಳಿ ತಿಳಕೊಳ್ಳುವುದು—

JOINT MANAGERS,

The Combined Booking Agency,
MANGALORE

The Joint Booking Office,
KODIALBAIL.

(Regd)

ಅಮೃತಾಂಜನ

ತಲೆಬೇನೆ, ಶಿರೋವೇದನೆ ಉಳುಕು ಕುತ್ತಿಗೆ ಭುಜ, ಹಲ್ಲುವೇದನೆಗಳಿಗೂ ಎದೆನೋವು ಘಾಯಗಳು ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಪಕ್ಷವಾತ, ಪೆಗಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ಕುರಿಕೆ, ಕುರಿಕಜ್ಜಿ ಹುಳುಕಡ್ಡಿ ಏಕ್ಕ ಉಪದ್ರವ, ತಲೆಹುಣ್ಣು, ವಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

HOUNSA

ಹಂಸಾ ಸ್ನೋ
ಮತ್ತು
ಬ್ರಿಲ್ಲಂಟೈನ್
ಉಪಯೋಗಿಸಿರಿ

ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ನೇತ್ರರೋಗ, ಶರೀರ ದುರ್ಬಲತೆ, ನಿಸ್ತೇಜ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗೆ ಕೇ ನಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ ಚಾರ್ಜು ಪ್ರತೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಪ್ಲಾಯರ್ಸ್, ಪೆರಿಡೇಪಿ.
P. O. Peridepi (ನೆಲ್ಲೂರು ಜಿ.)

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುಡ್ಡು ಮುಡಿಗೆ	1 9 0	1—10 0
,, ದುಯಂ ,, ,,		
,, ಅವ್ವಲ್ ಸುಗ್ಗಿ ,,		—
,, ದುಯಂ ,, ,,		—
ಅಕ್ಕಿ ಅವ್ವಲ್ ಗುಡ್ಡು ,,	5 - 0 - 0	
,, ದುಯಂ ,, ,,	4—12 - 0	
,, ಅವ್ವಲ್ ಸುಗ್ಗಿ ,,	4 - 11 - 0	4 - 11 -
,, ದುಯಂ ,, ,,	4 - 6 - 0	4—8—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	30 - 0—0	45 — 0 - 0
,, ಸಿಪ್ಪೆ ಇದ್ದದ್ದು ,,	33 - 0—0	48 - 0 - 0
ಕೊಬ್ಬರಿ ಆಫೀಸು ಖಂಡಿಗೆ	62—8—0	—
,, ದಿಲ್‌ವಸಂದಿ ,,	— —	—
ತೆಂಗಿನ ಎಣ್ಣೆ ಮಣಕ್ಕೆ	4 - 5 — 0	4—5— 0
ಸಿಪ್ಪೆಯುದ್ದ ಅಡಿಕೆ 1000ಕ್ಕೆ	1—12—0	2 - 8 - 0
ಗೇರುಬೀಜ ಮುಡಿಗೆ	3 - 12—0	4 - 0—0
ಕಬ್ಬಿನ ಬೆಲ್ಲ ಖಂಡಿಗೆ	37—8 - 0	42—8 - 0
ಒಳ್ಳೇಮೆಣಸು ಹಂಡ್ರೆಡ್ಸೇಟಿಗೆ	15 — 0—0	16—8 0

Date 8-12-1939 ವಾರ್ಷಿಕ ಚಂದಾ ರೂ. 2-0-0 ಅಂಚೆ ವೆಚ್ಚ ಸೇರಿ ರೂ. 2-13-0 Regd. No. M 3406

ಸ್ವದೇಶಾಭಿಮಾನಿ

SWADESHABHIMANI

ಸಂಪುಟ 33] ತಾರೀಕು 8—12—1939 [ಸಂಚಿಕೆ 48

The Bombay Life Assurance Company, Ltd.,

(Estd. 1908)

COMPARE

Your Life Assurance with any other property you possess

What is its Guaranteed Value

If you live-today-a few years more-when you are old?
If you die-to your family and dependants?

REMEMBER THAT

If you live, Life Insurance takes the place of your professional income during your old age.

If you die, it provides your family with enough income for their maintenance and the education of your children.

"BOMBAY LIFE" offers all that is best in LIFE ASSURANCE.

1938 RECORD

Completed Business	Rs. 1,44,91,000
Life Assurance Fund	Rs. 1,17,69,748
Total Assets	Rs. 1,31,28,998

To insure or to represent it pays you to consult

KOCHIKAR BROTHERS LTD.,

MADRAS BRANCH SECRETARIES,

Bombay Life Building,

Sir Lalubhai Samaldas Road,

Gandhi Nagar, UDIPI

OR ANY OF THEIR FOLLOWING OFFICES,

Puthiyara, Calicut. Car Street, Mangalore. Visweswarapuram Circle, Bangalore City. Post Box No. 337 Mount Road, Madras.

Gautam Nivas, Charni Road, Girgaum, Bombay No. 4. Central Station Road, Trivandrum.

PHYSICAL FITNESS

is the first essential in games and in every social activity.

You need not worry hereafter for your impaired vitality premature old age and nervous break-down if you try

"BHUVANENDRA AMRITHPRASH"

which will tone the nervous system. build healthy tissues and enrich the blood.

Thus keeps you fresh and sprightly.

Bhuvanendra Products, Ltd.,

Katapady, S. Kanara.

(BRANCH—KUMTA, N. KANARA.)

Stockist: U. Paduranga Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು. ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್

ಕಟ್ಟಪಾಡಿ, — ದ. ಕನ್ನಡ

ಸ್ಥಳೀಯ ಸ್ವೀಕೆಸ್ಟರು: (ಬ್ರಾಂಚ್: ಕುಮಟೆ, ಉತ್ತರ ಕನ್ನಡ.)
ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.

Edited Printed & Published by A. S. Kamath at the Sharada Press, Car Street, Mangalore

Estd. 1906

ಸ್ವದೇಶಾಭಿಮಾನಿ

SWADESHABHIMANI

KANNADA ILLUSTRATED WEEKLY

ಹರ್ ಹಿಟ್ಲರನಿಗೆ ದೂರದ ಆಫ್ರಿಕದಿಂದಲೂ ವಿರೋಧ

ಉನ್ನತಿಯ ಶಿಖರವೇರಿದವನಿಗೆ ಪತನವೊಂದೇ ದಾರಿಯಾಗಿದೆ

ಹಿಟ್ಲರನ ನಿರಂಕುಶ ಪ್ರವರ್ತನೆ ಮತ್ತು ರಾಕ್ಷಸೀ ಮಹತ್ವಾಕಾಂಕ್ಷೆಗೆ ಯೂರೋಪದಲ್ಲಿ ಮಾತ್ರವಲ್ಲ ದೂರ ದೂರದ ವಸಾಹತುಗಳಿಂದಲೂ, ನಾಗರಿಕತೆಯ ಅತಿ ಕೆಳಗಿನ ಮೆಟ್ಟಲಿನಲ್ಲಿರುವ ನಿಗ್ರೋ ಜನತೆಯಿಂದಲೂ ವಿರೋಧವು ಪ್ರಬಲವಾಗುತ್ತ ಬರುತ್ತಲಿದೆ.

ಕರ್ಮಫಲ

ಹಿಟ್ಲರನು ತನ್ನ ಕರ್ಮದ ಫಲವನ್ನು ಉಣ್ಣುತ್ತಿರುವನಾಗಿ ಆಫ್ರಿಕದ ನಿಗ್ರೋ ಜನರು ಹೇಳುತ್ತಿರುವರು ಅವನು ತಾನು ಬರೆದ ಮೈನಕೇಂಫ ಎಂಬ ಗ್ರಂಥದಲ್ಲಿ ನಿಗ್ರೋ ಜನರನ್ನು ಮನುಷ್ಯಾತೀತಗಳಿ ಅವರು ನೀರನೆತ್ತುವುದು ಮತ್ತು ಕಟ್ಟಿಗೆ ಕಡಿಯುವುದು ಅಲ್ಲದೆ ಬೇರೆ ಯಾವ ಉದ್ಯೋಗ ವೃತ್ತಿಗೂ ಯೋಗ್ಯರಲ್ಲವೆಂದು ಮನಸ್ಸಿಗೆ ಬಂದ ಹಾಗೆಲ್ಲಾ ಬರೆದು ನಿಂದಿಸಿದ್ದಾನೆ, ಜನರಿಗೆ ಅವನ ಮೇಲೆ ಯಾವ ಸದಭಿಪ್ರಾಯವೂ ಇರುವುದಿಲ್ಲ ಮಾತ್ರವಲ್ಲ, ಅವರು ಅವನನ್ನು ಹೃದಯ ಮನಸ್ಸುಗಳಿಂದ ದ್ವೇಷಿಸುತ್ತಿದ್ದಾರೆ,

ವಿಚಿತ್ರ ವ್ಯಾಜ್ಯ

ಯೂರೋಪದ ಯುದ್ಧದಲ್ಲಿ ತಮ್ಮ ಸಹಾಯ ಬೆಂಬಲಗಳು ಯಾರ ಕಡೆಗೆ ಇರಬೇಕೆಂದು ನಿರ್ಣಯಿಸುವ ಕಡೆವು ಬೇರೆ ಬೇರೆ ನಿಗ್ರೋ ಜಾತಿಗಳಲ್ಲಿ ಒಂದೊಂದು ಪ್ರಕಾರವಾಗಿ ಇರುತ್ತದೆ. ಗೋಲ್ಡ್ ಕೋಸ್ಟ (ಸುವರ್ಣದಂಡೆ) ಎಂಬ ಆಫ್ರಿಕದ ಪ್ರದೇಶದ ಒಂದು ನಿಗ್ರೋ ಜಾತಿಯಲ್ಲಿ ಈ ಪ್ರಶ್ನೆಯನ್ನು ಉತ್ತರಿಸುವುದಕ್ಕೆ ಒಂದು ವಿಚಿತ್ರ ವ್ಯಾಜ್ಯವು ನಡೆಯಿತು. ಆ ಜಾತಿಯ ಅರಸು, ಮಂತ್ರಿಗಳು ಮತ್ತು ಪ್ರಮುಖ ಒಂದು ಸಭೆಯು ಕೂಡಿ, ಅದರಲ್ಲಿ ಅರಸು ಬ್ರಿಟಿಷರ ಮತ್ತು ಜರ್ಮನರ ಕಡೆಯಿಂದ ಹೇಳಿಕೆಯನ್ನು ಕೊಟ್ಟನು ಪಂಚಾಯತರು ಆ ಹೇಳಿಕೆಗಳನ್ನು ಕೇಳಿ, ಪರಸ್ಪರ ಪರಾಮರ್ಶೆ ತೆಗೆದುಕೊಂಡು ವಿವಾದದ ತೀರ್ಮಾನವನ್ನು ಕೊಡುವುದಕ್ಕೋಸ್ಕರ ಒಳಕ್ಕೆ ನಡೆದರು ಅವರ ಪ್ರಮುಖನು ಸ್ವಲ್ಪ ಸಮಯದ ನಂತರ ಹೊರಗೆ ಬಂದ ಆ ಜಾತಿಯ ಸಹಾಯ ಬೆಂಬಲಗಳು ಬ್ರಿಟಿಷರವಾಗಿ ಇರ್ಬೇಕೆಂಬ ತಮ್ಮ ತೀರ್ಮಾನವನ್ನು ಕೊಟ್ಟನು ಕೂಡಿದವರೆಲ್ಲರೂ ಈ ಇತ್ಯರ್ಥವನ್ನು ಒಪ್ಪಿ ಬ್ರಿಟಿಷ ಬಾದಶಹನ ಈ ವ್ಯಾಜ್ಯದಲ್ಲಿ ಗೆದ್ದನೆಂದು ಅವನಿಗೆ ಮೂರು ಬಾರಿ 'ಹಿಟ್ಲರ್ ಕಿದಿಧಿಮ್' ಎಂದು ಕೂಗಿ ತಮ್ಮ ಮನೆಗೆ ಹೊರಟು ಹೋದರು

ಬ್ರಿಟಿಷರಿಗೆ ಸಹಾಯ

ಯುದ್ಧಕಾಲದಲ್ಲಿ ಬ್ರಿಟಿಷರಿಗೆ ಯಾವ ಪ್ರಕಾರ ಸಹಾಯವನ್ನು ಕೊಡಬಹುದು ಎಂಬ ಕುರಿತು ಈಗ ಈ ನಿಗ್ರೋ ಜಾತಿಗಳು ಆಲೋಚಿಸಿ ಸಲಹೆಗಳನ್ನು ತೆಗೆದು ಕೊಳ್ಳುತ್ತಾ ಇವೆ ಅಂತೂ ಹಿಟ್ಲರ ಎಂಬುದು ಯಾರಿಗೂ ಬೇಡವಾದ ಒಡವೆಯಾಗಿ ಪರಿಣಮಿಸಿದೆ

ಸರ್ ಸ್ಟಾಫೋರ್ಡ್ ಕ್ರಿಪ್ಸ್ ಬ್ರಿಟನಿನ ಕೂಲಿಗಾರ ಮುಖಂಡರ ಆಗಮನ

'ಭಾರತರ ವಿಷಯ ಬ್ರಿಟನಿನಲ್ಲಿ ಸಹಾನುಭೂತಿ ಹೆಚ್ಚಿದೆ'

ಸರ್ ಸ್ಟಾಫೋರ್ಡ್ ಕ್ರಿಪ್ಸರವರು ತಾ. ೭ರಂದು ಕರಾಚಿಯಲ್ಲಿ ಬಂದಿಳಿದರು. ಪತ್ರಿಕಾ ಪ್ರತಿನಿಧಿಯೊಡನೆ ಅವರು ಭಾರತ ಮತ್ತು ಬ್ರಿಟನುಗಳ ಸಂಬಂಧದ ಕುರಿತು ಹೀಗೆಂದು ಹೇಳಿದರು:

"ಭಾರತ ಮತ್ತು ಬ್ರಿಟನುಗಳೊಳಗೆ ಒಂದು ರೀತಿಯ ಯೋಗ್ಯ ಇತ್ಯರ್ಥ ಮಾಡಬೇಕೆಂದು ಬ್ರಿಟನಿನಲ್ಲಿ ಎಲ್ಲರಿಗೂ ಇಚ್ಛೆ. ಬೇಗನೇ ಹಾಗೆ ಆಗಬಹುದು. ಭಾರತದ ಪರವಾಗಿ ಇಂಗ್ಲೆಂಡಿನಲ್ಲಿ ಒಳ್ಳೆಯ ಪ್ರಚಾರ ಸಾಗುತ್ತಿದೆ. ನಾನು ಇಲ್ಲಿನ ಪರಿಸ್ಥಿತಿಗಳನ್ನು ಕಂಡು, ಎಲ್ಲಾ ಪಕ್ಷದ ವ ಮುಖಂಡರನ್ನು, ವೈಸರಾಯರನ್ನೂ ಕೂಡ ಮಾತನಾಡಿಸಲು ಬಂದಿರುವೆನು. ಇಂದು ಭಾರತದ ಅಲ್ಪಸಂಖ್ಯಾಕ ಮತ್ತು ಆಶ್ರಿತರಾಜರ ಸಮಸ್ಯೆಯ ಪರಿಹಾರವಾಗಿ ಒಂದು ಯೋಜನೆಯನ್ನು ಮುಂದಿಡ ತಂದು ನಿವೃತ್ತಿಗೊಳಿಸಬೇಕು. ಸ್ವಾರ್ಥಪರವಾದ ಕೆಲವರ ಕೆಲವು ಪ್ರಾಮುಖ್ಯ ವಿಚಾರಗಳು ತೀರ್ಮಾನವಾದ ಮೇಲೆ ಬಾಕಿಯ ವು ತಮ್ಮಷ್ಟಕ್ಕೇ ಸಮಾಧಾನ ಹೊಂದುವುವು

ಯುದ್ಧದ ಕುರಿತು ಪ್ರಶ್ನೆ ಹೂಡಿದಾಗ ಹೀಗಂದರು:

"ಬ್ರಿಟನ್ ಫ್ರಾನ್ಸುಗಳಲ್ಲಿ ಎಲ್ಲಾ ಪಕ್ಷದವರೂ ಏಕ ಮತದಿಂದ ಇಂದಿನ ಯುದ್ಧದಲ್ಲಿ ಕಡೆತನಕ ಹೋರಾಡಲು ಸಿದ್ಧರಾಗಿದ್ದಾರೆ ಸಮುದ್ರ ಸಂಚಾರವನ್ನು ತಡೆದುದರಿಂದ ಜರ್ಮನು ಬಹಳ ಸಂಕಷ್ಟಕ್ಕೀಳಾಗಿದೆ ಪ್ರಬಲ ರಾಷ್ಟ್ರಗಳು ತತ್ಕಾಲಕೆ ರಾಜಿಯಾಗುವಂತೆ ಇಲ್ಲ."

ರಶ್ಯನ್ ಲೆಂಡುಗಳ ವಿಷಯ ಮಾತನಾಡುತ್ತ ಫಿನ್‌ಲೆಂಡಿನೊಡನೆ ರಶ್ಯವು ಕೇಳಿದ ಕೇಳಿಕೆಯು ಸಕಾರಣವೆಂದೂ ಆದರೆ ಕೇಳಿಕೆಯನ್ನು ಪಡೆಯಲು ಕುವ ಯೋಗಿಸಿದ ರೀತಿಯು ದೌರ್ಭಾಗ್ಯದ್ದೆಂದೂ ಹೇಳಿದರು

ಬ್ರಿಟನಿನ ಎಲ್ಲಾ ಪಕ್ಷದ ಮುಖಂಡರನ್ನೂ ಹಿಂದೂದೇಶಕ್ಕೆ ಕಳುಹಿಸಿ ಇಲ್ಲಿನ ಪರಿಸ್ಥಿತಿಯನ್ನು ತಿಳಿಕೊಳ್ಳುವ ವಿಚಾರವು ಆಗುತ್ತಿದೆಯೆಂದರು ಭಾರತ, ರಶ್ಯ ಚೈನಗಳಿಗೆ ಮುಂದಕ್ಕೆ ಸೌಭಾಗ್ಯವು ಒದಗಲಿದೆಯೆಂದರು. ಇಂಗ್ಲೆಂಡಿನಲ್ಲಿ ಭಾರತ ಸಂಘವನ್ನು ಸ್ಥಾಪಿಸಿದ ಶ್ರೀ ಕೃಷ್ಣಮೇನನರ ಸಾಹಸವನ್ನು ಅವರು ಕೊಂಡಾಡಿದರು

ಸರ್ ಕ್ರಿಪ್ಸರು ಇಲ್ಲಿ ಹದಿನೆಂಟು ದಿನಗಳ ವರೆಗೆ ಇರುವರು. ಕೆಲ ಸಮಯ ನೆಹರುಗಳ ಆತಿಥಿಗಳಾಗಿರುವರು.



ಒಂದು ಪೆಟ್ಟಿಗೆ ಜ್ಹಾಂಬಕನ್ನು ಯಾವಾಗಲೂ ಹತ್ತಿರ ಇಟ್ಟುಕೊಳ್ಳಿರಿ!

ಗಾಯುಗಳನ್ನೂ ವ್ರಣಗಳನ್ನೂ ಕೂಡಲೇ ಗುಣಪಡಿಸುವುದು

ನಿಮ್ಮ ಚರ್ಮವ್ಯಾಧಿ ಯಾ ಗಾಯುಗಳು ಯಾವ ತರದ್ದೇ ಇರಲಿ ಅದರ ಮೇಲೆ ಜ್ಹಾಂಬಕನ್ನು ಸವರಿರಿ, ಇದು ಗಾಯುಗಳನ್ನೂ ವ್ರಣಗಳನ್ನೂ ಗುಣಪಡಿಸಿ ವಿಷಾಣುಗಳನ್ನು ತಡೆಯಲೂ ಯೋಗ್ಯವೂ ಪಾತ್ರಿಯೂ ಆದ ಹಾದಿಯಾಗಿರುತ್ತದೆ. ಜ್ಹಾಂಬಕನಿನಲ್ಲಿರುವ ಅಮೂಲ್ಯವಾದ ಗಿಡಮೂಲಿಕೆಗಳ ಎಣ್ಣೆಯೂ ನರನಾಡಿಗಳನ್ನು ಆಳವಾಗಿ ಹೊಕ್ಕು ನೋವನ್ನು ಗುಣಪಡಿಸುತ್ತದೆ, ಬಾತುಬಿಳೆಯನ್ನು ಕಡಿಮೆಮಾಡುತ್ತದೆ ಮತ್ತು ರಕ್ತಗೆಲ್ಲರದಂತೆ ಒಣಗಿಸುತ್ತದೆ ಜ್ಹಾಂಬಕ ಚರ್ಮವನ್ನು ನಿರ್ಮಲವಾಗಿರಿಸಿ ಒಂದೂಕಳೆಯನ್ನುಂಟುಮಾಡದೆ ಗುಣಪಡಿಸುವುದು ಗಾಯ, ಸುಟ್ಟಗಾಯ, ವ್ರಣ, ಮೂಲವ್ಯಾಧಿ ಮತ್ತು ಗಜಕರ್ಣಕ್ಕೆ ಇದರಷ್ಟು ಉತ್ತಮವಾದ ಔಷಧಿಯು ಬೇರೊಂದಿಲ್ಲ. ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿ ಮಾರಲ್ಪಡುತ್ತದೆ ಕ್ರಯ ರೂ. 1 ಮತ್ತು 2 4-0

ಪಜಂಟ್ಸ್ ಮೆಸರ್ಸ್ ದಾಧಾ ಮತ್ತ ಕಂಪೆನಿ, ಪಾರ್ಕ್‌ಟೌನ್ ಮದರಾಸು

ಯಾವಾಗಲೂ ಜ್ಹಾಂಬಕನ್ನು ಪಯೋಗಿಸಿರಿ

ZAM-BUK

ಪ್ರಾಣಿಕೊಟ್ಟಿನಿಂದ ವಿರಹಿತವಾದುದು

CANARA BANK LIMITED

Head Office **Mangalore**

A net work of 37 branches

Alleppey	Calicut	Karkala
Arsikere	Cannanore	Kasaragode
Badagara	Chira	Kavaimkulam
Bangalore	Chickmagalur	Kumbla
Bantwala	Cochin	Mangalore Bander
Belgaum	Coondapoor	Mangalore City
Beltlangady	Davangere	Manjeshwar
Bombay Fort	Dharwar	Moolky
Bombay Mandvi	Doddballapur	Payyannur
Bombay Girgaum	Ernakulam	Puttur
Bombay Kalbadevi	Gangulli	Quilon
Bombay Parel	Hubli	Udipi
		Uppinangady

ಮಕ್ಕಳಿಗೆ ಡೋಂಗರೆ ಬಾಲಾಮೃತವು

ಆದರ್ಶಕರವಾದ ಪೌಷ್ಟಿಕ.

ಇದರಿಂದ ಒಳಜ್ವರ ಮತ್ತು ಕೆಮ್ಮು ಇಲ್ಲದಂತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ

"ನ ನಿಶ್ಚಿತಾರ್ಥಾ ದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

15—12—1939] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೧೫—೧೨—೧೯೩೯

ಚರಕದಲ್ಲಿ ಮಾಂತ್ರಿಕ ಶಕ್ತಿಯಿಲ್ಲ; ಆರ್ಥಿಕ ರಾಜಕೀಯ ಮಹತ್ವಗಳಿವೆ!

ಯುವಕರಿಗೆ ನೆಹರುಗಳ ಪಾಠ

ಜೋಸರಿಗೆ ಬಂಗಾಳದ ಹಿರಿಯರ ಬುದ್ಧಿವಾದ

ನಂದಿಕ ಜವಾಹಿರಲಾಲ ನೆಹರುಗಳು ಚರಕಾ ಹಿಡದು ನೂಲುತ್ತಾರೆಯೆ? ಈ ಪ್ರಶ್ನೆಗೆ ಮುತ್ರಾದಲ್ಲಿನ ಒಂದು ಭಾಷಣದಲ್ಲಿ ನೆಹರುಗಳೇ ವಿವರವಾಗಿ ಉತ್ತರಿಸಿರುವರು!

"ಆರ್ಥಿಕ, ರಾಜಕೀಯ ಕ್ಷೇತ್ರದಲ್ಲಿ ಚರಕವು ನಮಗೆ ಬಹಳ ನೆರವನ್ನು ಕೊಟ್ಟಿದೆ ಆದರೆ ಚರಕವು-ಮಂತ್ರಶಕ್ತಿಯುಳ್ಳದ್ದೆಂದು ನಾನು ನಂಬಲಾರೆ ಇದು ಕೇವಲ ನನ್ನ ಆರ್ಥಿಕರಾಜಕೀಯ ಶಸ್ತ್ರವಾಗಿದೆ. ನನಗೆ ಗಾಂಧಿಜಿಯವರು ಹೇಳುವ ಅನೇಕ ವಿಷಯಗಳು ಹೃದಯಕ್ಕೆ ಒಪ್ಪಿಗೆಯಾಗುವುದಿಲ್ಲವಾದರೂ ಪ್ರತಿಯೊಬ್ಬನೂ ತಿಳಿಯಬಹುದಾದಂತಹ ಕೆಲವು ಉದಾತ್ತ ಕಾರಣಗಳ ನಿಮಿತ್ತ ಚರಕವೇನೋ ಬಹಳ ಮಹತ್ವವುಳ್ಳದ್ದೆಂದು ನಾನು ತಿಳಿದಿದ್ದೇನೆ

"ನಾನು ಹಿಂದೆ ನಿರಂತರ ಚರಕದಲ್ಲಿ ನೂಲುತ್ತಿದ್ದೆ. ಕಳೆದ ನಾಲ್ಕು ವರ್ಷಗಳಿಂದ ಅಭ್ಯಾಸ ಬಿಟ್ಟಿದ್ದೆ. ಆದರೆ ಚೈನದಿಂದ ಮರಳಿ ಒಂದ ಮೇಲೆ, ತಿರಿಗಿ ಚರಕದ ಕಡೆಗೆ ಮನಸ್ಸು ಹೋಗಿ ಹೊಸತೊಂದನ್ನು ತೊಗಲುಕೊಂಡಿದ್ದೇನೆ ನಾನು ನೆರೆಮನೆಗೆ ಹೋಗುವ ಸಂಭವಗಳನ್ನು ಬಿಟ್ಟಿಸುತ್ತೇನೆ ಅಲ್ಲಿ ಇದೇ ನನಗೆ ಒಳ್ಳೇ ಉದ್ಯೋಗವಾದೀತು. ನಾನು ಚರಕದ ಅಂಧವಿಶ್ವಾಸಿಯಲ್ಲ. ನನಗೆ ಸಕಾರಣವೆಂದು ತೋರದಿರುವುದನ್ನು ನಾನು ಅಂಗೀಕರಿಸಲಾರೆ. ಚರಕಕ್ಕೆ ರಾಜಕೀಯ ಪ್ರಾಧಾನ್ಯತೆಯಿದೆ. ಆದರೆ ಕಳೆದ ನಲ್ವತ್ತು ವರ್ಷಗಳ ಅನುಭವವಿಲ್ಲದ ತರುಣರು ಕೆಲವರು, ಕಾಂಗ್ರೆಸಿನಲ್ಲಿ ಸಹಜವಾಗಿ ಅವರು ಹೊಸ ರಕ್ತಸಂಚಾರವಾಗುವಂತೆ ಮಾಡಿದ್ದರೂ ಚರಕದ ಮಹತ್ವವನ್ನು ತಿಳಿದುಕೊಂಡಿಲ್ಲ."

"ಚೈನೀಯರು, ನನ್ನೊಡನೆ ಭಾರತದ ಉದ್ಯೋಗಿಕ ವಿಷಯಗಳ ಕಡೆಗೆ ಪ್ರಶ್ನೆ ಮಾಡಿದುದು ಮಾತ್ರವಲ್ಲದೆ, ಚರಕದ ವಿಷಯಗಳನ್ನು ಕೇಳಿದರು. ಭಾರತದಲ್ಲಿ ಹೆಚ್ಚು ಹೆಚ್ಚು ಉದ್ಯೋಗಗಳು ಬೆಳೆಯಬೇಕೆಂಬ ಉತ್ಸಾಹದಲ್ಲಿ ನಾನು ಇತರರಿಗಿಂತ ಕಡಿಮೆ ಉತ್ಸಾಹದವನಲ್ಲ. ಆದರೆ ನಾವು ವಿಷಯಗಳನ್ನು ವಿಮರ್ಶೆಗೆ ತಂದುಕೊಳ್ಳಬೇಕು. ನಮ್ಮ ಎಲ್ಲಾ ಸಮಸ್ಯೆಗಳನ್ನೂ ನಾವು ದೊಡ್ಡ ಕಾರ್ಖಾನೆಗಳನ್ನು ತೆರೆಯುವುದರಿಂದ ಪರಿಹರಿಸಲಾರೆವು ನಮ್ಮಲ್ಲಿ ಜನಸಂಖ್ಯೆಯು ಹೆಚ್ಚಿದೆ."

"ಕೃಷಿಯಲ್ಲಿ ಯಂತ್ರಗಳ ಉಪಯೋಗವು ರಶಿಯಾದಂತಹ ಹೆಚ್ಚು ನೆಲವಿರುವ ದೇಶಗಳಲ್ಲಿ ಅದೀತೆಲ್ಲಿದೆ ಪೋರ್ಡರ ಯಂತ್ರಗಳನ್ನು ನಮ್ಮಲ್ಲಿ ಕೃಷಿಕರು ಉಪಯೋಗಿಸಿ ಪ್ರಯೋಗಿಸಿ ಪ್ರಯೋಗಿಸುತ್ತಾರೆ. ಹಾಗೆ ದೂರುವವರ ವಿಷಯ ನಾನೇನೂ ಹೇಳಲಾರೆ ಆದರೆ ವಿಜ್ಞಾನವನ್ನೂ ನಾನೂ ಅಭ್ಯಾಸಮಾಡಿದ್ದೇನೆ. ಹಲವು ಅಂತಹ ಟೀಕಾಕಾರರು ಹುಟ್ಟುವುದಕ್ಕಿಂತ ಮೊದಲೇ ನಾನು ವಿಜ್ಞಾನದಲ್ಲಿ ಪದವೀಧರನಾಗಿದ್ದೇನೆ."

"ಚರಕವು ನಮಗೆ ಆರ್ಥಿಕ ಶಸ್ತ್ರವೆನಿಸುವುದಿಲ್ಲವೆಂದು ಹೇಳುವವರ ಅಭಿಪ್ರಾಯವು ಅಪ್ರಬುದ್ಧವು. ನಾನು ಗಾಂಧಿಜಿಯವರ ವಿಚಕ್ಷಣತೆಯ ವಿಷಯವಾಗಿ ಬಹಳ ಗೌರವವುಳ್ಳವನಾದರೂ ಅವರು ಹೇಳಿದ್ದನ್ನೆಲ್ಲಾ ಒಪ್ಪಲಾರೆ ಚೈನೀಯರು, ಇಂದು ಹಲವು ಜನರನ್ನು ಭಾರತಕ್ಕೆ ಕಳುಹಿಸಿ, ಇಲ್ಲಿ ಚರಕಾ, ಜನವಿಲ್ಲ ಈ ವಿಷಯದಲ್ಲಿ ನಾನು ಪೋರ್ಡರೊಡನೆಯೇ ಮಾತನಾಡಿದಾಗ ಅವರು ಜನಸಂಖ್ಯೆಯು ಹೆಚ್ಚಿರುವ ನಮ್ಮ ದೇಶದಲ್ಲಿ ಕೃಷಿಗೆ ಯಂತ್ರ ಉಪಕರಣವು ಪ್ರಯೋಜನವಿಲ್ಲೆಂದರು ನನಗಿದು ಸರಿಯೆಂದು ತೋರುತ್ತದೆ ಅವರೆ ಕೆಲ ವಿಜ್ಞಾನೆ ವಿಶಾರದರೆನಿಸಿದ ತರುಣ ಟೀಕೆಕಾರರು ಹೀಗೆ ಹೇಳುವವರನ್ನು ಸಂಶಯಾತ್ಮರೆಂದೂ ಭ್ರಾಂತರೆಂದೂ ಕರೆಯು[illegible] ಪಾದೀ ಕೈಗಾರಿಕೆಗಳನ್ನು ಕಲಿಯಲು ವರ್ಸಾಡುಮಾಡಬೇಕೆಂದು ವಿಚಾರಿಸಿ ಜ್ಞಾರೆ ಗಾಂಧಿಜಿಯವರು ನನ್ನನ್ನು ಮನ್ನಡೆಸಬೇಕೆಂದರು ಸರಿವಾಗಿ, ಚರಕದ ತತ್ವವನ್ನು, ಗಾಂಧಿಜಿಯವರನ್ನು ಮೋಸಗೊಳಿಸುವುದಕ್ಕೆನಾವು ಅಂಗೀಕರಿಸಲಿಲ್ಲ ಚರಕವು ಮುಂದಿನ ಯುದ್ಧಕ್ಕೆ ನಮ್ಮನ್ನು ಯೋಗ್ಯ ಶಿಕ್ಷಣ ಕೊಟ್ಟು [illegible]

ಜವಾಬ್ದಾರಿಯನ್ನು ಅಲ್ಲಗೆಳೆಯುವಿಕೆ

ಹಿಂದೆ ವಿಶ್ವಾಮಿತ್ರನು, ಮೇನಕೆಯ ಬಸುರಲ್ಲಿ ತನಗೆ ಒಂದು ಮಗು ಹುಟ್ಟಿಲು ತನ್ನ ಪಿತೃವಿನ ಜವಾಬ್ದಾರಿಯನ್ನು ಅಲ್ಲಗೆಳೆದು ಮಗುವನ್ನು ತಾಯಿಯ ಪಾದಿಗೆ ಬಿಟ್ಟು ತೆರಳಿ ಬಿಟ್ಟಿದ್ದನು ಸೋಶಿಯಲಿಸ್ಟ್ ತತ್ವದ ವಿಷಯದಲ್ಲಿ ನೆಹರುಗಳ ಮೊದಲನೆಯ ಪ್ರವರ್ತಕರಾಗಿ ಮತ್ತು ಜೋಸರೊಡನೆ ಬಹಳ ಅನ್ಯೋನ್ಯತೆಯಿಂದಿದ್ದರು. ಆದರೆ ಸುಬಾಸರ ಬಸುರಲ್ಲಿ ಹುಟ್ಟಿದ ಸೋಶಿಯಲಿಸ್ಟ್ ಹೊಸ ಪಕ್ಷಕ್ಕೆ ನೆಹರುಗಳು ಬಹಿಷ್ಕಾರ ಹಾಕಿ ಅಲ್ಲಗೆಳೆದಿದ್ದಾರೆ!

"ಕೇವಲ ಗುಲ್ಲಿನಿಂದ ನಮ್ಮಲ್ಲಿ ಕ್ರಾಂತಿಯಾಗಲಾರದು. ಕೃಷ್ಟಿರಿಗೆ, ಚೈಲಿಗೆ ಹೋಗಲು ತಯಾರಾಗಿರಿ ಎಂದು ಹೇಳುವುದರಿಂದ ಪ್ರಯೋಜನವಿಲ್ಲ. ಅವರ ಕೈಗೆ ಚರಕಾ ಕೊಡಬೇಕು. ಅದೇ ಅವರ ಯುದ್ಧತಯಾರಿ. ಅವರು ಅದನ್ನು ಜಾಗರೂಕತೆಯಿಂದ, ತೀವ್ರಪರಿಣಾಮಕಾರಿಯಾಗುವ ರೀತಿಯಿಂದ, ಪೂರ್ಣ ಮನಸ್ಸಿನಿಂದ ಅಂಗೀಕರಿಸಬೇಕು."

'ಸಂದೇಹಗ್ರಸ್ತರು ದೂರನಿಲ್ಲಬೇಕು'

ಜೋಸರಿಗೆ ಬಂಗಾಳದ ಧುರೀಣರ ಸೂಚನೆ

ಬಂಗಾಳದ ವೃದ್ಧ ಕಾಂಗ್ರೆಸ್ ಧುರೀಣರಾದ ಶ್ರೀಯುತ ಹರದಯಾಲ ನಾಗರವರು ಶ್ರೀ ಸುಭಾಸಚಂದ್ರರಿಗೆ ಒಂದು ಸೂಚನೆ ಕೊಡುತ್ತಾ ತಮ್ಮೊಂದು ಪ್ರಕಟಣೆಯಲ್ಲಿ ಈ ರೀತಿಯಾಗಿ ಹೇಳುತ್ತಾರೆ.

ಇಂದು, ಕಾಂಗ್ರೆಸು ಸ್ವಾತಂತ್ರ್ಯಕ್ಕಾಗಿ ಯುದ್ಧಹೂಡಿರುವಾಗ, ಒಂದೋ ಕಾಂಗ್ರೆಸನ್ನು ನೀವು ಸೇರಿ ಸಹಾಯ ಕೊಡಿರಿ, ಇಲ್ಲವಾದರೆ, ಸ್ವಲ್ಪ ಸಮಯದವರೆಗಾದರೂ ಕಾಂಗ್ರೆಸಿಂದ ದೂರವಿಲ್ಲಬೇಕು. ಬಂಗಾಳದ ಎಲ್ಲಾ ಕಾಂಗ್ರೆಸ್ ಕೆಲಸಗಾರರೂ, ಇಂದು ಬಂಗಾಳ ಕಾಂಗ್ರೆಸಿನಲ್ಲಿ ಆಗುವ ದುರ್ಘಟನೆಗಳನ್ನು ತಪ್ಪಿಸಲು ತಮ್ಮಿಂದ ಸಾಧ್ಯವಾದ ಎಲ್ಲಾ ಸಹಾಯಗಳನ್ನು ಮಾಡಬೇಕು. ಇಂದು ಭಾರತವು ಸ್ವಾತಂತ್ರ್ಯ ಯುದ್ಧರಂಗದ ಮುಂದಲ್ಲಿದೆ ಮುಖ್ಯವಾದ ವಿಷಯವೆಂದರೆ ಭಾರತವು ಅಹಿಂಸೆಯ, ರಕ್ತಸೇಚನವಾಗದ ಸತ್ಯಸಂಗ್ರಾಮದಲ್ಲಿ ಹೊತಗಿದೆ. ಇಂತಹ ಯುದ್ಧಕ್ಕೆ ಸಿದ್ಧರಾದುವ ಸೈನಿಕರು ಅಹಿಂಸೆ ಮತ್ತು ಸತ್ಯಗಳಲ್ಲಿ ಅತಿ ವಿಶ್ವಾಸವುಳ್ಳವರಾಗಿರುವುದು ಅವಶ್ಯವಾಗಿದೆ ಅದುದರಿಂದ ಯಾರು ಸ್ವಾತಂತ್ರ್ಯವನ್ನು ಸತ್ಯ ಅಹಿಂಸೆಗಳಿಂದ ತಡೆಯಲು ಸಾಧ್ಯವಿಲ್ಲವೆಂದು ಸಂಶಯಪಡುತ್ತಾರೋ ಅಂಥವರು, ಸತ್ಯ, ಅಹಿಂಸೆಗಳಿಂದಲೇ ಸ್ವಾತಂತ್ರ್ಯವನ್ನು ಪಡೆಯುವ ವಿಷಯದಲ್ಲಿ ನಿಶ್ಚಯವಿದ್ದವರಿಗೆ ಇಂದು ಸಂದರ್ಭವನ್ನು ಒದಗಿಸಿಕೊಡಬೇಕು."

ಶಾಂತಿನಿಕೇತನದಲ್ಲಿ ಚೀನೀಕಲಾವಿದರು

ರವೀಂದ್ರ ಠಾಗೂರರಿಂದ ಆಹ್ವಾನಿತರಾದರು

ಶಾಂತಿನಿಕೇತನದ ಕಾರ್ಯದರ್ಶಿಯಾಗಿರುವ ಡಾ ರವೀಂದ್ರನಾಥ ಠಾಗೂರರ ಆಹ್ವಾನದ ಮೇರೆಗೆ ಚೈನದ ತರುಣ ಕಲಾವಿದರಾದ ಪ್ರೊ ಜುಸಿಯೊನ್ ಎಂಬವರು ಬಂದಿದ್ದಾರೆ.

ಆ ಕವಾವಿದರ "ಓಡುವ ಕುದುರೆ" ಎಂಬ ಚಿತ್ರವು ಠಾಗೂರರ ಮನಸ್ಸನ್ನು ಬಹಳವಾಗಿ ಆಕರ್ಷಿಸಿತು. ಹಾಗಾಗಿ ಠಾಗೂರರು ಅವರನ್ನು ಶಾಂತಿನಿಕೇತನಕ್ಕೆ ಬಂದು ಇಲ್ಲಿ ನಕ್ಕಲಾ ಸಂಸ್ಕೃತಿಗಳನ್ನು ಅಭ್ಯಾಸಮಾಡಲು ಆಮಂತ್ರಿಸಿದರು. ಅವರು ಅಖಿಲ ಹಿಂದೂ ದೇಶವನ್ನು ಈ ಸಂದರ್ಭದಲ್ಲಿ ಸಂಚಾರಮಾಡಿ ಭಾರತದ ಕಲಾಸಂಸ್ಕೃತಿಗಳ ಅಭ್ಯಾಸಮಾಡುವರು

ಸ್ವದೇಶಾಭಿಮಾನಿ

ತಾರೀಕು 15—12—1939

ವಿಮೋಚನೆಯ ದಿನ?

ಮುಸ್ಲಿಂ ಲೀಗಿನ ಮುಖಂಡರೆನಿಸಿದ ಮಿ. ಜಿನ್ನ ಸಾಹೇಬರು ಒಂದು ಪ್ರಕಟಣೆ ಹೊರಡಿಸುತ್ತ, ' ಅದರಲ್ಲಿ ಮುಸ್ಲಿಮರ ಮೇಲೆ ದಬ್ಬಾಳಿಕೆಯಿಂದ ಆಳಿದ ಕಾಂಗ್ರೆಸು ಸರಕಾರಗಳು ರಾಜಿನಾಮೆಕೊಟ್ಟ ವಿಷಯವಾಗಿ ಇದೇ ತಿಂಗಳ ತಾ. ೨೨ ರಂದು 'ವಿಮೋಚನೆ'ಯ ದಿನವನ್ನು ಆಚರಿಸಬೇಕಾಗಿ ಸಾರಿರುವರು! ಹಿಂದೂ-ಮುಸ್ಲಿಮ್ ಐಕ್ಯ ಮಾತುಕತೆಯು ನಡೆಯುತ್ತಿದ್ದು, ಮಹಾತ್ಮಾಜಿಯವರು, ಹಿಂದುಗಳ ಪರವಾಗಿ ಕಾಂಗ್ರೆಸಿನಿಂದ ಪ್ರತಿನಿಧಿಯಾಗಿ ಬಂದಲ್ಲಿ, ಹಿಂದೂ ಮುಸ್ಲಿಂ ಸಮಸ್ಯೆಯನ್ನು ಬಗೆಹರಿಸುವ ವಿಚಾರದಲ್ಲಿ ತಾನು ತನ್ನ ಸರ್ವ ಸಹಾಯವನ್ನು ಕೊಡುವುದಾಗಿ ಜಿನ್ನಾ ಸಾಹೇಬರೆ ಭರವಸೆಯಿತ್ತಿದ್ದು, ಇಂದು 'ರಾಜ್ಯಘಟನಾ ಸಮಿತಿಯು ಹಿಂದೂ ದೇಶದಲ್ಲಿ ಸ್ಥಾಪಿತವಾಗುವ ಬಗೆಗೆ, ಭಾರತೀಯರಿಗೆ ಆಶೆ ಕೋರಿಬರುತ್ತಿರುವ ಕಾಲದಲ್ಲಿ, ದೇಶದಲ್ಲಿ ಭೇದದ ಉರಿಯನ್ನು ಹೆಚ್ಚುವಂತೆ ಮಾಡುವ ಜಾತಿಕಲಹಕ್ಕೆ ಕಾರಣವಾದ ಇಂತಹ ಪ್ರಕಟಣೆಯನ್ನಿತ್ತ ಕಾರಣದಿಂದ ಹಿಂದೂಗಳೆನ್ನದೆ ಮುಸ್ಲಿಮರೆನ್ನದೆ ರಾಷ್ಟ್ರದ ಮುಖಂಡರನೇಕರು, ಈ ಪ್ರಕಟಣೆಯನ್ನು ತೀವ್ರವಾಗಿ ಖಂಡಿಸಿರುವರು

ಮಹಾತ್ಮಾಜಿಯವರು, ತನ್ನ ಉತ್ತರದಲ್ಲಿ ಜಿನ್ನರಿಗೂ ಮುಸ್ಲಿಂಲೀಗಿನವರಿಗೂ ಭಿನ್ನವಿಸುತ್ತಾ, ಕಾಂಗ್ರೆಸು ಮಂತ್ರಿಮಂಡಲಗಳ ಮೇಲೆ ಹೊರಿಸಿದ ಆರೋಪವನ್ನು ರುಜುಮಾಡಿದ ವಿನಹ ಇಂತಹ ಪ್ರದರ್ಶನದ ಪ್ರಕಟಣೆಯಿತ್ತುದು ಜಿನ್ನಾ ಸಾಹೇಬರು ಆರೋಪಮಾಡುವವರೂ, ತೀರ್ಪು ಮಾಡುವವರೂ ಒಬ್ಬರೇ ಆದಂತಾಯಿತೆಂದೂ, ಇಂತಹ ವರ್ತನೆಯು ಪ್ರಮಾದವೆಂದು ತಾವು ಹೊರಿಸಿದ ಆರೋಪವನ್ನು ವೈಸರಾಯರೋ ಗವರ್ನರರೋ ವಿಚಾರಿಸಿ ತೀರ್ಮಾನ ಕೊಡುವವರೆಗೆ ಸುಮ್ಮಗಿರಬೇಕೆಂದೂ ಆದಕಾರಣದಿಂದ ಈಗ ಪ್ರಕಟಿಸಿದ ವಿಮೋಚನಾ ಸಭೆಯ ಪ್ರಕಟಣೆಯನ್ನು ಅವರು ಹಿಂದಿಗೆಯಬೇಕಾಗಿ ವಿವರಿಸಿರುವರು. ಕಾಂಗ್ರೆಸುಮಂತ್ರಿಮಂಡಳದ ಕಾರ್ಯನಿರ್ವಾಹಕರಾಗಿ, ಮೇಲ್ವಿಚಾರಕರಾಗಿದ್ದು ಕಾಂಗ್ರೆಸು ಪಾರ್ಲಿಮೆಂಟರಿ ಸಬ್ ಕಮಿಟಿಯ ಅಧ್ಯಕ್ಷರಾದ ಸರ್ದಾರ ಪಟೇಲರು ಜಿನ್ನರಿಗೆ ಖಂಡತುಂಡ ಉತ್ತರಕೊಟ್ಟಿದ್ದಾರೆ. ಕಾಂಗ್ರೆಸ್ ಸರಕಾರದ ಆಡಳಿತೆಯ ಪ್ರಧಾನ ಮಂತ್ರಿಸ್ಥಾನದಲ್ಲಿದ್ದ, ಶ್ರೀ. ರಾಜಗೋಪಾಲಾಚಾರಿ, ಬಿ. ಜಿ. ಖೇರ್, ವಿಶ್ವನಾಥದಾಸ್ ಪ್ರಭೃತಿಗಳು ಜಿನ್ನರ ಆರೋಪವು ಹೇಗೆ ಅಸಮರ್ಪಕವೆಂದೂ, ಅದನ್ನು ಅವರು ರುಜುಪಡಿಸಬೇಕೆಂದೂ, ನ್ಯಾಯದ ತೀರ್ಮಾನಕ್ಕೆ ಆಹ್ವಾನಿಸಿತ್ತಿದ್ದಾರೆ. ನೆಹರುಗಳು ಇಂತಹ ಪ್ರಕಟಣೆಯಿಂದ ಹಿಂದೂ ಮುಸ್ಲಿಂ ಐಕ್ಯದ ಸಮಿತ್ರಕಾರ್ಯವು ಕೆಡುವಂತಾಗುವುದೆಂದು ಬಹು ನೊಂದಿಕೊಂಡಿರುತ್ತಾರೆ. ಹೆಚ್ಚೇಕೆ? ಭಾರತದ ಸ್ವಾತಂತ್ರ್ಯಾಭಿಲಾಷೆಯ ಬಹುಮಂದಿ ಮುಸ್ಲಿಂ ಬಂಧುಗಳು ಜಿನ್ನರ ಹಚ್ಚೆಯಾ ಪ್ರಮತ್ತವಾದುದೆಂದೂ, ದ್ರೋಹಾತ್ಮಕವೆಂದೂ ವ್ಯಕ್ತಗೊಳಿಸಿದ್ದಾರೆ.

ಜಿನ್ನರ ಪ್ರವೃತ್ತಿಯು ತೀರಾ ವಿಲಕ್ಷಣವಾಗಿ ಕಂಡುಬರುತ್ತಿದೆ. ಕಳೆದ ಐವತ್ತು ವರ್ಷಗಳ ವರೆಗೆ ಅನುಪಮ ಸ್ವಾರ್ಥತ್ಯಾಗ ಮಾಡಿ, ನಿಜವಾದ ಜನತೆಯ ಪ್ರತಿನಿಧಿಯೆನಿಸಿದ ಕಾಂಗ್ರೆಸು, ದೇಶದ ಹಕ್ಕಾದ ಸ್ವಾತಂತ್ರ್ಯಕ್ಕಾಗಿ ಹೆಣಗಾಡುತ್ತಿರುವಲ್ಲಿ ಜಿನ್ನರು ಅದರ ವಿರುದ್ಧ ಬಂಡಾಯವನ್ನೆಬ್ಬಿಸುವ ದ್ರೋಹವನ್ನು ಮಾಡುತ್ತಿದ್ದಾರೆ. ಪ್ರಜಾಸ್ವಭುತ್ವ ರಾಜ್ಯವ್ಯವಸ್ಥೆಯು ಸರ್ವ ಜನತೆಗೆ, ಸರಿ ಸ್ವಾತಂತ್ರ್ಯ ಅಧಿಕಾರವಾದುದರಿಂದ ಕಾಂಗ್ರೆಸು ಅದರ ಸಲುವಾಗಿ ಮಾತನಾಡಿದರೆ, ಜಿನ್ನರು ಪ್ರಜಾಪ್ರಭುತ್ವವು ಸಲ್ಲದೆನ್ನುವರು? ಇನ್ನು ಯಾವ ಪ್ರಭುತ್ವವು ಸಲುವುದೆಂದು ದೇಶದ ಮುಂದೆ ತಮ್ಮ ಕಾರ್ಯಕ್ರಮವನ್ನು ಇಟ್ಟು ತೋರಿಸಿಲ್ಲ. ನಮ್ಮ ನಾಡಿನ, ನಮ್ಮ ಜನತೆಯ ಪ್ರತಿನಿಧಿಗಳ ಸಮ್ಮತಿಯಿಂದ ರಚಿತವಾದ ರಾಜ್ಯಘಟನಾ ಸಮಿತಿಯೊಂದು ಬೇಕೆಂದು ಕಾಂಗ್ರೆಸು ಕಾರ್ಯರಂಗಕ್ಕಿಳಿದರೆ ಅದರಿಂದ ಅಪಾಯವಿದೆಯೆಂದು ಜಿನ್ನರು ತೊಡಕನ್ನು ತೆಗೆಯುವರು. ಇನ್ನು ಯಾರಿಂದ ರಚಿತವಾದ ಹೇಗಿರುವ ರಾಜ್ಯಘಟನೆಯು ತಮಗೆ ಆಗಬೇಕೆಂಬುದನ್ನು ಜನತೆಗೆ ತಾವಾಗಿ ತಿಳಿಸುವ ಬುದ್ಧಿವಂತಿಕೆ ತೋರಿಸಿಲ್ಲ. ಕಾಂಗ್ರೆಸು, ಜನತೆಯ ಪ್ರತಿನಿಧಿಯಾಗಿ ಸರಕಾರದ ಆಡಳಿತಕ್ಕೆ ಕೈಹಾಕ್ಕಿ ದೇಶಹಿತ ದೃಷ್ಟಿಯಿಂದ, ಆಡಳಿತವನ್ನು ನಡೆಸಲು ಮನಸ್ಸು ಮಾಡಿದರೆ, ಅದರಿಂದ ಮುಸ್ಲಿಮರಿಗೆ ಅನ್ಯಾಯವಾಯಿತು' ಎಂದು ಕೂಗಿಕೊಳ್ಳುತ್ತಾರೆ. ಏನು ಅನ್ಯಾಯವಾಯಿತು? ಎಂಬುದನ್ನು ಜನರಿಗೆ ತಿಳಿಸಿ ತನ್ನ ವಾದದಲ್ಲಿ ಕಾರಣವಿದೆಯೆಂದೂ ತಿಳಿಸಲಿಲ್ಲ. ಕಾಂಗ್ರೆಸು ಸರಕಾರಗಳಿಂದ ಮುಸ್ಲಿಮರಿಗೆ ಆದ ಅನ್ಯಾಯವೇನೆಂಬುದನ್ನು ರುಜುಪಡಿಸಬೇಕೆಂದೂ, ವ್ಯರ್ಥ ಗಲಹಬಾರದೆಂದೂ ಕಾಂಗ್ರೆಸು ನ್ಯಾಯ ನಿರ್ಣಯಕ್ಕೆ ಆಹ್ವಾನ ಕೊಟ್ಟಾಗ, ಅದನ್ನು ಅಂಗೀಕರಿಸದೆ, ತಾನು ತನ್ನ ದೂರನ್ನೆಲ್ಲಾ ಗವರ್ನರರ ವೈಸರಾಯರ ಕವಾಟಿನಲ್ಲಿ ಕಟ್ಟಿರಿಸುವ ವ್ಯವಸ್ಥೆ ಮಾಡಿದ್ದೇನೆಂದು ಉತ್ತರ ಕೊಡುತ್ತಾರೆ. ಹೀಗೆ ಏನೇನೂ ವಿಚಾರವಿಲ್ಲದೆ, ಕಾರಣವಿಲ್ಲದೆ, ತನ್ನ ಅಥವಾ ರಾಷ್ಟ್ರದ ಏಳಿಗೆಯನ್ನು ಬಗೆಯದೆ ಸ್ವಾತಂತ್ರ್ಯದ ದಾರಿಯಲ್ಲಿ ಆತಂಕ ಬರುತ್ತಿರುವ ಜಿನ್ನಾರ ಮನೋವೃತ್ತಿಯು ವಿಲಕ್ಷಣವೂ ಶೋಚನೀಯವೂ ಆಗಿದೆ.

ಕಾಂಗ್ರೆಸು ಸರಕಾರವು ಮುಸ್ಲಿಮರಿಗೆ ಅನ್ಯಾಯ ಮಾಡಿದೆಯೆಂದು ಹೊರಿಸಿದ ಪ್ರತ್ಯಕ್ಷ ಆರೋಪವು ಸರೋಕ್ಷವಾಗಿ, ರಾಷ್ಟ್ರದ ನಿಜವಾದ ಸರ್ವತಂತ್ರ ಹೊಣೆಗಾರರಾದ ಗವರ್ನರರಿಗೂ ಆ ಮೂಲಕ ವೈಸರಾಯರಿಗೂ ಅಂದರೆ, ಬ್ರಿಟಿಷ್ ಸರಕಾರಕ್ಕೆ ಒಂದು ಆರೋಪವಾಗಿದೆ. ಆದುದರಿಂದ ಜಿನ್ನರ ಆರೋಪದ ನಿಜವಾದ ಸತ್ಯಾಸತ್ಯತೆಯನ್ನು, ನಿಷ್ಪಕ್ಷಪಾತ ದೃಷ್ಟಿಯಿಂದ ಬ್ರಿಟಿಷ್ ಸರಕಾರದವರೇ ರುಜುಪಡಿಸುವ ಕಾರ್ಯವನ್ನು ಕೈಯಲ್ಲಿ ತೆಗೆದುಕೊಳ್ಳಬೇಕು. ಅದರಿಂದ ಎಲ್ಲರಿಗೂ ಕ್ಷೇಮವುಂಟು ದೇಶಕ್ಕೆ ಹಿತವುಂಟು. ವ್ಯರ್ಥ ಆರೋಪ ಹೊರಿಸಿ, ಬೇಜವಾಬ್ದಾರೀತನದಲ್ಲಿ ಮಾತನಾಡುವವರ ನಿಜವಾದ ಯೋಗ್ಯತೆಯೂ ಬೆಳಕಿಗೆ ಬರುವುದು. ಇಂತಹ ಪರಿಸ್ಥಿತಿಯಂಟಾಗಿ, ಆರೋಪವು ರುಜುವಾಗುವವರೆಗೆ ಜಿನ್ನರು ಅದನ್ನು ಹಿಂದೆಗೆದುಕೊಳ್ಳುವ ಬುದ್ಧಿವಂತಿಕೆಯನ್ನು ತೋರಿಸುವರೆ? ಇಲ್ಲವಾದಲ್ಲಿ, ಮುಸ್ಲಿಂ ಲೀಗಿನ ಮುಸ್ಲಿಮರೇ, ಜಿನ್ನರ ಮುಂದಾಳುತನದ ಬಹಿರಂಗ ಸ್ವರೂಪವನ್ನು ಜಗತ್ತಿಗೆ ಸ್ಪಷ್ಟಪಡಿಸುವಂತೆ, ಅಖಿಲ ಭಾರತದಲ್ಲಿ, ಜಿನ್ನರ ಪ್ರಕಟಣೆಯ ವಿರುದ್ಧ ಸಭೆಕೂಡಿಸಿ ತೀರ್ಮಾನ ಮಾಡುವರೆ? ಈ ಕುರಿತು ದೇಶಪ್ರೇಮಿಗಳಾದ ಮುಸ್ಲಿಮರುಗಮನ ಕೊಡಬೇಕು.

ಕನ್ನಡ ಸಾಹಿತ್ಯ ಪರಿಷತ್ತಧಿಕಾರಿಗಳ ಅವಗಾಹನೆಗಾಗಿ

ಕನ್ನಡಿಗರೆಲ್ಲರ ಹಿರಿಯ ಹಬ್ಬವಾದ ಕನ್ನಡ ಸಾಹಿತ್ಯ ಪರಿಷತ್ಸಮ್ಮೇಳನವು ಇದೇ ತಿಂಗಳ ೨೪ರಂದು ಸುಪ್ರಸಿದ್ಧ ದೇಶಭಾಷಾಭಿಮಾನಿಗಳಾದ ಶ್ರೀ ಮುದವೀಡು ಕೃಷ್ಣರಾಯರ ಅಧ್ಯಕ್ಷತೆಯಿಂದ ಕನ್ನಡದ ಗಡಿನಾಡಾದ ಬೆಳಗಾಂವಿಯಲ್ಲಿ ನೆರೆಯಲಿರುವುದು. ಸಾಹಿತ್ಯ ಪರಿಷತ್ತಿನ ಪ್ರಧಾನ' ಕಾರ್ಯವೆಂದರೆ, ಕನ್ನಡ ಸಾಹಿತ್ಯ ಪ್ರಚಾರದ ಮೂಲಕ, ನಾಡಿನ ಜನತೆಯ ಜೀವವನ್ನು ಸಂಸ್ಕೃತಿಗೊಳಿಸುವುದಾಗಿದೆ. ಯಾವುದು ಕನ್ನಡಿಗರಲ್ಲಿ ಇಂದು ಲೋಪವಾಗುತ್ತಾ ಬಂದಿದೆಯೋ ಅಂತಹ ದೇಶಭಾಷಾಭಿಮಾನವನ್ನು ಉಜ್ವಲಗೊಳಿಸಿ ಉದಾತ್ತತೆಗೆ ತಂದೇರಿಸುವುದಾಗಿದೆ. ಅಖಿಲ ಕರ್ನಾಟಕದ ವಿಶಾಲ ದೃಷ್ಟಿಯಿಂದ ಕಾರ್ಯಕ್ಷೇತ್ರವನ್ನು ವಿಸ್ತರಿಸಿ, ಕನ್ನಡದ ಸಲುವಾಗಿ, ಇಂದಿನ ಈ ಸಂಧಿಕಾಲದಲ್ಲಿ ಅನುಪಮ ಸ್ವಾರ್ಥತ್ಯಾಗದಿಂದ, ದುಡಿಯುವ ಕನ್ನಡ ಭಾಷಾಸೇವಕರನ್ನು ಒಟ್ಟುಗೂಡಿಸಿ ವಿಚಾರವಿನಿಮಯ ಮಾಡಿಕೊಂಡು ನಾಡಿನ ಗುಡಿಯನ್ನು ಏರಿಸುವುದಾಗಿದೆ! ಆದರೆ ಇತ್ತೀಚೆಯ ಕೆಲವು ಘಟನೆಗಳು ತೀರಾ ವಿಷಾದಮಯವೂ, ಲಜ್ಜಾಸ್ಪದವೂ ಆಗಿ, ಕನ್ನಡಿಗರ ಅಭಿಮಾನ ಸಂಘವಾದ ಸಾಹಿತ್ಯ ಪರಿಷತ್ತಿನ ಸರ್ವಾಂಗ ಸಮುನ್ನತಿಯಲ್ಲಿ ತೀವ್ರವಾದ ಕಡೆಯನ್ನು ಕರುವಂತಹುದಾಗಿ ತೋರಿಬರುವುದರಿಂದ ಆ ಕುರಿತು ನಾಲ್ಕು ಮಾತುಗಳನ್ನು ಹೇಳುವುದು ಅಪ್ರಸ್ತುತವೆನಿಸಲಾರದು.

ಕನ್ನಡ ಪತ್ರಿಕೆಗಳನ್ನು ಅವಲೋಕಿಸುವ ನಮಗೆ, ಸಾಹಿತ್ಯಪರಿಷತ್ತಿನ ಉಪಾಧ್ಯಕ್ಷರೆ ಬಂದುಕಂಡ ಸರ್ವಾಧಿಕಾರೀ ಅವರ ಪ್ರವೃತ್ತಿಗಳನ್ನು ಇದಿರಿಸುವ ಉದ್ದೇಶವುಳ್ಳದ್ದೆಂದು ಪ್ರಕಟಿಸುತ್ತಿರುವ ಪರಿಷತ್ತಿನ ಪ್ರಮುಖ ಸದಸ್ಯರು ಕೆಲವರು ಸೇರಿರುವ ಇನ್ನೊಂದು ಕಂಡ-ಹೀಗೆ ದ್ವಿದಳಗಳು, ಮೈಸೂರು ಬೆಂಗಳೂರು ಕಡೆಗಳಲ್ಲಿಯೇ ಎದ್ದು ಪರಸ್ಪರ ಮುಸಗಿನಿಂತಂತೆ ಕಂಡುಬರುತ್ತದೆ. ಇಂದು ಪರಿಷತ್ತಿನ ಉಪಾಧ್ಯಕ್ಷರು ಶ್ರೀ. ಬಿ. ಎಂ. ಶ್ರೀ ಕಂಠಯ್ಯನವರು ಕನ್ನಡ ಸಾಹಿತ್ಯದ ಲೋಕದಲ್ಲಿ ಅವರ ಸ್ಥಾನವು ಹಿರಿದು, ಕನ್ನಡ ಪ್ರಚಾರದಲ್ಲಿ ಅವರು ಮಾಡಿದ ಸೇವೆಯು ಅಪ್ರತಿಹತವಾದುದು. ಕನ್ನಡ ನುಡಿಯ ಏಳಿಗೆಯ ಸಲುವಾಗಿ ಅವರು ವಹಿಸಿರುವ ಕಾರ್ಯಭಾರವು ಉದಾತ್ತವಾದುದು. ಹೆಚ್ಚೇಕೆ? ಕನ್ನಡ ಸಾಹಿತ್ಯ ಪರಿಷತ್ತನ್ನು ಇಂದಿನ ಈ ಉಚಿತ ಸ್ವರೂಪಕ್ಕೆ ತಂದಿರಿಸುವಲ್ಲಿ ಅವರ ಸಾಹಸವು ಗಣನೀಯವಾದುದು; ಹೀಗಿರುವಾಗ ಕನ್ನಡ ಸಾಹಿತ್ಯ ಪರಿಷತ್ತಿನ ವಿಷಯದಲ್ಲಿ, ಅಧಿಕಾರವಾಣಿಯಿಂದ ಮಾಡುವ ಯೋಗ್ಯತೆ ಅವರ ಪಾಲಿಗಿದೆಯೆಂಬುದನ್ನು ಕನ್ನಡಿಗರು ಅಲ್ಲಗಳೆಯುವ ಕೃತಘ್ನರಾಗಬಾರದು.

ಇತ್ತೀಚೆಗೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸರ್ವಾಧಿಕಾರ ನಡೆಯುತ್ತಿದೆಯೆಂದು ವಾದವೆಬ್ಬಿಸಿದವರಲ್ಲಿ ಬಹಳವಾಗಿ ಪ್ರಚಾರಮಾಡಿದವರಲ್ಲಿ ಸ್ವತಂತ್ರ ಕರ್ನಾಟಕ ಪತ್ರಿಕೆಯ ಸಂಪಾದಕರಾದ ಶ್ರೀ ಶಿವಮೂರ್ತಿ ಶಾಸ್ತ್ರಿಗಳು ಅಗ್ರಗಣ್ಯರು. ಅವರು ಉಪಾಧ್ಯಕ್ಷರ ವಿಷಯವಾಗಿ, ಹಾಗೂ ಇಂದಿನ ಸಾಹಿತ್ಯ ಸಮ್ಮೇಳನದ ಅಧಿಕಾರೀ ಮಂಡಳದ ವಿಷ ಪಕ್ಷೀಯ ಧೋರಣೆಯ ವಿಷವಾದ ವಾದದ ಸಮರ್ಥನೆಯೆಂಬಂತೆ, ಕನ್ನಡ ನಾಡಿಗೆ ಬಹಳ ಕಾಲದಿಂದ, ಅವ್ಯಾಹತವಾಗಿ ಮಹತ್ತಾದ ಸೇವೆ ಸಲ್ಲಿಸಿ ಪ್ರಸಿದ್ಧರಾದ ಶ್ರೀ ಬೆನಗಲ್ ರಾಮರಾಯರು ತಮ್ಮ ರಾಜನಾಮೆಯನ್ನು ಇತ್ತುದು ಮಾತ್ರವಲ್ಲದೆ, ರಾಜನಾಮೆಯ ಪ್ರಕಟಣೆಯಲ್ಲಿ ಸಾಹಿತ್ಯ ಪರಿಷತ್ತಿನ ಇಂದಿನ ಕಾರ್ಯಧೋರಣೆಯು ತನಗೆ ಸಮರ್ಪಕವಾಗಿಲ್ಲವೆಂದೂ ಸಾರಿದರು. 'ಕನ್ನಡ ನುಡಿ'ಯಲ್ಲಿ ಶ್ರೀ ಜಿ. ವಿ. ರಾಜರತ್ನಂರವರು ವಿಡಂಬನ ಸಾಹಿತ್ಯದ ಲೇಖಮಾಲೆಯೊಂದನ್ನು ಪ್ರಕಟಿಸುತ್ತಾ ಬರುವುದು ಸಾಹಿತ್ಯ ಪರಿಷದಧ್ಯಕ್ಷರ ವಿರುದ್ಧ ವಾದ ವೆತ್ತಿದ ಕೆಲವು ವ್ಯಕ್ತಿಗಳ ನಿಂದಾವರ ಲೇಖನವೆಂಬ 'ಶ್ರುತಿ'ಯು ಆರಂಭವಾಗಿ ಈ ಇಬ್ಬರೂಗಳ ಮನಸ್ಸನ್ನು ಹೆಚ್ಚಾಗಿ ಕದಡಿಸುವಂತಾಯಿತು! ಆ ಮೇಲೆ ತನ್ನ ಮೊನ್ನೆಯ ಸ್ವತಂತ್ರ ಕರ್ನಾಟಕ'ದಲ್ಲಿ ಶ್ರೀಗಳಾದ ಶಿವಮೂರ್ತಿ ಶಾಸ್ತ್ರೀ, ಬೆನಗಲ್ ರಾಮರಾವ್, ಡಿ. ಕೆ. ಭಾರದ್ವಾಜಾಪ್ರಭೃತಿಗಳು ಬರೆದ ಸಾಹಿತ್ಯ ಪರಿಷತ್ತನ್ನು ಮಂಡಿಸಲಿರುವರೆಂದು ಪ್ರಕಟವಾದ ಗೊತ್ತುವಳಿಗಳಿಂದ ಎಷ್ಟರ ಮಟ್ಟಿಗೆ ಸಾಹಿತ್ಯ ಪರಿಷತ್ತಿನ ಪರಿಸ್ಥಿತಿಯು ಕೆಟ್ಟಿದೆಯೆಂಬುದು ತಿಳಿಯದೆ ಇರದು.

[೧೧ನೇ ಪುಟವನ್ನು ನೋಡಿರಿ]

ಫಿನ್‌ಲೆಂಡಿನ ಇತಿಹಾಸ!

ಫಿನ್‌ಲೆಂಡಿನ ಪ್ರೆಸಿಡೆಂಟಾದ
ಮಿ. ಕೈಯೋಸ್ಟಿ ಕಾಲಿಯೋ.

ಯುರೋಪಿನ ಉತ್ತರಕ್ಕಿರುವ ಫಿನ್‌ಲೆಂಡು ರಶಿಯದಂತಹ ಬಲಾಢ್ಯ ಸರಕಾರದೊಂದಿಗೆ ಹೇಗೆ ಯುದ್ಧಹೂಡಿತೆಂಬುದು ಈಗ ಎಲ್ಲರಿಗೂ ಗೊತ್ತಿದೆ. ಈ ಫಿನ್ನರಾರ, ಅವರ ಇತಿಹಾಸವೇನು, ಅವರು ಸ್ವತಂತ್ರ ರಾಷ್ಟ್ರವನ್ನು ಹೇಗೆ ಕಟ್ಟಿದರೆಂಬುದನ್ನು ತಿಳಿಯುವ ಕುತೂಹಲವು ಪ್ರತಿಯೊಬ್ಬನಿಗಿರಬಹುದು.

ಪೂರ್ವೇತಿಹಾಸ

ಫಿನ್‌ರು ಮಧ್ಯಏಶಿಯಾದಿಂದ ಅಲೆಯುತ್ತ ಬಂದು ಯುರೋಪಿನ ತೀರ ಉತ್ತರದಲ್ಲಿ ಬಂದು ನೆಲಸಿದರು. ಬಾಲ್ಟಿಕ್ ಸಮುದ್ರವನ್ನು ಮುಟ್ಟುವಷ್ಟರಲ್ಲಿ ಅವರು ಪೋಲ್ಯಾಸದಿ ದಂಡೆಯಲ್ಲಿದ್ದ ಜನಾಂಗದವರನ್ನು ಕೂಡಿಹಾಕುತ್ತ ಹೋಗಿಯೇ ವಸಾಹತುಗಳನ್ನು ಮಾಡಿದರು. ಅದೇ ಇಂದು ಫಿನ್‌ಲೆಂಡೆಂದು, ಕರೆಯಲ್ಪಡುತ್ತಿದೆ.

ಹೇಗೆ ಸ್ವತಂತ್ರರಾಷ್ಟ್ರವು?

ಈ ರೀತಿಯಾಗಿ ಸುಖಸಮೃದ್ಧಿಗಳಲ್ಲಿ ನೆಲಸಿದುದನ್ನು ನೋಡಿ ನೆರೆ ರಾಷ್ಟ್ರವಾದ ಸ್ವೀಡನಿನ ಜನರು ಅವರೊಡನೆ ವ್ಯಾಪಾರ ಒಡಂಬಡಿಕೆ ಮಾತುಕತೆಗಳನ್ನು ನಡಿಸುತ್ತ ಮುಂದೆ ಅದನ್ನು ತಮ್ಮಲ್ಲಿಯೇ ಕೂಡಿಸಿಕೊಂಡುಬಿಟ್ಟರು ಅನಂತರ ರಶಿಯನರು ಸ್ವೀಡರನ್ನು ಸೋಲಿಸಿ ಫಿನ್‌ಲಂಡನನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ರಶಿಯನರು ಝಾರರ ಆಳಿಕೆಯಲ್ಲಿ ಫಿನ್‌ರು ಬಗೆಬಗೆಯ ಕಷ್ಟನಷ್ಟಗಳಿಗೊಳಗಾದರು. ರಶಿಯನರಲ್ಲಿ ರಾಜ್ಯಕ್ರಾಂತಿಯಾದ ನಂತರ ಫಿನ್ನರು ಸ್ವಾತಂತ್ರ್ಯ ಸಂಪಾದಿಸಿ ತಮ್ಮ ರಾಷ್ಟ್ರವನ್ನು ಕಟ್ಟುವ ಕಾರ್ಯದಲ್ಲಿ ತೊಡಗಿದರು ಇವರು ತಮ್ಮ ಬುದ್ಧಿಮತ್ತೆ ಧೈರ್ಯ ಉದ್ಯೋಗಪ್ರಿಯತೆ ಮುಂತಾದ ಗುಣಗಳಿಂದ ಕೀರ್ತಿಪಡೆದರು.

ಇಂದಿನ ಪರಿಸ್ಥಿತಿ

ಯುರೋಪಿನಲ್ಲಿ ಇತ್ತೀಚೆಗೆ ಸ್ಥಾಪಿಸಲ್ಪಟ್ಟ ರಾಷ್ಟ್ರಗಳಲ್ಲಿ ಫಿನ್‌ಲಂಡು ಒಳ್ಳೇ ಜೋರಿನಿಂದ ಮುಂದುವರಿಯುತ್ತಿರುವ ದೇಶಗಳಲ್ಲೊಂದು ಪ್ರಜಾಪ್ರಭುತ್ವ ಸರಕಾರವು ಅಲ್ಲಿ ಮಾದರಿಯದಾಗಿದೆ. ಅವರ ಅಂತಃಕರಣವಂತೂ ಅತ್ಯಂತ ಕೋಮಲವಿದೆ. ಸದ್ಗುಣಗಳಿಂದ ಸಹಾನುಭೂತಿ ಮರ್ಯಾದೆಗಳನ್ನು ಆ ರಾಷ್ಟ್ರವುಪಡೆದಿದೆ.

ರಾಷ್ಟ್ರವು ಸಂಪತ್ತುಳ್ಳದಿರುವುದು. ರಾಜಧಾನಿಯಾದ ಹೆಲಸಿಂಕಿಗೆ ಬಂದವರರಾಷ್ಟ್ರ ಸಂಚಾರಿಯು ದೇಶದ ಸಂಪತ್ತನ್ನು ನೋಡಿ ಬೆರಗಾಗುವನು. ಅದರಂತೆಯೇ ಸಂಸ್ಕೃತಿಯಲ್ಲಿಯೂ ರಾಷ್ಟ್ರವು ಮುಂದಿದೆ.

ಮದ್ಯಪಾನ ಪ್ರತಿಬಂಧ

ಫಿನಲಂಡಿನಲ್ಲಿ ಬೆಸಿಗೆಯಲ್ಲಿ ಹವೆಯು ಅತ್ಯಂತ ಅಲ್ಹಾದಕರ ಮತ್ತು ಚಳಿಗಾಲದಲ್ಲಿ ಅತ್ಯಂತ ಚಳಿ ಇರುವುದರಿಂದ ಅಲ್ಲಿಯ ಜನರು ಅತ್ಯಂತ ಗಟ್ಟಿಗರು. ಮತ್ತು ಜಟ್ಟಿಗಳು. ಯುರೋಪಿನಲ್ಲಿ ಮದ್ಯಪಾನ ಪ್ರತಿಬಂಧವನ್ನು ಯಶಸ್ವಿಯಾಗಿ ಮಾಡಿದದೇಶವೆಂದರೆ ಫಿನಲಂಡು ಪೊಂದೇ ೧೯೧೯ರಲ್ಲಿ ಮದ್ಯಪಾನವನ್ನು ಪ್ರತಿಬಂಧಿಸಲಾಯಿತು. ಯಾವನೊಬ್ಬ ಮನುಷ್ಯನು ಈ ಕಾಯದೆಯನ್ನು ಮುರಿದರೆ ಅವನ ಉತ್ಪನ್ನದ ಮೇಲಿಂದ ದಂಡ ವಿಧಿಸಲಾಯಿತು ಯಾವನೊಬ್ಬ ಮನುಷ್ಯನು ಈ ಕಾಯದೆಯನ್ನು ಮುರಿದರೆ ಅವನ ಉತ್ಪನ್ನದ ಮೇಲಿಂದ ದಂಡ ವಿಧಿಸಲಾಗುವುದು ಇದೊಳ್ಳೆ ಮಾದರಿಯ ಶಿಕ್ಷೆಯಿದ್ದು ನ್ಯಾಯಧಾನದ ಬಗ್ಗೆ ಪ್ರಸಿದ್ಧವಾಗಿದೆ.

ಸಹಕಾರ ಸಂಘಗಳು

ಸಹಕಾರ ಸಂಘಗಳ ಪ್ರಸಾರ ಇಲ್ಲಿ ಬಹಳ. ಹೆಲಸಿಂಕಿಯಲ್ಲಿ ಅನೇಕ ಅಂಗಡಿಗಳು ಸಹಕಾರವದ್ಧತಿಯ ಮೇಲೆಯೇ ನಡೆದಿವೆ ದೇಶದ ಬೇರೆ ಬೇರೆ ವ್ಯಾಪಾರಿ ಕೇಂದ್ರಗಳಲ್ಲಿಯೂ ಸಹಕಾರ ಅಂಗಡಿಗಳೇ ಹೆಚ್ಚು. ರೊಕ್ಕ ಹಾಕಿದವರು ಮತ್ತು ಕೂಲಿಕಾರರು ಪ್ರಮಾಣಕ್ಕನುಸಾರವಾಗಿ ಲಾಭವನ್ನು ಹಂಚಿಕೊಳ್ಳುವರು. ಫಿನಲಂಡದಲ್ಲಿ ಜವಿನದಾರರಿರುವುದಿಲ್ಲ ಒಕ್ಕಲಿಗರು ಸಾಂಘಿಕ ರೀತಿಯಿಂದ ಒಕ್ಕಲತನ ಮಾಡುತ್ತಿರುವರು. ಲಾಭದಲ್ಲಿ ಹೊಲದೊಡೆಯರು ಮತ್ತು ಒಕ್ಕಲಿಗರ ಪಾಲುಸಮಾನವಿರುವುದು

ರಾಷ್ಟ್ರೀಯತೆ

ಫಿನ್‌ರು ತಮ್ಮ ರಾಷ್ಟ್ರದ ವಿಷಯಕ್ಕೆ ಅತ್ಯಂತ ಅಭಿಮಾನ ತಾಳುತ್ತಿರುವರು. ಝಾರ ಅಲೆಕ್ಸಾಂಡರರಕಾಲಕ್ಕೆ ಫಿನ್‌ರಿಗೆ ಸ್ವಾತಂತ್ರ್ಯ ದೊರೆಯಿತು ಆಗ ಫಿನಿಶ್ ಭಾಷೆಯಲ್ಲಿ ಶಬ್ದ ಸಂಗ್ರಹವು ಸಾಕಷ್ಟಿರಲಿಲ್ಲ ಶಾಸ್ತ್ರೀಯ ಮತ್ತು ಕಾಯದೆಯ ಪಾರಿಭಾಷಿಕ ಶಬ್ದಗಳ ಕೊರತೆ, ಹೆಚ್ಚಿದ್ದತ. ಕೂಡಲೆ ಶಿಕ್ಷಣ ತಜ್ಞರು ಈ ಕಾರ್ಯವನ್ನು ಕೈಕೊಂಡರು ವಿಶ್ವವಿದ್ಯಾಲಯಗಳು ಸ್ಥಾಪಿಸಲ್ಪಟ್ಟವು. ದೇಶದಲ್ಲೆಲ್ಲ ಶಾಲೆ ಕಾಲೇಜುಗಳು ಭರದಿಂದ ಬೆಳೆದುವು. ತಮ್ಮ ದೂತ ಭೂಮಿಯ ಅದಕ್ಕಾಗಿ ಬೇಕಾದಂತಹ ಸ್ವಾರ್ಥತ್ಯಾಗವನ್ನು ಮಾಡಬೇಕೆಂಬ ಭಾವನೆ ಪ್ರತಿಯೊಬ್ಬ ಫಿನ್ನನಲ್ಲಿ ಜಾಗೃತವಾಯಿತು. ಫಿನ್‌ಲಂಡು ಹೀಗೆ ಸ್ವತಂತ್ರ ರಾಷ್ಟ್ರವಾಗಿ ಜಗತ್ತಿನಲ್ಲಿ ಮೆರೆಯಹತ್ತಿತು. ೧೯೧೦ರಲ್ಲಿ ರಶಿಯ ಸರಕಾರವು ಫಿನ್‌ರ ಮೇಲೆ ದಬ್ಬಾಳಿಕೆಯನ್ನು ನಡೆಸಿತು. ಅವರಲ್ಲಿ ಬೆಳೆಯುತ್ತಿದ್ದ ರಾಷ್ಟ್ರೀಯತ್ವವನ್ನು ಕುಗ್ಗಿಸಲೂ ಪ್ರಯತ್ನ ಮಾಡಹತ್ತಿದರು. ಆದರೆ ಫಿನ್ನರು ಇದನ್ನು ಒಳ್ಳೇ ಶೌರ್ಯದಿಂದ ಮತ್ತು ಸಂಘಟಿತವಾಗಿ ಎದುರಿಸಿದರು. ಆದರೆ ಕೆಲಸಮಯ ರಶಿಯರು ಅವರನ್ನು ಪರಾಜಯಗೊಳಿಸಿದರೂ ೧೦ ವರ್ಷಗಳ ಮಹಾಯುದ್ಧದ ಅನಂತರವೇ ಮತ್ತೆ ಫಿನ್‌ಲಂಡವು ಸ್ವತಂತ್ರವಾಯಿತು

ಯಾದವೀ ಕಲಹ

ರಶಿಯದಲ್ಲಿ ನಡೆದ ಬೋಲ್ಶೆವಿಕ್ ಕ್ರಾಂತಿಯಿಂದ ಫಿನ್‌ಲಂಡದಲ್ಲಿ ಮತ್ತೆ ಗೊಂದಲವುಂಟಾಯಿತು. ರಶಿಯದಿಂದ ಕ್ರಾಂತಿಕಾರರು ಇಲ್ಲಿಗೆ ಬಂದು ಇಲ್ಲಿಯೂ ಬೋಲ್ಶೆವಿಜಂದ ಪ್ರಚಾರಮಾಡಲು ಪ್ರಯತ್ನಿಸಿದರು. ಭಯಂಕರ ಸ್ವರೂ



ಫಿನ್‌ಲೆಂಡಿನ ರಾಜಧಾನಿ ಹೆಲ್ಸಿಂಕಿಯಲ್ಲಿರುವ
ಪಿನ್ನರ ಪಾರ್ಲಿಮೆಂಟ್ ಭವನ

ವದ ಯಾದವೀ ಕಲಹವು ನಡೆದು ದೇಶವು ಇಬ್ಭಾಗವಾಯಿತು. ಸಾವಿರಾರು ಜನ ಫಿನ್ನರು ತುರಂಗಗಳಲ್ಲಿ ಕೊಳೆಯಹತ್ತಿದರು. ರಾಷ್ಟ್ರಾಭಿಮಾನಕ್ಕಾಗಿ ಅನೇಕರು ಕೊಲ್ಲಲ್ಪಟ್ಟರು ಆದರೆ ಸಂಘಟನೆ ದೇ



ಫಿನ್‌ಲೆಂಡಿನ ಸೈನ್ಯಾಧಿಕಾರಿ ಫೀಲ್ಡ್ ಮಾರ್ಶಲ್
ಕೆ. ಜಿ. ಮೆನ್ನೆರಿಯಮ್.

ಶಾಭಿಮಾನಗಳು ಅದ್ವೀತಿಯವಾಗಿದ್ದುವು. ಅವುಗಳ ಸಹಾಯದಿಂದ ಫಿನ್ನರು ಬೋಲ್ಶೇವಿಕರನ್ನು ಹೊಡೆದೋಡಿಸಿ ಮತ್ತೆ ಸ್ವಾತಂತ್ರ್ಯವನ್ನು ಸ್ಥಾಪಿಸಿಕೊಂಡರು. ರಶಿಯದ ಕೈವಾಡವು ಇನ್ನು ಮುಂದೆ ಎಂದೂ ನಡೆಯಗೊಡದಂತೆ ಅವರು ನಿರ್ಧರಿಸಿದರು.

ರಷ್ಯದ ಪೆಶುಬಲ

ಆದರೆ ಇಂದು ಮತ್ತೆ ರಶಿಯರು ಯಾದವೀ ಕಲಹವನ್ನು ಹಬ್ಬಿಸಿಯೇ ತಮ್ಮ ಬೇಳೆಯನ್ನು ಬೇಯಿಸಿಕೊಳ್ಳಲು ಹವಣಿಸಿದ್ದಾರೆ ಫಿನ್ನರಲ್ಲಿಯೇ ಕೆಲವು ಮನೆಮುರುಕರನ್ನು ಹುಡುಕಿ ಗೊಂಬೆ ಸರಕಾರವನ್ನು ಸ್ಥಾಪಿಸಿ ಆ ಸರಕಾರದೊಡನೆ ಒಪ್ಪಂದ ಮಾಡಿಕೊಂಡಿದ್ದಾರೆ. ಮೊದಲಿನಿಂದ ಇದ್ದ ಸರಕಾರವನ್ನು ತಾವು ಮಾನ್ಯ ಮಾಡುವುದಿಲ್ಲವಾಗಿ ಅವರು ಹೇಳಹತ್ತಿದ್ದಾರೆ. ಇಂಥ ಉಜ್ವಲ ಇತಿಹಾಸವುಳ್ಳ ಫಿನ್‌ರಲ್ಲಿಯ ಮನೆಮುರುಕ ದೇಶದ್ರೋಹಿಗಳ ಸ್ವಾರ್ಥ ಮಹತ್ವಾಕಾಂಕ್ಷೆಗಳಿಂದ ಎಂಥ ಅನಾಹುತ ಸಂಭವಿಸುತ್ತಿದೆಂಬುದು ಫಿನ್‌ಲಂಡಿನ ಇತ್ತೀಚಿನ ಘಟನೆಗಳಿಂದ ಎಲ್ಲರಿಗೂ ಗೊತ್ತಾಗುವುದು.

THE

BANK OF MANGALORE LTD.,

MANGALORE

ESTD. 1931

Branches:-

Mudabidri & Padubidri.

Fixed Deposits will be received at following rates of interest

For 3 months		3½%
„ 6 „		4%
„ 12 „		5%
„ 24 „	& upwards	5½%

Interest Payable Quarterly.

Savings Bank deposit 3½% on daily balances.

All kinds of bankingbusiness transacted

ಚೆಂಬರ್ಲೀನರ ಮಾತಿಗೆ ಗಾಂಧಿಜಿಯವರ ಸ್ವನ್ನೋಕ್ತಿ!

ಸಾಮ್ರಾಜ್ಯಶಾಹಿಯ ಬಹಿರಂಗ ಸ್ವರೂಪ!

ಲಂಡನಿನ ನ್ಯೂಸ್ ಕ್ರಾನಿಕಲ್ ಪತ್ರಿಕೆಗೆ ಚೆಂಬರ್ಲಿನರು, ಬ್ರಿಟಿಷ್ ಸರ್ಕಾರವು ಸಾಮ್ರಾಜ್ಯಶಾಹಿಧೋರಣೆಯದಲ್ಲವೆಂದು ಹೇಳಿದ ಮಹಾತ್ಮರು ಮಾತಿಗೆ ಈ ಸಾರಾಂಶದ ಉದಾಹರಣೆಯ ಉತ್ತರ ಕೊಟ್ಟಿರುತ್ತಾರೆ.

"ಬ್ರಿಟಿಷರು ಕೆನಿಯಾದಲ್ಲಿ ಆಚರಿಸುವ ಧೋರಣೆ, ಜಂಜಿಬಾರಿನ ಲವಂಗ ವಿಚಾರ, ಒಟ್ಟಾವಾ ಒಪ್ಪಂದ, ನಾಗರಿಕರಲ್ಲವೆಂದು ಅನ್ಯ ಜನಾಂಗದವರನ್ನು ಸುಲಿಗೆಮಾಡುವ ಯತ್ನ ಇವುಗಳನ್ನು ಪರೀಕ್ಷಿಸಿದರೆ ಸಾಮ್ರಾಜ್ಯಶಾಹಿಯು ಕೊನೆಗೊಂಡಿದೆಯೆಂದು ಅರ್ಥವಾಗುವುದಿಲ್ಲ. ಹಿಂದೀಯ ಆಶ್ರಿತರಾಜರ ಮೇಲೆ ನಡೆಸುತ್ತಿರುವ ಅಧಿಕಾರವು ಪ್ರಜಾಪ್ರಭುತ್ವಕ್ಕೆ ಸರಿಯಾದುದಲ್ಲ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಅಧಿಕಾರದ ಬೆಂಬಲವುಳ್ಳ ಅನೇಕ ಆಶ್ರಿತರಾಜ್ಯಗಳ ನಿರಂಕುಶ ಆಳ್ವಿಕೆಯಲ್ಲಿ ಹಿಂದೀ ಪ್ರಜೆಗಳು ನರಳುತ್ತಿದ್ದಾರೆ.

"ಹಿಂದೂಸ್ಥಾನದ ಸಮಸ್ಯೆಯನ್ನು ಹಿಂದೂಮುಸ್ಲಿಂ ಭೇದವನ್ನೆಬ್ಬಿಸಿ, ಆ ತಡೆಯ ಮೇಲೆ ಹೊರಿಸುವುದರ ಅರ್ಥವೇನು? ಈ ದೇಶದ ಸ್ವಾತಂತ್ರ್ಯದ ವಿಷಯ ದೇಶದ ಅಭಿಪ್ರಾಯವನ್ನು ಕೇಳಲಿ. ಹಿಂದೂಸ್ಥಾನದ ಜನರ ಅಭಿಪ್ರಾಯವು ಅನುಗುಣವಾಗಿದ್ದರೆ ಸ್ವಾತಂತ್ರ್ಯ ಕೊಡಲು ಆಕಂಕವೇನು? ಪ್ರಜಾಪ್ರತಿನಿಧಿ ಸರಕಾರವನ್ನು ರಚಿಸಲು ತೊಂದರೆಯೇನು? ಅಲ್ಪಸಂಖ್ಯಾಕರಿಗೆ ಆವಶ್ಯವಿದ್ದರೆ ಮತದಾನದ ಹಕ್ಕುಕೊಡಬಹುದು ಹೀಗೆ ಹಿಂದೀಯರ ಜನಮತವನ್ನು ಸಂಗ್ರಹಿಸಿ ಮುಂದೆ ರಾಜ್ಯಘಟನೆಯನ್ನು ನಿರ್ಣಯಮಾಡುವುದಿಲ್ಲವೇಕೆ?

'ಹಿಂದೂಸ್ಥಾನವನ್ನು ಸ್ವಾಧೀನದಲ್ಲಿಟ್ಟುಕೊಂಡ ಬ್ರಿಟನು ಇಲ್ಲಿನ ಜನಧನಗಳನ್ನು ತನಗೆ ಬೇಕಾದಂತೆ ಉಪಯೋಗಿಸಬಹುದು. ಹಿಂದೀಯರು ಸಶಸ್ತ್ರರಾಗಿ ದಂಗೆಯೆಬ್ಬಿಸಲಾರರು. ಆದರೆ ಜನತೆಯ ನೈತಿಕಸಹಾಯವನ್ನು ಬ್ರಿಟನು ಪಡೆಯಬೇಕಾದರೆ ಹಿಂದೀಯರಿಗೆ ಸ್ವಾತಂತ್ರ್ಯ ಭರವಸೆಯಾಗಬೇಕು ಬ್ರಿಟಿಷರ ಮಿತ್ರನಾದ ನನಗೆ ಅವರು ಜಯಿಸಬೇಕೆಂದಿದೆ. ಆದರೆ ಅವರು ತಮ್ಮ ಆಯುಧದಿಂದ ಮಾತ್ರ ಜಯಿಸಲಾರರು. ಸಾಮ್ರಾಜ್ಯವನ್ನು ಬೆಳೆಸಬೇಕೆಂಬ ದುರಾಸೆಯಿದ್ದೂ, ಲೋಕದಲ್ಲಿ ಹಸಿ ಸುಳ್ಳನ್ನು ಪ್ರಚಾರ ಮಾಡುವುದರಿಂದ ಜನರು ಬೇಸರಗೊಂಡಿದ್ದಾರೆ'.

ಕಾಂಗ್ರೆಸು ಮತ್ತು ವಿಶ್ವಶಾಂತಿ

ಗಾಂಧಿಜಿಯವರ ವಿವರಣೆ

'ಬ್ರಿಟಿನಿಗೆ ನೈತಿಕ ಸಹಾನುಭೂತಿ ಮಾತ್ರ, ಧನ ಜನ ಸಹಾಯವಿಲ್ಲ'

ಗಾಂಧಿಜಿಯವರಿಗೆ ಆಂಗ್ಲೇಯ ಮಿತ್ರರೊಬ್ಬರು, ಬರೆದ ಪತ್ರಕ್ಕೆ ಉತ್ತರವಾಗಿ, ಹರಿಜನದಲ್ಲಿ ಈ ಸಾರಾಂಶದ ಒಂದು ಲೇಖನ ಬರೆಯುತ್ತಾರೆ.

'ಈ ಮಿತ್ರರ ಕಾಗದದಲ್ಲಿ ಹಲವು ಮಂದಿ ನನ್ನ ಆಂಗ್ಲೇಯ ಮಿತ್ರರು ನನಗೆ ಕೊಡುತ್ತಿರುವ ಗೌರವ ವಿಷಯವನ್ನು ಪ್ರತಿಫಲಿಸಿ ತಿಳಿಸುತ್ತದೆ. ಜಗತ್ತಿನ ಶಾಂತಿಯಂಕಹ ವಿಷಯದ ಕಡೆಗೆ ನನ್ನನ್ನು ನಿರೀಕ್ಷಿಸುತ್ತಿರುವ ಆದರ ಆಸೆಯನ್ನು ಪೂರ್ಣಮಾಡಲು ನಾನೆಷ್ಟರ ದುರ್ಬಲನೆಂಬುದು ನನಗೆ ತಿಳಿದಿದೆ. ಹಿಂದೂದೇಶವು ಸ್ವಾತಂತ್ರ್ಯ ನಡೆಯಲು ಶಸ್ತ್ರದ ದಂಗೆಯ ಬದಲು ಬಲಶಾಲಿಗಳಾಗಿದ್ದವರು ಮಾಡುವ ಅಹಿಂಸಾ ಯುದ್ಧದ ಉತ್ತಮಆದರ್ಶವನ್ನು ತೋರಿಸಿದೆ ಎಂದು ನಾನು ನಂಬುವುದಿಲ್ಲ ದುರ್ಬಲತೆಯಿಂದ ಅಹಿಂಸೆಯ ತತ್ವದ ಸಂಗ್ರಾಮ ಹೂಡಿದೆಯೆಂಬುದು ನಿಜ. ಇದೂ ನನ್ನ ಸಂಶೋಧನೆಯಲ್ಲ. ಬ್ರಿಟನು ಪ್ರಾಣ್ಸುಗಳಿಗೆ ನಾನು ಸಹಾನುಭೂತಿ ತೋರಿಸಿದುದರಿಂದ ಶಸ್ತ್ರ ಯುದ್ಧದಲ್ಲಿ ಪ್ರೋತ್ಸಾಹವುಳ್ಳವನೆಂದು ತಿಳಿಯಬಾರದು. ಬ್ರಿಟನಿಗೆ ಕಾಂಗ್ರೆಸು ಕೊಡುವ ಸಹಾಯವು ಕೇವಲ ನೈತಿಕ ಸಹಾಯ, ಧನಜನ ಬೆಂಬಲವಲ್ಲ ಒಬ್ಬ ಅಹಿಂಸಾವಾದಿಯು ನ್ಯಾಯ ಅನ್ಯಾಯಗಳನ್ನು ತಿಳಿದು ನ್ಯಾಯಕ್ಕೆ ಬೆಂಬಲ ಕೊಡಬೇಕು. ಅಬಿಸೀನಿಯಾ, ಜೆಕಸ್ಲೊವಿಯಾ ಪೋಲೆಂಡುಗಳ ವಿಷಯವಾಗಿ ನಾನು ಹಾಗೆ ಸಹಾನುಭೂತಿ ತೋರಿಸಿದ್ದೆನು. ಇಂದಿನ ಸಂದರ್ಭದಲ್ಲಿ ಚೆಂಬರ್ಲಿನರನ್ನುವಂತೆ, ಕಾಂಗ್ರೆಸು ಬ್ರಿಟನನ್ನು ಆಧರಿಸಬೇಕಿದ್ದರೆ ಅದಕ್ಕೆ ಸ್ವಾತಂತ್ರ್ಯದಾನವಾಗಬೇಕು. ಹಾಗಾದರೆ ಭಾರತವು ನೈತಿಕ ಸಹಾಯ ಕೊಡುವುದು.

'ಆದುದರಿಂದ ನಾವಿಂದು ಬ್ರಿಟನಿನ ಸಂಕಷ್ಟದ ಸಮಯ ಸಾಧಿಸಿ ಲಾಭವಡೆಯುವ ಹಾಗಿಲ್ಲ. ಚಳವಳಿ ಹೂಡಲು ನಿಶ್ಚಯಿಸಿಲ್ಲ ಸತ್ಯಾಗ್ರಹ ಹೂಡಬಾರದಾಗಿ, ಆಶಾಂತರಾಗಿರುವ ಭಾರತೀಯರಿಗೆ ಸಮಾಧಾನ ಹೇಳಿದೆ. ಬ್ರಿಟನಿಗೆ ಕಾಂಗ್ರೆಸು ಸಂಧಿಯ ಬಾಗಿಲು ತೆರೆದಿಟ್ಟಿದೆ. ಶಾಂತಿಯಲ್ಲಿ ಹೆಚ್ಚಿನ ಕೆಲಸ ಮಾಡುವ ಮನಸ್ಸಿದೆ. ಬ್ರಿಟನು ಸ್ವಾತಂತ್ರ್ಯ ಕೊಟ್ಟಿದೆ. ನಾನು ಆ ಕೆಲಸವನ್ನು ಮಾಡಬಹುದು. ಆದರೆ ನಾನು ಯಾರು? ದೇವರು ಕೊಟ್ಟದ್ದಲ್ಲದೆ ಹೆಚ್ಚಿನ ಬಲ ನನ್ನಲ್ಲಿಲ್ಲ. ನನ್ನ ದೇಶ ಭಾಂಧವರ ಮೇಲೆ ಕೇವಲ ನೈತಿಕನಲ್ಲದೆ ಹೆಚ್ಚಿನ ಅಧಿಕಾರ ನನಗಿಲ್ಲ ದೇವರು, ಜಗತ್ತಿನಲ್ಲಿ ಭಯಂಕರ ಹಿಂಸೆ ನಡೆಯುತ್ತಿರುವಾಗ ನನ್ನನ್ನು ಅಹಿಂಸೆಯ ಪ್ರಸಾರಕ್ಕಾಗಿ ಒಂದು ಸಾಧನವಾಗಿ ಹಿಡಿದಿದ್ದಾನೆ ನನ್ನ ದೊಡ್ಡ ಅಸ್ತ್ರವೆಂದರೆ ಮೌನ ಪ್ರಾರ್ಥನೆ. ಶಾಂತಿಯ ಮೂಲ ಕಾರಣವು ದೇವರ ಕೈಯಲ್ಲಿದೆ ಅವನ ಕುರಿತು ನಾವು ಏನೂ ತಿಳಿದಿಲ್ಲ ಎಲ್ಲ ಅವನ ಇಚ್ಛೆಯ ಅಧೀನವಾಗಿದೆ. ಆತನ ಅಸ್ಪೃಶ್ಯ ಕಿರಣ ದರ್ಶನವು ನನ್ನಲ್ಲಿ ಭವಿಷ್ಯತ್ತಿನ ಕುರಿತು ಆನಂದ, ಆಸೆ ವಿಶ್ವಾಸಗಳನ್ನು ತುಂಬಿಸುತ್ತದೆ"

ಮುಸ್ಲಿಮರ ವಿಮೋಚನೆಯದಿನವಂತೆ

—ಜಿನ್ನರ ರಾಷ್ಟ್ರದ್ರೋಹೀ ಪ್ರಕಟಣೆ—

ಮುಸ್ಲಿಂ ಲೀಗಿನ ಅಧ್ಯಕ್ಷರಾದ ಜಿನ್ನಾರವರು ದಶಂಬರ ೨೨ನೆಯ ತಾರೀಕನ್ನು ವಿಮೋಚನೆಯ ದಿನವಾಗಿ ಅಖಿಲ ಭಾರತದಲ್ಲಿ ಮುಸ್ಲಿಂ ಲೀಗಿನವರು ಆಚರಿಸಬೇಕೆಂದು ಒಂದು ಪ್ರಕಟಣೆಯನ್ನು ಕೊಟ್ಟಿರುತ್ತಾರೆ. ಆ ದಿನದ ಸಭೆಯಲ್ಲಿ ಮಂಜೂರು ಮಾಡುವ ಬಗ್ಗೆ ಒಂದು ದೀರ್ಘರಠಾವನ್ನೂ ಕೊಟ್ಟಿರುತ್ತಾರೆ ಆ ರಠಾವಿನ ಸಾರಾಂಶವಿಂತಿದೆ. ಕಾಂಗ್ರೆಸು ಸರಕಾರಗಳು ಬೇರೆ ಬೇರೆ ಪ್ರಾಂತಗಳಲ್ಲಿ ರಾಜಿನಾಮೆಕೊಟ್ಟುದರಿಂದ ಮುಸ್ಲಿಮರಿಗೆ ವರವಾನಂದವಾಗಿದೆ. ಏಕೆಂದರೆ ಕಾಂಗ್ರೆಸು ಸರಕಾರಗಳ ಅವಧಿತದಲ್ಲಿ ಮುಸ್ಲಿಮರಿಗೆ ಅನ್ಯಾಯ ವಾಗಿದೆ. ಕಾಂಗ್ರೆಸು ಅಲ್ಪ ಸಂಖ್ಯಾಕರ ವಿಷಯ ಅವರ ಹಕ್ಕು ರಕ್ಷಣೆಯ ತತ್ವವನ್ನು ಇಟ್ಟುಕೊಂಡಿರುವುದಾದರೂ ಅದು ಅದಕ್ಕೆ ಸರಿಯಾಗಿ ನಡೆದಿಲ್ಲ. ಆದುದರಿಂದ ಇಂದು ಅದು ರಾಜಿನಾಮೆ ಕೊಟ್ಟದ್ದು ಮುಸ್ಲಿಮರಿಗೆ ವಿಮೋಚನೆಯಂತೆ ಆಗಿದೆ. ಸರಕಾರದವರು ಕಾಂಗ್ರೆಸುಮಂತ್ರಿಗಳ ತತ್ವವನ್ನು ಪರೀಕ್ಷಿಸಬೇಕೆಂಬ ಅರ್ಥದ ರಠಾವನ್ನು ಎಲ್ಲಾ ಸಭೆಗಳಲ್ಲಿಯೂ ಮಂಜೂರು ಮಾಡಬೇಕಾಗಿ ಒಂದು ಪ್ರಕಟಣೆ ಕೊಟ್ಟಿದ್ದಾರೆ.

ಅದಕ್ಕೆ ಗಾಂಧಿಜಿಯವರ ಉತ್ತರ

ಗಾಂಧಿಜಿಯವರು ಜಿನ್ನಾಸಾಹೇಬರ ಮೇಲಿನ ಪ್ರಕಟಣೆಯ ವಿಷಯ ತಮ್ಮ ತಮ್ಮ ತೀವ್ರ ವಿಷಾದವನ್ನು ಸೂಚಿಸಿ ಒಂದು ಪ್ರಕಟಣೆಯನ್ನು ಕೊಟ್ಟಿದ್ದಾರೆ.

"ಜಿನ್ನಾ ಸಾಹೇಬರು ದೂರುಕೊಡುವ ಮತ್ತು ನಿರ್ಣಯಮಾಡುವ ಎರಡೂ ಜವಾಬ್ದಾರಿಕೆಯನ್ನು ತೆಗೆದುಕೊಂಡ ಹಾಗೆತೋರುತ್ತದೆ ತಾವು ಹೊರಿಸುವ ಅಪವಾದನೆಯ ತೀರ್ಮಾನಗೊಂಡಮೇಲೆ ಅದನ್ನು ಹೀಗೆ ಆಚರಿಸಬೇಕೆಂದು ಹೇಳಿದ್ದರೆ ಚಿಂತೆಯಿರಲಿಲ್ಲ ಭಾರತದ ಮುಸ್ಲಿಮರ ಅಪ್ಪನೂ ಇಸ್ಲಾಮಿನ ಗೆಳೆಯನೂ ಎನಿಸಿದ ನನ್ನ ಬಿನ್ನಹವನ್ನು ಮುಸ್ಲಿಂ ಬಂಧುಗಳು ಆಲಿಸಬೇಕಾಗಿ ಕೇಳಿಕೊಳ್ಳುತ್ತೇನೆ

"ಜಿನ್ನಾ ಸಾಹೇಬರು ಗವರ್ನರರು ಕಾಂಗ್ರೆಸು ಮಂತ್ರಿಗಳು ಮಾಡಿದ ಅನ್ಯಾಯವನ್ನು ಪರಿಶೀಲಿಸಬೇಕೆಂದು ಅವರು ಪ್ರಕಟಿಸಿದುದರ ವಿಷಯ ನಾನು ಅವರೊಡನೆ ಸಮ್ಮತಿಯುಳ್ಳವನಾಗಿದ್ದೇನೆ. ರಾಷ್ಟ್ರಪತಿಗಳಿಗೆ ಬರೆದ ಪತ್ರದಲ್ಲಿ ಅವರು ತಾವು ತಮ್ಮ ದೂರನ್ನು ವೈಸರಾಯರ ಮುಂದಿರಿಸಿದ್ದಾರೆಂದು ಬರೆದಿದ್ದಾರೆ. ವೈಸರಾಯರು ಆ ಕರಿತು ಆದಷ್ಟು ಬೇಗನೆ ತಮ್ಮ ಅಭಿಪ್ರಾಯವನ್ನು ಪ್ರಕಟಿಸುವರಾಗಿ ನಾನು ಅಭಿಪ್ರಾಯಪಡುತ್ತೇನೆ. ವೈಸರಾಯರ ಮತ್ತು ಗವರ್ನರರ ತೀರ್ಮಾನವನ್ನು ಜಿನ್ನಾಸಾಹೇಬರು ಕಾಯಬೇಕು. ಕಾಂಗ್ರೆಸ್ಸನ್ನು ಭಾರತದ ಮುಸ್ಲಿಮರು ಖಂಡಿಸಬೇಕೆಂದು ಅವರು ಸೂಚಿಸುವುದಕ್ಕಿಂತ ಮೊದಲು ಈ ಕೆಲಸ ಮಾಡಬೇಕು. ಆದುದರಿಂದ ಜಿನ್ನಾ ಸಾಹೇಬರು ತಮ್ಮ ಪ್ರಕಟಣೆಯನ್ನು ಹಿಂದೆಗೆದುಕೊಳ್ಳುವ ಬುದ್ಧಿವಂತಿಕೆ ತೋರಿಸಬೇಕು".

ಜಿನ್ನಾರವರ ಪ್ರಕಟಣೆಯನ್ನು ಅನೇಕ ಮಂದಿ ಮುಸ್ಲಿಂಧುರೀಣರು ರಾಷ್ಟ್ರದ್ರೋಹಾತ್ಮಕವೆಂದು ಖಂಡಿಸಿದ್ದಾರೆ. ಸರ್ದಾರವಲ್ಲಭಭಾಯಿರವರು ತೀವ್ರ ಉತ್ತರವಿತ್ತಿದ್ದಾರೆ. ಶ್ರೀ ಅರುಂಡಲೆಯವರು ತಪ್ಪಾಯಿತು ಎಂದಿದ್ದಾರೆ. ಭಾರತದ ಎಲ್ಲಾ ಕಡೆಯಲ್ಲಿಯೂ ಬಹಳ ಅಸಮಾಧಾನವು ಕೇಳಿಬಂದಿದೆ.

ತೋಕಶಾಂತಿಯ ಕಾರ್ಯವು ಮಹಾತ್ಮರಿಂದ ಆಗುವುದೆ?

'ದೇವರೇ ಸರ್ವಶಕ್ತನು'—

ಸಾಮ್ರಾಜ್ಯಶಾಹಿಯ ದಿಗಂಬರ ರೂಪ! ಜಿನ್ನರ ಅಪ್ರಬುದ್ಧ ಪ್ರಲಾಪ!

THE PIE-MONEY BANK LTD.,

Maidan Road, MANGALORE

Undertakes all kinds of Banking Business Current account at 2½%per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction [illegible] ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public

Apply for particulars—

K. R. GURU, *Managing Director*

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್ (ರಿಜಿ)

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

ಒಂದು ಸಣ್ಣ ಕತೆ:

ಚಿತೆಯ ಮೇಲಿನ ಮದುವೆ

[ಅನುವಾದಕ. ಕಟಪಾಡಿ ಶ್ರೀನಿವಾಸ ಶೆಟ್ಟಿ, ಅಧ್ಯಾಪಕ, ಕಾರ್ಕಳ]

ಅವನು ಲೇಖಕ ಮತ್ತು ಕವಿ, ನೋಡಲಿಕ್ಕೆ ಸುಂದರ, ಮತ್ತು ಪ್ರೌಢಕಾಯ, ವಾಯ ೨೦-೨೫ ಇರಬಹುದು. ಹೆಸರು ಆನಂದಕುಮಾರನೆಂದು.

ಅವನಿಗೆ ಒಬ್ಬ ಬಾಲಿಕೆಯೊಂದಿಗೆ ಪ್ರೇಮೋತ್ಪನ್ನವಾಯಿತು. ಕೃಶ ಶರೀರ, ಸುಂದರ ರೂಪು ಅವಳದು. ಗುಂಗುರು ಗುಂಗುರಾದ ತಲೆಕೂದಲು—ಹುಣ್ಣಿಮೆಯ ಪೂರ್ಣ ಚಂದ್ರನ ಸೌಂದರ್ಯವನ್ನೂ ನಾಚಿಸುವ ಮುಖ; ವಾಯ ೧೫-೧೬ ಅಷ್ಟೇ!

ಹೀಗಿದ್ದಳು ಆ ಹುಡುಗಿ! ಅವಳ ಹೆಸರು ಶಾಂತಿ ಎಂದು.

೨

ಇಬ್ಬರೂ ಗೋಮತಿ ತೀರದಲ್ಲಿ ಕೂತು ಗಂಟೆ ಕಾಲ ಮಾತನಾಡುತಿದ್ದರು. ಅಲ್ಲಿಯ ಸೌಂದರ್ಯದ ಸವಿಯನ್ನು ಸವಿಯುತ್ತ ಇರುತಿದ್ದರು—ಸಮುದ್ರದ ಅಪಾರ ಜಲರಾಶಿ, ಅದರೊಳಗಿಂದ ಎದ್ದು ಬೀಳುವ ಜಲತರಂಗಗಳು, ಸುತ್ತ ಮುತ್ತಲಿನ ಕಾಡುಗಿಡಗಳು, ಮತ್ತು ಅವುಗಳ ಮೇಲೆ ಅರಳಿ ಸುಗಂಧವನ್ನು ಬೀರುವ ಸುಂದರ ಪುಷ್ಪಗಳು! ನಿತ್ಯವೂ ಇದೇ ಕ್ರಮ. ಪ್ರತಿ ದಿನ ಅವರು ಬರುತಿದ್ದರು ಅಲ್ಲಿ ಬಂದು ಕೂತುಕೊಳ್ಳುತಿದ್ದರು, ಮತ್ತು ಆ ಸೌಂದರ್ಯದ ಸವಿಯನ್ನು ಸವಿಯುತಿದ್ದರು.

ಪ್ರತಿ ದಿನದಂತೆ ಆ ದಿನವೂ, ಸಾಯಂಕಾಲ ಅವರು ಗೋಮತಿಯ ದಂಡೆಯ ಮೇಲೆ ಕೂತಿದ್ದರು. ಆನಂದಕುಮಾರನು ಹೆದರಿ ಹೆದರಿ ತನ್ನ ಹೃದಯ ಸ್ಥಿತಿಯನ್ನು ಅರುಹಿದನು, ಪ್ರೇಮಭಿಕ್ಷೆಯನ್ನು ಬೇಡಿದನು

ಶಾಂತಿ ಅವನನ್ನು ನೋಡಿದಳು. ನೋಡಿದ ಮಾತ್ರಕ್ಕೇ ಅವಳು ಲಜ್ಜೆಯಿಂದ ಕಲೆಯನ್ನು ತಗ್ಗಿಸಿದಳು ಕವಿಯ ಪ್ರಾರ್ಥನೆಯು ಸ್ವೀಕೃತವಾಯಿತು!

ಒಂದೇ ಪ್ರೇಮಸಮುದ್ರದಲ್ಲಿ ಇಬ್ಬರೂ ಮುಳುಗಿದ್ದರು, ಒಂದೇ ಪ್ರೇಮಾಗ್ನಿಯು ಇಬ್ಬರ ಹೃದಯಗಳನ್ನು ಉರಿಸಿ ಬಿಟ್ಟಿತ್ತು.

ಶಾಂತಿಯ ತಂದೆತಾಯಿಗಳು ಇದನ್ನು ಕೇಳಿದರು, ಮಗಳನ್ನೂ ಕರೆಸಿ ಮಾತನಾಡಿಸಿದರು! ಗದರಿಸಿ 'ಶಾಂತಿ! ನೀನು ನಮ್ಮ ಹೆಸರಿಗೆ ಕಲಂಕ ತರುವಿ ನೋಡು ತಿಳಿದುಕೊ, ನಿನ್ನ ನಿಶ್ಚಯವು ಪ್ರಕಾಶನೊಂದಿಗೆ ಆಗಿಬಿಟ್ಟಿದೆ. ವಿವಾಹವೂ ಅವನೊಂದಿಗೇ ಆಗುವುದು—ಜಾಗ್ರತೆ! ಇನ್ನು ಮನೆಯಿಂದ ಹೊರಗೆ ಒಂದು ಹೆಜ್ಜೆಯನ್ನಾದರೂ ಇಡಬಾರದು' ಎಂದು ಅವರು ಆಳ್ಗೆ ಕಟ್ಟುನಿಟ್ಟನ್ನು ಕೊಟ್ಟರು.

೪

ಒಂದು ವಾರವಾಯಿತು; ಶಾಂತಿಯು ಗೋಮತೀ ತೀರಕ್ಕೆ ಬರುತ್ತಿಲ್ಲ. ಇನ್ನು ಕೆಲವೇ ದಿನಗಳಲ್ಲಿ ಅವಳ ವಿವಾಹ ವಾಗುವುದು ಅವಳ ತಾಯಿತಂದೆಗಳು ಗೋಮತೀ ತೀರಕ್ಕೆ ಅವಳನ್ನು ಹೋಗಕೂಡದೆಂದಿದ್ದಾರೆ. ಅವಳು ಅಲ್ಲಿಗೆ ಹೋದರೆ ಅವರ ಹೆಸರಿಗೆ ಕಲಂಕ ಬರುವುದಂತೆ!

ಕತ್ತಲಾದ ಕೋಣೆಯಲ್ಲಿ ಶಾಂತಿಯು ಎರಡೂ ಕೈಗಳಿಂದ ಮೋರೆ ಮುಚ್ಚಿಕೊಂಡು ಮಲಗಿದ್ದಾಳೆ ಜನರು ಅಂದುಕೊಂಡಿರಬಹುದು—ಶಾಂತಿ ನಿದ್ರೆಮಾಡುತಿದ್ದಾಳೆಂದ. ಇಲ್ಲ, ಅವಳು ಒಳಗಿಂದೊಳಗೆಯೇ ಅಳುತಿದ್ದಾಳೆ. ಹೃದಯ ಮನಸ್ಸುಗಳು ಹೇಳುತ್ತವೆ—ನಡಿ! ಗೋಮತಿ ತೀರಕ್ಕೆ' ಅಲ್ಲಿಯೇ ನನಗೆ ನಿಜವಾದ ಸುಖವು ಪ್ರಾಪ್ತವಾಗುವುದು. ಆದರೆ ಮರ್ಯಾದೆ ಹೇಳುತ್ತದೆ—'ಜಾಗ್ರತೆ, ಅಲ್ಲಿಗೆ ಹೋದರೆ ಹೆಸರಿಗೆ ಕಲಂಕ ಬರುವುದು!' ಲಜ್ಜೆಯು ಹೇಳುತ್ತದೆ—'ಜಾಗರ, ಜಗತ್ತು ನಗುವುದು!' ಆದರೆ ಅಭಿಮಾನವು ಹೇಳುತ್ತದೆ—'ಇಲ್ಲ, ಕೂಡದು, ಸಂಯಮಬೇಕು, ಆದರೆ ಹೀಗೆ ಎಂದೂ ಮಾಡಕೂಡದು!' ಕೊನೆಗೆ ಅಭಿಮಾನದ ನಿಜವಾದ ವಾಯಿತ ಶಾಂತಿಯ ಮನಸ್ಸಿನಲ್ಲಿಯೇ ಏನನ್ನೋ 'ನಿರ್ಧಾರ' ಮಾಡಿಕೊಂಡಳು

೫

ಈ ದಿನ ಶಾಂತಿಯ ವಿವಾಹವಾಗುವುದು. ಮನೆಯಲ್ಲಿ ಬಹಳ ಗಲಭೆ ಗಲಾಟೆ! ಕೂತಿದ ಮಂದಿಯ ಸಂತೋಷಕ್ಕೆ ಪಾರವೇ ಇಲ್ಲ. ವಾದ್ಯಘೋಷ ಮತ್ತು ನರ್ತಕಿಯರ ನರ್ತನದ ಸದ್ದು ಸಪ್ಪಳಗಳ ನಡುವೆ, ಕೂಗಿ ಮಾತನಾಡಿದ ಮಾತೂ ಕೇಳುವದಿಲ್ಲ. ತಂದೆತಾಯಿಗಳು, ಸಹೋದರರು ಬಂಧುಗಳು ಆನಂದ ಸಾಗರದಲ್ಲಿ ಮುಳುಗಿ ತೇಲುತಿದ್ದರು.

ಆದರೆ ಶಾಂತಿ—ಯಾನ ಶಾಂತಿಯ ವಿವಾಹವು ಈ ದಿನ 'ಪ್ರಕಾಶ'ನೊಂದಿಗೆ ಆಗಲಿತ್ತೋ, ಆ ಶಾಂತಿ—ಇಂದು ಮೌನಳಾಗಿದ್ದಾಳೆ, ಅಳ್ಳ, ಮೂರ್ತಿಯಂತೆ ಸುಮ್ಮಗೆ ಕೂತಿದ್ದಳು. ಏನದು, ಸರ್ವನಾಶ! ಎಲ್ಲರೂ ಸ್ತಬ್ಧ!!

೬

ಸಾಯಂಕಾಲವಾಗುತ್ತಾ ಬಂದಿತು. ಭಯಂಕರ, ಭೀಕರ, ನೀರವ ಸಾಯಂಕಾಲ. ಎರಡು ಶವಗಳು ಸ್ಮಶಾನದ ಕಡೆಗೆ ಸಾಗುತ್ತಾ ಇದ್ದವು. ಒಂದು ಕವಿ ಆನಂದಕುಮಾರನದ್ದು, ಇನ್ನೊಂದು ಮದುಮಗಳು ಶಾಂತಿಯದ್ದು.

ಚಿತೆಯು ಧೂಂ ಧೂಂ ಎಂದು ಉರಿಯತೊಡಗಿದೆ. ಇಬ್ಬರು ಪ್ರೇಮಿಗಳ ಹೃದಯಗಳು ಬೆಂದಾದುವು ನೋಡುವವರು ನೋಡಿದರು—ನಗಾರುತಿದ್ದ ಜಗ

'ನವಜೀವನ'ದಲ್ಲಿ ಗಾಂಧಿಜಿ ಮತ್ತು ಹಂಸಾ ಮೆಹ್ತಾ

ತ್ತು ಅಳುತ್ತಾ ಇತ್ತು ಹೆಸರಿಗೆ ಕಲಂಕ ತರುವವರು ಹೇಳಿದರು—'ಹೋ, ಚಿತೆಯ ಮೇಲೆ ಮದುವೆಯಾಯಿತು!' ಎಂದು

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಶ್ರಮನಂಬ್ರ 71/1939

ಕೇಶವ ಕದಂಬಳಾಯ - ಪಾದಿ

ಮತ್ತು

ಕೃಷ್ಣ ಕದಂಬಳಾಯ ಸಹಾ — ಪ್ರತಿವಾದಿಗಳು

ಇವರೊಳಗೆ

ನೆನೆ ಪ್ರತಿವಾದಿ ಶಾಸ್ತ್ರಿ ನಣೇಪಜಟ್ಟು, ಶಾಸ್ತ್ರಿ ಗೋವಿಂದ ಭಟ್ಟರ ಮಗ ಪುತ್ತೂರು ತಾಲೂಕು ನಾವೆಲ ಗ್ರಾಮದ ತಜ್ಜನ್ಮ

ಸದ್ರಿ ವಾದಿಯು ನಿಮ್ಮ ಮೇಲೆ ಕೂಡ ಪಾಕ್ಷಮಾಡಿದ ನೋಟ್ಸಿಂದ ವ್ಯಾಜ್ಯವು ನಿಮ್ಮ ಹಾಜರಿಯ ಬಗ್ಗೆ ತಾ. 21-12-1939ಕ್ಕೆ ಇ ಕೋರ್ಟಾಗಿಯದೆ. ಆ ದಿನ ನೀವು ಹಾಜರು ಆಗುವರೆ ತಪ್ಪಿದಲ್ಲಿ ನಿಮ್ಮನ್ನು ಎಕ್ಪಾರ್ಟೆ ಮಾಡಿ ವ್ಯಾಜ್ಯ ತೀರ್ಮಾನವಾಗುವುದು. ತಿಳಿದಿರುವುದು.

ಕಾಸರಗೋಡು 6-12-1939 } (Sd) B. Amrita Rao ವಾದಿ ವಕೀಲ

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಶ್ರಮನಂಬ್ರ 1939

ವಾದಿ, ಶ್ರೀ ವಿದ್ಯಾ ಸಮುದ್ರತೀರ್ಥಸ್ವಾಮಿರು ಪ್ರತಿವಾದಿರು—ಇದ್ದಿ ಕುಂಞ ಯಾನೆ ಮಹಮ್ಮದ ಶಾಫಿ ಕೂಡಾ

1ನೇ ಪ್ರತಿವಾದಿ ಇದ್ದಿಕುಂಞ ಯಾನೆ ಮಹಮ್ಮದ ಶಾಫಿ, 2ನೇ ಪ್ರತಿವಾದಿ ಇಬ್ರಾಯಿನೆ ಶಾಫಿ, ಕುಂಜತ್ತೂರು ಬಾಬಕುಂಞ ಬ್ಯಾರಿಮಕ್ಕಳು. 1ನೆಯವ ಮಂಜೇಶ್ವರ ಮಾಗಣೆ ಕುಂಜತ್ತೂರು ಗ್ರಾಮ 2ನೆಯವ ಕಾಣಿಯೂರು ಗ್ರಾಮದಲ್ಲಿ ಸಹಾ ಇರುತ್ತಾರೆ.

ವಾದಿರು ನಿಮ್ಮ ಮೇಲೆ ಮಿಗ್ದೆಸ್ಸಿಂ ಆಸ್ತಿ ಕ್ಲೈಮಗಳ ಸ್ವಾಧೀನತೆ ಬಗ್ಗೆ ಈ ಕೋರ್ಟಿನಲ್ಲಿ ದಾಕ್ಲುಮಾಡಿದ ಮೇಲ್ಕಂಡ ದಾವೆಯು ಬರುವ 1940ನೇ ಇಸವಿ ಜನವರಿ 4ನೆಯ ತಾರೀಕಿನ ಹಗಲು 10 ಘಂಟೆಗೆ ಈ ಕೋರ್ಟಿನ ಮುಂದೆ ತನ್ನಿಗೆ ಇಟ್ಟಿರುವುದರಿಂದ ಆ ದಿವಸ ನೀವು ಖುದ್ದಾಗಲೇ ವಕೀಲರ್ದ್ವಾರವಾಗಲೇ ಸದರಿ ಕೋರ್ಟ ಮುಂದೆ ಹಾಜರಾಗಿ ಉಜಾಹರಿಸತಕ್ಕದ್ದು ತಪ್ಪದರೆ ಸದ್ರಿ ವ್ಯಾಜ್ಯವನ್ನು ಏಕಪಕ್ಷವಾಗಿ ತೀರ್ಮಾನಿಸಲಾದೀತು.

ಪುತ್ತೂರು 7-12-39 } B Prabhakar Rao, Vakil for Plainbff

DIAMONDS! DIAMONDS!

BEST BRILLIANCY!

K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರವ್ಯಾಪಾರಿ.

ವಜ್ರಗಳು!

ಎಮ್ಸ್ಟರ್‌ದಮ್ಮಿನಿಂದ ಬರುವ ವಜ್ರಗಳು. ಬಜಾರ ಧಾರಣೆಗಿಂತ ಇದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತಿದೆ.

ನಮ್ಮಲ್ಲಿ ಒಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಜುನಾವಣೆಯೂ ಸಲ್ಲಕ್ಷಣಗಳೂ ತಾನೇ ಗಿಯೇ ತಿಳಿದುಬರುವುವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,

ತಯಾರಾಗಿವೆ!

1940ನೇ ಇಸವಿಯ

ಶಾರದಾ ಡೈರಿಗಳು

ಸಣ್ಣ ಮತ್ತು ದೊಡ್ಡ ಸೈಜುಗಳಲ್ಲಿ ಈಗಾಗಲೇ ಮಾರಾಟಕ್ಕೆ ಸಿದ್ಧವಾಗಿವೆ!

ದೊರೆಯುವ ಸ್ಥಳ:—

ಶಾರದಾ ಛಾಪಖಾನೆ, ಮಂಗಳೂರು

ಹಿಂದೀಯ ಕೂಲಿಗಾರರೂ ಕಾರ್ಖಾನೆಗಳ ಕಾನೂನೂ

ಅದರ ಸಂಕ್ಷಿಪ್ತ ಇತಿಹಾಸ

ಭವಿಷ್ಯದ ಗರ್ಭದಲ್ಲಿ ಆಶೆಯ ಬೆಳಕು!

ಕೂಲಿಗಾರರ ಮುಷ್ಕರಗಳು, ಸತ್ಯಾಗ್ರಹಗಳು, ಇತ್ತೀಚೆಗೆ ಹಲವು ಕಡೆಗಳಲ್ಲಿ ನಡೆಯುತ್ತಿರುವುದು ನಾವು ಓದುವ ದಿನಪತ್ರಿಕೆದ ಸುದ್ದಿಯಾಗಿದೆ! ನಮ್ಮ ಸಮೀಪದ ನಗರಗಳಲ್ಲಿಯೂ ಅಂತಹ ಘಟನೆಗಳು ನಡೆದಿವೆ. ಇವೆಲ್ಲದಕ್ಕೂ ಏನು ಕಾರಣವಿರಬೇಕೆಂದು ಈಗ ಆಲೋಚಿಸಬೇಕು. ಕೆಲಸಗಳಲ್ಲಿ ತೃಪ್ತಿ ಇಲ್ಲದಿರುವುದು, ಕಡಿಮೆ ಸಂಬಳ ಕೊಡುವುದು, ಕೂಲಿಗಾರರನ್ನು ಭಂಡವಾಳಹಂಕಿದ ಧನಿಗಳು ಕಷ್ಟಗೊಳಿಸುವುದು ಇವೇ ಎಲ್ಲದರ ಮೂಲಕಾರಣಗಳು. ಇತ್ತೀಚೆಗೆ ಕೆಲಸಮಯದಿಂದ ಈ ಕುರಿತು ರಾಜಕಾರಣ ಪಟುಗಳು ಸರಕಾರದವರೂ ತೀವ್ರ ಗಮನ ಕೊಟ್ಟಿದ್ದಾರೆ. ಹಲವು ಕಾನೂನುಗಳೂ ಆಗಿವೆ.

ಮೊದಲನೆಯ ಕೂಲಿಗಾರರ ಕಾನೂನು

ಕಳೆದ ಶತಮಾನ ಆದಿಭಾಗದಲ್ಲಿ ಜಗತ್ತಿನ ಬೇರೆಬೇರೆ ಕಡೆಗಳಲ್ಲಿ ಗುಲಾಮಗಿರಿಯನ್ನು ತೆಗೆದುಹಾಕಿದ ಬಳಿಕ, ಬೇರೆ ಬೇರೆ ಬ್ರಿಟಿಷ್ ವಸಾಹತ್ತುಗಳು ಕಡಿಮೆಯ ಕೂಲಿಯಲ್ಲಿ ಕೆಲಸಮಾಡುವ ಕೂಲಿಗಾರರ ಸಲುವಾಗಿ ಹಿಂದೂದೇಶಕ್ಕೆ ಬಂದರು. ಇಲ್ಲಿ ಕೂಲಿ ಜನರು ಧಾರಾಳ ಸಿಕ್ಕಿದರು. ಅವರನ್ನು ತಮ್ಮ ದೇಶಗಳಿಗೆ ಸಾಗಿಸಿ ದುಡಿಸಿದರು. ಆಗ ಸರಕಾರವು ಸಹಜವಾಗಿ ಆ ಕುರಿತು ವಿಚಾರ ಮಾಡಬೇಕಾಯಿತು, ಶಾಸನಮಾಡಬೇಕಾಯಿತು. ಸರಕಾರದ ಉದ್ದೇಶವು ಯಾವ ರೀತಿಯದ್ದೇ ಇರಲಿ, ಅದರ ಪರಿಣಾಮವು ಮಾತ್ರ ಜನತೆಯಲ್ಲಿ ಬಹಳವಾಗಿ ಆಯಿತು.

ಹಿಂದೂದೇಶದಲ್ಲಿ ಮೊದಲ-ಮೊದಲು ಕೂಲಿಗಾರರನ್ನು ಧನಿಗಳು ಜೀವಿಸಲು ಸಾಧ್ಯವಿಲ್ಲದಷ್ಟು ಕಡಿಮೆ ಸಂಬಳ ಕೊಟ್ಟು, ದಿನಕ್ಕೆ ಕೆಲಸಮಾಡಲು ಸಾಧ್ಯವಿಲ್ಲದಷ್ಟು ಸಮಯ ದುಡಿಸಿ, ಹೆಂಗಸರನ್ನೂ, ಸಣ್ಣ ಮಕ್ಕಳನ್ನೂ ಬಹಳವಾಗಿ ಮಿತಿಮೀರಿ ಕೆಲಸಮಾಡಿಸಿ, ರಜೆ—ವಿಶ್ರಾಂತಿ ಕೊಡದೆ, ಪೀಡಿಸುತ್ತಿದ್ದರು. ಕೆಲಸಮಾಡುವಾಗ ಅವರಿಗೆ ಒದಗಿದ ವಿಪತ್ತುಗಳಿಗೂ ಮಾಲಿಕರು ಹೊಣೆಗಾರರಾಗಿರಲಿಲ್ಲ ಅಂತೆಯೇ ೧೮೬೦ರಲ್ಲಿ ಮಾಡಿದ ಮೊದಲನೆಯ ಎರಡು ಕಾನೂನುಗಳು ಕೂಲಿಗಾರರಿಗೆ ಪ್ರಯೋಜನ ಕೊಡುವುದರ ಬದಲು ಮಾಲಿಕರಿಗೇ ಹೆಚ್ಚಿನ ಲಾಭದಾಯಕಗಳಾಗಿದ್ದುವು

ಚಾ ತೋಟಗಳಿಗೆ ಕೂಲಿಗಾರರನ್ನು ತೆಗೆದುಕೊಂಡು ಹೋಗಿ ನಿರಂತರ ದುಡಿಸುವ ವಿಷಯದಲ್ಲಿ ಒಮ್ಮೆ ಬಹಳ ಗೊಂದಲ ಹುಟ್ಟಿತು. ಅದಕ್ಕಾಗಿ ೧೮೬೩ರಿಂದ ೧೯೦೧ರ ವರೆಗೆ ಹಲವು ಕಾನೂನುಗಳಾಗಿ ತೆಗೆದುಕೊಳ್ಳುವ ಕೂಲಿಗಾರರ ರಿಜಿಸ್ಟರು, ಅವರ ಸಂಬಳ, ಅವರಿಗೆ ಇಷ್ಟೇ ಸಮಯ ದುಡಿತ, ಕರಾರುಗಳ ವಿಷಯವಾಗಿ ಹೆಚ್ಚಿನ ಸೌಕರ್ಯವು ಕೊಡಲಾಯಿತು. ೧೯೩೧ರ ಹಿಂದೂದೇಶದ ರೋಯಲ್ ಕಮಿಶನ್ ಓನ್ ಲೇಬರಿನ ವರದಿಯಲ್ಲಿ ಆ ಕುರಿತು ಹಲವು ಸೂಚನೆಗಳು ಸೂಚಿತವಾಗಿದ್ದರೂ, ಹೆಚ್ಚಿನ ಸುಧಾರಣೆಗಳು ಜಾರಿಗೆ ಬರಲಿಲ್ಲ,

ಉದ್ಯೋಗದ ಅಭಿವೃದ್ಧಿಯೊಡನೆ ಆಂದೋಲನದ ಆರಂಭ

ಹಿಂದೂದೇಶದಲ್ಲಿಯೂ ಉದ್ಯೋಗಗಳ ಅಭಿವೃದ್ಧಿಯಾಯಿತು. ೧೮೫೦ರಲ್ಲಿ ಮೊದಲು ಬೊಂಬಯಿ ನಗರದಲ್ಲಿ ಒಂದು ಹತ್ತಿ ಗಿರಣಿಯು ಸ್ಥಾಪಿತವಾಯಿತು ಆ ಮೇಲೆ ಇಪ್ಪತ್ತೈದು ವರ್ಷಗಳ ಹಿಂದೆ ಹದಿನೆಂಟು ಹತ್ತಿ ಮಿಲ್ಲುಗಳಾಗಿ ೧೧,೦೦೦ ಮಂದಿ ಕೂಲಿಗಾರರು ಅಲ್ಲಿ ಕೆಲಸಮಾಡಿದರು. ಅವರಲ್ಲಿ ಹಲವರು ಹೆಂಗುಸರು ಮತ್ತು ಮಕ್ಕಳೂ ಇದ್ದರು ಅಲ್ಲಿ ಕೆಲಸಗಾರರಿಗೆ ಕೊಡುವ ಸಂಕಷ್ಟವು ಹೇವು ಮಂದಿ ವಿಚಾರವಂತರ ದೇಶಸೇವೆದ ಹೃದಯವನ್ನು ಆ ಕಡೆ ಸೆಳೆಯಿತು ಅವರ ಚಳವಳದ ಫಲವಾಗಿ ೧೮೭೫ರಲ್ಲಿ ಫೇಕ್ಟರಿ ಕಮಿಶನ್ ಎಂಬ ಸಂಸ್ಥೆಯು ಸ್ಥಾಪಿತವಾಗಿ ಕೂಲಿಗಾರರ ವಿಷಯಗಳನ್ನು ವಿಚಾರಿಸ ತೊಡಗಿತು

ಮೊದಲನೆಯ ಇಂಡಿಯನ್ ಫ್ಯಾಕ್ಟರಿ ಕಾನೂನು ೧೮೮೧ರಲ್ಲಿ ಅಯಿತು ಮಕ್ಕಳು ಮತ್ತು ಹೆಂಗಸು ಕೂಲಿಗಾರರಿಗೆ ಇದರಿಂದ ಬಹಳ ಸಹಾಯವಾಯಿತು ೧೮೯೦ರಲ್ಲಿ ಆ ಕಾನೂನು ಹೆಚ್ಚು ಸುಧಾರಣೆಯೊಡನೆ ಜಾರಿಗೆ ಬಂತು ಈ ಕಾನೂನಿನಂತೆ ೨೦ ಕೆಲಸಗಾರರಿಗಿಂತ ಹೆಚ್ಚು ಕೂಲಿಗಾರರಿರುವುದು ಫ್ಯಾಕ್ಟರಿ ಎಂದು ಕರೆಯಲಾಯಿತು ಹೆಂಗುಸರಿಗೆ ದಿನ ೧೧ ತಾಸು ಕೆಲಸ ಕೊಡಲಾಗದೆಂದೂ, ೧೪ ವರ್ಷಕ್ಕಿಂತ ಕೆಳಗಿನವರು ದಿನ ೬ ತಾಸಿಗಿಂತ ಹೆಚ್ಚು ಕೆಲಸ ಕೊಡುವುದೆಂದೂ ನಿರ್ಣಯವಾಯಿತು. ೧೮೯೧ರಿಂದ ೧೯೧೧ರ ಕಾಲದಲ್ಲಿ ಉದ್ಯೋಗಗಳು ನಮ್ಮ ದೇಶದಲ್ಲಿ ಹೆಚ್ಚಾದುವು ೧೮೨೨ರಲ್ಲಿ ಫ್ಯಾಕ್ಟರಿಗಳು ೬೫೬ ಇದ್ದದ್ದು ೧೯೧೧ರಲ್ಲಿ ೨,೪೦೩ ಆದುವು. ಕೂಲಿಗಾರರ ಸಂಖ್ಯೆಯು ೩೧,೬೮೧ರಿಂದ ೬೯೧,೧೯೪ರ ವರೆಗೇರಿತು. ಇದುವರೆಗೆ ಹೆಂಗುಸರು ಮಕ್ಕಳಿಗೆ ಮಾತ್ರ ಉಪಯೋಗವಾಗುತ್ತಿದ್ದ ಕಾನೂನು ಪ್ರಾಯಸ್ಥರ ಗಂಡುಸರ ವಿಷಯದಲ್ಲಿಯೂ ಆಲೋಚಿಸಲಾಯಿತು ಇದರಿಂದ ೧೯೧೧ರಲ್ಲಿಂದ ಕಾನೂನು ಆಗಿ ಅದರಲ್ಲಿ ಪ್ರಾಯಸ್ಥ ಗಂಡುಸರಿಗೆ ೧೨ ತಾಸುಗಳ ಕೆಲಸವೂ, ಇನ್ನು ಕೆಲವು ಅಪಾಯದ ಕೆಲಸಗಳನ್ನು ಮಕ್ಕಳೂ ಹೆಂಗುಸರೂ ಮಾಡಬಾರದಾಗಿ ವಿಧಿಸಲಾಯಿತು

ಮಹಾಯುದ್ಧವೂ ಅಂತರ್ರಾಷ್ಟ್ರೀಯ ಕೂಲಿಗಾರರ ಸಂಘವೂ

ಕಳೆದ ಮಹಾಯುದ್ಧವು ಹಿಂದೀಯ ಕೂಲಿಗಾರರಿಗೆ ಅನಿರೀಕ್ಷಿತವಾದ ಸತ್ಫಲವನ್ನು ಕೊಟ್ಟಿತು ಸಾಮಾನುಗಳಿಗೆ ಕ್ರಯವು ಹೆಚ್ಚಿದರೂ, ಮಾಲಿಕರು ಸಂಬಳವನ್ನು ಹೆಚ್ಚಿಸಲು ಮನಸ್ಸುಮಾಡಲಿಲ್ಲ ೧೯೧೯ರಲ್ಲಿ ಇದರಿಂದಾಗಿ ಕೆಲಸಗಾರರ ಮತ್ತು ಮಾಲಿಕರೊಳಗೆ ತಿಕ್ಕಾಟವೊದಗಿ 'ಮುಷ್ಕರ' ಹೂಡುವ ಹರಿತವಾದ ಆಯುಧವನ್ನು ಕೆಲಸಗಾರರು ಅರಿತುಕೊಂಡರು. ಇಷ್ಟರಲ್ಲಿಯೇ ಸಾರ್ವದೇಶಿಕ ಸಂಘದ ಅಂಗವಾಗಿ ಅಂತರ್ರಾಷ್ಟ್ರೀಯ ಕೂಲಿಗಾರರ ಸಂಘವೊಂದು ಸ್ಥಾಪನೆಯಾಯಿತು. ಇದರ ಪರಿಣಾಮವಾಗಿ ಭಾರತೀಯ ಕೂಲಿಗಾರರಿಗೆ ಬಹಳ ಮಟ್ಟಿಗೆ ತಮ್ಮ ಹಕ್ಕು ಬಾಧ್ಯತೆಗಳ ವಿಷಯ ಅರಿವಾಯಿತು ಅಂತರ್ರಾಷ್ಟ್ರೀಯ ಕೂಲಿಗಾರರ ಸಂಘದ ಮೊದಲನೆಯ ಸಮ್ಮೇಳನವು ೧೯೧೯ರಲ್ಲಿ ವಾಶಿಂಗ್‌ಟನ್ನಿನಲ್ಲಿ ಸೇರಿದ್ದಾಗ, ಭಾರತದ ಕೂಲಿಗಾರರ ಪ್ರತಿನಿಧಿಯಾಗಿ ಶ್ರೀ. ಎನ್. ಎಮ್. ಜೋಶಿಯವರು ಅದಕ್ಕೆ ತೆರಳಿದ್ದರು. ಈ ಸಮ್ಮೇಳನದಲ್ಲಿ ಸಂಬಳ, ದುಡಿತದ ಕಾಲ, ಮೊದಲಾದುವುಗಳ ಕುರಿತು ಅನೇಕ ವಿಚಾರಗಳು ಚರ್ಚಿತವಾದುವು

ಆ ಮೇಲಿನ ಸುಧಾರಣೆಗಳು

೧೯೧೧ರ ಫ್ಯಾಕ್ಟರೀ ಕಾನೂನು ೧೯೨೨ರಲ್ಲಿ ಸ್ವಲ್ಪ ತಿದ್ದುಪಡಿಯಾಯಿತು ಇದರಲ್ಲಿ ದಿನಕ್ಕೆ ೧೧ ತಾಸುಗಳ ದುಡಿತ ೬೦ ತಾಸುಗಳ ವಾರದ ಗಣನೆಯಂತೆ ಪ್ರಾಯಸ್ಥರು ಕೆಲಸಮಾಡಿದರೆ ಸಾಕೆಂದಾಯಿತು. ಅದರಲ್ಲಿ ೧೨ ವರ್ಷಕ್ಕಿಂತ ಮೇಲಿನವರನ್ನೇ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದೂ ಹದಿನೈದು ವರ್ಷ ಪ್ರಾಯದ ವರೆಗೆ ಕೇವಲ ದಿನಕ್ಕೆ ೬ ತಾಸುಗಳು ಮಾತ್ರ ಕೆಲಸಮಾಡಿಸಬಹುದೆಂದೂ ವಿಧಿಸಲಾಯಿತು

೧೯೩೪ರಲ್ಲಿ ದಿನಕ್ಕೆ ಪ್ರಾಯಸ್ಥರು ೧೦ ತಾಸುಗಳ ತನಕ ದುಡಿಯುವಂತೆಯೂ ೫೪ ತಾಸುಗಳ ಒಂದು ವಾರದ ಗಣನೆಯಂತೆಯೂ ಆಗಬೇಕಾಗಿ ತಿದ್ದುಪಡಿಯಾಯಿತು ಆದರೆ ಕೆಲವೇ ಸಮಯ ಕೆಲಸವಿರುವ ಕಾರ್ಖಾನೆಗಳಲ್ಲಿ ೬೦ ತಾಸುಗಳ ವಾರದ ಗಣನೆಯೇ ಇರಿಸಲಾಯಿತ ಮಗ ವಿನ ದಿನದ ಕೆಲಸದ ತಾಸುಗಳ ಎಂದೂ, ಹೆಂಗುಸಿಗೆ ೧೦ ಎಂದೂ ವಿಧಿಸಲಾಯಿತು ೧೫ ವರ್ಷದಿಂದ ೧೭ ವರ್ಷ ಪ್ರಾಯದಿಂದ ತರುಣರಿಗೆ ಹೊಸತಾಗಿ ಪ್ರತ್ಯೇಕ ನಿಬಂಧನೆಯೊಂದೂ ಮಾಡಲಾಯಿತು

ನವರಾಜ್ಯ ಘಟ್ಟನೆಯಲ್ಲಿ

೧೯೩೪ರ ಫ್ಯಾಕ್ಟರಿ ಕಾನೂನು ೧೯೩೬ರಲ್ಲಿ ತಿದ್ದುಪಡಿಯಾಗಿ ಸ್ಥಳೀಕ ಸರಕಾರಗಳಿಗೆ ಔದ್ಯೋಗಿಕ ಕಾರ್ಯಗಳ ಪ್ರಕಟಣೆ ಕೊಡುವ ಅಧಿಕಾರವು ಕೊಡಲಾಯಿತು ಕೆಲಸಗಳನ್ನು ಪ್ರೊವಿನ್‌ಶಿಯಲ್ ಕೊಂಕರೆಂಟ್ ಫೆಡರಲ್ ಎಂದು ಮೂರು ವಿಧ ವಿಂಗಡಿಸಲಾಯಿತು ಆದುದರಿಂದ ಪ್ರಾಂತಿಕ ಸರಕಾರಗಳ ಮೇಲೆ ಕೂಲಿಗಾರರ ಮತ್ತು ಉದ್ಯೋಗಗಳ ಸುಧಾರಣೆಯ ಹೆಚ್ಚಿನ ಜವಾಬ್ದಾರಿಯು ಬಿತ್ತು ಕಾಂಗ್ರೆಸಿನ ತತ್ವವೂ ಕೂಲಿಗಾರರ ಸೌಕರ್ಯ ಮತ್ತು ಔದ್ಯೋಗಿಕ ಸುಧಾರಣೆಯೇ ಆಗಿರುವುದರಿಂದ ಇನ್ನು ಮುಂದೆ ಬಹಳ ಸುಧಾರಣೆಯಾಗಲು ಅಸ್ಪದವು ಕೂಡಿ ಬಂದಿದೆ

ಗಣಿ ಮತ್ತು ಮಹಿವಾಟುಗಳ ಕಾನೂನುಗಳವಿಷಯ ಈ ಲೇಖನದಲ್ಲಿ ತಿಳಿಸಿಲ್ಲ ಫ್ಯಾಕ್ಟರಿ ಕಾನೂನುಗಳು ಆಗಾಗ ಬದಲಾವಣೆಯಾಗ ತ್ತಾ ಇವೆ ಭಾರತದ ಕೂಲಿಗಾರರ ಮತ್ತು ಔದ್ಯೋಗಗಳ ಸುಧಾರಣೆಯಸಲುವಾಗಿ ಯತ್ನಮಾಡಿದ ಮಹಾನು ಭಾವದಲ್ಲಿ ಶ್ರೀ ಎನ್ ಎಮ್ ಜೋಶಿಯವರ ಹೆಸರು ಚಿರಸ್ಮರಣೆಯವಾದುದು.

THE
Canara Banking Corporation Ltd.,
(INCORPORATED IN BRITISH INDIA)
THREE YEARS' CASH CERTIFICATES
bearing interest at 4%p. a.
in denominations of
RS. 50/-,100/-,500/-,1,000/-, & 5,000/
are now issued at all our Branches.
For particulars call at or write to
any of our nearest Branches.



ಜಿಲ್ಲಾ ಸಮಾಚಾರ

ಕಳೆದ ಅಕ್ಟೋಬರ ತಿಂಗಳಲ್ಲಿ ಅಖಿಲ ಭಾರತ ಚರಖಾ ಸಂಘದ ಖಾದಿಭಂಡಾರದಲ್ಲಿ ಒಟ್ಟು ರೂ. 2167ರ ಖಾದಿ ಮಾರಾಟವಾಗಿದೆ ಇದರಲ್ಲಿ ರೂ 1292 ಕುಂದಿ ಮಾರಾಟದಿಂದಾದುದು.

ಈ ಸಂದರ್ಭದಲ್ಲಿ ಯಾವ ಪ್ರತಿಫಲವೂ ಇಲ್ಲದೆ ನಮ್ಮ ಪ್ರಕಟಣೆಯನ್ನು ಪ್ರದರ್ಶಿಸಿದ 'ನ್ಯೂ ಚಿತ್ರಾ ಟೋಕೀಸ'ನ ಮನೇಜರರಿಗೂ ಸ್ಥಳಿಕಪತ್ರಿಕೆಗಳ ಸಂಪಾದಕರಿಗೂ ಹುಂಡಿ ಮತ್ತು ಖಾದಿ ಮಾರಾಟವನ್ನು ಮಾಡಿ ಕೊಂಡು ಕೊಂಡು ಸಹಕಾರವನ್ನಿತ್ತ ಎಲ್ಲಾ ಮಹನೀಯರಿಗೂ ಗಾಂಧಿ ಜಯಂತಿ ಖಾದಿ ಮಾರಾಟ ಸಮಿತಿಯ ಪರವಾಗಿ ಹೃತ್ಪೂರ್ವಕ ಅಭಿವಂದನೆಗಳು ಎಂದು ಕಾರ್ಯದರ್ಶಿಯವರಾದ ಶ್ರೀ ನಾರಾಯಣ ರೈಗಳು ತಿಳಿಸುತ್ತಾರೆ

ಬಲ್ಲಾಳ್ ಮಹಾಲ್:—ಹಂಪನಕಟ್ಟೆಯಲ್ಲಿ ಶ್ರೀ ಜೋಸ ಸದಸ್ಯರಾದ ಶ್ರೀ ಕೆ ಆರ್ ಬಲ್ಲಾಳರು ನೂತನವಾಗಿ ಕಟ್ಟಿಸಿರುವ ಬಲ್ಲಾಳ್ ಮಹಾಲ್ ಎಂಬ ಕಟ್ಟಡದ ಉದ್ಘಾಟನಾ ಸಮಾರಂಭವು ತಳದ ತಾ ಕರಲ್ಲಿ ಡಾ ವಿಠಲ್ ಲೆಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿತು ಅಭಿನಂದನೆಗಳ ಟೀಪಾರ್ಟಿ ಸತ್ಕಾರ ನಡೆದ ಮೇಲೆ ಕಟ್ಟಡದ ಮೂರನೆಯ ಅಂತಸ್ತಿನಲ್ಲಿ ಸಭೆ ಜರಗಿತು. ಕಟ್ಟಡವನ್ನು ಕಟ್ಟಿಸಿದ ಮೇಸ್ತ್ರಿಗಳಿಗೂ, ಇಲೆಕ್ಟ್ರಿಕ್ ದೀಪಗಳನ್ನು ಹಾಕಿಸಲಿಗೂ ಚಿನ್ನದ ಪದಕಗಳನ್ನು ಬಿಳ್ಳಿಯಲಬ್ಬಲನ್ನೂ ಅನುಕ್ರಮವಾಗಿ ಇತ್ತರು

ಸಾಹಸದ ಹುಲಿ ಶಿಕಾರಿ:— ಶನಿವಾರ ತಾ ೧೭ ನೇ ಬೆಳಗಿನ ಜಾವದಲ್ಲಿ [ಎಸ್ಟೇಟ್ ಕೇಟ' ಸಮೀಪದ ಅಡಿಗರ ಮನೆಯೆದುರು ಒಂದು ಗಂಡು ಹುಲಿಯು ಮಿ ಬ್ಯಾಟ್ಸಿಸ್ಟರ ಮನೆಯ ಹಿಂದಿನ ಬಾಗಿಲಿಂದ ಒಳಗೆ ಪ್ರವೇಶ ಮಾಡಿ ಅಟ್ಟಿಸಿ ಕೊಂಡು ಬರಲಿಲ್ಲ ಅವಿತುಕೊಂಡಿತ್ತು ಮನೆಯವರು ಹುಲಿಯನ್ನು ನೋಡಿ ಬೆದರಿ ಮನೆ ಬಾಗಿಲನ್ನು ಹಾಕಿಕೊಂಡರು ಹೊರಕ್ಕೂ ಕಾಣದಿದ್ದರು ಶ್ರೀ ಸದಾಶಿವಾಚಾರ ಇವರು ಗಾಡಿನ ಮೇಲಿನ ಹಂಚು ತೆಗೆದು ಗುಂಡಿಸಿಂದ ಹೊಡೆದು ಹುಲಿಯನ್ನು ಕೊಂದರು

ರೈತವಾರಿ ಕಡೆಗಳಲ್ಲಿ ಒಕ್ಕಲ ಮಸೂದೆಯ ಅವಶ್ಯಕತೆ:—ಈ ವಿಷಯವಾಗಿ ಕಳೆದ ತಾ ೧೯ ನೇ ಸೆಂಯಂಗಾಲ ಥಿಯಸಾಫಿಕಲ್ ಲಜನಲ್ಲಿ ಸರ್ವೆಂಟ್ಸ್ ಆಫ್ ಇಂಡಿಯ ಸೊಸೈಟಿಯ ಶ್ರೀ ಕೆ ಜಿ ಶಿವಸ್ವಾಮಿಯವರು ಉಪನ್ಯಾಸ ಮಾಡಿದರು. ಸರ್ ಥಾಮಸ್ ಮುನ್ರೋರವರು ರೈತವಾರಿ ಪದ್ಧತಿಯು ಒಳ್ಳೆಯದೆಂದು ಏಕೆ ಭಾವಿಸಿದ್ದರೆಂಬುದನ್ನೂ ಅವರ ಅಭಿಪ್ರಾಯಕ್ಕನುಸಾರವಾದ ರೈತವಾರಿ ಪದ್ಧತಿಯು ಇಲ್ಲವೆಂದೂ ಹೇಳಿದರು ಆ ಮೇಲೆ ಜಮೀನ್ದಾರರ ಒಕ್ಕಲುಗಳಿಗೂ ರೈತವಾರಿ ರೈತರ ಒಕ್ಕಲುಗಳಿಗೂ ವ್ಯತ್ಯಾಸವನ್ನು ಸೂಚಿಸಿದರು ರೈತವಾರಿ ರೈತರ ಸಲಿಗೆಗೆ ಮಡಬೇಕಾದ ಶಾಸನಗಳ ಸ್ವರೂಪವು ಮತ್ತು ತತ್ವಗಳು ಹೇಗಿರಬೇಕೆಂಬುದನ್ನು ಸೂಚಿಸಿದರು ಅನಂತರ ಪ್ರಶ್ನೋತ್ತರಗಳು ನಡೆದುವು ಶ್ರೀ ಕೆ ಆರ್ ಕಾರಂತರೂ ಶ್ರೀ ಜಿನ ಇಜ ಹೆಗ್ಗಡೆಯವರೂ ಅನೇಕ ಪ್ರಶ್ನೆಗಳನ್ನು ಕೇಳಿದ್ದೆಲ್ಲದೆ ಜಿಲ್ಲೆಯ ಪರಿಸ್ಥಿತಿಯನ್ನು ಭಾಷಣಕಾರರಿಗೆ ತಿಳಿಸಿದರು

ದುಃಖ ಸೂಚನೆ

ಕಳೆದ ತಾ ೮ ರಂದು ಕಲ್ಲಿಕೋಟೆಯಲ್ಲಿ ಅಕಾಲಮೃತ್ಯುಗೊಳಗಾದ ಟಿ ಎಮ್ ಉಚ್ಚಿಲರವರ ನಿಧನ ವಾರ್ತೆಯನ್ನು ತಿಳಿಸಲು ವಿಷಾದಿಸುತ್ತೇವೆ. ದಿವಂಗತರು ಬೋಧನಸಮಾಜದ ಹಿತಕ್ಕಾಗಿ ಬಹಳ ದುಡಿಯುತ್ತಿದ್ದರಲ್ಲದೆ, ಮುಂಬಯಿ ಕರ್ನಾಟಕ ಫ್ರೀ ಸ್ಟೈಲ್ ಸ್ಕೂಲ್ ಇದರ ಮುಖ್ಯಾಧ್ಯಾಪಕರಾಗಿ ಎರಡನೇ ಸಲವೂ ಆರಿಸಲ್ಪಟ್ಟಿದ್ದರು. ಸೌತ್ ಕೆನರಾ ಸ್ವೋಟಿಂಗ್ ಎಸೋಸಿಯೇಶನ್ ಮುಂಬಯಿ ಇದರ ಜತೆಕಾರ್ಯದರ್ಶಿಗಳಾಗಿ ಅನೇಕ ಸಮಾಜಸೇವೆಯ ಕಾರ್ಯಗಳಲ್ಲಿ ತೊಡಗಿದ್ದರು. ಇವರ ಮರಣದ ಸಂತಾಪ ಸೂಚನೆಯಾಗಿ ಮುಂಬಾಯಿ ಮತ್ತು ಉಚ್ಚಿಲ ಬೋಧಿ ಮಹಾಸಭೆಯವರು ತಮ್ಮ ಸಹಸಂತಾಪ ನಿರ್ಣಯಗಳನ್ನೂ ಮಾಡಿದ್ದಾರೆ ಮೃತರ ಆತ್ಮಕ್ಕೆ ಭಗವಂತನು ಶಾಂತಿ ಕೊಡಲಿ!

'ಇಂದಿನ ಜನತೆಗೆ ಬೇಕಾದ ಸಾಹಿತ್ಯ ನಿರ್ಮಾಣವಾಗಬೇಕು'

'ಬ್ರಾಹ್ಮಣ-ಲಿಂಗಾಯತ ಜಗಳವನ್ನು ಕೆಲ ಮಂದಿ ಮುಂದಾಳುಗಳೇ ಕೆರಳಿಸಿದಾರೆ'

ದೇಶಭಕ್ತ ಹರ್ಡೇಕರ ಮಂಜಪ್ಪನವರ ಭಾಷಣ

ದೇಶಭಕ್ತ ಹರ್ಡೇಕರ ಮಂಜಪ್ಪನವರು ತಾ ೧೩ ರಂದು ಮಂಗಳೂರು ಸಂಸ್ಕೃತಿ ಸಂಘದ ಆಶ್ರಯದಲ್ಲಿ ಕನ್ನಡ ಸಾಹಿತ್ಯದ ವಿಷಯ ಶ್ರೀ ಕೆ ಬಿ ಜನಾರ್ದನ ಭಟ್ಟ ಎಂ ಎಲ್ ಎ (ಕೇಂದ್ರ) ಇವರ ಅಧ್ಯಕ್ಷತೆಯಿಂದ ಭಾಷಣವೊಂದನ್ನು ಮಾಡಿದರು ಅವರು ತಮ್ಮ ಭಾಷಣದಲ್ಲಿ, ಸಾಹಿತ್ಯಸ್ವರೂಪವನ್ನು ವಿವರಿಸುತ್ತಾ, ಜನತೆಯ ಹೃದಯ ಸ್ಪರ್ಶಿಯಾಗುವ, ಅವರ ಸಮಸ್ಯೆಗಳನ್ನು ಪರಿಹರಿಸಿ ಅವರಲ್ಲಿ ಶಕ್ತಿಯನ್ನು ಸಂಚರಿಸುವ ಸಾಹಿತ್ಯವು ನಿರ್ಮಾಣವಾಗಬೇಕೆಂದೂ, ಈ ಕಡೆಗೆ ಪಂಡಿತರೂ, ಆಂಗ್ಲ ಭಾಷಾ ನಿಶಾರದರಾದ ಕನ್ನಡಿಗರೂ ಗಮನ ಕೊಡಬೇಕೆಂದೂ ಹೇಳಿದರು ಭಾಷಣ ಮುಗಿದ ಬಳಿಕ ಪ್ರಶ್ನೆಯಮಂದಲ್ಲಿ ಶ್ರೀ ಕೆ ಆರ್ ಅಚಾರ್ಯರು ಬ್ರಾಹ್ಮಣ ಲಿಂಗಾಯತ ಜಗಳದ ಗೊಂದಲವು ಈ ಕಡೆ ಯಾತಕಿಂದ ಆಗುತ್ತಿದೆ? ಇತ್ತೀಚೆಗೆ ಕರ್ನಾಟಕ ಏಕೀಕರಣ ಕಾರ್ಯಕ್ಕೂ ಅದರ ಭಾಧೆಯಾತಕ್ಕಾಗಿ ತಟ್ಟುವಂತಾಯಿತು' ಎಂಬ ವಿಷಯವಾಗಿ ಶ್ರೀ ಮಂಜಪ್ಪನವರ ಅಭಿಪ್ರಾಯವನ್ನು ಕೇಳಿದರು ಶ್ರೀ ಮಂಜಪ್ಪನವರು ಅದಕ್ಕೆ ಉತ್ತರವೀಯುತ್ತಾ ಬ್ರಾಹ್ಮಣ ಲಿಂಗಾಯತ ಸಂಬಂಧಗಳು ಸದ್ಭಾವ ವಿಶೇಷವಿಶಾಸನೋಲ್ಲ ಎಂದೂ ಚಳವಳದ ಕಾಲದಲ್ಲಿ ಸಹಜವಾಗಿ ಸಮೂಲ ಕಿತ್ತು ಹೋಗಿದಂತೆ ಆ ಭೇದವನ್ನು ಅಂದು ಯಾವ ಮುಂದಾಳುಗಳೂ ಕೆರಳಿಸಿದವರು ಕೆಲವರು ಭೇದವಿಸ್ಮಿಲ್ಲವೆಂದು ಸಾರಿದ್ದರೋ ಅಂತಹವರೇ ಇಂದು, ಸ್ಥಳೀಕ ಸಂಸ್ಥೆಗಳೇ ಮೊದಲಾದವ ಅಧಿಕಾರಲಾಲಸೆಯ ನಿಮಿತ್ತ ಆ ಭೇದವನ್ನು ಕೆರಳಿಸುವರೆಂಬಾ ಅದಲ್ಲದೆ ಅಂತಹ ಜಗಳಗಳಿಗೆ ರೂಢ ಮೂಲಕಾರಣಗಳು ಇರುವುದಿಲ್ಲವೆಂದೂ ಅಭಿಪ್ರಾಯಪಟ್ಟರು

ಉಡುಪಿ

ಶ್ರೀ ಪುಲ್ಲ ರೆಡ್ಡಿ ಐ ಸಿ ಎಸ್ ಅವರ ಇಗಮನ:—ಎಕ್ಸೈಜ್ ಇಲಾಖೆಯ ಡೆಪ್ಯುಟಿ ಕಮಿಶನರಾದ ಶ್ರೀ ಪುಲ್ಲ ರೆಡ್ಡಿ, ಐ ಸಿ ಎಸ್, ಅವರು ಸ್ಥಳೀಕ ಅಬ್ಕಾರಿ ಆಫೀಸನ್ನು ಸಂದರ್ಶಿಸಿದರು ಶ್ರೀ ಕೃಷ್ಣ ಮಠಕ್ಕೆ ಅಗಮಿಸಿ ಶ್ರೀ ಕೃಷ್ಣನ ದರ್ಶನ ಲಾಭವನ್ನು ಪಡೆದರು

ಕುಂದಾಪುರ

ನಾಟಕಾಭಿನಯ:—ಇಲ್ಲಿಯ ಕರ್ನಾಟಕ ಸಾಹಿತ್ಯ ಸಂಘದ ಸಹಾಯಾರ್ಥ ನಾಟಕೆಯ ತಾ ೨೦ರಲ್ಲಿ ಅಭಿನಯಿಸಲ್ಪಟ್ಟಿತು. ಪಾತ್ರಧಾರಿಗಳೆಲ್ಲರೂ ಉತ್ತಮವಾಗಿ ಅಭಿನಯಿಸಿದರು.

ಸಿನೇಮಾ ಪ್ರದರ್ಶನ:—ಕುಂದಾಪುರದ ಸ್ವತಂತ್ರ ಸಂಸ್ಥೆಯಾದ ಶ್ರೀ ಲಕ್ಷ್ಮೀನಾರಾಯಣ ಟಾಕೀಸಿನವರು ಇದೀಗ ಪುನಃ ಕುಂದಾಪುರದಲ್ಲಿ ತಮ್ಮ ಚಲನಚಿತ್ರಗಳನ್ನು ಪ್ರದರ್ಶಿಸಲು ಪ್ರಾರಂಭಿಸಿರುವರು. ಪ್ರೇಕ್ಷಕರನ್ನು ರೋಮಾಂಚನಗೊಳಿಸುವ ಅತ್ಯುತ್ತಮ ಚಿತ್ರಗಳನ್ನು ಪ್ರದರ್ಶಿಸುವ ವಿಚಾರವು ಮಾಡಿರುವರೆಂದು ತಿಳಿದು ಬರುತ್ತದೆ.

ಹೊಸ ಸಬ್ ಕಲೆಕ್ಟರರ ನೇಮಕ ಇಲ್ಲಿಯ ಸಬ್ ಕಲೆಕ್ಟರಾಗಿದ್ದ ಶ್ರೀ ವರದರಾಜುಲು ನಾಯಿಡುರವರಿಗೆ ಪ್ರತ್ಯೂರಿಗೆ ವರ್ಗವಾಗಿ ಅವರ ಸ್ಥಾನಕ್ಕೆ ಶ್ರೀ ಉಜ್ಜೆತಾನ್ ಐ ಸಿ ಎಸ್ ಇವರು ನೇಮಕ ಹೊಂದಿ ಚಾರ್ಜು ವಹಿಸಿರುವರು

ಪುತ್ತೂರು

ಉಪ್ಪಿನಂಗಡಿ:—ಕಳೆದ ತಾ ೨೮ ನೇ ಮಂಗಳವಾರ ಇಲ್ಲಿಂದ ಸುಮಾರು ಐದುಮೈಲು ದೂರದಲ್ಲಿರುವ ತಣ್ಣೀರುಪಂತ ಗ್ರಾಮದಲ್ಲಿ ಒಬ್ಬ ಜಮೀನುದಾರ ಹೆಂಗುಸನ್ನು ಮೈಯಲ್ಲಿದ್ದ ಸುಮಾರು ೩೫೦ಕ್ಕೂ ಮೇಲ್ಪಟ್ಟು ಬೆಲೆಬಾಳುವ ಆಭರಣಕ್ಕಾಗಿ ಯಾರೋ ಕೊಲೆಮಾಡಿರುವದಾಗಿ ತಿಳಿದುಬರುತ್ತದೆ

ಸುಳ್ಯ—ಆರೋಗ್ಯ ನೈರ್ಮಲ್ಯ ಮತ್ತು ಕೈಗಾರಿಕೆ ಪ್ರದರ್ಶನ—ಸುಳ್ಯ ಸಹಕಾರಿ ಸಂಘದ ಆಶ್ರಯದಲ್ಲಿ ಜರಗುವ ಎಂಟನೇ ಸಹಕಾರಿ ವ್ಯವಸಾಯ ಆರೋಗ್ಯ ಮತ್ತು ಕೈಗಾರಿಕೆ ಪ್ರದರ್ಶನವು ಸುಳ್ಯ ವಿಜಯ ಮಂದಿರದ ಕಟ್ಟೋಣದಲ್ಲಿ ೧೯ಳಂನೇ ಜನವರಿ ತಾ ೯ ರಂದು ಮತ್ತು ೧೧ರಲ್ಲಿ ಸುಳ್ಯ ಜತ್ರೆಯ ಸಮಯ ನಡೆಯಿತು.

ಕಾರ್ಕಳ

ಕಳೆದ ಲಕ್ಷ ದೀಪೋತ್ಸವದ ಸಮಯದಲ್ಲಿ ಸ್ಥಳೀಯ ಆರ್ಯ ಸಮಾಜವು ಭಾಷಣ, ಕರಪತ್ರ ವಿತರಣ ಮೊದಲಾದ ಸಾಧನಗಳ ಮೂಲಕ ವೈದಿಕ ಧರ್ಮದ ಪ್ರಚಾರವನ್ನು ಮಾಡಿದರು

ಈ ಕೇಂದ್ರದ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಸಭೆಯು ಕಳೆದ ತಿಂಗಳ ಸಲೆಯು ತಾ 9 12 39ರ ದಿನ ಶ್ರೀ ವೆಂಕಟ್ರಮಣ ಹಂಯರ ಎಲಿಮೆಂಟರಿ ಶಾಲೆಯಲ್ಲಿ ಕಾ ರೇಂದಿಕ್ಷಿಟ ಇನ್ಸಪೆಕ್ಟರರ ಅಧ್ಯಕ್ಷತೆಯಲ್ಲಿ ಕೂಡಿತು.

ಮಂಗಳೂರು ಆರ್ಯ ಸಮಾಜದ ನೇತೃತ್ವದಲ್ಲಿ ನಡೆದುಬರುತ್ತಲಿರುವ ಶ್ರೀ ಕೃಷ್ಣಾನಂದ ಅನಾಥಾಶ್ರಮಕ್ಕೆ ಇಲ್ಲಿಂದ ನಾಲ್ಕುತ್ತ ರೂಪಾಯಿಗಳ ತನಕ ಹಣ ಸಹಾಯವು ದೊರಕಿತು

ಈ ವರ್ಷದ ಆರೋಗ್ಯ ಮತ್ತು ಶಿಶು ಸಪ್ತಾಹವು ಏಳು ದಿನಗಳ ತನಕ ಬೋಧಪ್ರದ ಮತ್ತು ಮನೋರಂಜಕ ಕಾರ್ಯಕ್ರಮದಿಂದ ಕೂಡಿ ಬಹು ವಿಜೃಂಭಣೆಯಿಂದ ನಡೆಯಿತು

ಕಾಸರಗೋಡು

ಬಣಾವಟಿ ರೂಪಾಯಿ:—ಬಣಾವಟಿ ರೂಪಾಯಿ ಮಾರುತ್ತಿದ್ದನೆಂಬ ಆಪಾದನೆಯ ಮೇಲೆ ಅಬ್ದುಲ್ಲ ಎಂಬವನನ್ನು ಪೋಲೀಸರು ಹಿಡಿದು ಕೈದುಮಾಡಿರುತ್ತಾರೆ ಅಸಾಮಿಯೊಡನೆ ಕೆಲವು ಬಣಾವಟೆನಾಣ್ಯಗಳೂ ಅಚ್ಚುಗಳೂ ದೊರೆತಿವೆಯಂತೆ

ಕುಡಾಲ್ಮೇರ್ಕಳ:—ಕಳೆದ ತಾ ೨೦ ನೇ ಸಾಯಂ ವೇಳೆಯಲ್ಲಿ ಎಯಿಡೆಡ್ ಶಾಲೆಯಲ್ಲಿ ಶ್ರೀ ಪಿ. ನಾರಾಯಣ ಭಟ್ಟರ ಅಧ್ಯಕ್ಷತೆಯಲ್ಲಿ, ಸಂಗೀತ ಮಾಸ್ಟರ್ ಶ್ರೀ ಕೆ ಮಹಾಬಲ ಭಟ್ಟರ ವಿದ್ಯಾರ್ಥಿಗಳ ಸಂಗೀತ ಸ್ಪರ್ಧೆಯು ಜರಗಿತು

ಅಜೆಕಾರು—ಎಣ್ಣೆ ಹೊಳೆಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ವರ್ಷಾಂತ್ಯದ ಜರಗತಕ್ಕ ಭಜನೆ ಮಂಗಳೋತ್ಸವವು ತಾ ೧೧-೧-೪೦ ನೇ ಶನಿವಾರ ರಾತ್ರಿ ಬಹಳ ವಿಜೃಂಭಣೆಯಿಂದ ಜರಗಿತು. ಈ ಸುಸಂದರ್ಭದಲ್ಲಿ ಪರ್ವಾಳ ಕೊಡಂಗೆ ನಾರಾಯಣ ಕಮ್ಮಿಯವರ ಅಧ್ಯಕ್ಷತೆಯಲ್ಲಿ ಶಿವಪುರ ಶಾಲಾಮಾಸ್ಟರ್ ಶ್ರೀ ನಾಗಪ್ಪ ಕಮ್ಮಿಯರ ಸೂಚನೆಯಂತೆ 'ರಾಜಾಪುರ ಸಮಾಜದಲ್ಲಿ ವಿಧವಾ ವಿವಾಹದ ಸಾಧಕ ಬಾಧಕಗಳ ವಿಷಯ ಹೆಬ್ರಿ ರೇಂಜ್ ಎಕ್ಸೈಸ್ ಸಬ್ ಇನ್ಸಪೆಕ್ಟರ್ ಶ್ರೀ ಕೇಶವಗಿರಿಯಾಯರೇ ಮೊದಲಾದ ನೆರೆದ ಸಭಿಕರು ಕಾಲೋಚಿತ ಭಾಷಣಗಳನ್ನು ಮಾಡಿದ ಬಳಿಕ ದೇವಸ್ಥಾನದ ಮೊಕ್ತೇಸರರೂ ಈ ಕರಾರನ್ನು ಸಮರ್ಥಿಸಿ ತಮ್ಮ ಸಹಾನುಭೂತಿಯನ್ನು ತೋರಿಸಿದ್ದು ಸುಂದರ ಸಂತೋಷಕರ.

ಕರ್ನಾಟಕ

ಬೆಳಗಾವಿ

ಮಹಿಳಾ ಗೋಷ್ಠಿ—ಕಲಾ ಪ್ರದರ್ಶನ—ಸಾಹಿತ್ಯ ಸಮ್ಮೇಳನದ ಕಾಲಕ್ಕೆ ಜರುಗಲಿರುವ ಮಹಿಳಾಗೋಷ್ಠಿಯ ಅಂಗವಾಗಿ ಒಂದು ಕಲಾಪ್ರದರ್ಶನವನ್ನು ಜರುಗಿಸಬೇಕೆಂದು ನಿಶ್ಚಯಿಸಿದ್ದೇವೆ ಕನ್ನಡತಿಯರು ಕೈಗಾರಿಕೆಯಲ್ಲಿ ಮೊದಲಿನಿಂದಲೂ ಕುಶಲರು ಈ ಮಾತನ್ನು ಇಂದು ಸಪ್ರಮಾಣವಾಗಿ ಸಿದ್ಧ ಮಾಡಿ ತೋರಿಸಬೇಕಾಗಿದೆ ಇದಕ್ಕೆ ನಿಮ್ಮೆಲ್ಲರ ಸಹಕಾರದ ಅತ್ಯಗತ್ಯವಿದೆ ಆದುದರಿಂದ ಸಮ್ಮೇಳನದ ಕಾಲಕ್ಕೆ ತಮ್ಮ ಕೈಗಾರಿಕೆಯ ಅಥವಾ ಕೈವಾಡದ ಕುರಿತ ವಸ್ತುಗಳ ಪ್ರದರ್ಶನವನ್ನು ಮಾಡುವ ಇಚ್ಛೆ ಇದ್ದವರು ಅವುಗಳನ್ನು ತರುವದಾಗಿ ನಮಗೆ ಈ ತಿಂಗಳ ೨೦ನೆಯ ತಾರೀಖಿನ ಒಳಗಾಗಿ ತಿಳಿಸಿಬೇಕು

ಉತ್ತಮವಾದ ಕಲಾಕೃತಿಗಳಿಗೆ ಪಾರಿತೋಷಕವನ್ನು ಕೊಡಲಾಗುವದು ಕನ್ನಡಿತಿಯರಾದ ತಾವು ಅಗತ್ಯವಾಗಿ ಬರಬೇಕೆಂದು ತಮ್ಮ ಅಗ್ರಹದ ವಿನಂತಿಯನ್ನು ಎಂದು ಕಾರ್ಯದರ್ಶಿಯವರು ತಿಳಿಸುತ್ತಾರೆ ಸಂಘಾ-ಕಾರ್ಯದರ್ಶಿ ಮಹಿಳಾ ಗೋಷ್ಠಿ ಸಾಹಿತ್ಯ ಸಮ್ಮೇಳನ ಕಛೇರಿ ರಾಮದೇವರ ಬೀಡಿ ಬೆಳಗಾವಿ

ಕನ್ನಡ ಸಂಪಾದಕ ಮಂಡಳಿಯ ಸಮ್ಮೇಳನ:—ಬೆಳಗಾಗಿಯಲ್ಲಿ ನೆರೆಯುವ ೨೪ ನೆಯ ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧ್ಯೇಶನದೊಂದಿಗೆ ಕನ್ನಡ ಸಂಪಾದಕ ಮಂಡಳಿಯ ಸಮ್ಮೇಳನವು ಜರಗುವುದು ಕನ್ನಡಿಗ ದಿನ ಪತ್ರಿಕೋದ್ಯಮಿಗಳು ಸರ್ವರೂ ಸಮ್ಮೇಳನಕ್ಕೆ ಚಿತ್ತೈಸಬೇಕಾಗಿ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಕನ್ನಡ ಸಂಘಗಳ ಸಮ್ಮೇಳನ ಬೆಳಗಾವಿಯಲ್ಲಿ ಕೂಡಲಿರುವ ಕನ್ನಡದ ಸಾಹಿತ್ಯ ಸಮ್ಮೇಳನದ ಜೊತೆಯಲ್ಲಿ ಕನ್ನಡ ಸಂಘಗಳ ಸಮ್ಮೇಳನವನಾದರೂ ಏರ್ಪಡಿಸಲಾಗುವದು ಗೊತ್ತಾಗಿರುವದು ಈ ಸಂಬಂಧದಲ್ಲಿ ರಾಜ ಸೇವಾಸಕ್ತ ಬಿ ಎಮ್ ಶ್ರೀ ಕಂಚಿಮಠರವರು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿ ಒಪ್ಪಿರುವರು ಕರ್ನಾಟಕದಲ್ಲಿಯ ಮತ್ತು ಹೊರಗಿನ ಕನ್ನಡ ಸಂಘದ ಸದಸ್ಯರ ಕಾರ್ಯಕ್ರಮಗಳನ್ನು ಮತ್ತು ಇತರ ವಾರ್ತೆಗಳನ್ನು ಕಳಿಸಬೇಕಾಗಿ ಅತ್ಯಂತ ಸಮ್ಮಿನಂತಿಗೆ ಕಾರ್ಯದರ್ಶಿಗಳು.

ಮೈಸೂರು

ಮೈಸೂರು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆ ಸೇರಿತು ದೀರ್ಘವಾದ ಚರ್ಚೆಗಳಾದವು. ಸಂಸ್ಥಾನದ ಸದ್ಯದ ರಾಜಕೀಯ ಪರಿಸ್ಥಿತಿಯ ಪರಿಶೀಲನೆ ನಡೆದಿದ್ದು ಮುಂದೆ ಅನುಸರಿಸಬೇಕಾದ ಕಾರ್ಯಕ್ರಮದ ವಿಚಾರಕ್ಕಾಗಿ ಗಲ್ಲೊಂದು ಸಲಹೆಗಳು ಒಂದಾದ ಕಡೆಯ ತೀರ್ಮಾನವಾಗಿ ಅಲ್ಪ ಸಂಖ್ಯಾತರ ಸಲ್ಲಿಸತಕ್ಕದ್ದು ನೆಮ್ಮದಿಯೇ ಸಾಧನೆ ಆಗುವ ವರೆಗೂ ಒಂದ ಸತ್ಯಾಗ್ರಹ ಕಾರ್ಯಕ್ರಮವನ್ನು ಹೆಚ್ಚು ಹುರಿಯಿಸಿಂದ ಸಾಗಿಸತಕ್ಕದ್ದು ಎಂದು ತೀರ್ಮಾನವಾಯಿತು.

ಸಾದರ-ಸ್ವೀಕಾರ

ಮದ್ಯಪಾನ ನಿರೋಧಕ (ಮಾಸ ಪತ್ರಿಕೆ) ಸಂಪಾದಕರು ಪ್ರೊ. ಕೆ ಭೀಮಸೇನ ರಾವ್ ಎಂ ಎ, ಹೈದರಾಬಾದ್

ಹೈದರಬಾದಿನಿಂದ ಹೊರಡುವ ಏಕ ಮಾತ್ರ ಕನ್ನಡ ಮಾಸ ಪತ್ರಿಕೆ. ಮದ್ಯಪಾನ ನಿಷೇಧದ ವಿಷಯ ಹಲವು ಲೇಖನಗಳವೆ

ಕ್ರಾನ್ ಗ್ರೇಡ ಪಟ್ಟಿಗಳು. ಪಾ. ಚಂ. ಸ್ಟಂ

ಯುದ್ಧವಾರ್ತೆ!

ಫಿನ್‌ಲೆಂಡಿನ ಕುರಿತು ಲೀಗ್ ಎಸೆಂಬ್ಲಿಯಲ್ಲಿ ವಾದ

ಮಾಸ್ಕೋ ಹೆಲ್ಸಿಂಕಿಗಳಿಗೆ ತಂತಿ; ೨೪ ಗಂಟೆಗಳ ಅವಧಿ

ನಾಲ್ಕು ರಷ್ಯನ್ ಪಡೆಗಳ ವಿನಾಶ - ಹಿಟ್ಲರನ ಹೊಸ ಶಾಂತಿ ಸಲಹೆ

ಮೂರು ಕಡೆಗಳಲ್ಲಿ ಘೋರ ಯುದ್ಧ—ರಶ್ಯವು ಭಾರತಕ್ಕೆ ಕಣ್ಣಿಟ್ಟಿದೆಯೆ?

ರಶ್ಯಾ—ಫಿನ್ಲೆಂಡು ಯುದ್ಧ

ರಶ್ಯಾ ಫಿನ್ಲೆಂಡುಗಳೆಂಟಿಗೆ ಘೋರ ಸಂಗ್ರಾಮವು ಆರಂಭವಾಗಿದೆಯೆಷ್ಟೆ? ಫಿನ್ಲೆಂಡು ಸಣ್ಣ ರಾಷ್ಟ್ರವಾದರೂ ಪ್ರಬಲ ಸಾಹಸದಿಂದ ಕಾದಾಡುತ್ತಿದೆ. ರಶ್ಯದ ಅನೇಕ ವಿಮಾನಗಳು ಫಿನ್ಲೆಂಡಿನ ನಗರ ಹೆಲ್ಸಂಕಿಯ ಮೇಲೆ ಛಾಯಿ ಟ್ಟುವು ರಶ್ಯದ ಬಾಂಬಿನ ಬೆಂಕಿಯಿಂದ ಫಿನ್ಲೆಂಡು ನಗರಗಳು ಉರಿಯುತ್ತಿವೆ ಫಿನ್ಲೆಂಡಿನಲ್ಲಿ ರಶ್ಯನರು ತಮ್ಮ ಕೈಗೊಂಬೆಗಳಂತೆ ಕೇಳುವ ಕೆಲವು ಮಂದಿಯನ್ನು ಸೇರಿಸಿ ಹೊಸ ಸರಕಾರವೊಂದನ್ನು ಮಾಡಿಕೊಂಡರು ಅವರೊಡನೆ ರಶ್ಯವು ಒಪ್ಪಂದ ಮಾಡಿಕೊಂಡಿತು ಫಿನ್ಲೆಂಡಿನ ಸರಕಾರವು ನ್ಯಾಯ ನ್ಯಾಯ ನಿರ್ಣಯಕ್ಕೆ ಲೀಗಿಗೆ ಮೊರೆಯಿಟ್ಟಿದೆ ಫಿನ್ಲೆಂಡಿಗೆ ರಶ್ಯವು ಆಕ್ರಮಿಸಿದ್ದು ಅನ್ಯಾಯವಾಯಿತೆಂದು ಪ್ರಪಂಚದ ಎಲ್ಲಾ ಕಡೆಯವರೂ ಖಂಡಿಸಿದ್ದಾರೆ ದುಡ್ಡು ಕೊಟ್ಟರೂ ಯುದ್ಧೋಪಕರಣ ಸಿಕ್ಕು ವಿಮಾನಗಳನ್ನು ರಶ್ಯನರಿಗೆ ವಾರಬಾರದಾಗಿ ಅಮೆರಿಕವು ನಿರ್ಧಾರ ಮಾಡಿದೆ

ಜರ್ಮನ್ ಯುದ್ಧ

ರಶ್ಯಾ ಫಿನ್ಲೆಂಡುಗಳ ಯುದ್ಧವು ತೊಡಗಿದಂದಿನಿಂದ ಜರ್ಮನಿಯ ಯುದ್ಧ ವಿಚಾರವು ಹಿಂದೆ ಬಿದ್ದಿದೆ ಹಲವು ಇಂಗ್ಲಿಷು ಹಡಗುಗಳು ಮುಳುಗಿವೆ ಸಾಮಗ್ರಿಗಳನ್ನು ಒಡಗಿಸುವ ಸಲುವಾಗಿ ಪಾರ್ಲಿಮೆಂಟಿನ ಗುಪ್ತ ಸಭೆಯೊಂದು ನೇರಳು ಬ್ರಿಟಿಷರು ಹೆಲಿಗಾಂಡರ ಮೇಲೆ ಛಾಳಿ ನಡೆಸಿದರು ಅದಕ್ಕೆ ಪ್ರತಿಯಾಗಿ ಜರ್ಮನಿರು ಫ್ರಾನ್ಸಿನ ಪೂರ್ವ ಮತ್ತು ಈಶಾನ್ಯ ಗಡಿ ಪ್ರದೇಶಗಳನ್ನು ಮುತ್ತಿಗೆ ಹಾಕಲು ಯತ್ನಿಸಿದರು.

ಬ್ರಿಟನು ಫಿನ್ಲೆಂಡಿಗೆ ೩೦ ಯುದ್ಧ ವಿಮಾನಗಳನ್ನು ಮಾರುವುದಾಗಿ ತಿಳಿಯ ತ್ತದೆ

ಯುದ್ಧ ಕಾಲದಲ್ಲಿ ಫ್ರಾನ್ಸಿನ ಮುಖ್ಯ ಮಂತ್ರಿಗಳಾದ ಡಲಾಡಿಯರಿಗೆ ಸಂಪೂರ್ಣ ಅಧಿಕಾರವನ್ನು ಕೊಟ್ಟಿರುವುದಾಗಿ ಫ್ರಾನ್ಸಿನಲ್ಲಿ ಮಸೂದೆಯೊಂದು ನಿರ್ಣಯವಾಯಿತು

ಕಾಟಿಸ್ಟ್ಸ್ ಹಡಗುಗಳಲ್ಲಿರುವ ಜರ್ಮನ್ ರಸ್ತುಗಳನ್ನೂ ಹಿಡಿಯಬಹುದಾಗಿ ಬ್ರಿಟನ್ ಫ್ರಾನ್ಸು ಸರಕಾರಗಳು ಪ್ರಸಿದ್ಧ ಪಡಿಸಿವೆ.

ಮರ್ಕೆಂಟೆರ್ ಎಂಬ ಬ್ರಿಟಿಷ್ ಹಡಗು ಮುಳುಗಿತು ಡಾಡ್ಯಾನ್ ಎಂಬ ಇನ್ನೊಂದು ಬ್ರಿಟಿಷ್ ಹಡಗು ಜರ್ಮನ್ ಕೋಟೆಗೆ ಬಲಿಯಾಗಿ ಮುಳುಗಿತು ಒಂದು ಜರ್ಮನ್ ಹಡಗು ಫೈಜ್ ದಿಸ್ಕ್ಯಾಯರನ್ನು ನಾಶಮಾಡಿತು ಎರಡು ಜರ್ಮನ್ ಹಡಗುಗಳನ್ನು ಬ್ರಿಟಿಷ್ ಹಡಗುಗಳು ಎಂಧಿಸಿದುವು (ನಾಟಿಸ್ಕಿ) ಯೆಂಬ ಜರ್ಮನ್ ಹಡಗವು ಮುಳುಗಿತು

ಬ್ರಿಟಿಸನಲ್ಲಿ ನಾಜೀ ಪ್ರಚಾರಗಳು ನಡೆಯುತ್ತಿವೆಯೆಂದು ತಿಳಿದುಬರುತ್ತದೆ

'ಬ್ಲಾಕ್ ಹಿಲ್ಸ್' ಎಂಬ ಸ್ಟೀಮರ್ ಹಡಗಗಳ ಮೇಲೆ ರಶ್ಯದ ವಿಮಾನವು ಬಾಂಬುಹಾಕಿತು

ಫಿನ್ಲೆಂಡಿನ ನಿರ್ಧಾರ

ಫಿನ್ಲೆಂಡಿನ ಮುಖ್ಯ ಮಂತ್ರಿಯವರು ಬಂದು ಪ್ರಕಟಣೆ ಹೊರಡಿಸಿ, ಅದರಲ್ಲಿ ಫಿನ್ಲೆಂಡು ರಶ್ಯದೊಡನೆ ರಾಜಿ ಮಾಡಿಕೊಳ್ಳಲು ಇಷ್ಟ ಪಡುವುದೆಂದೂ, ಆದರೆ ಅದರ ಸ್ವಾತಂತ್ರ್ಯಕ್ಕೆ ಧಕ್ಕೆ ತಗಲುವ ಯಾವ ಶರತ್ತುಗಳಿಗೂ ಒಪ್ಪಲಾರದೆಂದೂ ಹೇಳಿದ್ದಾರೆ

ರಶ್ಯ ಲೀಗನ್ನು ತೊಲಗುವುದು

ಫಿನ್ಲೆಂಡಿನವರು ನ್ಯಾಯಾನ್ಯಾಯಗಳ ಬಗ್ಗೆ ಲೀಗ್ ಓವ್ ನೇಶನ್ಸ್‌ಗಿಗೆ ಮೊರೆಯಿಟ್ಟಿರುವದಷ್ಟೆ! ಲೀಗ್ ಓವ್ ನೇಶನ್ಸು ಫಿನ್ಲೆಂಡಿನ ವಿಚಾರದಲ್ಲಿ ತೀರ್ಮಾನ ಮಾಡಿದರು, ರಶ್ಯವು ಲೀಗ್ ಓವ್ ನೇಶನ್ಸ್‌ನ್ನು ಬಿಡ ವುದಾಗಿ ಹೇಳಿತು ರಶ್ಯವನ್ನು ಲೀಗ್ ಓವ್ ನೇಶನ್ಸ್‌ದಿಂದ ವಜಾ ಮಾಡಿದ್ದರೆ ತಾನೇ ರಾಜಿನಾಮೆ ಕೊಡುವುದಾಗಿ ಉರುಗ್ವೆ ಸರಕಾರವು ತಿಳಿಸಿತು

ಬ್ರಿಟಿಷ್ ಹಡಗುಗಳು ಮುಳುಗಿದುವು

'ಹೋಲ್ಕ್ ಸ್ಟಾರ್' ಎಂಬ ಬ್ರಿಟಿಷ್ ಹಡಗನ್ನು ಜರ್ಮನ್ರು ಮುಳುಗಿಸಿತು ಎಸ್ಕೆಡಿ ಎಂಬ ಇನ್ನೊಂದು ಹಡಗು ಮುಳುಗಿತು ಹ್ಯಾಂಸ್ಟರ್ಲಿಯೆಂಬ ಮೆಗದೊಂದು ಬ್ರಿಟಿಷ್ ಹಡಗು ಮುಳುಗಿತ ಹಾಸ್ಟೆಡ್ ಎಂಬ ಬ್ರಿಟಿಷ್ ಹಡಗು ನಾಶವಾಯಿತು

ಫಿನ್ಲೆಂಡಿಗೆ ಸುಮಾರು ೩೦೦೦ ಸ್ವಿಡಿಷ್ ಸೈನಿಕರು ಸಹಾಯಕ್ಕಾಗಿ ಬಂದಿರುವರು ಇಟಲಿಯ ೫೦ ವಿಮಾನಗಳನ್ನು ಕಳುಹಿಸಿತು

ಹಂಟ್ಸ್‌ಮೇನ್ ಎಂಬ ಬ್ರಿಟಿಷ್ ಹಡಗು ನಾಶವಾಗಿದೆ ಆಟ್ಲಂಟಿಕ್ ಸಾಗರದಲ್ಲಿ ಜಾನ್ಸಿಲಂ ಎ ಬ ಬ್ರಿಟಿಷ್ ಹಡಗು ಮುಳುಗಿತು ವಾಹಿಂಗ್ ಟನ್ ಎಂಬ ಬ್ರಿಟಿಷ್ ಟ್ರಾಲರು ಮುಳುಗಿತು ಟ್ರಿಪ್ಪಾಲಂ ಎಂಬ ಬ್ರಿಟಿಷ್ ಹಡಗು ಮುಳುಗಿತು ರಶ್ಯನರು ಫಿನ್ಲರ ಯುದ್ಧದಲ್ಲಿ ವಿಷವಾಯೋಗ ಮಾಡುತ್ತಿರುವರಾಗಿ ತಿಳಿದಿದೆ

ಮೂರು ಕಡೆಗಳಲ್ಲಿ ಘೋರ ಯುದ್ಧ

ಈಗ ರಶ್ಯದಲ್ಲಿ ಮೂರು ಕಡೆಗಳಲ್ಲಿ ಯುದ್ಧ ನಡೆಯುತ್ತದೆ ದಕ್ಷಿಣದಲ್ಲಿ ಲಾಡೋಗಾ ಸರೋವರದ ಹತ್ತಿರ, ಘೋರ ಕಾಳಗವಾಗುತ್ತದೆ ಉತ್ತರದಲ್ಲಿ ಪೆಟ್ಸಾಮೊ ಬಂದರದ ಬಳಿ ಕೆದನ ನಡೆಯುತ್ತದೆ ಹೆಲ್ಸಂಕಿಯಲ್ಲಿ ಭಯಂಕರ ಕಾದಾಟ ನಡೆಯ ತ್ತಾ ಇದೆ ರಶ್ಯನರು ಅಗ್ನಿಯ ಮಳೆಯನ್ನೇ ಸುರಿಸುತ್ತಿರುವರು ಫಿನ್ಲೆಂಡಿನ ನಗರದ ಮೇಲೆ ಬೆಂಕಿಯ ಬಿಂಬುಗಳನ್ನು ಹಾಕುತ್ತಿದ್ದಾರೆ

ಫಿನ್‌ಲೆಂಡಿನ ಕೈಗೊಂಬೆ ಸರಕಾರವು ರಶ್ಯವು ಹೇಳಿದ್ದನ್ನೆಲ್ಲಾ ಕೊಡುವಂತೆ ಇದ್ದು, ಇವತ್ತು ವರ್ಷಗಳ ಒಪ್ಪಂದವನ್ನು ಮಾಡಿಕೊಂಡಿದೆ. ಈ ಒಪ್ಪಂದಂತೆ ಕರೇಲಿಯಾ ಪ್ರಾಂತದ ಹತ್ತಿರ ಸ್ವಲ್ಪ ಭೂಮಿಯು ರಶ್ಯನರ ಸ್ವಾಧೀನವಾಗಿದೆ ಇದಕ್ಕೆ ಪ್ರತಿಯಾಗಿ ಫಿನ್‌ಲೆಂಡಿಗೆ ಸ್ವಲ್ಪ ಹಣ ಮತ್ತು ಭೂಮಿ ಕೊಡುವುದಾಗಿ ವಾಗ್ದಾನವಾಗಿದೆ ಬಾಲ್ಟಿಕ್ ಸಮುದ್ರವು ರಶ್ಯದ ವಶವಾದರೆ ಜರ್ಮನಿಯು ಕೈಕಟ್ಟಿದಂತಾಗುವುದರಿಂದ ಜರ್ಮನಿಯು ಇಂದು ರಶಿಯದ ವಿಷಯದಲ್ಲಿ ಸ್ವಲ್ಪ ಉಗ್ರವಾದಂತೆ ಕಂಡುಬರುತ್ತದೆ.

ರಶ್ಯವು ಭಾರತಕ್ಕೆ ಕಣ್ಣಿಟ್ಟಿದೆಯೆ?

ರಶ್ಯವು ಆಸ್ತ್ರಾಖಾನಿಂದ ಮೇಲೆ ಕಣ್ಣಿಟ್ಟಿರುವುದಾಗಿ ಹೋರಟಕ್ತದೆ ಏಷ್ಯಾ ಮೈನರ್, ಅಫ್‌ಗಾನಿಸ್ತಾನ, ದಾಟಿ ಹಿಂದೂದೇಶಕ್ಕೆ ಬರುವುದು ರಶ್ಯದ ಉದ್ದೇಶವಾಗಿದೆಯೆಂದು ವದಂತಿ, ಇದು ಜರ್ಮನ್ ವದಂತಿ

ಲೀಗ್ ಅಸೆಂಬ್ಲಿಯಲ್ಲಿ ಫಿನ್ಲೆಂಡಿನ ಕುರಿತು ವಾದ

ಕೂಡಲೆ ಯುದ್ಧ ನಿಲ್ಲಿಸಿ, ಸಂಧಾನಕ್ಕೆ ಅವಕಾಶ ಕೊಡಿ

ಮಾಸ್ಕೋ ಹೆಲ್ಸಂಕಿಗಳಿಗೆ ತಂತಿ, ೨೪ ಘಂಟೆಗಳ ಅವಧಿ

ಫಿನ್ಲೆಂಡ್ ರಸ್ಸಾದ ಕುರಿತು ಇತ್ಯರ್ಥಿಸಲು ಲೀಗ್ ಎಸೆಂಬ್ಲಿಯ ಹ್ಯಾಮ್ಬೋರ್ ರವರ (ನೋರ್ವೆ) ಅಧ್ಯಕ್ಷತೆಯಲ್ಲಿ ಸೇರಿ ಲೀಗ್ ಎಸೆಂಬ್ಲಿಯಿಂದ ಸೇನುಕವಾದ ಸಮಿತಿಯೊಂದು ಕೂಡಲೆ ಯುದ್ಧ ನಿಲ್ಲಿಸಿ, ಲೀಗಿನ ಆಶ್ರಯದಲ್ಲಿ ಶಾಂತಿ ಸಂಧಾನ ನಡೆಯಲು ಅವಕಾಶ ಮಾಡಿಕೊಡಬೇಕೆಂದು ರಶ್ಯಕ್ಕೂ ಫಿನ್ಲೆಂಡಿಗೂ ಕಂತಿ ಕಳಿಸಿದೆ ಉತ್ತರ ಕೆಂದಲು ೨೪ ಗಂಟೆಗಳ ಅವಧಿಯನ್ನು ಕೊಡಲಾಗಿದೆ ಈ ಮಧ್ಯೆ ಬೆಲ್ಜಿಯಂ, ಲಕ್ಸೆಂಬರ್ಗ್ ಸ್ವೀಡನ್, ಡೆನ್ಮಾರ್ಕ್, ಹಾಲೆಂಡುಗಳು ಲೀಗ್ ಎಸೆಂಬ್ಲಿಯ ಅಧ್ಯಕ್ಷರಿಗೆ ಪತ್ರ ಬರೆದು ಎಸೆಂಬ್ಲಿಯ ವಿಚಾರವ ವಿಚಾರವನ್ನೂ ಎಂದರೆ ಜರ್ಮನ್ ದಬ್ಬಾಳಿಕೆ ಫೋಲೆಂಡ್ ಭಕ್ಷಣೆಗಳ ಅಂಶ ಎಸೆಂಬ್ಲಿಯು ಚರ್ಚಿಸಕೂಡದೆಂದು ತಿಳಿದಿದ್ದಾರೆ. ಅಕ್ಕ ಅರ್ಜೆಂಟೈನದಲ್ಲಿ ಆ ರಾಷ್ಟ್ರದ ವಿದೇಶಾಂಗ ಸಚಿವರು ಲೀಗ್ ರಶ್ಯವನ್ನು ಹೊರೆದೂಡಬೇಕೆಂದು ಹೂಂಕರಿಸುತ್ತಿದ್ದಾರೆ

ನೌಕಾಯುದ್ಧ

ಕಟಿಸ್ಟ್ ರಾಷ್ಟ್ರಗಳಿಗೇ ಹೆಚ್ಚು ನಷ್ಟ

ಡಿಸೆಂಬರ್ ೯ನೇ ತಾರೀಕಿಗೆ ಅಂತ್ಯವಾದ ವಾರದಲ್ಲಿ ೭ ಬ್ರಿಟಿಷ್ ಜಹಜುಗಳು (೨೬೨೦ ಟೊಕ ೩೭೫೧ ಟನ್), ಕಟಿಸ್ಟ್ ರಾಷ್ಟ್ರಗಳ ಜಹಜುಗಳು ೮ (೨೬೬೨ ಟೊಕ ೨೬೬೨ ಟನ್) ಮುಳುಗಿಸಲ್ಪಟ್ಟಿವೆ

೨೨,೦೦೦ ಟನ್‌ಗಳಿಗಿಂತ ಹೆಚ್ಚು ತೂಗುವ ೪ ಬ್ರಿಟಿಷ್ ಜಹಜುಗಳು ಬಹಳ ದಿನಗಳ ಹಿಂದೆ ಬ್ರಿಟಿಷ್ಗಿಗೆ ತಲುಪಬೇಕಾಗಿದ್ದುವು ಅದರವು ಇನ್ನೂ ಬಂದಿಲ್ಲವಾದುದರಿಂದ ಅವು ನಷ್ಟವಾದುವೆಂದು ಪರಿಗಣಿಸಬೇಕಾಗಿರುವುದಾಗಿ ಬ್ರಿಟಿಷ್ ಅಡ್ಮಿರಲ್ ಪ್ರಕಟಿಸಿ ತಿಳಿಸುತ್ತದೆ. ೪ ಜಹಜುಗಳಾವುವೆಂದರೆ – ಅಟ್ಲಿ, ಸಸ್ಕಾಟ್ಚೀಜ್, ಹಂಟ್ಸ್‌ಮನ್ ಮತ್ತು ಟ್ರೆಸೆನಿಯನ್ ಹಂಟ್ಸ್‌ಮನ್ ಜಹಜನ್ನು ಕಲ್ಕತೆಯಲ್ಲಿ ಸೇರುಕಟ್ಟೆ ಬಿಂಗ್ ಸ್ಟ್ರಾಂಗ್ ಎಂ, ಗಿ ಜನ ಬ್ರಿಟಿಷರು ಇಷ್ಟೆಯೆ. ಅದು ಲಿವರ್‌ಪೂಲಿಗೆ ಬರುತ್ತಿದ್ದಿತು

ವಿಲ್ಹೋಪೊಲ್ (ಅಲಂಗ ಟನ್) ಎಂಬ ಬ್ರಿಟಿಷ್ ಜಹಜು ಪೂರ್ವತೀರದಲ್ಲಿ ಮುಳುಗಿಸಲ್ಪಟ್ಟಿದೆ ಅದರಲ್ಲಿದ್ದ ವರೆಲ್ಲರನ್ನೂ (೩೩ ಮಂದಿ) ಸಂಕ್ಷೇಪಿಸಲಾಯಿತು ಕೆಲವರಿಗೆ ಕೊಂಡ ಗಾಯಗಳಾಗಿವೆ

೧೮,೦೦೦ ಟನ್ ತೂಗುವ ಎರಡು ಬ್ರಿಟಿಷ್ ಟ್ಯಾಂಕರ್ ಜಹಜುಗಳನ್ನು ಇಂಗ್ಲೀಷ್ ಕೆಲಸಗಾರ ವೆಯ ಸಮಿತಿಯಲ್ಲಿ ತಾವು ಮುಳಗಿಸಿದುದಾಗಿ ಜರ್ಮನಿಯವರ ವ್ರಕಟಣೆ

ಬ್ರಿಟಿಷ್ ನೌಕಾಧಿಕಾರಿಗಳಿಗೆ ಈ ವಿಚಾರವಾಗಿ ವಿಶೇಷ ತಳಿಗೆ ಗಂದ ರಾಯಟರ್ ಪ್ರತಿನಿಧಿಗೆ ಹೇಳಲ್ಪಟ್ಟಿದೆ

ಗಾರೂಪೇಶಿಯಾ (೪೭೦೦ ಟನ್) ಎಂಬ ಗ್ರೀಕ್ ಜಹಜು (ನಾರ್ವೆ ತೀರ ಪ್ರದೇಶದಲ್ಲಿ ಯಾವುದೋ ಒಂದು ಗರುಕು ಸಿಗದ ಸಬ್‌ಮೆರೀನಿನಿಂದ ಮುಳುಗಿಸಲ್ಪಟ್ಟಿತು

ಈ ಜಹಜು ಹೊಲೆಂಡಿನಾಗಿ ಕಟ್ಟಿದ್ದಾದ ಅದರುಗಳನ್ನು ತೆಗೆದುಕೊಂಡು ಬರಲು ಕರ್ಕಾನ್ಸ್‌ಗೆ ಪ್ರಯಾಣ ಮಾಡುತ್ತಿದ್ದಿತು

ಜಹಜಿನಲ್ಲಿದ್ದ ನಾವಿಕರ ಸೈಕ ೨೫ ಮಂದಿ ಸಂರಕ್ಷಿಸಲ್ಪಟ್ಟರು, ೪ ಜನ ಮಡಿದರೆಂದು ತಂಕಿ

ಕೆನ್ಸಾರಿ ಎಂಬ ಎಸ್ಟೋನಿಯನ್ ಜಹಜು ಮುಳುಗಿಸಲ್ಪಟ್ಟಿದೆ ರಷ್ಯದ ಸೆಲ್ ಮೇಲೆ ಇದನ್ನು ಮುಳಗಿಸಿತೆಂದು ಸ್ವಾಕ್ಷಿಸ್ಥಲ್ಲಿ ಅಭಿಪ್ರಾಯ ನಾವಿಕರೆಲ್ಲ ರಕ್ಷಿಸಲ್ಪಟ್ಟರು

ಸಂಜೆಯಾಮಸುಕಿನಲ್ಲಿ ಹೆಣ್ಣುಗಳ ಹೆಣ

ಪೆಟ್ಸಾಮೋ ಹೊಂಗಣದ ಜಹಜುಗಳಿಗೆ

ಆಕ್ಟೋಬರ್ ೨೨ರೆನೆಯದಲ್ಲಿ ಸಂಜೆಯ ಮಸಕು ಕವಿದಿರುವಾಗ ಅದರ ಪ್ರಬಲವಾದ ಸರ್ಚ್ ಲೈಟ್‌ಗಳ ಪ್ರಕಾಶದಲ್ಲಿ, ಪೆಟ್ಸಾಮೋ ಬಳಿ ಯುದ್ಧ ನಡೆಯುತ್ತಿದೆಯೆಂದು ನೆಲಸಲ್ ಟೈಮೆಂಟ್ ಪತ್ರಿಕೆಯ ಫಿನ್ಲಾಂ ಕರೆಸ್ಪಾಂಡಿಂಗ್ ಪತ್ರಿಕೆಯ ಪ್ರತಿನಿಧಿಯೊಬ್ಬನು ಹೇಳುತ್ತಾನೆ ಅದರ ಪ್ರಕಾರ ಹೆಣ್ಣುಗಳ ಹೆಣ ಮತ್ತಾದ ಬೀಜ, ಹಂಟ್ಸ್‌ಮನ್ ಮತ್ತು ಟ್ರೆಸೆನಿಯನ್ ಹಂಟ್ಸ್‌ಮನ್ ಜಹಜನ್ನು ಕಲ್ಕತೆಯಲ್ಲಿ ಸೇರುಕಟ್ಟೆ ಬಿಂಗ್ ಸ್ಟ್ರಾಂಗ್ ಎಂ, ಗಿ ಜನ ಬ್ರಿಟಿಷರು ಇಷ್ಟೆಯೆ. ಅದು ಲಿವರ್‌ಪೂಲಿಗೆ ಬರುತ್ತಿದ್ದಿತು

ವಿಲ್ಹೋಪೊಲ್ (ಅಲಂಗ ಟನ್) ಎಂಬ ಬ್ರಿಟಿಷ್ ಜಹಜು ಪೂರ್ವತೀರದಲ್ಲಿ ಮುಳುಗಿಸಲ್ಪಟ್ಟಿದೆ ಅದರಲ್ಲಿದ್ದ ವರೆಲ್ಲರನ್ನೂ (೩೩ ಮಂದಿ) ಸಂಕ್ಷೇಪಿಸಲಾಯಿತು ಕೆಲವರಿಗೆ ಕೊಂಡ ಗಾಯಗಳಾಗಿವೆ

೧೮,೦೦೦ ಟನ್ ತೂಗುವ ಎರಡು ಬ್ರಿಟಿಷ್ ಟ್ಯಾಂಕರ್ ಜಹಜುಗಳನ್ನು ಇಂಗ್ಲೀಷ್ ಕೆಲಸಗಾರ ವೆಯ ಸಮಿತಿಯಲ್ಲಿ ತಾವು ಮುಳಗಿಸಿದುದಾಗಿ ಜರ್ಮನಿಯವರ ವ್ರಕಟಣೆ

ಬ್ರಿಟಿಷ್ ನೌಕಾಧಿಕಾರಿಗಳಿಗೆ ಈ ವಿಚಾರವಾಗಿ ವಿಶೇಷ ತಳಿಗೆ ಗಂದ ರಾಯಟರ್ ಪ್ರತಿನಿಧಿಗೆ ಹೇಳಲ್ಪಟ್ಟಿದೆ

ಗಾರೂಪೇಶಿಯಾ (೪೭೦೦ ಟನ್) ಎಂಬ ಗ್ರೀಕ್ ಜಹಜು (ನಾರ್ವೆ ತೀರ ಪ್ರದೇಶದಲ್ಲಿ ಯಾವುದೋ ಒಂದು ಗರುಕು ಸಿಗದ ಸಬ್‌ಮೆರೀನಿನಿಂದ ಮುಳುಗಿಸಲ್ಪಟ್ಟಿತು

ಈ ಜಹಜು ಹೊಲೆಂಡಿನಾಗಿ ಕಟ್ಟಿದ್ದಾದ ಅದರುಗಳನ್ನು ತೆಗೆದುಕೊಂಡು ಬರಲು ಕರ್ಕಾನ್ಸ್‌ಗೆ ಪ್ರಯಾಣ ಮಾಡುತ್ತಿದ್ದಿತು

ಜಹಜಿನಲ್ಲಿದ್ದ ನಾವಿಕರ ಸೈಕ ೨೫ ಮಂದಿ ಸಂರಕ್ಷಿಸಲ್ಪಟ್ಟರು, ೪ ಜನ ಮಡಿದರೆಂದು ತಂಕಿ

ಕೆನ್ಸಾರಿ ಎಂಬ ಎಸ್ಟೋನಿಯನ್ ಜಹಜು ಮುಳುಗಿಸಲ್ಪಟ್ಟಿದೆ ರಷ್ಯದ ಸೆಲ್ ಮೇಲೆ ಇದನ್ನು ಮುಳಗಿಸಿತೆಂದು ಸ್ವಾಕ್ಷಿಸ್ಥಲ್ಲಿ ಅಭಿಪ್ರಾಯ ನಾವಿಕರೆಲ್ಲ ರಕ್ಷಿಸಲ್ಪಟ್ಟರು

ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಚರ್ಚಿಸಲ್ಪಡಬಹುದಾದ ಅಂಶಗಳು

ಜಿನ್ನಾರ ರಾಷ್ಟ್ರದ್ರೋಹ-ಸುಳ್ಳು ಆರೋಪಣೆ!

ಮುಸಾನಿಯವರು ರಾಜಕೀಯದಿಂದ ನಿವೃತ್ತರಾಗುವರು

ಶ್ರೀ ಬಾಲಾಸಾಹೇಬ್ ಪಟ್ಟವರ್ಧನ್‌ರವರ ನಿಧನ!

ಮಹಾನಾಡ ಶವಸಂಸ್ಕಾರ ಸಮಯದಲ್ಲಿ ಲಕ್ಷಾಂತರಜನ ಪ್ರಜೆಗಳು ಹಾಜರಿದ್ದರು

ಸುಮಾರು ೩೦ ವರ್ಷಗಳ ಕಾಲ ರಾಷ್ಟ್ರಭಾರ ಮಾಡಿದ ಶ್ರೀ ಬಾಲಾಸಾಹೇಬ್ ಪಟ್ಟವರ್ಧನ್‌ರವರು ಸುಪ್ರಸಿದ್ಧವಾರಿ ಸಾಹಿತಿಗಳು ನ್ಯಾಯಾಮ ಶಿಕ್ಷಣ ಸಂಬಂಧವಾದ ಆಟಪಾಟಗಳಲ್ಲಿ ಅವರು ವಿಶೇಷವಾದ ಆಸಕ್ತಿ ತೋರಿಸಿ ಸ್ವಿದ್ದರು

(ಕಳೆಯ ಪುಟದಿಂದ ಮುಂದುವರಿದುದು)

ಇವೆಲ್ಲ ವಿಚಾರಗಳನ್ನು ಯೊ ಚಿಸುವಾಗ ಕಳೆದ 'ಕ್ರಿಪ್ಸ್'ರ್ಕಾಂಗ್ರೆಸಿನ ತ್ರಿಪುರಿ ದಹಸ್ರ'ದ ವಿಚಾರವು ನೆನಪಿಗೆ ಬರತ್ತದೆ ಸ್ವಜಾ ಪ್ರಭುತ್ವದಲ್ಲಿ, ಅಧಿಕಾರ ಲಾಲಸೆಯಿರುವಲ್ಲಿ, ಅಧಿಕಾರದಿಂದ ಹಲವರನ್ನು ಅಳುವ ಸಂಭವಗಳಿದ್ದಲ್ಲಿ, ಅಂತೂ ರಾಜಕೀಯದಲ್ಲಿ ಇಂತಹ ಹೋರಾಟಗಳು ಹೊಸದಲ್ಲ ರಾಜಕೀಯ ವಿಜ್ಞಾನಿಗಳು ಇದನ್ನು ಅವಿಚಾರವಿನ್ಸಲಾಗಾರ ಅದರ ಸಾಹಿತ್ಯ ಪರಿಷತ್ತಿನಂತಹ ಸಾಹಿತ್ಯ ಸಂಸ್ಥೆಗಳಿಗೂ ಇಂತಹ ದ್ವಂದ್ವ ಯುದ್ಧವು ಆರಂಭವಾದ ದುಶೋಚನೀಯ ಮಾತ್ರವಲ್ಲದೆ ಭಾಗ್ಯಹೀನವಾದ ಕನ್ನಡಿಗರ ಕರ್ಮಕಥೆಯೆನ್ನಬೇಕು ಕನ್ನಡಲೇಖಕರಲ್ಲಿ ಸಾಹಿತ್ಯ ಸಂಸ್ಕೃತಿಗಳ ವಿಚಾರಕ್ಕೆ ಕನ್ನಡ ಚಳವಳಿಗಳನ್ನು ಧಾರೆಯೆರೆದ ಮಹಾನುಭಾವರು ಇಂದು ಖಂಡಿತವಾಗಿ ತಮ್ಮ ಕೀರ್ತಿಗೆ ಕಲಂಕವೆನಿಸುವಂತೆ ಇಂತಹ ತಪ್ಪು ಹೆಜ್ಜೆಯಿಡುತ್ತಿರುವರೆಂದು ನಾವು ಎಚ್ಚರಿಸಲಾರೆವು ಬೆಂಗಳೂರು ಮೈಸೂರುಗಳ ಈ ದ್ವಂದ್ವ ಯುದ್ಧ ಇತರ ಪ್ರಾಂತದ ಕನ್ನಡಿಗರು, ಸಾಹಿತ್ಯ ಪರಿಷತ್ತಿನ ಕುರಿತು ಇನ್ನೆಷ್ಟು ಬಾದಾಸೀನರಾಗಿ ಅಶ್ರದ್ಧೆಯನ್ನು ತೋರಿಸುವ ಸಂದರ್ಭವು ಒದಗಿ ಬರಬಹುದು ಸಾಹಿತ್ಯ ಪರಿಷತ್ತಿನ ಮುಂದಾಳುಗಳೆನಿಸಿದ ಇಂದಿನ ಇಚ್ಛಾಗಾಗಳ ಮಹನೀಯರೂ, ತಮ್ಮ ಖಾಡಾ ಖಾಡಿಯಿಂದ ಕನ್ನಡದ ಮಾನವು ಕೆಡದಂತೆ, ಕನ್ನಡ ಸಾಹಿತ್ಯ ಸಂಸ್ಕೃತಿಗಳಿಗೆ ಕಲಂಕ ಬರದಂತೆ, ಕನ್ನಡಿಗರೆಲ್ಲರ ಅಭಿಮಾನ ಸಂಸ್ಥೆಯಾದ ಸಾಹಿತ್ಯ ಪರಿಷತ್ತಿನ ಕಾರ್ಯಗಳು ಕೆಡದಂತೆ, ವಿಶಾಲ ಮತಿಯಿಂದ, ಅನ್ಯೋನ್ಯ ವಿಚಾರವಿನಿಮಯದಿಂದ ಇಂದಿನ ಹೊಲಸು ಹೊಗೆಯನ್ನು ನೀರೆರಚುನಂದಿಸಿಬಿಡುವ ಮುಂಜಾಗರೂಕತೆ ವಹಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ಹಿಂದುಸ್ಥಾನದಲ್ಲಿ ಸದ್ಯ ಉಂಟಾಗಿರುವ ರಾಜಕೀಯ ಬಿಕ್ಕಟ್ಟನ್ನು ಪರಿಹರಿಸಲಿಕ್ಕೆ ಶಾಂತ ಉಪಾಯಗಳನ್ನು ಕೈಕೊಂಡಿರುವ ಕಾಂಗ್ರೆಸ್ ಜನರಿಗೆ ಸಹನಾಶೀಲರಾಗಿ ಇರಬೇಕೆಂದು ಉಪದೇಶಿಸುತ್ತ ಇರುತ್ತಿದೆಯಾದರೆ, ಅದರ ಅರ್ಥ ಭಾರತೀಯ ಜನಾಂಗವು ಅಸಹಾಯವಾಗಿದೆ ಎಂದು ಆಗುವುದಿಲ್ಲ. ಬಾಹ್ಯ ದೃಷ್ಟಿಯಿಂದ ನಾವು ಅಸಹಾಯರೆಂದು ತೋರಿಬಂದರೂ, ನಾವು ಕೈಕೊಂಡ ಸ್ವಾತಂತ್ರ್ಯ ಸಂಪಾದನೆಯ ಕಾರ್ಯದಲ್ಲಿ ನಮಗೆ ಪರಮಾತ್ಮನ ಅನುಗ್ರಹವು ಇದ್ದೇ ಇದೆ ಎಂದು ಮಹಾಕವಿ ರವೀಂದ್ರನಾಥ ಠಾಗೋರರು ಮಾರ್ಚನಾಲ್ಕರಂದು ಒಂದು ಲೇಖನವನ್ನು ಬರೆದಿದ್ದಾರೆ.

'ಮಾನವರು ಬಾಳಿಕೊಂಡಿರುವ ಈ ಪ್ರಪಂಚದಲ್ಲಿ ನಮ್ಮನ್ನು ಅವರು ತನ್ನವರ್ಗದವರೆಂದು ತಿಳಿಯದಿರುವುದಾದರೆ ಮಾನವತೆಯು ಎಲ್ಲಿ ಉಳಿಯಿತು? ನಾವು ಪ್ರಪಂಚದ ಮಾನವ ವರ್ಗದ ಒಂದಂಶವಾಗಿರುವುದರಿಂದ, ನಮ್ಮ ಸ್ವಾತಂತ್ರ್ಯದ ಮೂಲಕ ಮಾನವತೆಯ ರಕ್ಷಣೆಗೆ ನಾವುಕೈಕೊಂಡಿರುವ ಕಾರ್ಯಗಳಲ್ಲಿ ನಮಗೆ ಮಾನವವರ್ಗದ ಸಹಾಯವು ಎಲ್ಲಿಂದಲಾದರೂ ಬರಲೇ ಬೇಕು. ಇಲ್ಲವಾದರೆ ದೈವೀ ಶಕ್ತಿ ಒಂದುಟೆಂದು ಹೇಳುವುದಕ್ಕೆ ಅರ್ಥವೇ ಆಗುವುದಿಲ್ಲ.

'ಮಾನವನು ದೇವಕುಮಾರನು ಪ್ರಜಾಸತ್ತೆಯು ಅವನ ವ್ಯಕ್ತಿಗತ ಹಕ್ಕು ಅಧಿಕಾರ ಸ್ವಾತಂತ್ರ್ಯವನ್ನು ಗೌರವಿಸುತ್ತಿರುವುದು, ಅದರಲ್ಲಿರುವ ವಿಶೇಷತೆಯಾಗಿದೆ. ಆದ್ದರಿಂದ ಪ್ರಜಾಸತ್ತೆಯ ರಕ್ಷಣೆಗೆ ಮಾಡುವ ಎಲ್ಲ ಪ್ರಯತ್ನಗಳಿಗೆ ದೈವೀ ಸಹಾಯವು ಒದಗಿ ಬರುತ್ತದೆ. ಆದರೆ ರಾಜಕಾರಣ ತಜ್ಞರು ತಮ್ಮ ಸಂಭಾಷಣೆಯಲ್ಲಿ ದೈವೀ ಸಹಾಯದ ಮಾತನ್ನೆತ್ತುವುದಿಲ್ಲ. ಹಾಗೆ ಮಾಡುವುದಾದರೆ ಅವರ ಸ್ವಾರ್ಥಸಿದ್ಧಿಯಾಗದು ಪರಾರ್ಥದೃಷ್ಟಿಯಿಂದ ಪ್ರತಿಯೊಂದು ವಿಜಯರಾಷ್ಟ್ರವು ಪರಾಜಿತ ರಾಷ್ಟ್ರಕ್ಕೆ ಸ್ವಾತಂತ್ರ್ಯವನ್ನು ಕೊಟ್ಟು ಅದನ್ನು ರಕ್ಷಿಸಬೇಕಾಗುತ್ತದೆ.

'ಮಾನವತೆಯ ರಕ್ಷಣೆಗೆ ಬ್ರಿಟಿಷರು ಯುದ್ಧ ಕಾರ್ಯದಲ್ಲಿ ತೊಡಗಿದರೆಂದೂ ಅದ್ದರಿಂದ ಅವರಿಗೆ ದೈವೀ ಸಹಾಯವು ಇರುವುದೆಂದೂ ಬ್ರಿಟಿಷರು ಹೇಳುತ್ತಾರೆ. ಬ್ರಿಟಿಷರ ಈ ಘನ ಉದ್ದೇಶವು ಕೈಗೂಡಬೇಕಾದರೆ, ಅವರಿಗೆ ಜನತೆಯ ಹಾರ್ದಿಕ ಸಹಾಯ ಸಹಾನುಭೂತಿಗಳು ದೊರೆಯುವುದು ಅಗತ್ಯ. ದೇವ ಕುಮಾರರಾಗಿರುವ ಜನರ ಹಾರ್ದಿಕ ಸಹಾಯ ಸಹಾನುಭೂತಿಗಳು ದೊರೆಯುವುದೆಂದರೆ, ದೈವೀಸಹಾಯ ಸಿದ್ಧಿದ ಹಾಗೆಯೇ ಆಯಿತು. ಆದರೆ ಒಂದು ಜನಾಂಗವು ಇನ್ನೊಂದು ಜನಾಂಗವನ್ನು ಅದರ ಇಚ್ಛೆಗೆ ವಿರೋಧವಾಗಿ ಆಳಿಕೊಂಡಿರುವಷ್ಟು ಕಾಲ ದೈವೀ ಸಹಾಯದ ಮಾತನ್ನೆತ್ತುವುದು ಮೂರ್ಖತನವಾಗಿದೆ. ಭಾರತವು ಪರತಂತ್ರವಾಗಿರುವಷ್ಟು ಕಾಲ ಬ್ರಿಟಿಷರು ತಮ್ಮ

ಭಾರತದ ಸ್ವಾತಂತ್ರ್ಯಕ್ಕೆ ದೈವಸಹಾಯವುಂಟು!

ಮಹಾಕವಿ ಠಾಗೋರರ ಸ್ಫೂರ್ತಿದಾಯಕ ಲೇಖ

ಭಾರತೀಯರು ಅಸಹಾಯರೇ? ಆದರೆ ಸಹನಾಶೀಲರಲ್ಲ!

ಯುದ್ಧ ಕಾರ್ಯದಲ್ಲಿ ದೈವದ ಹೆಸರನ್ನೆತ್ತುವುದು ಅದರ ಪವಿತ್ರ ಹೆಸರಿಗೆ ಕಲಂಕವನ್ನು ತರುವುದಾಗಿದೆ.

ಭಾರತೀಯರ ಕಾರ್ಯ ಘೋರತೆ

ಯೂರೋಪದಲ್ಲಿ ಆರಂಭವಾದ ಯುದ್ಧದಲ್ಲಿ ಭಾರತದ ಕರ್ತವ್ಯವೇನು? ಭಾರತೀಯರು ಇತರರ ಗುಲಾಮರಾಗಿರುವಷ್ಟು ಕಾಲ ಅವರು ತಮ್ಮ ಸೇಚ್ಛೆಯಿಂದ ಬ್ರಿಟಿಷರಿಗೆ ಸಹಾಯ ಮಾಡುವುದು ದೈವೇಚ್ಛೆಗೆ ವಿರೋಧವಾಗಿ ನಡೆದಂತಾಗುವುದು. ಹಾಗೆಂದು ನಾವು ಸ್ವತಂತ್ರರಾಗುವುದಕ್ಕೋಸ್ಕರ ಯೂರೋಪದ ರಾಷ್ಟ್ರಗಳು ತುಳಿದ ಮಾರ್ಗವನ್ನು ಅನುಸರಿಸುವುದು ಕೂಡದ. ಅತ್ಯಂತ ಪ್ರಬಲರಾದವರಿಗೆ ಕೂಡ ಆ ಮಾರ್ಗದಲ್ಲಿ ಸಫಲತೆಯು ದೊರೆಯುವುದು ಸಂದೇಹಾಸ್ಪದವಾಗಿದೆ. ಪರಂತು ನಿರಾಶರಾಗಬೇಕಾಗಿಲ್ಲ. ದೈವೀ ಸಹಾಯದ ರೀತಿ ನೀತಿಗಳು ಅದ್ಭುತವಾಗಿರುವವು. ದುರ್ಬಲರ ಪಶ್ಚಾತ್ತಾಪದ ಬೆಂಕಿಯು ಪ್ರಬಲರ ಹಡಗಿನ ಕಬ್ಬಿಣದ ಪತ್ರದ ತಗಡನ್ನು ಕರಗಿಸಲಿಕ್ಕೆ ಸಮರ್ಥವಾಗಿದೆ. ಯುದ್ಧ

ಮತ್ತು ಸಂಗ್ರಾಮಗಳು ಮಾತ್ರ ಮುಕ್ತಿದ್ವಾರಗಳಾಗಿ ಇರುವುದಿಲ್ಲ. ಪ್ರಬಲ ರಾಷ್ಟ್ರಗಳು ಕೈಬಿಟ್ಟು ದುರ್ಬಲ ಜನಾಂಗಗಳಿಗೆ ಅವುಗಳ ಗೋಳೇ ಹಲವು ಬಾರಿ ಅನುಕೂಲ ಪರಿಸ್ಥಿತಿಯನ್ನು ಉಂಟುಮಾಡಿ ಕೊಡುತ್ತವೆ. ಅಂಥ ಸಂದರ್ಭಗಳಲ್ಲಿ ಹೇಗೆ ಆ ದುರ್ಬಲ ಜನಾಂಗಗಳ ಮುಕ್ತಿದ್ವಾರವು ತೆರೆಯುತ್ತದೆಂದು ಹೇಳುವುದು ಅಸಾಧ್ಯ. ಅದೆಲ್ಲವು ದೈವವನ್ನು ಹೊಂದಿಕೊಂಡಿದೆ. ಆ ಮಹಾಶಕ್ತಿಯು ಹೇಗೆ ಕೆಲಸ ಮಾಡುತ್ತದೆಂಬುದನ್ನು ನಾವು ಹೇಳಲಸಮರ್ಥರಾಗಿರುವ ಒಂದು ದಿನ ರಷ್ಯದ ಫಿನ್ಲ್ಯಾಂಡಿನ ಕುರಿತು ಪ್ರೇಮವನ್ನು ತೋರಿಸುವಾಗ ಮತ್ತೊಂದು ದಿನ ದ್ವೇಷವನ್ನು ಕಾರುತ್ತದೆ. ಆದುದರಿಂದಲೇ ಅದನ್ನು ದೈವೀಶಕ್ತಿಯೆಂದು ನಾವು ಕರೆಯುತ್ತೇವೆ. ಶಾಂತ ಉಪಾಯಗಳಿಂದ ಸ್ವೋದ್ಧಾರ ಮಾಡಿಕೊಳ್ಳುವ ಎಲ್ಲಾ ಉಪಾಯಗಳು ಮುಗಿದು, ದುರ್ಬಲ ಜನಾಂಗವು ಪರಮಾತ್ಮನಿಗೆ ಮೊರೆ ಇಟ್ಟಾಗ ಆ ಮೊರೆಯು ಎಂದು ವ್ಯರ್ಥವಾಗುವುದಿಲ್ಲ. ಇದಕ್ಕೆ ಇತಿಹಾಸದಲ್ಲಿ ಬೇಕಾದಷ್ಟು ದೃಷ್ಟಾಂತಗಳು ದೊರೆಯುತ್ತವೆ.

'ಅಸಹಾಯರಾದ ಭಾರತೀಯರು ಕಷ್ಟಕಾಲದಲ್ಲಿ ದಾರಿಕಾಣದೆ ತೊಳಲಿಬಳಲುತ್ತಿರುವಾಗ ಅವರಿಗೆ ದೈವೀ ಸಹಾಯವು ಹೇಗೋ ಒಂದು ರೀತಿಯಲ್ಲಿ ಒದಗಿ ಬರುವುದಾದ್ದರಿಂದಲೇ, ಅವರು ಅಸಹಾಯರಲ್ಲವೆಂದೂ, ನಿರಾಶರಾಗುವ ಅಗತ್ಯವಿಲ್ಲವೆಂದೂ, ದೈವೀ ಸಹಾಯದ ಮೂಲಕ ತಾವು ಕೈಕೊಂಡ ಕಾರ್ಯಗಳಲ್ಲಿ ಅವರು ಸಫಲರಾಗುವುದು ಖಂಡಿತವೆಂದೂ ಮಹಾಕವಿ ಠಾಗೋರರು ಹೇಳುತ್ತಿರುವುದಾಗಿದೆ 'ಅವಸರಿಸಬೇಡಿ ತಾಳಿದವನು ಬಾಳುತ್ತಾನೆ' ಎಂದು ಗಾಂಧಿಯವರು ಹೇಳುವ ಮಾತು ಸಂಬಾ ಅರ್ಥವತ್ತಾಗಿದೆ ಎಂಬುದು ಇದರಿಂದ ಚೆನ್ನಾಗಿ ಸ್ಪಷ್ಟವಾಗುತ್ತದೆ

ವಿವಿಧ ವಿಷಯವನ್ನರಿಯಲು
ಸ್ವದೇಶಾಭಿಮಾನಿ ವಾರಪತ್ರಿಕೆಯನ್ನೋದಲು ಮರೆಯದಿರಿ!

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್ ಮಂಗಳೂರು

೧೯೩೯ನೇ ಇಸವಿಯ ಮೇ ತಿಂಗಳಲ್ಲಿ ಪ್ರಕಟವಾದ ಸರಕಾರದ ಎಲಿಮೆಂಟರಿ ಪಾಠಪಟ್ಟಿಗೆ ಅನುಸಾರವಾಗಿ ಬರೆದು ಪ್ರಕಾಶಿಸಲ್ಪಟ್ಟ ಸರ್ವ ಪುಸ್ತಕಗಳು

ಸಿವಿಕ್ಸ್ ಅಥವಾ ಪ್ರಜಾಧರ್ಮ

	ಬೆಲೆ		ಬೆಲೆ
ಮೂರನೇ ತರಗತಿಗೆ	0—1—6	ಆರನೇ ತರಗತಿಗೆ	0—3—0
ನಾಲ್ಕನೇ ,,	0—2—0	ಏಳನೆ ,,	0—3—0
ಐದನೇ ,,	0—2—6	ಎಂಟನೇ ,,	0—3—0

ಚರಿತ್ರೆ ಮತ್ತು ಕಥೆಗಳು

ಮೂರನೇ ತರಗತಿಗೆ	0—2—6	ಆರನೇ ತರಗತಿಗೆ	(ಅಚ್ಚಿನಲ್ಲಿದೆ)
ನಾಲ್ಕನೇ ,,	0—3—0	ಏಳನೇ ,,	(,,)
ಐದನೇ ,,	0—3—6	ಎಂಟನೇ ,,	(,,)

ಭೂವಿವರ

ನಾಲ್ಕನೇ ತರಗತಿಗೆ	0—2—6	ಆರನೇ ತರಗತಿಗೆ	(ಅಚ್ಚಿನಲ್ಲಿದೆ)
ಐದನೆ ,,	0—3—6	ಏಳ್ಳು ಎಂಟನೇ ತರಗತಿಗೆ	(,,)

ಪ್ರಕೃತಿಶಾಸ್ತ್ರ ಮತ್ತು ತೋಟದ ಕೆಲಸ

3ನೇ ತರಗತಿಗೆ	0—1—6	5ನೇ ತರಗತಿಗೆ	0—2—6
4ನೇ ,,	0—2—0		

ಬಾಲಿಕಾ ಪಾಠಶಾಲೆಗಳ ಗೃಹ ವ್ಯವಸ್ಥೆ-ಆರೋಗ್ಯಶಾಸ್ತ್ರ ಮತ್ತು ಸಿವಿಕ್ಸ

ನಾಲ್ಕನೇ ತರಗತಿಗೆ	0—2—6	ಐದನೇ ತರಗತಿಗೆ	0—3—6

ಈ ಮೇಲಿನ ಪುಸ್ತಕಗಳು ಈಗಲೇ ಮಾರಾಟಕ್ಕೆ ಸಿದ್ಧವಾಗಿವೆ.
ದೊರೆಯುವ ಸ್ಥಳ:— ಶಾರದಾ ಭಾಷಖಾನೆ, ಮಂಗಳೂರು

ನೋಟೀಸು

ಶ್ರೀಮದ್ ಅನಂತೇಶ್ವರ ದೇವಸ್ಥಾನ, ಮಂಜೇಶ್ವರ

ಮಂಜೇಶ್ವರ ಶ್ರೀ ದೇವಸ್ಥಾನದಲ್ಲಿ ಕಾಣಿಕೆಗೆ ಬಂದ ಬಾಬ್ತು ಚಿನ್ನ ಅಂದಾಜು ತೂಕ 400 ಮತ್ತು ಬೆಳ್ಳಿ ಕೂಡ ಇದೇ ದಶಂಬರ ತಾ. 28ನೇ ಶನಿವಾರ ಮತ್ತು ಆನಂತರದ ದಿವಸಗಳಲ್ಲಿ ಬೆಳಗ್ಗೆ ಘಂಟೆ 10ರಿಂದ 12 ವರೆಗೆ ಮತ್ತು ಮಧ್ಯಾಹ್ನ ಘಂಟೆ 3ರಿಂದ 5ರ ವರೆಗೆ ಮಂಗಳೂರು ಪಂಪನಕಟ್ಟೆಯಲ್ಲಿರುವ **ಆಯ್ನಿಯಲ್ ಫೋಟೋ ಹೌಸ್** ಇವರಲ್ಲಿ ಬಹಿರಂಗವಾಗಿ ಏಲಂ ಕರದು ಮಾರಾಟಮಾಡುವ ಸಂಗತಿಯು ಈ ಮೂಲಕ ಪ್ರಕಟಿಸಿರುತ್ತದೆ.

ಏಲಮಿಗೆ ಇಚ್ಛುವವರು, ಮೇಲೆ ನಮೂದಿಸಿದ ಘಂಟೆಗಳಲ್ಲಿ ಬಂದು ಚಿನ್ನ ಬೆಳ್ಳಿ ಪರೀಕ್ಷೆಮಾಡಿ ನೋಡಬಹುದು. ಏಲಂ ಕಾಯಂ ಆದ ಕೂಡಲೇ ಆಸ್ಪರ ದರಖಾಸ್ತ್ ದಾರನು ಸೇಕಡ 10ರಂತೆ ಐದಬಾಬ್ತು ತೆರಬೇಕು. ಮಿಕ್ಕ ಐದಬ್ಬು 3 ದಿನಗಳೊಳಗೆ ಪಾವತಿಮಾಡಿ ಚಿನ್ನ ಪಡಿಯತಕ್ಕದ್ದು.

ಏಲಂ ಕಾಯಂಮಾಡುವ ಅಧಿಕಾರವು ಶ್ರೀ ದೇವಸ್ಥಾನದ ಎಕ್ಸಿಕ್ಯೂಟಿವ್ ಅಧಿಕಾರದಲ್ಲಿರುತ್ತದೆ.

ಶ್ರೀ ಧರ್ಮ ಆಗ್ರಹಾರ,
12-12-'39

B. N. Baliga,
Manager.

ಫಿನ್ಲೆಂಡನ್ನು ಗೆಲ್ಲುವ ಸ್ಟಾಲಿನನ ಉದ್ದೇಶ

ಸ್ವಯಂ ನಿರ್ಧಾರದ ಅಧಿಕಾರವು ಎಲ್ಲ ಅಧೀನ ರಾಷ್ಟ್ರಗಳಿಗೂ ದೊರೆಯಲಿ!

ಅನ್ಯಾಯದ ಆಕ್ರಮಣಗಳು ತನ್ನಂತೆ ನಿಲ್ಲುವೆವು!

ಯೂರೋಪಿನಲ್ಲಿ ಮಹಾಯುದ್ಧದ ಕಿಡಿಗಳು ಹಾರಿ ವಾತಾವರಣವು ಪ್ರಕ್ಷುಬ್ಧವಾಗಿರುವಾಗಲೇ ಫಿನ್ಲೆಂಡನ್ನು ಆಕ್ರಮಿಸಿದ ಪ್ರಕರಣವು ಉರಿಯುವ ಬೆಂಕಿಗೆ ತುಪ್ಪವನ್ನು ಹಾಕಿ ಉರಿಯನ್ನುಮತ್ತಷ್ಟು ಪ್ರಜ್ವಲಿಸಿದಂತಾಗಿದೆ. ಇತರರನ್ನು ರಕ್ತಪಾತವುಳ್ಳವರೆಂದು ಟೀಕಿಸುತ್ತಿದ್ದ ಹಾಗೆಯೇ ರಷ್ಯದ ಸರ್ವಾಧಿಕಾರಿ ಸ್ಟಾಲೀನನು ತನ್ನ ರಕ್ತದಾಹವನ್ನು ಜಗತ್ತಿಗೆ ತೋರಿಸಿಕೊಟ್ಟಿದ್ದಾನೆ. ಫಿನ್ಲೆಂಡನ್ನು ಆಕ್ರಮಿಸಿದ ರಷ್ಯದ ಉದ್ದೇಶವು ಸಾಮ್ರಾಜ್ಯ ವಿಸ್ತರಣೆ ಮಾಡುವದೋ, ಆತ್ಮರಕ್ಷಣೆ ಮಾಡಿಕೊಳ್ಳುವದೋ, ಅಥವಾ ಮತ್ತೇನಿರುವದೋ ಎಂಬುದು ಗೊತ್ತಾಗಿರುವದಿಲ್ಲ. ತನ್ನ ಉದ್ದೇಶವನ್ನು ಪ್ರಕಟ ಮಾಡಬೇಕೆಂದು ಬ್ರಿಟಿಷ ಪರರಾಷ್ಟ್ರ ಮಂತ್ರಿಗಳಾದ ಲಾರ್ಡ ಹೆಲಿಫೆಕ್ಸರು ರಷ್ಯದ ಪ್ರತಿನಿಧಿಗಳೊಡನೆ ಬಹಳ ಮಾತನಾಡಿದ್ದಾರೆ. ಆದರೆ ವಿವರಗಳು ರಹಸ್ಯದಲ್ಲಿವೆ. ಇತ್ತ ಫಿನ್ಲೆಂಡಿನ ಮೇಲೆ ರಷ್ಯದ ಅತ್ಯಾಚಾರ ಅನಾಚಾರಗಳು ನಡೆಯುತ್ತಲೇ ಇವೆ.

ವಿಚಿತ್ರ ಧೋರಣೆ

ಯೂರೋಪಿನ ರಾಜಕಾರಣ ಪಟುಗಳ ಧೋರಣೆಯು ಬಹು ವಿಚಿತ್ರವಾಗಿರುವದು. ಒಬ್ಬೊಬ್ಬರು ಸಮಿಷ ಸಮಿಷಕ್ಕೆ ಒಂದೊಂದು ರೀತಿಯಾಗಿ ಬರೆಯುತ್ತಲೂ ಹೇಳುತ್ತಲೂ ಇದ್ದಾರೆ. ಮಂಚಸೆಯಲ್ಲಿ ಮಾತನಾಡಿದ ಮಿ. ಚರ್ಚಿಲ್ರು ಕೂಡ ರಷ್ಯದ ಈ ಆಕ್ರಮಣವನ್ನು ಟೀಕಿಸುವಾಗ ಅತ್ತ ಹಾಡ್ಡ ಸಾಯಲೂ ಬಾರದು, ಇತ್ತ ಕೊಲ್ಲಲು ನುರಿಯಲೂ ಬಾರದು ಎನ್ನುವ ಹಾಗೆ ಮಾತನಾಡಿದ್ದಾರೆ. ರಷ್ಯದಲ್ಲಿ ಈ ವಿಷಯದಲ್ಲಿ ಏಕಮತವು ಕಂಡು ಬರುವದಿಲ್ಲ. ಮಿ. ಮೊಲೊಟೋವರು ಜರ್ಮನಿಯ ಕುರಿತು ಸಹಾನುಭೂತಿಯಿಂದ ಮಾತನಾಡುತ್ತಲಿದ್ದಾರಾದರೆ ಇತರರು ಜರ್ಮನಿಯ ಶ್ರೀಮಂತರನ್ನು ವಕ್ರದೃಷ್ಟಿಯಿಂದ ನೋಡುತಿದ್ದಾರೆ. ಹಿಟ್ಲರನ ಸಹಕಾರಿಯಾದ ರಿಬ್ಬೆನಟ್ರೊಪನನ್ನು ರಷ್ಯದ ರಾಜಾಧಿಕಾರಿಗಳು ಬಾಯಿ ತುಂಬ ಹೊಗಳುತ್ತಾರಾದರೂ, ಪರಸ್ಪರ ಸ್ನೇಹ ಸಂಬಂಧವು ಬಲಗೊಳ್ಳಲಿಕ್ಕೆ ಅವನ್ನು ಕೊಟ್ಟ ಸೂಚನೆಗಳನ್ನು ಅವರು ಸ್ವೀಕರಿಸದೆ ಇರುವದು ಮಾತ್ರವಲ್ಲ, ಅವನ್ನು ತಿರಸ್ಕರಿಸಿದ್ದಾರೆ.

ರಷ್ಯದ ಉದ್ದೇಶ

ಫಿನ್ಲೆಂಡನ್ನು ಗೆಲ್ಲುವ ಸೋವಿಯಟ ರಷ್ಯದ ಉದ್ದೇಶವು ಏನಾಗಿರಬಹುದು? ಫಿನ್ಲೆಂಡನ್ನು ಗೆಲ್ಲುವದರಿಂದ ಉತ್ತರ ಯೂರೋಪದಲ್ಲಿ ಸೋವಿಯಟಿನ ಪ್ರಭಾವವು ಬೆಳೆಯಬಹುದು. ಆದರೆ ಅದೇ ಹೊತ್ತಿಗೆ ರಷ್ಯದ ಮೇಲಿನ ಇತರ ರಾಷ್ಟ್ರಗಳ ಹೊಟ್ಟೆಯುರಿಯೂ ಬಹಳ ಪ್ರಜ್ವಲಿಸದೆ ಇರುವದಿಲ್ಲ. ಇತರ ರಾಷ್ಟ್ರಗಳ ಸರಕಾರ ಬೆಂಬಲ ಸಹಾನುಭೂತಿಗಳು ಇಲ್ಲದೆ, ರಷ್ಯವು ಎಷ್ಟು ಬಲಿಷ್ಠವಾದರೂ ತನ್ನ ಕಾಲದಲ್ಲಿ ತಾನು ಬಹಳ ಕಾಲ ನಿಂತಿರಲಾರದು ಚಿನ್ನದ ಸತ್ತುಟಿಗಾದರೂ ಒರಗಿ ಇರಲಿಕ್ಕೆ ಮಣ್ಣಿನ ಗೋಡೆ ಬೇಕು. ಇದು ಸ್ಟಾಲೀನನಿಗೆ ಚೆನ್ನಾಗಿ ತಿಳಿದಿದೆ. ಆದರೂ ಯೂರೋಪಿನ ಸಣ್ಣ ಮತ್ತು ದುರ್ಬಲ ರಾಷ್ಟ್ರಗಳನ್ನು ಆಕ್ರಮಿಸುವ ಅವನ ಧೋರಣೆಯಲ್ಲಿ ಶೀಘ್ರದಲ್ಲಿ ಪರಿವರ್ತನೆಗಳಾಗುವಂತೆ ತೋರುವದಿಲ್ಲ. ಅವರ ಉದ್ದೇಶವು ಮೊದಲಿನಂತೆಯೇ ಇನ್ನೂ ಕೆಲವು ಕಾಲವಿರಬಹುದು.

ಸ್ವಯಂ ನಿರ್ಧಾರ ಅಧಿಕಾರ ದೊರೆಯಲಿ

ಇದಕ್ಕೆ ಒಂದು ಕಾರಣವಿದೆ. ಜರ್ಮನಿಯ ವಿರುದ್ಧ ಯುದ್ಧವನ್ನಾರಂಭಿಸಿದ ಬ್ರಿಟಿಷರು ಹಿಟ್ಲರನ ನಾಝಿ ತತ್ವಗಳನ್ನು ವಿರೋಧಿಸಲಿಕ್ಕೆ ಈ ಯುದ್ಧವನ್ನು ಹೂಡಿದ್ದಾದರೂ, ಹಿಟ್ಲರನಂತೆ ಅವರಲ್ಲೂ ಸಾಮ್ರಾಜ್ಯದಾಹವು ಕಡಿಮೆಯಾಗಿರುವದಿಲ್ಲ. ತನ್ನ ಅಧೀನ ರಾಷ್ಟ್ರಗಳಿಗೆ ಸ್ವಾತಂತ್ರ್ಯವನ್ನು ಕೊಡಲಿಕ್ಕೂ ಸ್ವಯಂ ನಿರ್ಧಾರದ ಅಧಿಕಾರವನ್ನು ಕೊಡಲಿಕ್ಕೂ ಬ್ರಿಟನು ಕಂಟು ನೆವನಗಳನ್ನು ಮುಂದೊಡ್ಡಿ ಕಾಲಯಾಪನೆ ಮಾಡುತ್ತಲೇ ಇದೆ. ಆದ್ದರಿಂದ ಯುದ್ಧವನ್ನಾರಂಭಿಸಿದ ಅದರ ಪ್ರಕಟ ಉದ್ದೇಶವು ಎಷ್ಟು ಘನವಾಗಿರಬಹುದಾದರೂ, ಅಂತರಂಗದಲ್ಲಿ ಕುಂಟಾ ಸ್ವಾರ್ಥವು ತುಂಬಿಕೊಂಡಿದೆಯೆಂಬುದು ಚೆನ್ನಾಗಿ ಸ್ಪಷ್ಟವಾಗುತ್ತದೆ. ಎಷ್ಟರತನಕ ಬ್ರಿಟನು ಮೊದಲಾದ ರಾಷ್ಟ್ರಗಳು ತಮ್ಮ ಸ್ವಾರ್ಥವನ್ನು ಬಿಡುವದಿಲ್ಲವೋ ಅಷ್ಟರತನಕ ರಷ್ಯವು ಸ್ವಾರ್ಥದಿಂದ ಅನ್ಯ ರಾಷ್ಟ್ರಗಳನ್ನು ಆಕ್ರಮಿಸುವದನ್ನು ತಪ್ಪೆಂದು ಯಾವ ಬಾಯಿಯಿಂದ ಹೇಳಬಹುದು? ಆದ್ದರಿಂದ ಬ್ರಿಟನು ಹಿಂದುಸ್ಥಾನದಂಥ ಅಧೀನ ರಾಷ್ಟ್ರಗಳಿಗೆ ಸ್ವಾತಂತ್ರ್ಯವನ್ನು ಕೊಟ್ಟು ತನಗೆ ಸಾಮ್ರಾಜ್ಯ ಸ್ವಾರ್ಥವಿರುವದಿಲ್ಲವೆಂದು ಮೊದಲು ಜಗತ್ತಿಗೆ ಸ್ಪಷ್ಟ ಮಾಡಿಕೊಡಬೇಕು. ಅಗ ರಷ್ಯದಂಥ ರಾಷ್ಟ್ರಗಳು ಅನ್ಯಾಯ ಆಕ್ರಮಣ ಮಾಡುವದನ್ನು ಬಿಡಬಹುದು. ಬಿಡದಿದ್ದರೂ ಅದನ್ನು ಹಾಗೆ ಮಾಡಲಿಕ್ಕೆ ಒತ್ತಾಯ ಮಾಡುವದು ಕಠಿನ ಕೆಲಸವಾಗುವದಿಲ್ಲ. ಲೋಕದಲ್ಲಿ ಶಾಂತಿ ಸ್ಥಾಪನೆಯ ಕಾರ್ಯವು ಸುಲಭವಾಗುವದು.

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ

Kanarese No.2

ಚರ್ಮರೋಗಗಳು ಇಂದ್ರಜಾಲದಂತೆ ಮಾಯವಾಗುವುದು

ಕುಟಿಕೂರಾ ಮುಲಾಮು (Cuticura Ointment) ತನ್ನ ವಾಸಿಮಾಡುವ ಗುಣದ ವಿಷಯ ಎಂಥಾ ಕಠಿಣ ಸ್ಪರ್ಧೆಗೂ ನಿಲ್ಲುವುದು. ತ್ರಾಸದಾಯಕವಾಗಿ ವೇದನೆಗೊಳಿಸಿ ಪೀಡಾದಿಸುವ ದೀರ್ಘಕಾಲದ ಕಾಲ್ಮರುಕನ್ನು ಖಂಡಿತ ಗುಣಪಡಿಸುವುದು. ಕುಟಿಕೂರಾ (Cuticura)ವು ಕ್ರಿಮಿಗಳನ್ನು ನಾಶಮಾಡಿ ಕಾಲ್ಮರುಕನ್ನು ಅಧಿಕಗೊಳಿಸುವ ವಿಷವನ್ನು ನಾಶಮಾಡಿ, ಬಾತುಹೋದ ಭಾಗವನ್ನು ಗುಣಪಡಿಸಿ ವೇದನೆಗೊಳಗಾದ ಚರ್ಮದ ಬದಲಿಗೆ ಹೊಸ ಚರ್ಮವು ಬರುವಂತೆ ಸಹಾಯಮಾಡುವುದು.

ಚರ್ಮವ್ಯಾಧಿಯುಳ್ಳವರು ಕುಟಿಕೂರಾ ಸಾಬೂನನ್ನು (Cuticura Soap) ಮಾತ್ರವೇ ಉಪಯೋಗಿಸಬೇಕು. ಇದು ಗುಣಗೊಳಿಸುವುದು ಮತ್ತು ಕ್ರಿಮಿನಾಶಕ ಗುಣ ಉಳ್ಳದ್ದು.

ಕಜ್ಜಿ, ಕುರು, ಕುರಿಕಜ್ಜಿ, ಗಾಯ, ಪೆಟ್ಟು, ಪರಚುವಿಕೆ, ಸುಟ್ಟಗಾಯ, ಮುದ್ದಣ ಮುಂತಾದ ಎಲ್ಲಾ ಚರ್ಮವ್ಯಾಧಿಗಳಿಗೂ ಕುಟಿಕೂರಾ ಮುಲಾಮನ್ನೇ (Cuticura Ointment) ಉಪಯೋಗಿಸಿರಿ.

ಎಲ್ಲಾ ಕೆಮಿಸ್ಟರಲ್ಲಿಯೂ ಬಣ್ಣಗಳಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಮುಲಾಮು

CUTICURA OINTMENT



ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಜಿ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾಂಪ್ರದಾಯಿಯವುದರಿಂದ ಹೆಂಗಸರ ಆಕಸ್ಮಿಕ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ಸೇವಾದಂತೆ ಸುರು ವಿದುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ಕದನಂದರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಕಿರಿ. ವಿಳಾಸ ಸಟು ಫಿಕೆಟ್ ಡಾ. ಎಂ ಡಿ ಎಲ್ ಎಸ್ ಕೆಳವಾಮಾಹಿತಿ ಇಷ್ಟೇ ಈ ಚೂರ್ಣದಿಂದ ಯಾವ ಕಡದ ಅಪಾಯವೂ ಅ ರಾ ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯರೂ ೪-೦-೦

ವಿ ಪಿ ಅ ೬

ವಿಳಾಸ ಸಂಜೀವಿನೀ ಔಷಧಾಲಯ ಮು. ಪೊ. ಮಿರಜೆ, S. M C

The Auttur & Jawahar Bank, Limited.

ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್, ಮಂಗಳೂರು

ಹೆಡ್ ಆಫೀಸ್. ಕೆನರಾ ಹೈಸ್ಕೂಲ್ ರೋಡು ಬ್ರಾಂಚ್ ಪೆಂಟ್ಲೇಂಡ್ ಸೇಟ

ರಿಜಿಸ್ಟರ್ಡ್ ಮೂಲಧನ ರೂ. 1,00,000. ತೆರಲ್ಪಟ್ಟ ಮೂಲಧನ ರೂ. 50,100

ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಯಲ್ಪಡುವವು. ಚಿನ್ನಾಭರಣಗಳ ಅಡವಿನ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು. ಕೇವಣಾತಿಗಳ ಮೇಲಿನ ದರ

ಚಾಲ್ತಿ ಕೇವಣಾತಿ 2% ಸೇವಿಂಗ್ಸ್ ಬೇಂಕ್ ಕೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%

ನಿರಖು ಕೇವಣಾತಿ 3 ತಿಂಗಳಿಗೆ 3½% ನಿರಖು ಕೇವಣಾತಿ 12 ತಿಂಗಳಿಗೆ 4½%

" 6 ತಿಂಗಳಿಗೆ 4% " 24 ತಿಂಗಳಿಗೆ 5%

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು:

ಅತ್ತೂರು ವೈಕುಂಠಪ್ರಭು, ಮೆನೆಜಿಂಗ್ ಡೈರೆಕ್ಟರ್.

ಜೀವಜ್ಯೋತಿಗಳು:

ಠಕ್ಕರ್ ಬಾಪಾ

[ಶ್ರೀ. ಎಸ್. ಕೃಷ್ಣ ಶರ್ಮಾ, ವಾರ್ಧಾ ಅವರಿಂದ]

★

ಅನುಪಮ ಕರ್ಮಯೋಗಿ, ಅವಿರತ ಹರಿಜನ-ಪತಿತ
ಜನೋದ್ಧರಣಾಸಕ್ತಿ, ನಿಯಮಿತ ಜೀವನಕ್ರಮ, ಇವೇ
ಈ ವಯೋವೃದ್ಧ ಶರುಣನ ಆಯುಷ್ಯದಗುಟ್ಟುಗಳು.
ಸೇವಾಧರ್ಮದಿಂದಲೇ ಸೇವ್ಯ ಸ್ಥಿತಿಯನ್ನೇರಿದ ಈ
ವಿಭೂತಿಯ ಎಂಭತ್ತನೆಯ ವರ್ಷಾಂತಿಕಗಾಗಿ ನಾವೆಲ್ಲರೂ
ಈ ಆದರ್ಶ ಜೀವನವನ್ನು ಮನಮುಟ್ಟಿ ಸ್ಮರಿಸುವ

★



ಠಕ್ಕರ್ ಬಾಪಾಗೆ ೭೦ ವರ್ಷವೆಂದು ಹೇಳಿದರೆ ಎಷ್ಟೋ ಜನ ನಂಬಲಿಕ್ಕಿಲ್ಲ; ಅವರನ್ನು ನೋಡಿದವರು ಯಾರೂ ಈ ಮಾತು ನಂಬುವದೇ ಇಲ್ಲ. ಅವರೊಡನೆ ಹಗಲಿರುಳು ಕೆಲಸಮಾಡುವ ಜನರಿಗೂ ಕೂಡ ಅವರ ವಯಸ್ಸು ಇಷ್ಟಿರ ಎಹುದೆಂಬ ಅನುಮಾನವೇ ಬಂದಿರಲಿಲ್ಲ. ಬಾಪಾಗೆ ಅಂಥ ಮೈಕಟ್ಟಿದೆ, ಅಂಥ ಮುಖ ಮುದ್ರೆಯಿದೆ. ತಮ್ಮ ವಯಸ್ಸನ್ನು ಮರೆತು ತುರೆಯಸಲು ಎಲ್ಲರಿಗೂ ಸಾಧ್ಯವಿಲ್ಲ. ಕೆಲವರು ತಮ್ಮ ಮನಸ್ಸನ್ನು ಪಳಗಿಸಿಕೊಳ್ಳಬಲ್ಲರು; ಆದರೆ ಮೈಯನ್ನೂ ಹಾಗೇ ಕಾಪಾಡಿಕೊಳ್ಳಲು ಕೊಂಚಮಟ್ಟಿಗೆ ಪ್ರಕೃತಿಯ ಸಹಾಯವೂ ಬೇಕು. ಮೈಯಿಂದ ಅಜರಾಮರ ಭಾಗ್ಯಶಾಲಿಗಳೂ ಉಂಟು, ಮನಸಿನಿಂದ ನಿರ್ಜರಾಮರ ಪುಣ್ಯಜೀವಿಗಳೂ ಉಂಟು. ಇವೆರಡನ್ನೂ ಪಡೆದ ಜೀವಿಗಳು ಬಹಳ ಕಡಮೆ. ಠಕ್ಕರ್ ಬಾಪಾ ಅಂಥವರಲ್ಲಿ ಒಬ್ಬರು. ಅವರ ತಿಳಿಹೊಳೆದಂಥ ಮುಖ, ಅದರಲ್ಲಿ ಅತ್ಯಸೂರ್ಯನ ಪ್ರತಿಬಿಂಬದಂತೆ ಹೊಳೆವ ಕಣ್ಣು, ಅಲೆಗಳ ಹೊಯ್ದಾಟವಿಲ್ಲದೆ ಶಾಂತವಾದ ಕಡಲಿನ ಉಸುರಿನಂಥ ಅವರ ಮಾತು ಎಂದಿಗೂ ಮರೆಯುವಂತಿಲ್ಲ.

ಬಾಪಾರ ಈ ನಿರ್ಜರತೆಯ ಗುಟ್ಟು ಅವರ ಕರ್ಮಜೀವನದಲ್ಲಿದೆ. ಅವರಿಗೆ ಕೆಲಸಮಾಡುವುದೆಂದರೆ ಅದೊಂದು ಬಗೆಯ ಹುಚ್ಚು ಹುಮ್ಮಸ್ಸು. ಈ ವಯಸ್ಸಿನಲ್ಲೂ ತಮ್ಮ ಬಟ್ಟೆ ಬರೆಗಳನ್ನು ತಾವೇ ಮಡಿಮಾಡಿಕೊಳ್ಳುವದರಲ್ಲಿ ಬೇಸರವಿಲ್ಲ. ಸಂಬಳಕ್ಕಾಗಿ ದುಡಿಯುವವರಿಗೂ ಒಂದು ಬಿಡುವಿನ ದಿನವುಂಟು. ಗಿರಣಿಯ ಕೂಲಿಕಾರರಿಗೂ ದಿನಕ್ಕೆ ಇಷ್ಟೇ ಗಂಟೆ ದುಡಿತವೆಂಬ ನಿಯಮವಿದೆ. ಸೇವೆಯೇ ಜೀವನವೆಂದು ತಿಳಿದಿರುವ ಬಾಪಾರಂಥ ಜನರಿಗೆ ಎಲ್ಲೂ ಇಲ್ಲ. ವರ್ಧಾದಿಂದ ಸೇಗಾಂವಿಗೆ ಗಾಂಧೀಜಿಯವರನ್ನು ನೋಡಲಿಕ್ಕೆ ಹೋಗಬೇಕಾದಾಗ ಟಾಂಗಾ ಸಿಕ್ಕರೆ ಸರಿ, ಇಲ್ಲದಿದ್ದರೆ ಕಾಲುಗಾಡಿ ಇದ್ದೇ ಇದೆಯಲ್ಲ. ಗಾಂಧೀಜೀ ಒಮ್ಮೆ ಹೇಳಿದಂತೆ 'ಬಾಪಾ, ಕೆಲವು ದಿನದ ತನಕ ನೀವು ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಬಾರದೇ?' ಒಂದನೆಯ ಬಾಪಾ ಕೇಳಿದರು 'ಬಾಪು, ಇನ್ನೂ ಎಷ್ಟು ಕೆಲಸ ಹಾಗೇ ಬಿದ್ದಿದೆ, ನಾನು ಹೇಗೆ ವಿಶ್ರಾಂತಿ ತೆಗೆದುಕೊಳ್ಳಲಿ? ಆ ಕೆಲಸ ಮಾಡುತ್ತ ಕೋಗುವದರಲ್ಲೇ ನನಗೆ ವಿಶ್ರಾಂತಿಯ ಸುಖ ಸಿಗುತ್ತದೆ.' ತಮ್ಮ ಕೆಲಸದಲ್ಲಿ ಅಷ್ಟು ಆನಂದ, ಉತ್ಸಾಹ ಅವರಿಗೆ! ದುಡಿತವನ್ನು ಈ ಬೆಳಕಿನಲ್ಲಿ ಕಂಡವರು ಕೋಟಿಗೊಬ್ಬರಾದರೂ ಇದ್ದಾರೆಯೋ ಇಲ್ಲವೋ?

ಬರೀ ಹುಚ್ಚು ಹುಚ್ಚು ದುಡಿತವಲ್ಲ ಬಾಪಾರದು. ಅದರಲ್ಲೂ ಒಂದು ಆರ್ಥವಿದೆ, ರೀತಿಯಿದೆ. ಯಾವ ಯಾವ ಕೆಲಸವನ್ನು ಯಾವಾಗ ಮಾಡಬೇಕೆಂಬದರ ಕ್ರಮವಿದೆ. ಇಂದಿನ ಕೆಲಸ ಇಂದೇ ಮುಗಿಸಿಬಿಡುವ ಸಂಕಲ್ಪವಿದೆ. ಯಾವುದನ್ನೂ ನಾಳೆಗೆ ತಳ್ಳುವಹಾಗಿಲ್ಲ. ಲೆಕ್ಕದಲ್ಲಿ ಬಾಪಾ ಬಹಳ ಜಾಗರೂಕರು. ಸಂಸ್ಥೆಗಳ ಹಣದ ವಿಷಯದಲ್ಲಿ ಅವರ ಕಣ್ಣು ಬಹಳ ಮೊನೆಯಾದುದು. ತಮ್ಮ ದಿನಚರಿಯನ್ನು ಬರೆಯುವದಂತೂ ಅವರಿಗೊಂದು ಚಟವೇ ಆಗಿ ಹೋಗಿದೆ. ಕೋಮಟ ದಿನವೂ ತನ್ನ ಲೆಕ್ಕಗಳನ್ನು ಮುಗಿಸುವಂತೆ ಇವರೂ ತಮ್ಮ ದಿನದ ಕೀರ್ದಿ ಬರೆಯದೆ ಆ ದಿನವನ್ನು ಮುಗಿಸುವಹಾಗಿಲ್ಲ. ಬಾಪಾರ ಜೀವನ ಉತ್ತಮ ತರದ ಗಡಿಯಾರದಂತೆ; ಹೊತ್ತಿಗೆ ಸರಿಯಾಗಿ ಗಂಟೆ ಹೊಡೆಯಲೇ ಬೇಕು. ಬಾರಿಸಿದ ಗಂಟೆಗಳ ಲೆಕ್ಕವೂ ಸರಿಯಾಗಿರಬೇಕು. ಅವರ ನಿತ್ಯ ಜೀವನದಲ್ಲಿ ಈ ರೀತಿ, ಈ ಕ್ರಮ ಗಳಿಗೆಗಳಿಗೆ ಕಾಣುತ್ತದೆ.

ಈ ನಿಯಮಬದ್ಧ ಜೀವನ ಕೆಲಸದಲ್ಲಿ ಇವರಿಗಿರುವ ಆಸಂದಗಳೇ ಅವರ ಎಪ್ಪತ್ತು ವರ್ಷಗಳ ಹರೆಯದ ಗುಟ್ಟು, ಅವರ ಆದರ್ಶ ಜೀವನದ ಅಡಿಗಲ್ಲು.

ಬಾಪಾ ತಮ್ಮ ಸಂಗಡಿಗರೊಡನೆ ಮಾತಾಡಿದಾಗ ಅವರ ಯೋಗಕ್ಷೇಮ ವಿಚಾರಿಸಿದಾಗ, ದುಃಖ ದುಗುಡಗಳನ್ನು ಕೇಳಿ ತಿಳಿದುಕೊಳ್ಳುವಾಗ ತೀರ ಸಮೀಪದ ಅಪ್ತರಂತೆ, ಹಿರಿಯಣ್ಣನಂತೆ ಆಗಿಬಿಡುತ್ತಾರೆ. ಹಿತವಚನವನ್ನು ಹೇಳುವುದರಲ್ಲಿ, ನಮ್ಮ ತಪ್ಪು ತಡೆಗಳನ್ನು ತೋರಿಸುವುದರಲ್ಲಿ, ಹುರುಪು ಹುಮ್ಮಸ್ಸು ಕೊಡುವುದರಲ್ಲಿ ಅವರ ಪದ್ಧತಿ ತಂದೆಯ ವಾತ್ಸಲ್ಯವಲ್ಲ, ಅಣ್ಣನ ಪ್ರೀತಿ. ಆ ಪ್ರೀತಿ ಎಂಥ ತಂಬುಹೃದಯದ್ದು ಎಂಬುದು ಅನುಭವಿಸಿ ತಿಳಿಯಬೇಕಾದ ಸಂಗತಿ. ಹರಿಜನ ಸೇವಕ ಸಂಘದಲ್ಲಿ ಕೆಲಸಗಾರನಾಗಿ ಸೇರಿದಾಯಿತು, ಬಾಪಾ ಕುಟುಂಬಕ್ಕೆ ದತ್ತಕ ಹೋದಂತೆ. ಅವನ ಇಡೀ ಯೋಗಕ್ಷೇಮವನ್ನೇ ಬಾಪಾ ಹೊತ್ತುಕೊಳ್ಳುತ್ತಾರೆ. ಇಂದು ಹಿಂದುಸ್ಥಾನದ ಜನಜನಸೇವಕ ಸಂಘದ ಕೆಲಸಗಾರರಲ್ಲಿ ಕಂಡುಬರುವ ಸೌಹಾರ್ದಭಾವಕ್ಕೆ ಬಾಪಾ ಅಡಿಗಲ್ಲು.

ಶ್ರೀ. ವೈದ್ಯನಾಥ ಅಯ್ಯರ್ ಮಧುರೆಯ ಮಹಾಜೇರ ತಪಿಳುನಾಡಿನಲ್ಲಿ ಈ ವರ್ಷದಳ್ಳುರಿಯಂತೆ ಎಲ್ಲೆಡೆಯಲ್ಲೂ ಪಸರಿದ ದೇವಾಲಯ ಪ್ರವೇಶದ ಚಳುವಳಿಯ ಕೀರ್ತಿ ಅವರದು. ಅವರು ತಮಿಳುನಾಡಿನ ಹರಿಜನ ಸೇವಕ ಸಂಘದ ಅಧ್ಯಕ್ಷರಾಗಿರದಿದ್ದರೆ ಈ ಪವಾಡ ಸಾಧ್ಯವಾಗುತ್ತಿರಲಿಲ್ಲ. ತಮ್ಮ ಅಧ್ಯಕ್ಷ ಪದವಿಯನ್ನು ಬಿಗಿಬೇಕೆಂದು ಅವರು ಬಹಳ ಪ್ರಯತ್ನ ಮಾಡಿದರು. ಮೂರು ಸಲ ರಾಜೀನಾಮೆ ಕೊಟ್ಟರು. ಅವರ ಹಟ ಬಾಪಾರ ಅಭಿಮಾನದ ಮುಂದೆ ಸಾಗಲಿಲ್ಲ. ಪ್ರತಿಸಲವೂ ಜನಗಣ್ಣಿನಂದ ಅಯ್ಯರ್ ತಮ್ಮ ಕಾಗದ ಹಿಂದಕ್ಕೆ ತೆಗೆದು ಕೊಳ್ಳುತ್ತಿದ್ದರು.

ಇನ್ನೊಂದು ಪ್ರಾಂತದಲ್ಲಿ ಅಧ್ಯಕ್ಷರಾಗಿದ್ದವರು ತಮಗೆ ಬಿಡುವಿಲ್ಲವೆಂದು ಆ ಪದವಿಗೆ ರಾಜೀನಾಮೆ ಕೊಟ್ಟರು. ಬಾಪಾ ಒಪ್ಪಲಿಲ್ಲ. 'ಇದ್ದಷ್ಟು ಬಿಗುವೇ ಸಾಕು, ಬಿಡುವು ಅಲ್ಲ ಮುಖ್ಯ ಕೆಲಸಕ್ಕೆ, ಅಭಿವೃದ್ಧಿವಿದ್ದವರೇ ಬೇಕು.'

ಠಕ್ಕರ್ ಬಾಪಾರ ಹರಿಜನ ಸೇವೆ ಈಗಂತೂ ಹಿಂದುಸ್ಥಾನದ ಮೂಲೆಮೂಲೆಗೂ ವ್ಯಾಪಿಸಿದೆ. ಅವರ ಮೂಕ ಸೇವೆಯ ಪರಿಚಯ ಎಲ್ಲರಿಗೂ ಆಗಿದೆ. ಅವರ ನಿಷ್ಕಾಮ ಸೇವೆಯ ಕಂಪಿನ ಪುಣ್ಯ ಇಡೀ ಹಿಂದುಸ್ಥಾನಕ್ಕೇ ಹಂಚಲ್ಪಡುತ್ತಿದೆ. ಗಾಂಧೀಜಿಯ ಸೂತ್ರಧಾರಿತ್ವದ ಫಲ ಅದು. ಇಲ್ಲದಿದ್ದರೆ ಬಾಪಾ ತಮ್ಮ ಪಾಡಿಗೆ ತಾವು ಗುಜರಾತಿನ ಹರಿಜನರ ಅದಿಜನರ ಸೇವೆಯಲ್ಲಿ ಮಗ್ನರಾಗಿರುತ್ತಿದ್ದರು. ಗುಜರಾತಿನ ಹರಿಜನರಿಗೆ ಅವರು ಒಂದು ಒಗೆಯ ಗುರುಗಳೇ ಆಗಿಬಿಟ್ಟಿದ್ದರು. ಗಾಂಧೀಜಿಯ ಮಹೋತ್ಸವ ಸದ ಫಲವಾಗಿ ಹರಿಜನ ಸೇವಕ ಸಂಘವು ಮೊದಲಾದ್ದಾಗ ಅದರ ಎಲ್ಲ ಹೊಣೆಯನ್ನೂ ಹೊರಲು, ಗಾಂಧೀಜೀ ಠಕ್ಕರ್ ಬಾಪಾರನ್ನು ಅವರ ಸಣ್ಣ ಲೋಕದಿಂದ ಬಯಲಿಗೆಳೆದರು. ಈಗ ಅದರ ವಿಷಯದಲ್ಲಿ ಅವರು ನಿಶ್ಚಿಂತರಾಗಿದ್ದಾರೆ.

ಹಿಂದುಸ್ಥಾನಕ್ಕೆ ಬಾಪಾರ ಪರಿಚಯ ಅವರ ಹರಿಜನ ಕಾರ್ಯದಲ್ಲಿ ಆಗಿದ್ದರೂ ಅವರ ಅದಿಜನರ ಸೇವೆಯ ಗುರುತ ಗಿಲ್ಲ. ಹರಿಜನರ ನಡುವೆ ಬಿದ್ದ ಅವರ ದೃಷ್ಟಿ ಕಾಶ್ಮೀರಾಗಳ ಕಡೆ ಹರಿದು ಸಹಜವಾಗಿದೆ. ನಮ್ಮ ದೇಶದ ಕಾಡುಜನರೆಂದರೆ ದೇವರಿಗೂ ಬೇಡಾದ ಮೂಕ ಜೀವಿಗಳು. ಹರಿಜನರಂತೆ ಊರು ಪಕ್ಕಗಳಲ್ಲಿರುವ ಭಾಗ್ಯವಂತರು ಅವರಿಗಿಲ್ಲ. ಬೆಟ್ಟಗುಡ್ಡಗಳಲ್ಲಿ ಹಿರುಹಿಂಡಾಗಿ ಬದುಕಿಕೊಂಡು ಉಳಿದುಹೋಗುತ್ತಾರೆ ಕಾಡುಹೂಗಳಂತೆ. ಮಧ್ಯ ಹಿಂದುಸ್ಥಾನದ ಭಿಲ್ಲರು ಈ ಪಂಗಡಕ್ಕೆ ಸೇರಿದ ಜನ. ಇತಿಹಾಸದಲ್ಲಿ ಅವರ ರಾಜಧಾನಿಯರ ಮಾತು ಬಂದಿದೆಯಾದರೂ ಈಗ ಅವರ ರಾಜ್ಯ ಅಡವಿ ಪುಳಕಗಳ ಪೊಳೆಯೇ. ಇಂಥ ಜನರಲ್ಲಿ ಹೋಗಿ ತಮ್ಮ ಜೀವನ ಸೌರಭವನ್ನು ಅವರಿಗೆ ನೀಡಿ ಅವರನ್ನು ಮನುಷ್ಯರನ್ನಾಗಿ ಮಾಡುವ ದೀಕ್ಷೆ ಹೊತ್ತಿದ್ದಾರೆ ಬಾಪಾ. ಅವರ ಭಿಲ್ಲ ಸೇವಾಮಂಡಲವು ಈಗ ಚೆನ್ನಾಗಿ ಕೆಲಸಮಾಡತೊಡಗಿದೆ. ಈಗ ಬಾಪಾ ಅಸಾಮದಲ್ಲಿನ ಅಡುಜನರ ಯೋಗಕ್ಷೇಮ ವಹಿಸಿಕೊಳ್ಳಲು ದುಡಿಯುತ್ತಿದ್ದಾರೆ.

ಅನೇಕ ಜನರಿಗೆ ಬಾಪಾ ಬಾಳಿನ ಹಾದಿಯನ್ನು ತೋರಿದ್ದಾರೆ. ತಮ್ಮ ಉದಾಹರಣೆಯಿಂದ, ತಮ್ಮ ಹಿತವಚನಗಳಿಂದ ಅನೇಕರಿಗೆ ಸೇವಾದೀಕ್ಷೆ ಕೊಟ್ಟಿದ್ದಾರೆ. ಈಗ ಮುಂದಾಳುಗಳಾಗಿ ದೇಶಸೇವಕರಾಗಿರುವ ಎಷ್ಟೋ ಜನಕ್ಕೆ ಅವರು ಸ್ಫೂರ್ತಿ ಕೊಟ್ಟಿದ್ದಾರೆ. ಅವರು ಹಚ್ಚಿದ ದೀಪಗಳು ಇಂದಿಗೂ ನಿಶ್ಚಳವಾಗಿ ಬೆಳಗುತ್ತಿವೆ.

ಬಾಪಾರ ಈ ಕರ್ಮಜೀವನದ ಬಂಗಾರಕ್ಕೆ ಅವರ ಆನಾಸಕ್ತಿಯು ಪರಿಮಳ ಕೊಡುತ್ತಿದೆ. ಪ್ರತಿಫಲಾಪೇಕ್ಷೆಯಿಲ್ಲದ ಬರೀ ಗೊತ್ತು ನಿಷ್ಕಾಮವೂ ಅಲ್ಲ ಅವರದು. ಅವರ ಆನಾಸಕ್ತಿ ಸಾಧಿಸಿ ಹದವಾಡಿಕೊಂಡ ಒಂದು ಯೋಗವಲ್ಲ. ಸಹಜವಾಗಿಯೆ ಅವರ ಕೆಂಪು ಬೀರುವ ಹೂವಿನಂತೆ ಅವರು.

ಅನ್ಯತಲಾಲ್ ಠಕ್ಕರ್ ಮೊದಲು ಬೊಂಬಾಯಿಲ್ಲಿ ರೋಡ್ ಇಂಜಿನಿಯರ್ ಆಗಿ ಬೇಕಾದಷ್ಟು ಗಳಿಸುತ್ತಿದ್ದರು. ಅವರ ಜೀವನದ ಶ್ರುತಿಗೆ ಅ ಕೆಲಸ ಒಗ್ಗಲಿಲ್ಲ. ಅದನ್ನು ಬಿಟ್ಟು ಪ್ರಜೆಯ ಸರ್ವೆಂಟ್ಸ್ ಆಫ್ ಇಂಡಿಯಾ ಸಂಘವನ್ನು ಸೇರಿದರು. ಅದು ಬಹಳ ದಿನಗಳ ಹಿಂದೆ, ಮೂವತ್ತು ವರ್ಷವಾದರೂ ಆಗಿರಬೇಕು. ಅಂದಿನಿಂದ ಅವರ ತಪಸ್ಸು ಇಂದೇ ಸಮನಾಗಿ ನಡೆದಿದೆ.

ಇಂದು ಅವರಿಗೆ ೭೦ ವರ್ಷಗಳಾಗಲಿದೆ. ಈ ೭೦ ೪೦ ವರ್ಷಗಳ ಸೇವೆಯ ತರುವಾಯ ಹಿಂದುಸ್ಥಾನವು ಅವರಜಯಂತಿಯನ್ನು ಆಚರಿಸುತ್ತಿದೆ. ಬಾಪಾರನ್ನು ಗುರುತಿಸಿಕೊಳ್ಳಲು ಎಷ್ಟು ತಡವಾದಿತೋ ಅಷ್ಟೇ ಬೇಗನೆ ಹಿಂದುಸ್ಥಾನ ಅವರನ್ನು ಮರೆಯಲಿಕ್ಕಿಲ್ಲೆಂದು ನಂಬೋಣವೇ? ಬಾಪಾರ ಜೀವನದ ಆದರ್ಶಗಳನ್ನು ನಮ್ಮ ಬಾಳಿನೊಳಕ್ಕೆ ಹೆಣೆದುಕೊಂಡು ಅವರನ್ನು ಆದರಿಸಿದಂತೆ ಅವರ ರಕ್ಷೆಯನ್ನೂ ಮಾಡಬಲ್ಲೆವೇನು ನಾವು?

ಬಾಪಾರ ಜೀವನವು ಮೊದಲಿಂದಲೂ ರಚನಾತ್ಮಕವಾದ ಹಾದಿಯಲ್ಲೇ ನಡೆದಿದೆ. ಹರಿಜನರಿಗಾಗಿ ಶಾಲೆಗಳು, ಛಾತ್ರನಿಲಯಗಳು, ಸರ್ಕಾರ ಸಂಘಗಳು, ಬೀಳಾಗಳು ಅವರ ಮೊದಮೊದಲಿನ ಕಾರ್ಯಕ್ರಮ. ಗುಜರಾತಿನ ತಾಲೂಕುಗಳು ತಾಲೂಕಿಗೂ ಈ ಸಂಸ್ಥೆಗಳನ್ನು ಹರಡಿದರು. ನೆರೆಯ ಹಾವಳಿ, ಬರಗಾಲಗಳ ಸಮಯದಲ್ಲಿ ಒಂದಾಗಿ ಹಿಂದುಸ್ಥಾನ ಯುವ ಮಂಡಲೆಯಲ್ಲೇ ಆಗಲಿ, ಬಾಪಾ ಪ್ರಥಮ ಸೇವಕರು ಉಂಟಾಯ್ತು. ಸಿಂಧ ಪ್ರಾಂತಗಳಲ್ಲಿ ಅವರು ಇಂಥ ಪ್ರಸಂಗಗಳಲ್ಲಿ ಮಾಡಿದ ಸೇವೆ ಆ ಪ್ರಾಂತಗಳಿವರು ಮರೆಯುವರೆಂದೂ ಇಲ್ಲ.

ಸಂಸ್ಥೆಗಳ ಜೊತೆಯಲ್ಲೂ ಬಾಪಾರ ಸಂಬಂಧ ಬಂತು. ಬಾಪಾ ಸ್ವತಃ ಸಂಸ್ಥಾಪಕ ಪ್ರಜೆ, ಭಾವನಾರದವರು. ಅಖಿಲ ಭಾರತ ಸಂಸ್ಥಾನ ಪ್ರಜಾ ಪರಿಷತ್ತು ಮೊದಲಾದಾಗ ಬಾಪಾರ ಕೈವಾಡ ಅದರಲ್ಲಿ ತುಂಬಾ ಇತ್ತು. ಅದಕ್ಕೆ ಕೆಲವು ದಿನ ಕಾರ್ಯದರ್ಶಿಯಾಗಿದ್ದರು. ಅನೇಕ ಸಂಸ್ಥಾನಗಳ ಪರಿಷತ್ತುಗಳಿಗೆ ಮೇಲಿಂದ ಮೇಲೆ ಅಧ್ಯಕ್ಷರಾಗಿ ಸಂಸ್ಥಾನದ ಜನರಿಗೆ ಹಾದಿ ತೋರಿದರು. ಪಾಟಿಯಾಲಾ ದೊರೆಯ ದುರ್ವರ್ತನೆಗಳ ಬಗ್ಗೆ ಅ. ಭಾ. ಸಂ. ಪರಿಷತ್ತು ವಿಚಾರಣಾ ಸಮಿತಿಯನ್ನು ನೇಮಿಸಿದಾಗ ಅವರಲ್ಲಿ ಅವರೂ ಒಬ್ಬ ಸದಸ್ಯರು.

೧೯೩೦ರಲ್ಲಿ ಬಾಪಾರಂಥ ಅಜ ತಪಸ್ವಿಗಳೂ ಸೆರೆ ತಪ್ಪಲಿಲ್ಲ. ದೇಶಸೇವಕನನ್ನು ನೆಮ್ಮದಿಯಿಂದ ಇರಗೊಟ್ಟರೆ ವಿಲಿಂಗಡನ್ ರಾಜ್ಯಕ್ಕೆ ಕಳಂಕವಲ್ಲವೆ? ಸೆರೆ ಅಂಗಡಿ ಪಿಕೆಟಿಂಗ್ ಮಾಡಿದರೆಂದು ಬಾಪಾರಿಗೆ ಆರು ತಿಂಗಳ ಅತಿಥ್ಯ ನೀಡಿದರು ಸರಕಾರದವರು

[ಜಯಕರ್ನಾಟಕದಿಂದ]

ಸಾವಕಾರ ಶ್ರೀನಿವಾಸರಂಗಯ್ಯ
[ಸ್ಥಾಪನೆ: ಕ್ರಿ ಶ 1858]
ಉಜ್ವಲ ಕಾಂತಿಯ
ವಜ್ರಗಳಿಗೆ
ನೂಲು ಮತ್ತು ಕೈಮಗ್ಗದ ವಸ್ತುಗಳ
ಖಾತ್ರಿ ವ್ಯಾಪಾರಕ್ಕೆ
ಸಾವಕಾರ ಮಹಾಲ್, ಮಂಗಳೂರು.

ಮಾಜಿ ಕೈಜರನಿಗೆ ಆಶನಾರ್ಥವೂ ನಿಲ್ಲಿಸಲಾಗಿದೆ!

—ಹಿಟ್ಲರನನ್ನು ಟೀಕಿಸಿದುದಕ್ಕೆ ಈ ಶಿಕ್ಷೆ!—

ಬ್ರಿಟಿನಿನ ಶಹರು ಪೇಟೆಗಳನ್ನು ಬಾಂಬು ಹಾಕಿ ನಾಶಮಾಡಲಿಕ್ಕೆ ಹಿಟ್ಲರನು ಹವಣಿಸಿರುವನೆಂದು ಕೇಳಿ ಜರ್ಮನರು ತುಂಬಾ ಭಯಗೊಂಡಿದ್ದಾರೆ. ಬ್ರಿಟಿನಿನ ನಿರಪರಾಧೀ ಜನಗಳನ್ನು ಈ ರೀತಿ ಅನ್ಯಾಯವಾಗಿ ಹಿಟ್ಲರನು ಕೊಲ್ಲುವನೆಂದಾದರೆ, ಅದರ ಸೇಡನ್ನು ಬ್ರಿಟಿಷ ಸರಕಾರವು ಜರ್ಮನ ಪೇಟೆಪಟ್ಟಣಗಳನ್ನು ಬಾಂಬುಗಳಿಂದ ಸುಟ್ಟಿಟ್ಟು ತೀರಿಸದೆ ಇರಲಾರದೆಂದು ಜರ್ಮನ ಪ್ರಜೆಗಳಿಗೆ ಗೊತ್ತಾಗಿದೆ. ಆದ್ದರಿಂದ ಹಿಟ್ಲರನ ಯುದ್ಧ ಕ್ರಮಗಳಿಂದ ಜರ್ಮನರು ಅತೃಪ್ತರಾಗಿರುವುದಷ್ಟೇ ಅಲ್ಲದೆ ಅವರಲ್ಲಿ ತುಂಬಾ ಅಸಂತೋಷವೂ ಹರಡಿರುತ್ತದೆ.

ಅಸಂತೋಷದ ಪ್ರತಿಧ್ವನಿ

ಈ ಅಸಂತೋಷದ ಪ್ರತಿಧ್ವನಿಯು ಮಾಜಿಕೈಜರನ ಪತ್ನಿಯು ಮಿ. ಜಿ. ಎಲ್. ಥೋಮಸ್ ಎಂಬವರಿಗೆ ಬರೆದ ಒಂದು ಪತ್ರದಿಂದ ಚೆನ್ನಾಗಿ ಕೇಳಿ ಬರುತ್ತದೆ. ಅವಳಿಗೆ ಮೊಮ್ಮಗನಾಗುವ ಪ್ರಸಿದ್ಧ ಸ್ವಿನ್ಸ ಬಸ್ಕಾರನು ಯುದ್ಧದಲ್ಲಿ ಮಡಿದ ಕುರಿತು ಸಮವೇದನೆಯನ್ನು ಪ್ರಕಟಿಸಿ ಮಿ. ಥೋಮಸರು ಅವಳಿಗೆ ಒಂದು ಕಾಗದ ಬರೆದಿದ್ದರು. ಅದಕ್ಕೆ ಪ್ರತ್ಯುತ್ತರ ಬರೆಯುತ್ತಾರೆ. ಮಾಜಿ ಕೈಜರನ ಪತ್ನಿಯು—'ಪ್ರಿಯ. ಮಿ. ಥೋಮಸರೆ! ನಿಮ್ಮ ಪತ್ರಕ್ಕೆ ಬಹಳ ಕೃತಜ್ಞಳಾಗಿದ್ದೇನೆ. ಈ ಭಯಂಕರ ಯುದ್ಧವು ಶೀಘ್ರದಲ್ಲಿ ಕೊನೆಗೊಳ್ಳಲೆಂದು ನಾನು ಆಶಿಸುತ್ತೇನೆ. ಆದರೆ ಜಗತ್ತು ಇನ್ನೂ ಭಯಂಕರವಾದುದನ್ನು ಅನುಭವಿಸಬೇಕಾಗಬಹುದೆಂದು ನನಗೆ ಭಯವಾಗುತ್ತದೆ.' ಎಂದಿರುವಳು.

ಹಿಟ್ಲರನೆಂದಾಗ ನಿಟ್ಟುಸಿರು ಬಿಟ್ಟರು

ಮಿ. ಥೋಮಸರು ಮಾಜಿಕೈಜರನ ಆಪ್ತಸ್ನೇಹಿತರಲ್ಲಿ ಬಹುಭಾಗಿದ್ದಾರೆ. ಈ ಸ್ನೇಹವು ೩೨ ವರ್ಷಗಳ ಹಿಂದೆ ಕೂಡಿ ಬಂದುದು. ಅವರು ಕೈಜರನೊಂದಿಗೆ ರಾಜಕೀಯವನ್ನು ಚರ್ಚಿಸಿದುದಿಲ್ಲ. ವೈಜ್ಞಾನಿಕ ವಿಷಯಗಳ ಮೇಲೆ ಆಗಾಗ ಸಂಭಾಷಣ ಮಾಡುತ್ತಿರುತ್ತಾರೆ. ಒಂದು ಸಂದರ್ಭದಲ್ಲಿ ಮಾತ್ರ ಮಿ. ಥೋಮಸರು—'ಹಿಟ್ಲರನ ಕುರಿತು ತಮ್ಮ ಅಭಿಪ್ರಾಯವೇನು?' ಎಂದು ಕೇಳಿದರು. ಕೈಜರನು ಯಾವ ಉತ್ತರವನ್ನೂ ಕೊಡದೆ ಒಂದು ನಿಟ್ಟುಸಿರನ್ನು ಬಿಟ್ಟನಂತೆ!

ಒಂದೂ ಅಭಿನಂದನೆ ಇಲ್ಲ

ಕಾರ್ಯಗಳನ್ನು ಮಾಡಿ ಜರ್ಮನರ ಪ್ರಶಂಸೆಗೆ ಪಾತ್ರನಾದುದಿದೆ. ಆದರೆ ಅಂಥ ಒಂದು ಸಂದರ್ಭದಲ್ಲಿಯಾದರೂ ಮಾಜಿ ಕೈಜರನು ಹಿಟ್ಲರನಿಗೆ ಒಂದಾದರೂ ಅಭಿನಂದನೆಯನು, ಕಳುಹಿಸಿದುದಿಲ್ಲವಂತೆ. ಅದರ ಬದಲಿಗೆ ಹಲವು ಸಂದರ್ಭಗಳಲ್ಲಿ ಹಿಟ್ಲರನು ಸಂದೇಹಾಸ್ಪದ ಸಾಹಸಕೃತ್ಯಗಳಲ್ಲಿ ತೊಡಗಿರುವ ಕುರಿತು ಅವನು ತನ್ನ ಅಸ್ವಿಸ್ತಿಯನ್ನು ತೋರಿದ್ದಾನೆ. ಅದಕ್ಕೋಸ್ಕರ ಸಿಟ್ಟಿನಿಂದ ಒಳಗಿಂದೊಳಗೆಯೆ ಕುದಿಯುತ್ತಿದ್ದ ಹಿಟ್ಲರನು ಕೈಜರನಿಗೆ ಸಲ್ಲುತ್ತಿದ್ದ ಆಶನಾರ್ಥವನ್ನು ಈಗ ಸಂಪೂರ್ಣ ನಿಲ್ಲಿಸಿಬಿಟ್ಟಿದ್ದಾನೆ.

ಕೈಜರನಿಗೆ ಆಶನಾರ್ಥವಿಲ್ಲ!

ಕಳೆದ ಮಹಾಯುದ್ಧದ ಕೊನೆಯ ದಿನಗಳಲ್ಲಿ ಜರ್ಮನಿಂದ ಪಲಾಯನ ಮಾಡಿ ಹೊಲ್ಲೆಂಡಿನ ಡೂರ್ನನಗರದಲ್ಲಿ ಆಶ್ರಯ ಪಡೆದಿದ್ದ ಮಾಜಿ ಕೈಜರನಿಗೆ ಜರ್ಮನಿಯ ಅವನ ಆಸ್ತಿಪಾಸ್ತಿಗಳಿಂದ ಹಲವು ವರ್ಷಗಳ ತನಕ ಸಾಲಿಯಾನ ೩೫೦೦೦ ಪವನುಗಳ ಉತ್ಪನ್ನವು ದೊರೆಯುತ್ತಿತ್ತು. ಹಿಟ್ಲರನು ಅಧಿಕಾರಕ್ಕೆ ಬಂದ ತರುವಾಯ ಕೈಜರನಿಗೆ ಕೇವಲ ೩೫೦ ಪವನುಗಳ ಮಾಸಾಶನವು ದೊರೆಯುವುದಾಯಿತು. ಈಗ ಸಿಟ್ಟುಗೊಂಡ ಹಿಟ್ಲರನು ಈಗ ಅದನ್ನು 'ಇಲ್ಲ' ಎಂದಿದ್ದಾನೆ! ಹಿಟ್ಲರನ ಸ್ತುತಿಮಾಡಲಿಲ್ಲವೆಂಬುದಕ್ಕೆ ಮಾಜಿಕೈಜರನಿಗೆ ಜೀವನಾಧಾರವಾಗಿದ್ದ ಈ ಆಶನಾರ್ಥವೂ ನಿಂತು ಹೋಗಿದೆ.

ಕಾಸರಗೋಡು ತಾಲೂಕಿನ ರೈತರ ಸಂಕಷ್ಟಗಳು?

ಶ್ರೀ. ಕೆ. ಜಿ. ಶಿವಸ್ವಾಮಿಯವರ ಅಭಿಪ್ರಾಯ

ಕಾಸರಗೋಡು ತಾಲೂಕಿನ ರೈತರ ಸ್ಥಿತಿಗತಿಗಳನ್ನು ಕಂಡು ವರದಿಮಾಡಲು ಬಂದ, ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಸದಸ್ಯರಾದ ಶ್ರೀ. ಕೆ. ಜಿ. ಶಿವಸ್ವಾಮಿಯವರು, ಅಲ್ಲಿನ ರೈತರ ಕುರಿತಾಗಿ ಈ ಕೆಳಗಿನ ಅಭಿಪ್ರಾಯದ ವರದಿ ಮಾಡಿದ್ದಾರೆ.

"ಕಾಸರಗೋಡಿನ ರೈತ ಜನತೆಯು ಮಲಬಾರಿಗಳೇ ಆದರೂ, 'ಮಲಬಾರಿನ ಟೆನಸ್ಸೀ ಆಕ್ಟ್' ಇಲ್ಲಿ ಜಾರಿಯಲ್ಲಿರುವುದಿಲ್ಲವಾದುದರಿಂದ, ಇಲ್ಲಿನ ರೈತರ ಸ್ಥಿತಿಯು ಅಲ್ಲಿನವರಂತಿಲ್ಲ. ಮಲಬಾರಿನಂತೆ ಇಲ್ಲಿನ ರೈತರು ಕೃತ ಕೇಳಲು ಹಕ್ಕುಳ್ಳವರಾಗಿಲ್ಲ. ಮಲಬಾರಿನಲ್ಲಿ ವಾಯಿದೆ ಗೇಣಿಗೆ ರೈತರು, ಹೊಲಗಳನ್ನು ಅನುಭವಿಸುತ್ತಿದ್ದರೆ, ಅದರ ನೆರೆ ತಾಲೂಕಾದ ಇಲ್ಲಿನ ರೈತರು, ಜಾಲಗೇಣಿಗೆ ಭೂಮಿ ಸಾಗುವಳಿ ನಡೆಸುತ್ತಿದ್ದಾರೆ. ಜಮೀನ್ದಾರರ ಮಾತನ್ನು ನಂಬಿ ಅಥವಾ ಕೃತ ದೊರೆಯಬಹುದೆಂಬ ಆಶೆಯಿಂದ, ತಮ್ಮ ಅಸ್ಥಿರ ಸಾಗುವಳಿಯನ್ನು ನಡೆಸಿ, ಕೃತ ನಡೆಸಿ, ಹೀಗೆ ಪಟ್ಟಶ್ರಮಕ್ಕೆ ಯಾವ ಪ್ರತಿಫಲವನ್ನೂ ಪಡೆಯದವರಾಗುತ್ತಿದ್ದಾರಲ್ಲದೆ, ಹೀಗೆ ಮಾಡಿದ ಕೃತದಿಂದ ಬರುವ ಲಾಭವನ್ನು ಜಮೀನ್ದಾರರೇ ತಿನ್ನುತ್ತಿದ್ದಾರೆ. ಕೊಟ್ಟಯಿಲ್ ನಂತಹ ಬೆಟ್ಟ ಪ್ರದೇಶಗಳಲ್ಲಿ ಕೃತಮಾಡಬೇಕೆಂಬ ಬಾಯ್ದೆರೆ ಶರತಿನ ಮೇಲೆ, ರೈತರಿಂದ ಜಮೀನ್ದಾರರು ಕಡ್ಡಾಯವಾಗಿ ಕೃತ ಮಾಡಿಸುತ್ತಿದ್ದಾರೆ. ಹೀಗೆ ಕೃತಮಾಡಿದ ರೈತನಿಗೆ ಕೃತ ಕೇಳುವ ಅಧಿಕಾರವೇ ಇಲ್ಲ. ಮಾತ್ರವಲ್ಲ; ಆತ ಮಡಿದೊಡನೆ, ಆತನ ವಾರಸ್ತಾರರಿಗೆ ಈ ಕೃತದ ಮೇಲಿನ ಯಾವ ಅಧಿಕಾರವೂ ಇಲ್ಲದೆ ಜಮೀನ್ದಾರರು ಸುಲಭವಾಗಿ ಹಸನಾದ ಕೋಟಿಗಳನ್ನು ಪಡೆಯುತ್ತಾರೆ!

"ಗೇಣಿಯ ಸ್ಥಿತಿಯು ಬಯಲಿಗಾದರೆ ಸಾಧಾರಣವಾಗಿ ಹುಟ್ಟಿನ ಅರ್ಧಾಂಶದಷ್ಟಿದೆ. ಕೋಟಿಗಳಾದರೆ ತೀರ್ವೆಯ ೩-೪ ಪಾಲಷ್ಟು! ಗೇಣಿಚೀಟುಗಳಲ್ಲಿ ಪ್ರತಿಯೊಂದರಲ್ಲೂ 'ಬಿಟ್ಟ ಬೇಗಾರಿ'ಯ ವಿಚಾರವು ಇದ್ದೇ ಇರುವುದರಿಂದ; ಬಡ ರೈತನು ಜಮೀನ್ದಾರನು ಹೇಳಿದ ಕೆಲಸವನ್ನೂ ಪ್ರತಿಫಲವಿಲ್ಲದೆ ಮಾಡಬೇಕಾಗಿರುವುದು ಶೋಚನೀಯ. ಆಗಾಗ ರೈತರನ್ನು ನಿವೃತ್ತಿಗೊಳಿಸಿ, ಹೊಸ ರೈತರನ್ನು ನೇಮಿಸಿಕೊಳ್ಳುವ ಹಾಗೂ ಹೆಚ್ಚಿದ ಕೃತಗಳಿಗನುಗುಣವಾಗಿ ಗೇಣಿ ಏರಿಸುವ ವಿಧಾನವು, ಎಲ್ಲೆಲ್ಲೂ ಕಂಡುಬರುತ್ತಿದೆ. ತಮ್ಮ ಹೆಚ್ಚಿನ ಹಣವನ್ನು ಆಸ್ತಿಗಳ ಮೇಲೆ ಸುರಿದವರು, ಅತೀ ನಿಕೃಷ್ಟ ರೀತಿಯ ಗೇಣಿ ವಸೂಲಿ ಮಾಂದಗಳು. ಗೇಣಿಯನ್ನೇ ಬಡ್ಡಿಯಾಗಿ ಪಡೆವ ನಿಯಮ ಎಲ್ಲೆಲ್ಲೂ ಇದೆ.

ಗೇಣಿಯಷ್ಟು ಮಾತ್ರ ರೈತನು ತೆರಬೇಕಾಗಿದ್ದರೆ, ಆತನಿಗೆ ಅಷ್ಟೊಂದು ಕಷ್ಟವಾಗದು. ಆಸ್ತಿಯ ವಿಸ್ತೀರ್ಣವನ್ನು "ಬೀಜವರಿ" ವಿಸ್ತೀರ್ಣದಿಂದ ಗೊತ್ತು ಹಚ್ಚುವರಲ್ಲದೆ, ಹೆಚ್ಚಿನ ಗೇಣಿ ವಸೂಲಿಯ ಇಚ್ಛೆಯಿಂದ "ಬೀಜವರಿ" ಯ ಬೀಜದ ಅಳತೆ ಹೆಚ್ಚಿಸಿಕೊಂಡಿದ್ದಾರೆ. ಒಂದು ಮುಡಿ ಬೀಜ ಬಿತ್ತಬಹುದಾದ ಗದ್ದೆಯನ್ನು, ಈ ಕೆಳಸಿಗೆ "ಬೀಜವರಿ" ಎಂದೂ ನಿರ್ಧರಿಸಿ, ರೈತರನ್ನು ಸೂರೆ ಮಾಡುವುದುಂಟು. ಧಾನ್ಯದ ಅಳತೆ ಕೂಡ, ಗೇಣಿಯನ್ನು ಪಡೆಯುವಾಗ ಅಳೆಯುವ ಕೆಳಸಿಗೆಗಳಿಸೇರು. ಇದರ ಮೇಲೆ ಕೆಲವು ಸೇರು "ಕಸ್ತಿ" ಬೇರೆ. ಅಂತೂ ಒಂದು ಮುಡಿ ಎಂದರೆ ಎಲಸೇರು ಆಗುವುದಿದೆ. ಇದಲ್ಲದೆ ಈ ರೀತಿಯ ಸೂರೆಯನ್ನು ವಿರೋಧಿಸುವ ರೈತರ ಮೇಲೆ, ೩ ವರ್ಷದ ಗೇಣಿ ವಸೂಲಿಗೆ ವ್ಯಾಜ್ಯಹೂಡುವ ಅಧಿಕಾರವೂ ಜಮೀನ್ದಾರರ ಗೇಣಿಚೀಟಿನಲ್ಲಿ ನಮೂದಿಸಲಾಗಿದೆ. ಇನ್ನೊಂದು ವಿಶೇಷವೆಂದರೆ, ಸಾಗುವಳಿ ಇಲ್ಲದ ಭೂಮಿಗೂ ಇಲ್ಲಿ ತೀರ್ವೆ ಇದೆ. ಇದೀಗ ಕೆಲ ಕಾಲದ ಹಿಂದೆ, ಒಂದಾಣೆಗಾಗಿ ೩೦೦ ಎಕ್ರೆ ಸಾಗುವಳಿಯೇ ಇಲ್ಲದ ಆಸ್ತಿಯನ್ನು ಏಲಮಿಗೆ ಇರಿಸಲಾಗಿತ್ತು.

ಲೋಧ್ರ

ಸತೀಮಣಿಯರಿಗೆ ಸಂತತಿ ಸೌಖ್ಯಗಳು!

ಸತೀಮಣಿಯರ ಸಂತತಿ ಸೌಖ್ಯಗಳು ಮನೆಗೆಲ್ಲಾ ಬೆಳಕು, ಬೆಳದಿಂಗಳು. ಆದ್ದರಿಂದಲೇ ಸ್ತ್ರೀಯರ ಆರೋಗ್ಯವು ಅಷ್ಟು ಮುಖ್ಯ.

ಸ್ತ್ರೀಯರಿಗೆ ಋತುಸಂಬಂಧವಾದ ದೋಷಗಳಿಂದ ಶರೀರವು ಕೃಶಿಸಿ ಸಂತಾನ ವಾಂಛೆಯು ಸಫಲತೆ ಹೊಂದದು. ಆದರೆ ಲೋಧ್ರವನ್ನು ಸೇವಿಸಿದರೆ ಸ್ತ್ರೀಯರಿಗೆ ಸತ್ವಂ ತಾನೆವು, ಸೌಖ್ಯ ಜೀವನವೂ ತಪ್ಪದು.

ಕೇಸರಿ ಕುಟೀರಂ :: ದಾಯಾಹೇಟಿ :: ಮದರಾಸು.

ಸ್ವಾಕಿಸ್ವರು:—ಪೊಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು

ಪುಸ್ತಕ-ವಿಮರ್ಶೆ

ಕುಟಿಮಿರಿದುದು (ಹಾಸ್ಯ ನಿಬಂಧಗಳ ಸಂಗ್ರಹ) ಲೇಖಕರು: ರಾ. ಶಿ. ಪ್ರಕಾಶಕರು: ಮನೋಹರ ಗ್ರಂಥಪ್ರಕಾಶನ ಸಮಿತಿ, ಧಾರವಾಡ. ಕ್ರೌನ್ ೪ ಆಕಾರದ 144 ಪುಟಗಳು. ಬೆಲೆ: ಹದಿನಾಲ್ಕಾಣೆ.

ಕನ್ನಡದಲ್ಲಿ ಇದೊಂದು ನವೀನ ರೀತಿಯ ಗ್ರಂಥ. ಜೀವನದ ತೊಳಲಾಟದಲ್ಲಿ ಬಿದ್ದಿರುವ ಜನತೆಯ ಮನದ ಭಾರವನ್ನು ಹಗುರಮಾಡುವಂತಹ ಲಘು ಹಾಸ್ಯರೂಪದ ಬರಹಗಳ ಪ್ರಯೋಗವು ಇತ್ತೀಚೆಗೆ ಪತ್ರಿಕೆಗಳಲ್ಲಿ ಅಲ್ಲಿ ಇಲ್ಲಿ ಹಲವು ಬಂದಿವೆ. ಆದರೆ ಅಂತಹುಗಳನ್ನು ಪುಸ್ತಕ ರೂಪದಲ್ಲಿ ಓದುಗರ ಕೈಗೀಯುವ ಸಾಹಸಕ್ಕೆ ಲೇಖಕರೂ ಗ್ರಂಥಪ್ರಕಾಶಕರೂ ಕೈಹಚ್ಚಿರಲಿಲ್ಲ. ಮಂಗಳೂರಿನ ಶ್ರೀ। ಕಾರಂತರೂ, ಧಾರವಾಡದ ಶ್ರೀರಂಗರೂ ಈ ಬಗೆಯ ಸಾಹಿತ್ಯ ಮಾರ್ಗದಲ್ಲಿ ಮುನ್ನಡೆದವರು. ಇತ್ತೀಚೆಗೆ ಮೈಸೂರಿನ ಶ್ರೀ। ರಾಜರತ್ನಂರವರು ಆ ಹಾದಿ ಹಿಡಿದಿದ್ದಾರೆ. ಈಗಅವರ ಪಂಕ್ತಿಗೆ ಈ ಪುಸ್ತಕದ ಲೇಖಕರಾದ ಬೆಂಗಳೂರಿನ ರಾ. ಶಿ. ಯವರೂ ಬಂದು ನಿಂತಿರುವರು. ಇಂತಹ ಸಾಹಿತ್ಯದಲ್ಲಿಯೂ ಕಲಾ ಕೌಶಲ್ಯವಿದೆಯೆಂದು ಪಾಶ್ಚಾತ್ಯ ಸಾಹಿತ್ಯಾಭ್ಯಾಸಿಗಳು ತಿಳಿದ ವಿಷಯವೆ. ಅದನ್ನು ಕನ್ನಡಕ್ಕೆ ಬಳಸಿದವರು ಎಷ್ಟರ ಮಟ್ಟಿಗೆ ಕೃತಕಾರ್ಯರಾಗಿದ್ದಾರೆಂಬ ವಿಷಯವು ಇನ್ನೂ ನಿರ್ಣಯವಾಗಬೇಕಾಗಿ ಉಳಿದಿದೆ. ಆದರೆ ಕನ್ನಡ ಸಾಹಿತ್ಯ ಲೋಕದಲ್ಲಿ ಇಂತಹ ಬರವಣಿಗೆಗಳನ್ನು ತರುವವರು ಸಾಹಿತ್ಯದ ವೈವಿಧ್ಯವನ್ನು ಹೆಚ್ಚಿಸುವ ಉದ್ದಮಕ್ಕೆ ತೊಡಗಿದ್ದಾರೆಯೆಂಬುದರಲ್ಲಿ ವಿನೇನೂ ಸಂಶಯವಿಲ್ಲ.

ಈ ಪುಸ್ತಕದ ವಿಷಯಗಳನ್ನು 'ತೋರಿದುದು ಕೆಲವು', 'ಕಂಡವರು ಕೆಲವರು', 'ನಡೆದುದು ಹಲವು' 'ಅಣಕವಾಡುಗಳು' ಹೀಗೆ ನಾಲ್ಕು ವಿಭಾಗಗಳಾಗಿ ವಿಂಗಡಿಸಿದ್ದಾರೆ. ಒಟ್ಟು ಪುಸ್ತಕದ ಅವಲೋಕನವೇ ಒಂದು ತೆರದ ಕುತೂಹಲ ಜನಕವಾಗಿ ಹಾಸ್ಯಮುಖವಾಗಿದೆ. ಮೊದಲನೆಯ ಭಾಗದ, ಶ್ರೀನಿವಾಸನು ಯಾರು?, ಕನ್ನಡಿ ಒಳಗಿನ ಗಂಟು, ಆನ್ನಿಶಕ, ವಿಕಾಂತ ಸಾಟಿಕ ಇವುಗಳಲ್ಲಿ ಸ್ವಾರಸ್ಯದ ಹಾಸ್ಯವು ಮಧುರವಾಗಿ ಹರಿದಿದೆ. ಸ್ವತಂತ್ರಶೈಲಿಯು ಸಚಿತ್ರ ವಿಚಿತ್ರವಾಗಿದ್ದಂತೆ ಅದರ ಸ್ವಾರಸ್ಯವೂ ವಿಚಿತ್ರವೇ ಆಗಿಬಿಟ್ಟಿದೆ! ಇನ್ನು ಬೆಡ್ಡಾ ಅಳಿಯ, ಮಂಗಳರು ಬೆಪ್ಪರು, ಬಹಿರಂಗ ಪತ್ರ ಇವುಗಳಲ್ಲಿನ ಹಾಸ್ಯದಲ್ಲಿ ಸಾಕಷ್ಟು ಆಹ್ಲಾದ ಕತೆ ಕಾಣಿಸುವುದಿಲ್ಲ. 'ಹಳ್ಳಿಗ ಮಾರ' ಬಿಟ್ಟು ಎರಡನೆ ಭಾಗದ ಎಲ್ಲಾ ನಿಬಂಧಗಳೂ ಮನೋಹರವಾಗಿವೆ. ಕುಸ್ಪಣ್ಣ, ಬೆಲುವಿನ ಬೆನ್ನ ಇವುಗಳ ಹಾಸ್ಯ ಕರಳು ತಟ್ಟುವಂತಹವು. ಮೂರನೆಯ ಭಾಗದಲ್ಲಿಯೂ 'ನಾನು ಕ್ರಾಂತಿಕಾರನಾದುದು', 'ಹಳ್ಳಿಗ ಮಾರನಿಗೆ ಕೆಲಸ ಸಿಕ್ಕಿದ್ದು', 'ಕೆಲವು ಅಭಿಪ್ರಾಯಗಳು' ಇವುಗಳಲ್ಲಿ ಉತ್ತಮ ಹಾಸ್ಯಲಹರಿಯಿದೆ. ಇನ್ನು ಕೊನೆಯಭಾಗ ಅಣಕವಾಡುಗಳ ವಿಷಯ. ಮೂಲ ಕವಿಗೆ ನವೀನ ಕಲ್ಪನಾ ಸಾಮರ್ಥ್ಯವು ಹೇಗೆ ಇರಬೇಕೋ, ಅಣಕ ಮಾಡುವವನಿಗೂ ಅದಕ್ಕೆ ಕಡಿಮೆಯಿಲ್ಲದೆ, ಕುಹಕವಾದರೂ ನವೀನ ಕಲ್ಪನಾ ಚಮತ್ಕಾರವಿರಲೇಬೇಕು. ಮೂಲ ಕವಿಯಂತೆ ಅಣಕ ಹಾಡುವವನಿಗೂ ಕವಿತಾ ಬಂಧದ ಹದ ತಿಳಿದಿರಬೇಕು. ಪ್ರಕೃತ ಲೇಖಕರಲ್ಲಿ ಮೊದಲನೆಯದು ಸಾಕಷ್ಟು ತುಂಬಿದೆ. ಆದರೆ ಎರಡನೆಯ ವಿಷಯದಲ್ಲಿ ನ್ಯೂನತೆಯು ಕಂಡು ಬರುತ್ತದೆ. ಕನ್ನಡದಲ್ಲಿ ಅಣಕ ಹಾಡಿನ ಉತ್ತಮ ಮಾದರಿಗಳನ್ನು ಶ್ರೀಲಗಾದ. ಬೇಂದ್ರೆಯವರೂ, 'ಶ್ರೀನಿವಾಸ'ರೂ, ತಮ್ಮ ತಮ್ಮ ಕವಿತೆಗಳ ವಿಷಯದಲ್ಲಿಯೇ ಬರೆದು ತೋರಿಸಿದ್ದಾರೆ.

ಈ ಲೇಖಕರಲ್ಲಿ ಹಾಸ್ಯ ನಿಬಂಧಗಳ ಬಗೆಗೆ ಮೌಲಿಕತೆ (Originality) ತುಂಬಿರುವುದನ್ನು ಈ ಕೃತಿಯು ಎತ್ತಿ ತೋರಿಸಿದೆ. ಕನ್ನಡ ಸಾಹಿತ್ಯದಲ್ಲಿ ಈ ವಿಧದ ನವೀನ ಮಾರ್ಗಹಿಡಿದು ಇವರು ಮುನ್ನಡೆದಿದ್ದಾರೆ. ಯುವಕ ಲೇಖಕರು ಈ ದಾರಿಯನ್ನು ವಿಸ್ತರಿಸಿದರೆ ತಾನು ನ

COLONISATION AND QUININE

Colonists from Europe sometimes imagine that the soil of the tropics where they have decided to settle, is so fertile that it will yield an abundant harvest and that provided care is taken to protect oneself from the sun and climate, it will be an easy matter to earn a living. But as soon as they commence the struggle with tropical nature, they find out that once again appearances are deceiving. They must toil unceasingley, for in the damp regions of the tropics, the soil is generally diluted by the heavy rains and fertilizer must be used to help the scanty nourishment that the plants can still find in the ground. In sub-tropical countries, where little rain falls, the harvest is, on the other hand, threatened by drought.

Hence the would-be colonist should carefully think the matter over before making a start. Of course, those with the necessary capital available can use fans for cooling their houses and even carry out important agricultural labour at night with the aid of electric arcs. Also, it is now possible to obtain air-conditioning plant, by which a given temperature can constantly be maintained indoors.

But even with the use of electricity and air-conditioning appliances, the life of the colonist is far from easy, for his health is menaced by millions of insects. The colonist is in danger every day of his life. It is rarely that he escapes the debilitating and sometimes mortal action of malaria, unless he faithfully carries out the recommendation of the Malaria Commission of the League of Nations and to prevent malaria takes every day during the fever season 6 grains of quinine and for treating an attack of fever, a dose of 15 grains to 20 grains of quinine per day during 5 to 7 days. On page 125 of its report, issued in 1938, this Malaria Commission stresses the fact that among the antimalarial drugs quinine still ranks first in current practice, by reason of its clinical effectiveness and almost complete absence of toxicity, coupled with the widespread knowledge of its use and dosage.

Quite recently, a number of different projects have been launched with regard to the colonisation of virgin soil in Bolivia, the Equator (Ecuador) Colombia, Venezuela, Tanganyika, Madagascar and British Guiana, and the question of protecting the health of the colonists requires that special attention be paid to this point. Every colonist cannot afford to purchase an air-conditioning plant for his habitation, but there is one thing that he cannot do without, viz., quinine, for without this remedy he and his family are at the mercy of the most dangerous enemy: the malaria mosquito.

M. Eng. No. 199

Grand Xmas Offers

15 Cash Prizes to be won from—

1st to 31st December 1939

Rs. 31 to the highest purchaser at a time

14 PRIZES 2nd Rs. 25–3rd Rs. 20–4thRs. 15–5th Rs. 10 & 10 prizes of Rs. 5 to the Lucky Numbers on cash Bills

Smartest Designs in piecegoods and Silk Sarees have lately received

Dont Fail to see them at—

JAYANTILAL BROS.,

CLOTH MERCHANTS,

Hampankatta, MANGALORE.

N. B.—Drawing date will be 5th January 1940 at 5.30 P. M. Sjt. Dr. K. Vittal Shetty President, Dt. Bd Office S. K. has kindly consented to present on this day.

ಸದಾ ಕಾಲ ರೈಲ್ವೆಪ್ರಯಾಣದಿಂದ ಆತನಲ್ಲಿ ಮಲಬದ್ಧತೆ ಉಂಟಾಗುತಿತ್ತು.

ತನ್ನ ಆರೋಗ್ಯವನ್ನು ನೆಟ್ಟಗಿಡುವುದು ಕ್ರುಶನ್ ಲವಣಗಳೊಂದೆ ಎಂದು ಓರ್ವ ಪ್ರಯಾಣಿಕ ಮಾರಾಟಗಾರನ ಅಭಿಪ್ರಾಯ!

'ನಾನೊಬ್ಬ ವ್ಯಾಪಾರಿ ಪ್ರಯಾಣಿಕ, ಸದಾ ಕಾಲ ರೈಲ್ವೆ ಸಂಚಾರ ಮಾಡಲಿಕಿರುವುದರಿಂದ ಕ್ರುಶನ್ ಲವಣಗಳ ಸೇವನೆ ಅಲ್ಲದಿದ್ದರೆ ಮಲಬದ್ಧತೆಯು ಪರಿಣಮಿಸುತ್ತಿತ್ತು. ನನ್ನ ಉದರವನ್ನು ನಿರ್ಮಲವಾಗಿಡಲು, ಅದು ಒಂದೇ ಒಂದಾದ ಉಪಾಯವಾಗಿರುತ್ತದೆ. ಅದರಿಂದ ನನ್ನ ಕಲಸಕ್ಕೆ ಅಡಚಣೆಗಳು ಉಂಟಾಗುವುದಿಲ್ಲ. ರಜೆಯ ಸಮಯ ಕ್ರುಶನಿನ ದೊಡ್ಡ ಡೋಸನ್ನೂ, ಇತರ ಸಮಯ ಒಂದು ದಿವಸ ಬಿಟ್ಟು ಒಂದು ದಿನಸ ಸಣ್ಣ ಡೋಸುಗಳನ್ನೂ ಪ್ರಾತಃಕಾಲ ಸೇವಿಸುವುದು ನನ್ನ ಕ್ರಮ. ದಿನ ಪೂರ್ಣ ಚಟುವಟಿಕೆಗಳನ್ನು ನಡೆಯಿಸುವಂತೆ ಉಲ್ಲಾಸವನ್ನೂ ಶಕ್ತಿಯನ್ನೂ ಪಡೆಯಲು ಒಂದೇ ಒಂದಾದ ಉಪಾಯವೆಂದರೆ ಇದೇ. ಬೇರೆ ಯಾವತ್ತೂ ಜಾಡಣೆ ಮದ್ದುಗಳಿಗೆ ಈ ತರದ ಪರಿಣಾಮವಿರುವುದಿಲ್ಲ. ಹೀಗೆಂದು ಆತನ ಅಭಿಪ್ರಾಯ. —ಪಿ. ಯಲ್

ನಿಮ್ಮ ಉದರವನ್ನು ಶುಚಿಯಾಗಿಡಲು ಕ್ರುಶನ್ ಲವಣಗಳ ನೈಸರ್ಗಿಕ ವಿಧಾನವು ಅದರಲ್ಲಿರುವ ಆರು ಲವಣಗಳಿಂದ ನಿಮ್ಮ ಅಂಗಾಂಗಗಳು ಸರಿಯಾದ ರೀತಿಯಲ್ಲಿ ಕಾರ್ಯಿಸುತ್ತವೆ. ನಿಮ್ಮ ಉದರದಿಂದ ಎಲ್ಲಾ ಕಲ್ಮಶಗಳು ಹೊರದೂಡಲಾಗುವುವು. ಈ ಕಲ್ಮಶಗಳನ್ನು ಹೊರದೂಡದಿದ್ದರೆ ನಿಮ್ಮ ಆರೋಗ್ಯವು ಕೆಡುವುದು. ಕ್ರುಶನ್ ಲವಣಗಳಿಂದ ನಿಮ್ಮ ರಕ್ತವು ಪರಿಶುದ್ಧವಾಗಿ ನಿವ[illegible]ಲ್ಲಿ ನವಚೇ[illegible]ನವೂ ಉಲ್ಲಾ[illegible]ಸವೂ ಉ[illegible]ಟಾಗುವುದು. ಕ್ರುಶನ್ ಲ[illegible]ಣಗಳು ಎಲ್ಲಾ ದವಾಖಾನೆಗಳಲ್ಲೂ ಸ್ಟೋರುಗಳಲ್ಲೂ, ಬಜಾರುಗಳಲ್ಲೂ ದೊರಕುತ್ತವೆ.



ನೋಟಗಳು

ಭಾರತದ ಮಿತ್ರರೆನಿಸಿದ ಸರ್ ಸ್ಟಾಫೋರ್ಡ್ ಕ್ರಿಪ್ಸರು, ಹಿಂದೂದೇಶದ ಪರಿಸ್ಥಿತಿಗಳನ್ನು ಪ್ರತ್ಯಕ್ಷ ತಿಳಿಯುವ ಸಲುವಾಗಿ ಈಗ ಇಲ್ಲಿಗೆ ಬಂದಿದ್ದಾರೆ! ಜಿನ್ನಾ ಮತ್ತು ಕಂಪೆನಿಯವರಿಂದ, ರಾಷ್ಟ್ರದ ಸ್ವಾತಂತ್ರ್ಯದ ವಿರುದ್ಧವಾಗಿ ಪ್ರದರ್ಶಿಸಲ್ಪಡುವ ಹೋರಾಟದ ಇಂದಿನ ದುರ್ಭಾಗ್ಯದ ಕಾಲದಲ್ಲಿಯೇ ಸರ್ ಕ್ರಿಪ್ಸರಂತಹ ಅತಿಥಿಗಳ ಆಗಮನವಾಯಿತೆಂಬುದು ನಮಗೆ ಸ್ವಲ್ಪಕಳವಳದ ವಿಷಯವಾಗಿದೆ!

◆

ಅಧಿಕಾರಕ್ಕೇರಿದ ಮುಸ್ಲಿಮರು, ಕಾಂಗ್ರೆಸಿನ ಪ್ರಭಾವವನ್ನು ಸಂಪೂರ್ಣ ತೊಡೆದು ಬಿಡಲು ನಿಶ್ಚಯಮಾಡಿದ್ದಾರೆ ಇಂದಿನ ಅವರ ಧೋರಣೆಯು ಅದನ್ನೇ ಸೂಚಿಸುತ್ತದೆ!

◆

- ಬಂಗಾಳದ ಪ್ರಧಾನರಾದ ಹಕ್ಕರಿಗೆ, ಕಾಂಗ್ರೆಸಿನ ದ್ವೇಷ ಬುದ್ಧಿಯು ಮೇರೆ ಮೀರಿ, ತಾನು ತನ್ನ ಅಧಿಕಾರಕ್ಕೆ ರಾಜೀನಾಮೆ ಕೊಟ್ಟು, ಹಿಂದೂದೇಶದಲ್ಲಿ ಅನೇಕ ಮುಸ್ಲಿಂ ಪತ್ರಿಕೆಗಳನ್ನು ಹೊರಡಿಸಬೇಕೆಂದು ಕನವರಿಸುತ್ತಿರುವುದಾಗಿಯೂ ಹೇಳಿ ಬಿಟ್ಟರು!

◆

ಹಕ್ಕರ ಪತ್ರಿಕೆಗಳಿಗೆ, ಬೇಕಾದ ವಿಷಯಗಳನ್ನು ಸಾದಿಸಲು ಜಿನ್ನಾ ಸಾಹೇಬರು ಈಗಾಗಲೇ ಪ್ರಾರಂಭಿಸಿದ್ದಾರೆ

◆

ಜಿನ್ನಾ ಸಾಹೇಬರ, ಕಾಂಗ್ರೆಸ್ ಮಂತ್ರಿಮಂಡಳಗಳ ರಾಜೀನಾಮೆಯ ಸಂತೋಷ ಸೂಚಕವಾಗಿ ವಿಮೋಚನೆಯ ದಿನ'ವನ್ನು ಆಚರಿಸಬೇಕೆಂದು ಸೂಚಿಸಿದಂತಹಪ್ರಕಟಣೆಯು ಹಕ್ಕರು ಹೊರಡಿಸುವ ಪತ್ರಿಕೆಯಲ್ಲಿ ಮಾತ್ರ ಪ್ರಕಟಿಸಲು ಯೋಗ್ಯವಾದುದಾಗಿದೆ!

◆

ಜಿನ್ನಾ ಸಾಹೇಬರಿಗೆ, ಹಿಡಿದಿರುವ ರೋಗವನ್ನು ಗುಣಪಡಿಸುವುದು ಅಸಾಧ್ಯವಾಗಿದೆ!

◆

ಕಾಂಗ್ರೆಸಿನ ಮಂದಾಳುಗಳೂ, ತಾನೂ ಕೂಡಾ, ನೈಸರಾಯರ ಭವನದ ಬಳಿ ಬಂದಿದ್ದ ಸಮಯ, ಜಿನ್ನಾಸಾಹೇಬರಿಗೆ, ನೆಹರೂಗಳು ಬಹಳ 'ಕುತಿ ಮನುಷ್ಯ'ರಾಗಿ ಕಂಡಿದ್ದರು ಹಾಗಾಗಿ ಅಂದು ನೆಹರುಗಳೊಡನೆ ಹಿಂದೂ ಮುಸ್ಲಿಂ ರಾಜಿಯ ಮಾತುಕತೆಮಾಡುವುದಾಗಿ ಭರವಸೆಯಿತ್ತಿದ್ದರು!

◆

ಸರಕಾರವು ಕಾಂಗ್ರೆಸಿನೊಡನೆ ಯಾವಾಗ ಮೈತ್ರಿಯಿಂದ ಇರುತ್ತದೋ, ಆಗ ಜಿನ್ನಾ ಸಾಹೇಬರಿಗೆ ಕಾಂಗ್ರೆಸನ್ನು ದೂರಲು 'ಅವೇಶ'ವು ಏನು ಮಾಡಿದರೂ ಬರುವುದೇ ಇಲ್ಲ!

◆

ಬೊಂಬಯಿಯಲ್ಲಿ ಕಾಂಗ್ರೆಸು ಸರಕಾರವು ಬಟ್ಟೆಯ ಮೇಲೆ ಹೊರಿಸಿದ ತೆರಿಗೆ ತೆಗೆದುಹಾಕಲಾಗಿದೆ ಸಂ ಪ್ರಾಂತದಲ್ಲಿಯೂ ಕಾಂಗ್ರೆಸಿನ ನಿರ್ಣಯವೊಂದನ್ನು ಸರಕಾರವು ಇಂದು ಒಪ್ಪುವುದಿಲ್ಲ ಇವೆಲ್ಲಾ ಸೂಚನೆಗಳಿಂದ ಸರಕಾರಕ್ಕೂ ಕಾಂಗ್ರೆಸಿಗೂ ಈಗ ಸಂಬಂಧ ಸರಿಯಿಲ್ಲವೆಂದು ಜಿನ್ನಾ ಸಾಹೇಬರು ಅರ್ಥ ಮಾಡಿಕೊಂಡರು!

◆

ಹಾಗಾಗಿ ಜಿನ್ನರು ಇಂದು ಇಂತಹ

ಅಂಡಮಾನಿನಲ್ಲಿ ಗ್ಯಾಸ್‌ಮಾಸ್ಕನ್ನು ಧರಿಸುವುದು. ಒಂದು ನೂತನ ಫ್ಯಾಶನ್ ಆಗಿ ಪರಿಣಮಿಸಿದೆ ಮಿತ್ರಸೊಬ್ಬನು ಸಕುಟುಂಬವಾದ ಇನ್ನೊಬ್ಬ ಮಿತ್ರನನ್ನು ಕಂಡು 'ಇವರು ನನ್ನ ಮಕ್ಕಳೇ! ಈ ಸಣ್ಣ ಹುಡುಗಿಯು ತನ್ನ ತಾಯಿಗಿಂತ ತುಂಬ ಯಸ್ಸೇ ನೋಟುತ್ತಾಳೆ' ಎನ್ನುವನು.

ಪ್ರಕಟಣೆಯೊಂದನ್ನು ಹೊರಡಿಸಿ, ಜಾತೀಯ ದ್ವೇಷದ ಬೆಂಕಿಯನ್ನು ಹೆಚ್ಚಿಸುವ ಮಹಾ ಕಾರ್ಯವನ್ನು ಮಾಡುತಿದ್ದಾರೆ! ಹೀಗೆ ಮಾಡಿ ಹಿಂದೂದೇಶದ ದೌರ್ಬಲ್ಯವನ್ನುಇಡೀ ಜಗತ್ತಿಗೇ ತಿಳಿಸುವ ಹರಕೊಟ್ಟಂತೆ ಇಂದು ಸರ್ ಕ್ರಿಪ್ಸರು ಒಂದಿರುವ ಕಾಲದಲ್ಲಿಯೇ ತಮ್ಮ ಪರಾಕ್ರಮವನ್ನು ತೋರಿಸಲು ಮುಂದೆ ಬಂದಿದ್ದಾರೆ!

◆

ಜಿನ್ನರುಗಳು, ಹಕ್ಕರುಗಳು, ಅಂಬೇಡ್ಕರರುಗಳ—ಇಂತಹ 'ಪುಣ್ಯಾತ್ಮ'(?)ರು ನಮ್ಮ ದೇಶದಲ್ಲಿ ಇರುವ ವರೆಗೆ ನಮ್ಮ ನಮ್ಮೊಳಗೆ ಏಕ್ಯತೆಯೆಂಬುದು ಗಾಳಿಗೋಪುರವಾಗಿಯೆ ಉಳಿಯುವುದು! ಹಿಂದೂ ಮುಸ್ಲಿಂ ಭೇದದ ಪಲ್ಲವಿಯನ್ನು ಹಾಡಿ ಬ್ರಿಟಿಷರೂ ತಮ್ಮ ಬೇಳೆಯನ್ನು ಬೇಯಿಸಿಕೊಳ್ಳಲು ಅನುಕೂಲವಾಗುವುದು!

◆

ಸರ್ವಾಧಿಕಾರಿಗಳು ಸಾಮ್ರಾಜ್ಯ ಕಟ್ಟುವಿದ್ಯೆಯನ್ನು ಇನ್ನೂ ಕೂಡ ಕಲಿತಿಲ್ಲ!

◆

ಅಬಿಸೀನಿಯವನ್ನು ಗೆದ್ದ ಮುಸಲೋನಿಯು, ಹೈಲ್‌ಸೆಲಾಸಿಯರನ್ನು ಅಲ್ಲಿಂದ ಓಡಿಸಿ ರಾಜ್ಯವಾಳಿದ್ದು ಸಜವಾಗಿ ಆತನ ಹುಚ್ಚುತನವೆನ್ನಬೇಕು!

◆

ಅವನು ಸೆಲಾಸಿಯವರನ್ನು ಅಬಿಸೀನಿಯದಲ್ಲಿಯೇ ಸ್ಥಿರವಾಗಿ ಕೂತುಕೊಳ್ಳಿಸಿ ತನ್ನಸಾಮ್ರಾಜ್ಯವಾಶವನ್ನಕ್ರಮ ಪ್ರಕಾರ ಬಿಗಿದುಕೊಂಡು ಬರಬೇಕಿತ್ತು!

◆

ಹಿಟ್ಲರನು, ಅನೇಕ ಭಯಂಕರ ಯುದ್ಧ ಅಸ್ತ್ರಗಳನ್ನು ತಯಾರಿಸಿದ ಬುದ್ಧಿವಂತನಾದರೂ, ಸಾಮ್ರಾಜ್ಯವನ್ನು ಕಟ್ಟುವ ಜಾಣಾಕ್ಷತೆಯು ಇನ್ನೂ ಆತನಿಗೆ ತಿಳಿದಿಲ್ಲ!

◆

ಸರ್ ಕ್ರಿಪ್ಸರು, ಭಾರತಕ್ಕೆ ಕಾಲಿಟ್ಟ ಕೂಡಲೇ, ಪತ್ರಿಕಾ ಪ್ರತಿನಿಧಿಗಳೊಡನೆ, ರಶ್ಯಾ-ಪಿನ್ಲೆಂಡುಗಳ ಯುದ್ಧದ ವಿಷಯ ಹೀಗೆಂದರು 'ರಶ್ಯದ ಕೇಳಿಕೆಗಳು ಸಕಾರಣವಾದುವು ಅದರ ಅವರು ಹಿಡಿದ ಹಾದಿ ಮಾತ್ರ ಕಪ್ಪು' ಎಂದು!

◆

ಈ ಆಂಗ್ಲೇಯ ಮಹಾನುಭಾವರ ಅಭಿಪ್ರಾಯದಂತೆ, ಒಂದು ದೇಶದ ಸ್ವಾತಂತ್ರ್ಯವನ್ನು ಅಪಹರಿಸುವ ಕಾರ್ಯವನ್ನಾದರೂ ಬಹಳ ತಂತ್ರದಿಂದಲೂ, ಶಾಂತಿಯಿಂದಲೂ ಮಾಡಬೇಕೆಂದು ವ್ಯಕ್ತವಾಗುವುದಲ್ಲವೇ?

◆

ಒಂದು ರಾಷ್ಟ್ರದ ಸ್ವಾತಂತ್ರ್ಯವನ್ನು ಅಪಹರಿಸುವಾಗ ಮೊದಲಾಗಿ ಹಾಗೆಂದು ಸ್ಪಷ್ಟ ಪ್ರಕಟಣೆ ಕೊಟ್ಟು ಬಾಡಾಬಾಡಿ ಜಗಳಕ್ಕೆ ಇಳಿಯಬಾರದು. ಅಲ್ಲಿನ ಜನರೊಳಗೆ ಭೇದಕಲಹಗಳನ್ನು ಮೊದಲು ಹುಟ್ಟಿಸಬೇಕು ಆ ಮೇಲೆ ಮೂರನೇ ಪಕ್ಷದ ಆಗತ್ಯ ಬೀಳುವುದರಿಂದ ತಾವು ಹೋಗಿ ಇಲ್ಲಿನೆಲೆಯೂರಿ ಆ ಇಬ್ಬರನ್ನೂ ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳಬೇಕು. ಹೀಗೆ ಈ ಕ್ರಮದಿಂದ ಸ್ವಾತಂತ್ರ್ಯವನ್ನು ಅಪಹರಿಸಿ ದೇಶದ ಗತ್ತಿನವರಿಗೆಗೆ ಸಹಾಯಮಾಡಿದೆವೆಂದು ಸಾರಿ ಲೋಕದ ಕಣ್ಣಿಗೆ ಮಣ್ಣೆರಚಬೇಕು

◆

ಸರ್ವಾಧಿಕಾರಿಗಳಿಗೆ ಈ ಗುಟ್ಟು ಇನ್ನೂ ಗೊತ್ತಿಲ್ಲ! ಉಪಕಾರಮಾಡುವವರೆಂಬ ವೇಷದಿಂದ ಹೋಗಿ, ಒಂದು ದೇಶದ ಸ್ವಾತಂತ್ರ್ಯವನ್ನು ನುಂಗುವ ಅದ್ಭುತ ರಾಜಕೀಯ ಕಲೆ (ಕೊಲೆ?) ಇನ್ನೂ ಅವರ ಕಲಿತುಕೊಳ್ಳಬೇಕಾಗಿದೆ!

◆

ಬ್ರಿಟಿಷರಿಗೆ ಸಾಮ್ರಾಜ್ಯವನ್ನು ಕಟ್ಟುವ 'ವಿದ್ಯೆ' ಚೆನ್ನಾಗಿ ಗೊತ್ತಿದೆ. ಇದೇ ಯೂರೋಪಿಗಿಂತ ದೊಡ್ಡದಾದ ಹಿಂದೂದೇಶವನ್ನು ಅವರು ಯಾವ ಕ್ರಮದಿಂದ ಆಳುತ್ತಿದ್ದಾರೆ? ಅದುದರಿಂದಲೇ ಇಂದಿನ ಯುದ್ಧದಲ್ಲಿ ಅವರಿಗೆ ಜಗತ್ತಿನ ನೈತಿಕ ಸಹಾಯವೂ ಇದೆ!

◆

HALFTONE & LINE
BLOCK MAKING
UNDERTAKEN
Sharada Press,
MANGALORE



ಇಂಗ್ಲಾಂಡಿನಲ್ಲಿ ತಯಾರಿಸಲ್ಪಟ್ಟದ್ದು.

ನಡುವಿನಲ್ಲಿ ಸಿಗಿಯಲ್ಪಟ್ಟ ಈಗಿನ 7 ಓ' ಕ್ಲೋಕ್ ಬ್ಲೇಡುಗಳು ಹಳೇ ಮಾದರಿಯ ಮೂರು ತೂತುಗಳ ಬ್ಲೇಡುಗಳಿಗಿಂತ ಸುಧಾರಣೆ ಹೊಂದಿವೆ. ಇದರ ಕ್ರಯವು ಅಗ್ಗ ಮಾತ್ರವಲ್ಲದೆ ಚೆನ್ನಾಗಿ ಹರಿತವಾಗಿದ್ದು ಉತ್ತಮವೂ ನುಣುಪೂ ಆದ ಕ್ಷೌರವನ್ನು ಉಂಟುಮಾಡುವುದಲ್ಲದೆ ಅನೇಕ ಕಾಲದ ವರೆಗೆ ಬಾಳುವುದು.
7 ಒಕ್ಲೋಕ್ ಬ್ಲೇಡುಗಳು ಹಳೇ ಮತ್ತು ಹೊಸ ಮಾದರಿಯ ಬ್ಲೇಡುಗಳಿಗೆ ಅಚ್ಚುಕಟ್ಟಾಗುತ್ತವೆ.

ವಿಜ್ಞಾನಯುಗ

ಹಡಗುಗಳನ್ನು ಮುಳುಗಿಸುವ ತೋಟೆಕಾಳಗವೆಂದರೇನು?

ಯೂರೋಪಿನ ಯುದ್ಧವಾರ್ತೆಯನ್ನು ಕುತೂಹಲಗೊಂಡು ನೀವು ಕೇಳುತ್ತಿರುವಿರಿ. ಎಷ್ಟು ಹಡಗುಗಳು ಇದುವರೆಗೆ ಮುಳುಗಿದುವು? ಎಷ್ಟು ಪ್ರಾಣಹಾನಿಯೊದಗಿತು? ಹೇಳಬಲ್ಲಿರಾ? ಇವುಗಳು ಏಕೆ ಆಗುತ್ತವೆ? ಇಂಗ್ಲಿಷಿನಲ್ಲಿ 'ಮೈನು'ಗಳೆಂದು ಕರೆಯುವ ಸಿಡಿಮದ್ದಿನ ಬಾಂಬುಳ್ಳ ತೋಟೆಗಳು ವಿಶಾಲ ಸಾಗರದಲ್ಲಿ ಎಲ್ಲೆಡೆಗಳಲ್ಲಿಯೂ ಶತ್ರುಪಕ್ಷದ ಹಡಗುಗಳು ಚಲಿಸುತ್ತಿರುವಾಗ ಬಿಕ್ಕಿರುತ್ತಾರೆ. ಅವುಗಳಿಂದ ಇಷ್ಟೊಂದು ಅನರ್ಥಗಳು ಒದಗುತ್ತವೆ! ಹಾಗಾದರೆ ಅವುಗಳ ಇತಿಹಾಸವನ್ನಾವು ತಿಳಿಯಬೇಕು

೧೯೧೪ರಿಂದು ಹೀಗೆಯೇ ಘನಘೋರ ಸಂಗ್ರಾಮವು ಆರಂಭವಾಗಿತ್ತಷ್ಟೆ? ಆಗ ಜಲಾಂತರ್ಗಾಮಿ ನಾವೆಗಳು ನೀರಿನಡಿಯಲ್ಲಿ ಬಂದು ಹಡಗುಗಳನ್ನು ಮುಳುಗಿಸುತ್ತಿದ್ದುದರಿಂದ, ಅವುಗಳ ಹಾವಳಿಯನ್ನು ತಡೆಯಬೇಕಾಯಿತು. ಅದರ ಸಲುವಾಗಿ ಶತ್ರುಗಳ ಜಲಾಂತರ್ಗಾಮಿ ನಾವೆಗಳು ಬರುವ ಮಾರ್ಗಗಳಲ್ಲಿ ಇಂತಹ ತೋಟೆಗಳನ್ನು ನಟ್ಟರು; ಅದರಿಂದ ಎಷ್ಟೋ ಅವದ್ಯವಕಾರಿಗಳಾದ ಜಲಾಂತರ್ಗಾಮಿ ನಾವೆಗಳು ಭಸ್ಮವಾದುವು

ವಿಮಾನ ಹಿಡಿವವರು, ಸಿಡಿಮದ್ದಿನ ತೋಟೆಗಳನ್ನು ಹಾಕಿ ವಿಮಾನಹಿಡಿಯಲು ಸುರುಮಾಡಿದರು. ಇಂದು ಅದೇ ಪ್ರಯೋಗವು ಪ್ರಪಂಚದ ಯುದ್ಧದಲ್ಲಿ ಪ್ರಬಲ ಶಸ್ತ್ರವಾಗಿ ಪರಿಣಮಿಸಿದೆ

ಹಡಗುಗಳಿಗೆ ಇವು ಹೇಗೆ ತಗಲುವವೆಂಬುದೊಂದು ಆಶ್ಚರ್ಯಕರವಾದ ಪ್ರಶ್ನೆ. ಈ ತೋಟೆಗಳು ಅಪಾರ ಆಳವಿರುವ ಸಮುದ್ರದಲ್ಲಿ ಬಹಳ ಆಳದಲ್ಲಿದ್ದರೆ ಅಥವಾ ಒಂದು ಕಡಲಿಂದ ತೆರೆಗಳ ಬಡತಕ್ಕೆ ಬೇರೊಂದೆಡೆ ಸಾಗುತ್ತಿದ್ದರೆ ಏನು ಪ್ರಯೋಜನವಾದೀತೆಂದು ನಮಗೆ ಸಂದೇಹವಾಗಬಹುದು ಆದರೆ ಸಮುದ್ರದ ಆಳ, ಕಲ್ಲು ಮೊದಲಾದುವುಗಳನ್ನು ತಿಳಿಸುವ ಸಲುವಾಗಿ 'ವಾಯ್' ಗಳೆಂದು ಕರೆಯಲ್ಪಡುವ ವಿಶ್ರಮೋಹದ ಉಸಿರು ಬುರುಡೆಗಳನ್ನು ಅಲ್ಲಲ್ಲಿ ಸಮುದ್ರದಲ್ಲಿ ಇರಿಸಿರುತ್ತಾರಷ್ಟೆ? ಅವುಗಳ ಮೇಲೆ ಧ್ವಜವನ್ನೂ ಇಟ್ಟಿರುತ್ತಾರೆ. ಅವುಗಳು ಚಲಿಸದೆ ಇದ್ದಲ್ಲಿಯೇ ಇರುತ್ತವೆ. ಇವುಗಳ ಕಾರಣವೇನೆಂದರೆ ಸಮುದ್ರದ ತಳದಲ್ಲಿ ಮೇಲಿನಂತೆ ನೀರು ಚಲನೆ ಇಲ್ಲದೆ ಸ್ಥಬ್ಧತೆಯಿರುವುದರಿಂದ ಅದರ ಕೆಳಗಿರುವ ಘನವಸ್ತುವು ಹೆಚ್ಚು ಅಡಿ ನೀರಿನಲ್ಲಿ ಭದ್ರವಾಗಿ ಚಲಿಸದೇ ನಿಂತು ಬಿಡುತ್ತದೆ. ಈ ತೋಟೆಗಳು ಅದೇ ರೀತಿಯಲ್ಲಿ ಇರುತ್ತವೆ. ಹಡಗುಗಳು ಸಾಮಾನ್ಯ ಇಪ್ಪತ್ತೈದು ಅಡಿಯಿಂದ ನಲ್ವತ್ತು ಅಡಿ ಆಳದ ವರೆಗೆ ಹೋಗುವವು ಇಂತಹ ಸಂದರ್ಭದಲ್ಲಿ ಅದಕ್ಕಿಂತ ಹೆಚ್ಚು ಆಳಕ್ಕೆ ತೋಟೆಗಳು ಇಳಿದರೆ ಅವುಗಳನ್ನು ಹಾಕಿಯೂ ಪ್ರಯೋಜನವಿಲ್ಲದಿರುವುದರಿಂದ ಬಾಯ್‌ಗಳು ಹೇಗೆ ನೀರಿನ ನಿಶ್ಚಿತ ಆಳದಲ್ಲಿ ಅಚಲವಾಗಿ ನಿಂತಿರುತ್ತವೋ ಹಾಗೆಯೇ ಇವುಗಳೂ ನಿಂತಿರುತ್ತವೆ. ನೀರಿನ ಮಟ್ಟದಿಂದ ಹತ್ತು ಅಡಿ ಮೊದಲಾಗಿ ಹದಿನಾಲ್ಕು ಅಡಿಯೊಳಗೆ ಇವುಗಳು ತೇಲಿರುತ್ತವೆ

ಇವುಗಳು ಬಹು ಸೂಕ್ಷ್ಮ ಮತ್ತು ಭಯಂಕರವಾದ ಸಿಡಿಮದ್ದು ಉಳ್ಳ ಡೈನಮೇಟುಗಳು ಹಲವು ಡೈನಮೇಟುಗಳನ್ನು ಒಂದು ತೋಟೆಯೊಳಗೆ ಇಟ್ಟಿರುತ್ತಾರೆ ಇವುಗಳನ್ನು ಉರುಟಾಗಿ ಮಾಡಿರುತ್ತಾರೆ ಒಂದೊಂದು ತೋಟೆಯು ಹತ್ತು ಪೌಂಡುಗಳಷ್ಟು ಭಾರವಿರುವುದಿದೆ ಪ್ರತಿಯೊಂದೂ ಒಳಗೆ ಟೊಳ್ಳಾಗಿರುತ್ತದೆ ಅವುಗಳೊಳಗೆ ಗಾಳಿ ತುಂಬಿಸಿ ತೇಲುವಂತೆ ಮಾಡುತ್ತಾರೆ. ಇವುಗಳಿಗೆ ಸೂಜಿಗಲ್ಲನ್ನು ಇಟ್ಟಿರುತ್ತಾರೆ ಹಡಗುಗಳು ಸಾಕಾದಷ್ಟು ಹತ್ತಿರ ಬಂದಾಗ ಈ ಸೂಜಿಗಲ್ಲಿರುವ ತೋಟೆಗಳು ಹಡಗುಗಳ ಹತ್ತಿರ ಆಕರ್ಷಿತವಾಗಿ, ಹಡಗಿನ ಬದಿಗೆ ತಗಲುತ್ತವೆ. ತಗಲಿದಾಗ ಒಡೆಯುವುದು. ಹಡಗು ತೂತು ಬಿದ್ದು ಕೂಡಲೇ ಜಲಾಹುತಿಯಾಗುವುದು!

ಇಂತಹ ತೋಟೆಗಳನ್ನು ಹಡಗುಗಳಿಂದಲೂ ವಿಮಾನಗಳಿಂದಲೂ ಹಾಕುತ್ತಾರೆ ತಪ್ಪೆಗಳು ಸಾಲುಸಾಲಾಗಿ ತತ್ತಿಗಳನ್ನು ಇಟ್ಟುಕೊಂಡು ಹೋಗುವಹಾಗೆ ಇವು ಹೋಗುತ್ತವೆ ಎಲ್ಲೆಲ್ಲಿ ತೋಟೆಗಳನ್ನು ಹೊಕ್ಕಬೇಕೆಂಬ ಭೂಪಟವು ಅವರಲ್ಲಿ ಇರುತ್ತದೆ ಅದಕ್ಕೆ ಸರಿಯಾಗಿ ಹಾಕಿರುತ್ತಾರೆ ಅದುದರಿಂದಲೇ ತಾವು ತೋಟೆಗಳನ್ನು ಹಾಕಿದ ಸ್ಥಳಗಳಿಗೆ ತಾವಾಗಿ ಆ ವೇಳೆ ಹೋಗಿ ಅಪಾಯವಾಗದಿರುವುದು.

ಜರ್ಮನಿಯ ಇಂದ ವಿಶಾಲಸಮುದ್ರದ ವಿಸ್ತಾರದಲ್ಲಿ ಎಲ್ಲೆಲ್ಲಿಯೂ ಇಂತಹ ಪ್ರಳಯಕಾರೀ ತೋಟೆಗಳನ್ನು ಹಾಕಿ ಶತ್ರುಗಳನ್ನು ಅಧರ್ಮದಿಂದ ಹನನಮಾಡಿ

ತೋಟೆಗಳನ್ನು ಸಮುದ್ರದ ಅಡಿಯಲ್ಲಿ ಇರಿಸುವುದು.



1) ಮೇಲಿಂದ ಹಾಕಿದ ತೋಟೆಯು ನೀರಮೇಲೆ ತೇಲುವುದು 2) ನೆಲ್ಲಗೆ ಮುಳುಗುವುದು. 3) ಕೆಳಗೆ ತಾಗಿಸಿದ ಭಾರವಾದ ಲಂಗರಿನಂತಹ ಹಗ್ಗವು ನೀರಿನಡಿ ಇಳಿಯುವುದು 4) ಎಷ್ಟು ಅಡಿಗೆ ಹೋಗಬೇಕಾಗಿದೆಯೋ ಅಷ್ಟೇ ಉದ್ದ ಆ ಹಗ್ಗವಿರುವುದು 5) ಲಂಗರು ಮುಳುಗಿದಾಗ ತೋಟೆಯ ಕೆಳಗಿನ ಭಾರವು ಕಳಗಿಳಿಯುವುದು 6) ಸರಿಯಾದ ಸ್ಥಾನದಲ್ಲಿ ಚಲಿಸದೆ ನಿಂತುಕೊಳ್ಳುವುದು.

ದಲ್ಲಿ ಕಾರ್ಯದಲ್ಲಿ ತೊಡಗಿದೆ. ಹಿಂದೆ ಬಿಟಿಷರು ಆತ್ಮರಕ್ಷಣೆಗೆಂದು ಇದನ್ನು ಉಪಯೋಗಿಸಿದ್ದರು! ಇಂತಹ ತೋಟೆಗಳನ್ನು ದುಡ್ಡುಕೊಟ್ಟು ಪಡೆಕೊಳ್ಳುವವರಿಗೆ ಅವೇ ರೀತಿಯ ಎಷ್ಟು ಬೇಕಾದರೂ ಈಗ ಒದಗಿಸಿ ಕೊಡುತ್ತಿದೆ

ಪ್ರಳಯ ಮಾರ್ತಾಂಡ ಬತ್ತಲಿಕೆಯಲ್ಲಿ ಇದೊಂದು ಪ್ರಬಲಾಸ್ತ್ರವಲ್ಲವೆ?

ಜ್ಯೋತಿಷ್ಯರಿಗೊಂದು ಆಹ್ವಾನ!

ಮನುಷ್ಯನ ಅದೃಷ್ಟಕ್ಕೆ ಗ್ರಹಗತಿಯೂ ಸಂಬಂಧವುಂಟೇ?

ಜ್ಯೋತಿಷ್ಯ! ಇದಿಂದು ಮಾಯಾಮಂತ್ರವಾಗಿದೆ ಹಲವರು ಇದರ ಕುರಿತು ಬಹಳ ನಂಬಿಕೆಯುಳ್ಳವರಾಗಿದ್ದಾರೆ. ಈ ಜ್ಯೋತಿಷ್ಯವನ್ನು ಹೇಳುವುದು ಗ್ರಹಗಳ ಸೂತ್ರಚಲನೆಯ ಆಧಾರದಿಂದ, ಈ ಗ್ರಹನಕ್ಷತ್ರಗಳ ಚಲನೆಗೂ ಮನುಷ್ಯನ ಅದೃಷ್ಟಕ್ಕೂ ಏನಾದರೂ ಸಂಬಂಧವಿದೆಯೆ? ಮಗು ಪುಟ್ಟಿದ ಕಾಲದಲ್ಲಿ ಸೂರ್ಯ ಚಂದ್ರ ನಕ್ಷತ್ರಗಳು ಯಾವ ಯಾವ ಚಲನೆಯಲ್ಲಿದ್ದವೆಂದು ಗಣಿಸಿ ಹಾಕಿ, ಆ ಮನುಷ್ಯನ ಅದೃಷ್ಟವನ್ನು ಹೇಳುವುದರಲಿ ಅರ್ಥವಿದೆಯೇ?

ಗ್ರೀನ್‌ವಿಚ್ ಸಂಶೋಧನಾಲಯದಲ್ಲಿರುವ ಡಾ ಹೆರಂಲ್ಡ್ ಸ್ಪೆನ್ಸರ್ ಜೋನ್ಸ್ ಎಂಬ ಜ್ಯೋತಿಷ್ಯರು ಜ್ಯೋತಿಷ್ಯದಿಂದ ಮಾನವನ ಅದೃಷ್ಟವನ್ನು ಹೇಳುವ ವಿಷಯವು ಸಂಪೂರ್ಣ ಸುಳ್ಳು ಎಂದು ಸ್ಪಷ್ಟ ಹೇಳಿರುವರು ವಿಜ್ಞಾನ ಶಾಸ್ತ್ರವನ್ನು ಅಭ್ಯಾಸಮಾಡಿದವನು ಈ ವಿಶ್ವಾಸವು ಎಂತಹ ಭ್ರಾಮಕವಾದುದು ಎಂದು ತಿಳಿಯದಿರಲಾರನು ಎಂದು ಅವರು ಎನ್ನುತ್ತಾರೆ

ಗ್ರಹಗಳೇ ಇವು ಮೇ ೧೧ರಲ್ಲಿ 'ಮರ್ಕ್ಯುರಿ' ಗ್ರಹವು 'ವೀನಸ್'ನ 'ಸೇಟರ್ನ್' ಮತ್ತು 'ಯುರಾನಸ್' ಗ್ರಹಗಳ ಸಂಬಂಧದೊಡನೆ ಇರುತ್ತದೆ, ಮತ್ತು ಆ ದಿನ ಹುಣ್ಣಿಮೆ ದಿನ, 'ಸೇಟರ್ನ್' ಗ್ರಹವು ವೀನಸ್ ಮತ್ತು ಯುರಾನಸ್ ಗ್ರಹಗಳ ಸಂಬಂಧದೊಡನೆ ಕೆಲವು ದಿನಗಳ ಹಿಂದೆ ಇರುತ್ತದೆ ಮರ್ಕ್ಯುರಿ, ವೀನಸ್, ಜ್ಯುಪಿಟರ್, ಸೇಟರ್ನ್ ಮತ್ತು ಯುರಾನಸ್ ಈ ಎಲ್ಲಾ ಗ್ರಹಗಳೂ ಸೂರ್ಯನಿಗೆ ಸಮೀಪ ಇರುತ್ತವೆ

ಜ್ಯೋತಿಷ್ಯರು ಈ ಅಸಾಮಾನ್ಯವಾದ ಗ್ರಹಯೋಗದ ಫಲತಾಂಶವೇನಾಗಬಹುದೆಂಬುದನ್ನು ಹೇಳುವರೇ?

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರಕೊಳ್ಳಿರಿ.

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಯಾತ್ರಾರ್ಥಿಗಳಿಗೆ -- ಪುಣ್ಯಾರ್ಜನೆಗೆ -- ಮಹೋತ್ಸವದ -- ಅತ್ಯುತ್ತಮ ಸಂದರ್ಭ

ಬರುವ ತಾರೀಕು
6-12-39ರಿಂದ ತಾ 10-12-39ರ ವರೆಗೆ
ಶ್ರೀ ಧರ್ಮಸ್ಥಳ ದೀಪೋತ್ಸವ.
ಅತ್ಯುಜ್ವಲ ಸ್ಥಳಮಹಿಮೆ—ಅನ್ನದಾನದ ಉದಾರತೆ—ವಿಜ್ರಂಭಣೆಯ ದೀಪಾಲಂಕಾರ ಮತ್ತು ಉತ್ಸವದ ಸೊಬಗು
ಪಾಪನಾಶಿನಿ ನೇತ್ರಾವತಿ ನದಿಯ ತೀರ್ಥಸ್ನಾನದ ಅತ್ಯನುಕೂಲದ ಸಮಯ

ಶ್ರೀ ಧರ್ಮಸ್ಥಳ
ಲಕ್ಷದೀಪೋತ್ಸವ ಸಮಾರಂಭ
ಮತ್ತು
ಶ್ರೀ ಸುಬ್ರಮ್ಮಣ್ಯ
ಷಷ್ಠಿ ಮಹೋತ್ಸವ

ಬರುವ ತಾರೀಕು
8 12-39ರಿಂದ ತಾ 17-12-39ರ ವರೆಗೆ
ಲಕ್ಷದೀಪೋತ್ಸವ 10-12-39
ಹೂವಿನ ತೇರು 11-12-39
ಪಂಚಮಿ ರಥೋತ್ಸವ 16-12-39
ಶ್ರೀ ಸುಬ್ರಮ್ಮಣ್ಯ ಚಂಪಾಷಷ್ಠಿ ಮಹಾರಥೋತ್ಸವ 17-12-39
ಆದಿ ಸುಬ್ರಮ್ಮಣ್ಯದ ದಿವ್ಯ ಸಂದರ್ಶನ
ಕುಮಾರ ಪರ್ವತದ ಸುಮನೋಹರ ನೋಟ—ಶ್ರೀ ಕುಮಾರ ಪರ್ವತದಿಂದ ಹರಿದು ಬರುವ ಪವಿತ್ರ ಕುಮಾರಧಾರಿ ನದಿಯ ಪುಣ್ಯ ದರ್ಶನ!

ಸಮಗ್ರ ಹಿಂದೂಗಳಿಂದ, ಶ್ರೀ ಧರ್ಮಸ್ಥಳ ಮತ್ತು ಶ್ರೀ ಸುಬ್ರಮ್ಮಣ್ಯ ಕ್ಷೇತ್ರಗಳು ಮಹಾಪವಿತ್ರ ಯಾತ್ರಾಸ್ಥಳಗಳೆಂದು ಪರಿಗಣಿಸಲ್ಪಟ್ಟ ಪ್ರತಿ ವರ್ಷವೂ ಅನೇಕ ಕಡೆಗಳಿಂದ ಲಕ್ಷಾಧಿಕ ಭಕ್ತವೃಂದವು ನೆರೆದುಬಂದು ಶ್ರೀ ದೇವರ ದರುಶನವನ್ನು ಪಡೆದು ಕೃತಾರ್ಥರಾಗುವರು—ಇಂಥಾ ಪುಣ್ಯ ಕ್ಷೇತ್ರಗಳನ್ನು ಸಂದರ್ಶಿಸಲು ಅಮೋಘವಾದ ಸುಸಮಯ

ಯಾತ್ರಾರ್ಥಿಗಳ ಸೌಕರ್ಯಕ್ಕಾಗಿ ಜಾತ್ರಾ ದಿವಸಗಳಲ್ಲಿ ನಮ್ಮ ಜಿಲ್ಲೆಯ ಎಲ್ಲಾ ಕಡೆಗಳಿಂದಲೂ ಸ್ಪೆಶಲು ಸರ್ವಿಸುಗಳನ್ನು ಚಾಲುಮಾಡುವ ಯೋಗ್ಯ ಏರ್ಪಾಡನ್ನು ಮಾಡಿರುತ್ತದೆ

ಹೆಚ್ಚಿನ ವಿವರಕ್ಕೆ ಈ ಕೆಳಗಿನ ಸಂಸ್ಥೆಗಳ ಜೊಂಟ್ ಮೆನೇಜರವರಿಗೆ ಬರೆದು ಅಥವಾ ಸ್ವತಃ ಕೇಳಿ ತಿಳಿಕೊಳ್ಳುವುದು—

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಕಣ್ಣುಗಳು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು ಕಾಲುಗಳು ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಣಕಾಲು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಇಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ಕ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪನಿಯಲ್ಲಿ ದೊರೆಯುವುದು

HOUNSA

ಹಂಸಾ ಸ್ನೋ
ಮತ್ತು
ಬ್ರಿಲ್ಲಂಟೈನ್
ಉಪಯೋಗಿಸಿರಿ

ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು.

ಮದನಕಾಮೇಶ್ವರಿ ಲೇಹ



ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ತೇಜ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಿಡೇಪಿ.
P. O, Peridepi. (ಸೆಲ್ಲಿಗ್ರು ಡಿ.)

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ಕರದ ಗುಡ್ಡು ಮುಡಿಗೆ	1 9 0	1—10—0
,, ದುಯಂ ,, ,,		
,, ಅವ್ವಲ್ ಸುಗ್ಗಿ ,,		—
,, ದುಯಂ ,, ,,		
ಅಕ್ಕಿ ಅವ್ವಲ್ ಗುಡ್ಡು ,,	5—0-0	
,, ದುಯಂ ,, ,,	4—12—0	
,, ಅವ್ವಲ್ ಸುಗ್ಗಿ ,,	4—11—0	4—11—
,, ದುಯಂ ,, ,,	4—6—0	4—8—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	30—0—0	45—0—0
,, ಸಿಪ್ಪೆ ಇದ್ದದು ,,	33—0—0	48—0—0
ಕೊಬ್ಬರಿ ಆಫೀಸು ಖಂಡಿಗೆ	62—8—0	—
,, ದಿಲ್‌ವಸಂದಿ ,,	—	—
ತೆಂಗಿನ ಎಣ್ಣೆ ಮಣಕ್ಕೆ	4 5—0	4—5—0
ಸಿಪ್ಪೆಯಿದ್ದ ಅಡಿಕೆ 1000ಕ್ಕೆ	1—12—0	2—8—0
ಗೇರುಬೀಜ ಮುಡಿಗೆ	3—12—0	4—0—0
ಕಬ್ಬಿನ ಬೆಲ್ಲ ಖಂಡಿಗೆ	37—8—0	42—8—0
ಒಳ್ಳೇಮೆಣಸು ಹಂದ್ರಡ್ಡೇಟಿಗೆ	15—0—0	16—8 0

Date 15-12-1939 ವಾರ್ಷಿಕ ಚಂದಾ ರೂ. 2-0-0 ಅಂಚೆ ವೆಚ್ಚ ಸೇರಿ ರೂ.2-13-0 Regd.No. M 3406

ಸ್ವದೇಶಾಭಿಮಾನಿ

SWADESHABHIMANI

ಸಂಪುಟ 38] ತಾರೀಕು 15-12-1939 [ಸಂಚಿಕೆ 49

The Bombay Life Assurance Company, Ltd.,

(Estd. 1908)

COMPARE

Your Life Assurance with any other property you possess

What is its Guaranteed Value

If you live-today-a few years more-when you are old?
If you die-to your family and dependants?

REMEMBER THAT

If you live, Life Insurance takes the place of your professional income during your old age

If you die, it provides your family with enough income for their maintenance and the education of your children.

'BOMBAY LIFE' offers all that is best in LIFE ASSURANCE

1938 RECORD

Completed Business	Rs	1,44,91,000
Life Assurance Fund	Rs	1 17,69,748
Total Assets	Rs	1,31,28 998

To insure or to represent it pays you to consult

KOCHIKAR BROTHERS LTD.,

MADRAS BRANCH SECRETARIES,
Bombay Life Building,
Sir Lalubhai Samaldas Road,
Gandhi Nagar, UDIPI

OR ANY OF THEIR FOLLOWING OFFICES,

Puthiyara Calicut — Car Street Mangalore — Viswesvarapuram Circle, Bangalore City — Post Box No 33 Mount Road Madras

Gautam Nivas Charni Road, Girgaum, Bombay No 4 — Central Station Road Trivandrum

PHYSICAL FITNESS

is the first essential in games and in every social activity.

You need not worry hereafter for your impaired vitality premature old age and nervous break-down if you try

"BHUVANENDRA AMRITHPRASH"

which will tone the nervous system, build healthy tissues and enrich the blood.

Thus keeps you fresh and sprightly.

Bhuvanendra Products, Ltd.,
Katapady, S. Kanara.
(BRANCH—KUMTA, N KANARA)
Stockist. U. Panduranga Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ, ವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್
ಕಟಪಾಡಿ,- ದ ಕನ್ನಡ

ಸ್ಥಳೀಯ ಸ್ಟೋಕಿಸ್ಟರು (ಬ್ರಾಂಚ್: ಕುಮಟೆ, ಉತ್ತರ ಕನ್ನಡ)
ಯು ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು

Edited Printed & Published by A. S. Kamath at the Sharada Press, Car Street, Mangalore

ESTD. 1906

ಸ್ವದೇಶಾಭಿಮಾನಿ

SWADESHABHIMANI

ಸಾಂಚಿಯ ಸಾರನಾಥ ಸ್ತೂಪ

★ KANNADA ILLUSTRATED WEEKLY ★

ಸ್ವದೇಶಾಭಿಮಾನಿ

SWADESHABHIMANI

ಸಂಪುಟ ೫೫] ಮಾರ್ಚಿ ೧೬—೧೯—೧೯೩೯ [ಸಂಚಿಕೆ ೪೨

The Bombay Life Assurance Company, Ltd.

(Estd. 1908)

COMPARE

Your Life Assurance with any other property you possess

What is its Guaranteed Value

If you live—today—a few years more—when you are old?

If you die—to your family and dependants?

REMEMBER THAT

If you live, Life Insurance takes the place of your professional income during your old age.

If you die, it provides your family with enough income for their maintenance and the education of your children.

"BOMBAY LIFE" offers all that is best in LIFE ASSURANCE.

1938 RECORD

Completed Business	Rs.	1,44,91,000
Life Assurance Fund	Rs.	1,17,69,748
Total Assets	Rs.	1,31,28,998

To insure or to represent it pays you to consult

KOCHIKAR BROTHERS LTD.,

MADRAS BRANCH SECRETARIES,

Bombay Life Building,

Sir Lalubhai Samaldas Road,

Gandhi Nagar, UDIPI

OR ANY OF THEIR FOLLOWING OFFICES,

Puthiyara, Calicut. — Car Street, Mangalore. — Visweswarapuram Circle, Bangalore City. — Post Box No. 337 Mount Road, Madras.

Gautam Nivas, Charni Road, Girgaum, Bombay No. 4. — Central Station Road, Trivandrum.

PHYSICAL FITNESS

is the first essential in games and in every social activity.

You need not worry hereafter for your impaired vitality premature old age and nervous break-down if you try

"BHUVANENDRA AMRITHPRASH"

which will tone the nervous system, build healthy tissues and enrich the blood.

Thus keeps you fresh and sprightly.

Bhuvanendra Products, Ltd.,

Katapady, S. Kanara.

(BRANCH—KUMTA, N. KANARA.)

Stockist: U. Panduranga Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು. ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ

ಕಟಪಾಡಿ,— ದ. ಕನ್ನಡ

ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟೆ, ಉತ್ತರ ಕನ್ನಡ)
ಯು. ಪಾಂಡುರಂಗ ನಾಯ್ಕ್, ರಥಬೀದಿ, ಮಂಗಳೂರು

Edited Printed & Published by A. S. Kamath at the Sharada Press, Car Street, Mangalore

MISSING
22 DEC. 1939

MISSING
22 DEC. 1939

ESTD. 1906

ಸ್ವದೇಶಾಭಿಮಾನಿ

SWADESHABHIMANI

ಸಾಂಚಿಯ ಸಾರನಾಥ ಸ್ತೂಪ

★ KANNADA ILLUSTRATED WEEKLY ★

ಜಾತೀಯವಾದಿಗಳನ್ನು ಹಿಂದಿಟ್ಟು ಸ್ವಾತಂತ್ರ್ಯವಾದಿಗಳು ಮುಂದೆ ಬರಬೇಕು

ಭಾರತದ ಭವಿಷ್ಯತ್ತು ಉಜ್ವಲವಾಗುವ ಯೋಚನೆಯಿಂದ ಹೇಗಾಗಬೇಕು?



ಸ್ವಾತಂತ್ರ್ಯ ಆಂದೋಲನದ ದುರ್ಘಾಗ್ನಿದಿಂದ ಜಾತೀಯ ಭೂತದ ಹಾವಳಿಯು ಈಗ ಮಿತಿಮೀರಿರುವುದು. ಈ ಭೂತದ ಉಚ್ಚಾಟನೆಗೆ ಬಹಳ ಪ್ರಯತ್ನಗಳು ನಡೆದಿವೆ. ಆದರೆ ಅವುಗಳಲ್ಲಿ ಯಾವುವೂ ಸಫಲವಾಗಿರುವುದಿಲ್ಲ. ಈ ಭೂತದ ಹಾವಳಿಯಿಂದ ಮುಸ್ಲಿಮರ ಮಾರ್ಗವು ತಡೆದು ಹೋಗಿರುವುದು

ಏಕೆ ಹೀಗಾಗಿದೆ? ಇದನ್ನು ಪ್ರತಿಯೊಬ್ಬ ದೇಶ ಹಿತೈಷಿಯೂ ಸ್ವಲ್ಪ ಚಿಂತಿಸಬೇಕಾಗಿರುವುದು ಏಕಂದರೆ ಜಾತೀಯ ಭೂತದ ಉಚ್ಚಾಟನೆಯಾಗದೆ ದೇಶೋದ್ಧಾರವು ಬೇರೆ ಯಾವ ಉಪಾಯದಿಂದಲೂ ಸಾಧ್ಯವಿಲ್ಲ ಕೆಲವರು ಇದನ್ನು ಪ್ರಾಂತಿಕ ಸಮಸ್ಯೆಯನ್ನಾಗಿ ತಿಳಿಯಬೇಕೆನ್ನುತ್ತಾರೆ ಮತ್ತೆ ಕೆಲವರು ಇದನ್ನು ಅಖಿಲ ಭಾರತ ಪ್ರಶ್ನೆಯನ್ನಾಗಿ ತಿಳಿಯಬೇಕೆನ್ನುತ್ತಾರೆ ಕಾಂಗ್ರೆಸೂ, ಮುಸ್ಲಿಂಲೀಗೂ ಜಾತೀಯ ಪ್ರಶ್ನೆಯನ್ನು ಅಖಿಲ ಭಾರತೀಯ ಸಮಸ್ಯೆಯನ್ನಾಗಿ ತಿಳಕೊಂಡಿವೆ ಆದರೆ ಕಾಂಗ್ರೆಸ್‌ನಂಥ ರಾಜಕೀಯ ಸಂಸ್ಥೆಯು ಮುಸ್ಲಿಂಲೀಗಿನಂಥ ಜಾತಿ ಸಂಸ್ಥೆಯೊಡನೆ ಒಡಂಬಡಿಕೆ ಮಾಡಿಕೊಳ್ಳಲಿಕ್ಕೆ ಮಾಡಿದ ಪ್ರಯತ್ನಗಳೆಲ್ಲ ವಿಫಲವಾಗಿರುವುವು ಯಾಕಂದರೆ ಜಾತೀಯ ಸಮಸ್ಯೆಯು ಪ್ರಾಂತಿಕ ಅಥವಾ ಅಖಿಲ ಭಾರತೀಯ ಪ್ರಶ್ನೆಯೆಂದು ಇವು ಮಾಡಿದ ಪ್ರಯತ್ನಗಳಲ್ಲಿ ಯಾವುವೂ ಸಮರ್ಪಕವಾಗಿರುವುದಿಲ್ಲ

ರಾಜಕೀಯ ಮುಂದಾಳುಗಳ ಕರ್ತವ್ಯ

ಬೇರೆ ಬೇರೆ ಜಾತಿ ಮತ ಪಂಗಡಗಳ ಹಿತಾಸಕ್ತಿಗಳು ಕೆಲವು ಮಟ್ಟಿಗೆ ಭಿನ್ನ ಭಿನ್ನವಾಗಿರುತ್ತವೆ ಎಂಬುದನ್ನು ಎಲ್ಲರೂ ಒಪ್ಪುವುದೇಕಾಗಿದೆ ಯಾರು ಇದನ್ನು ಒಪ್ಪುವುದಿಲ್ಲವೋ ಅವರಿಗೆ ಪರಿಸ್ಥಿತಿಯ ಪರಿಜ್ಞಾನವು ಸ್ವಲ್ಪ ಮಾತ್ರವಾದರೂ ಇರುವುದಿಲ್ಲವೆನ್ನಬಹುದು. ಆದರೆ ಈ ಹಿತಾಸಕ್ತಿಗಳು ಎಷ್ಟುಮಾತ್ರಕ್ಕೂ ದೇಶದ ರಾಜಕೀಯ ಪ್ರಗತಿಗೆ ವಿಘ್ನಗಳನ್ನು ತಂದು ಹೊಡೆಯಕೂಡದು. ಅವು ದೇಶದ ಮುಸ್ಲಿಮರು ಸ್ವತ್ಯಕ್ತಿಯನ್ನು ಕೆಡಿಯುವುದಾದರೆ ಹಿಂದೂ ಮುಸಲ್ಮಾನರಲ್ಲದ ಮುಸಲ್ಮಾನ ಪ್ರಜೆಗಳು ರಾಜಕೀಯ ದೃಷ್ಟಿಯು ಒಂದೇ ಆಗಿರಬೇಕು. ಏಕಂದರೆ ಅನ್ನ ಬಟ್ಟೆಯ ಕೊರತೆಯಿಂದ ಹಿಂದುಗಳಂತೆ ಮುಸಲ್ಮಾನರೂ ಅದೇರಂತೆ ಇತರರೂ ಒಂದೇ ರೀತಿಯಿಂದ ಪೀಡಿತರಾಗಿದ್ದಾರೆ. ದೇಶವು ರಾಜಕೀಯ ಸ್ವಾತಂತ್ರ್ಯವನ್ನು ಪ್ರಾಪ್ತಮಾಡಿಕೊಳ್ಳದೆ ಆದಕ್ಕೆ ಆರ್ಥಿಕ ಸ್ವಾತಂತ್ರ್ಯವು ಪ್ರಾಪ್ತವಾಗುವುದಿಲ್ಲ. ಅದು ಆಗದೆ ಅನ್ನ ಬಟ್ಟೆಯ ಪ್ರಶ್ನೆಯನ್ನು ಬಿಡಿಸಲಿಕ್ಕಾಗುವುದಿಲ್ಲ ಆದುದರಿಂದ ಎಲ್ಲ ಜಾತಿ ಮತ ಪಂಗಡಗಳು ಭಿನ್ನ ಭಾವವನ್ನಿಟ್ಟುಕೊಳ್ಳದೆ ದೇಶದ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಪ್ರಯತ್ನಿಸಿ ತಮ್ಮ ಪ್ರಯತ್ನಗಳಲ್ಲಿ ಸಫಲರಾಗಬೇಕಾದದ್ದು ಅಗತ್ಯವಾಗಿದೆ ದೇಶದ ಮುಂದೆ ರಾಜಕೀಯ ಸಮಸ್ಯೆಯು ಪ್ರಧಾನವಾಗಿರಬೇಕು ಜಾತೀಯ ಸಮಸ್ಯೆಯು ಗೌಣವಾಗಿದೆ ಆದುದರಿಂದ ಜಾತಿವಾದಿಗಳೊಡನೆ ಜಾತೀಯ ಸಮಸ್ಯೆಯ ಮಾತನ್ನೆತ್ತುವುದು ಗುಡ್ಡಕ್ಕೆ ಮಣ್ಣನ್ನು ಹೊತ್ತಂತಾಗಿರುವುದು ಯದ್ವಾತದ್ವಾ ತಿಳಕೊಂಡಿರುವ, ಅಂದರೆ ಜಾತೀಯ ಪ್ರಶ್ನೆಯನ್ನು ಪ್ರಧಾನವಾಗಿಯೂ, ರಾಜಕೀಯ ಪ್ರಶ್ನೆಯನ್ನು ಗೌಣವಾಗಿಯೂ ತಿಳಕೊಂಡಿರುವ ಜಾತಿ ವಾದಿಗಳು ತಮ್ಮ ಫಲವನ್ನು ಬಿಟ್ಟು ಕೊಡುವುದು ಅವರೂಪ ಆದುದರಿಂದ ಅವರೊಡನೆ ಒಡಂಬಡಿಕೆಯಾಗಲಿಕ್ಕೆ ಶತಮಾನಗಳೇ ಕಳೆದು ಹೋಗಬೇಕಾದೀತು. ಇದನ್ನು ನಮ್ಮ ರಾಜಕೀಯ ಮುಖಂಡರು ತಿಳಕೊಳ್ಳುವದು ಅವರ ಕರ್ತವ್ಯವಾಗಿದೆ

ಜಾತಿವಾದಿಗಳು ಮುಸಲ್ಮಾನರಲ್ಲಿಯಂತೆ ಹಿಂದುಗಳಲ್ಲೂ ಇದ್ದಾರೆ. ಸ್ವಾತಂತ್ರ್ಯವಾದಿಗಳು ಹಿಂದುಗಳಲ್ಲಿರುವಂತೆ ಮುಸಲ್ಮಾನರಲ್ಲಿಯೂ ಇದ್ದಾರೆ. ಜಾತಿವಾದಿಗಳನ್ನು ಅವರವ್ವಕ್ಕೆ ಬಿಟ್ಟು ಬಿಟ್ಟು ಎರಡೂ ಸಮಾಜಗಳ ಸ್ವಾತಂತ್ರ್ಯವಾದಿಗಳು ಜಾತೀಯ ಸಮಸ್ಯೆಯ ಕುರಿತು ಒಂದು ಇತ್ಯರ್ಥಕ್ಕೆ ಬರುವುದು ಸುಲಭ, ಅವರು ಇತ್ಯರ್ಥಕ್ಕೆ ಬರುವುದು ಅಗತ್ಯ. ದೇಶದ ಉಜ್ವಲ ಭವಿಷ್ಯವು ಜಾತಿವಾದಿಗಳನ್ನಲ್ಲ, ಆದರೆ ಸ್ವಾತಂತ್ರ್ಯವಾದಿಗಳನ್ನು ಅವಲಂಬಿಸಿ ಇದೆ. ಯಾಕಂದರೆ ದೇಶಕ್ಕೆ ಸ್ವಾತಂತ್ರ್ಯವು ಪ್ರಾಪ್ತವಾದಾಗ ಎಲ್ಲರನ್ನು ಪೀಡಿಸುವ ಅನ್ನ ಬಟ್ಟೆಗಳ ಸಮಸ್ಯೆಯ ಮೊದಲು ಬಿಡಿಸಲ್ಪಡುತ್ತದೆ. ಅದು ಬಿಡಿಸಲ್ಪಟ್ಟಾಗ ಜಾತೀಯ ಸಮಸ್ಯೆಗೆ ಪ್ರಾಧಾನ್ಯವೇ ಉಳಿಯುವುದಿಲ್ಲ. ಅದು ಇದ್ದರೂ ಇಲ್ಲದಂತೆ ಸುಲಭೀಕರಣಕ್ಕೆ ಬರುತ್ತದೆ.

ಶಾಸ್ತ್ರಕ್ಕೋಸ್ಕರ ಬಾಧೆಯನ್ನು ದೂರವಾಗಿರಿಸಿ!

ಸಣ್ಣ ಸಣ್ಣ ಕೊಡಗಳನ್ನು ಮುಚ್ಚಲೂ ಸ್ವಚ್ಛಗೊಳಿಸಿ ದೇಹದ ಕೆಲವು ಕೆಲಸ ಮಾಡಲು ಪ್ರೋತ್ಸಾಹಿಸಲಿಕ್ಕಾಗಿ ಕೆಲವರ ಶ್ರಮ ಸಾಕಷ್ಟು ಶ್ವಾಸಕೋಶಗಳನ್ನು ಮೂತ್ರಗಳನ್ನು ಕೆಲಸಗಳಿಗೆ ಈ ಎಲ್ಲವೂ ಕೆಲಸ ಮಾಡಲಿಕ್ಕಾಗಿ ಕೆಲಸ ಮಾಡಿಸುವುದು ಮೂರನೆಯ ನಿಯಮವು ಸಂಭವಿಸಬಹುದಾದಲ್ಲಿ ಪಡೆಗಟ್ಟುವುದು

ಕೆಮ್ಮು ನಿಮ್ಮ ಜೀವನಕ್ಕೆ ಕರುಗುತ್ತಿರುವಾಗ ಅದರಿಂದ ಕೊಂಚ ಔಷಧೀಯ ಗುಣವು ಶ್ವಾಸೇಂದ್ರಿಯಗಳನ್ನು ಪ್ರವೇಶಿಸುವದು. ಇದೇಂದ ಶ್ವಾಸೇಂದ್ರಿಯಗಳಿಲ್ಲವೂ ಗುಣಪಡಿಸಿ ಅದರ ಮೇಲಕ್ಕಿರುವ ಜರ್ಮಾದ ಪರೆಯ ಬಾಧೆಯೂ ಕಡಿಮೆಯಾಗುತ್ತದೆ. ಕೆಮ್ಮು ಕೀಟವನ್ನು ನಾಶಪಡಿಸಿ ಕಫದ ಕ್ರಿಮಿಗಳನ್ನು ನಾಶಪಡಿಸಿ ಎಂಥಾ ಕೊಣ ತರದ ಶೀತ ಅಥವಾ ಕೆಮ್ಮನ್ನಾದರೂ ಗುಣಪಡಿಸುವುದು.

ಎಲ್ಲಾ ಔಷಧ ವ್ಯಾಪಾರಿಗಳು ಕೆಮ್ಮನ್ನು ರೂ 1ರಂತೆ ಮಾರುತ್ತಾರೆ.

ಏಜಂಟ್:—

ಮೆಸರ್ಸ್ ದಾಧಾ ಮತ್ತು ಪ ವಾರ್ಕ್‌ಟೌನ್ ವ ದ್ಯಾಸು

ಯಾಂ ಎಗಲೂ ಪೆಪ್ಸನ್ನು ಪಯೋಗಿಸಿರಿ

PEPS

ಕೆ ಮಿನ ಗಳ ಶ್ವಾಸನೀಯ ಮಾತ್ರೆಗಳು

THE

BANK OF MANGALORE LTD.,

MANGALORE

ESTD 19

Branches-

Mudabidri & Padubidri.

Fixed Deposits will be received at very rates of interest

For 3 month		3½%
" 6	"	4%
" 12	"	5%
" 24	" & upw	6%

Interest Payable quarterly

Savings Bank deposit 3½% on daily balances.

All kinds of bankingbusiness transacted

U. K. BHUJANGA NAYAK

CLOTH COMMISSION AGENT

SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ಧೋತಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿರಿ.

MISSING

PAGE 3 TO 8

MISSING

PAGE 3 TO 8

ಜಿಲ್ಲಾ ಸಮಾಚಾರ

ಮಂಗಳೂರು

ನಗರ ಸಭೆ—ಮಂಗಳೂರು ನಗರ ಸಭೆಯು ತಾ. ೧೮ರಂದು ಸಂಜೆ ಚೇರ್ ಮ್ಯಾನರಾದ ಶ್ರೀ ವೆಂಕಟ್ರಾಯ ಬಾಳಿಗರ ಅಧ್ಯಕ್ಷತೆಯಲ್ಲಿ ಸೇರಿತು. ಅದರಲ್ಲಿ ದಿನಕ್ಕೆ ಐದು ತಾಸುಗಳಂತೆ ಶಾಲಾ ಸಮಯವನ್ನೂ-ವರ್ಷಕ್ಕೆ ೨೦೦ ಶಾಲಾ ದಿನಗಳನ್ನೂ ಮಾಡುವ ಸೂಚನೆಯು ಹುದುಗರ ಆಧೋಗ್ಯಕ್ಕೆ ಬಾಧಕವೆಂದೂ, ದಿನಕ್ಕೆ ನಾಲ್ಕು ಗಂಟೆ ತಾಸಿನ ಶಾಲಾ ಸಮಯವೂ ವರ್ಷಕ್ಕೆ ೨೦೦ ದಿನಗಳ ಶಾಲಾ ದಿನಗಳೂ ಆಗಬೇಕೆಂದೂ ನಿರ್ಣಯವಾಯಿತು.

ವೆಬ್‌ಸ್ಟರ್ ವರ್ಕಿನ ಪುನರ್ರಚನೆ—ಬಗ್ಗೆ ಸರ್ಕಾರದಿಂದ ಸಿಗುವ ೫೦,೦೦೦ ರೂಪಾಯಿಗಳ ಸಾಲವನ್ನು ೧೯೪೦ನೇ ಮೊದಲನೆಯ ದಿನ ತೆಗೆಯುವುದಾಗಿ ನಿರ್ಣಯವಾಯಿತು. ಆ ಬಗ್ಗೆ ಹಿಂದಿನ ಅಂದಾಜುಪಟ್ಟಿಯನ್ನು ವಿಮರ್ಶಿಸುವಲ್ಲಿ ಒಂದು ಸಮಿತಿಯು ನಿರ್ಮಿಸಲ್ಪಟ್ಟಿತು.

ತೆರಿಗೆದಾರರ ಸಭೆ—ಮಂಗಳೂರು ಮುನಿಸಿಪಲ್ ತೆರಿಗೆದಾರರ ಸಂಘದ ಸಭೆಯೊಂದು, ಕಳೆದ ಆದಿತ್ಯವಾರ ಶ್ರೀ ಎಸ್ ಜಿ ಪಿರೆಬೆಲ್ಲೊರವರ ಅಧ್ಯಕ್ಷತೆಯಲ್ಲಿ ಫಲ್ಗುಣಿಸಲ್ಲಿ ಜರುಗಿತು.

ಕೇಪ್ಟನ್ ಕನಕಸಭಾಪತಿಯವರು—ಸಂಸ್ಥಾನ ಅಸಿಸ್ಟಾಂಟ್ ಡೈರೆಕ್ಟರ್ ಆಫ್ ಪಬ್ಲಿಕ್ ಹೆಲ್ತ್ ಆದ ಕೇಪ್ಟನ್ ಕನಕ ಸಭಾಪತಿಯವರು, ತಾ ೧೬ರಂದು ಮಂಗಳೂರಿಗೆ ದಯಮಾಡಿಸಿದ್ದು, ಜಿಲ್ಲಾ ಹೆಲ್ತ್ ಆಫೀಸರರಾದ ಶ್ರೀ ವೈ ಶಿವರಾಮಯ್ಯನವರೊಂದಿಗೆ ಜಿಲ್ಲೆಯ ಮಂಗಳೂರು, ಉಡುಪಿ ಮತ್ತು ಕಾರ್ಕಳ ತಾಲೂಕುಗಳಲ್ಲಿಯ ಎರಡೆರಡು ಗ್ರಾಮಗಳನ್ನು ಸಂದರ್ಶಿಸಿ, ಗ್ರಾಮಗಳ ಸ್ಥಿತಿಗಳನ್ನು ಸ್ವತಃ ತಿಳಿದುಕೊಂಡರು.

ಮಜೂರ ಮುಖಂಡರು—ಮುಲಾಡಿನ ಮಜೂರ ಮುಖಂಡರೆಂಬುವರಾದ ಶ್ರೀ ಮಂಜುನಾಥಯಾದಿ ಕಳೆದ ಶುಕ್ರವಾರ ಮಂಗಳೂರಿಗೆ ಬಂದಿದ್ದು, ಶನಿವಾರ ಸಂಜೆ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಮಜೂರರಿಗಾಗಿ ಅಭ್ಯಾಸಗೋಷ್ಠಿಗಳನ್ನು ನಡೆಸಿ, ಅವರಿಗೆ ಪ್ರೌಢಕದ ಕೆಲಸಗಾರರ ಸ್ಥಿತಿ ಹಾಗೂ ಮಜೂರ ಕಾಯಿದೆಗಳ ಪರಿಚಯ ಮಾಡಿಕೊಟ್ಟರು.

ಕೆನರಾ ಹೈಸ್ಕೂಲು—ಸ್ಥಳೀಯ ಕೆನರಾ ಹೈಸ್ಕೂಲಿನ ವರ್ಧಂತಿ ಮಹೋತ್ಸವವು ತಾ. ೨೬ನೇ ಮಂಗಳವಾರ ಸಂಜೆ ೫ಗಂಟೆಗೆ ಶ್ರೀ ಬಿ. ವೆಂಕಟ್ರಾಯ ಬಾಳಿಗ, ಬಿ ಎ ಬಿ ಎಲ್., ಎಂ. ಎಲ್ ಎ, ಮುನಿಸಿಪಲ್ ಚೆಯರ್‌ಮೇನ್ ಇವರ ಅಧ್ಯಕ್ಷತೆಯಲ್ಲಿ ಜರುಗಿತು.

ಶಾಲೆಯ ಮುಖ್ಯೋಪಾಧ್ಯಾಯರಿಂದ ಗತ ವರ್ಷದ ವರದಿ ವಾಚನ, ಆಟ ಮತ್ತು ಪಾಟಗಳ ಸ್ಪರ್ಧೆಯಲ್ಲಿ ಜಯಶೀಲರಾದವರಿಗೆ ಬಹುಮಾನವಿತರಣೆ ಸಮಾರಂಭವೂ ಅಧ್ಯಕ್ಷರ ಭಾಷಣವು ನಡೆದ ಮೇಲೆ ಹಲವು ನಾಟಕ ಪ್ರಹಸನಗಳಿಂದ ಕಾರ್ಯಕ್ರಮವು ಸಾಂಗವಾಗಿ ಕೊನೆಗೊಂಡಿತು. ಮರುದಿನ ಹಳೆ ವಿದ್ಯಾರ್ಥಿಗಳ ಸಭೆಯೂ ರಾತ್ರಿ ಔತಣವೂ ಜರುಗಿತು.

ಕಾಂಗ್ರೆಸು ಪ್ರತಿನಿಧಿ ಚುನಾವಣೆ—ರಾಮಗಿರಿ ಕಾಂಗ್ರೆಸ ಅಧಿವೇಶನದ ಪ್ರತಿನಿಧಿಗಳ ಚುನಾವಣೆಯು ಇದೇ ಜನೇವರಿ ತಿಂಗಳಲ್ಲಿ ನಡೆಯುವುದಿದ್ದು ಆ ಸಂಬಂಧ ಮಂಗಳೂರು ಜಿಲ್ಲೆಯಲ್ಲಿ ಚುನಾವಣೆಗಳನ್ನು ಯೋಗ್ಯ ರೀತಿ ಯಿಂದ ನಾಗಿಸಲು ಶ್ರೀ ಎನ್. ಕೇಶವಗಿರಿಯಾಯ ಜಿಲ್ಲಾ ಚುನಾವಣಾ ಅಧಿಕಾರಿಗಳಾಗಿ ನಿಯಮಿಸಲ್ಪಟ್ಟಿರುವರು.

ಕೊಂಕಣಿ ಭಾಷಾಪ್ರೇಮಿಗಳಲ್ಲಿ ವಿನಂತಿ

ಕಾರವಾರದಲ್ಲಿ ಸೇರಿದ ಪ್ರಥಮ ಕೊಂಕಣಿ ಸಂಸ್ಥಿತ್ತನ ಕಾರ್ಯದರ್ಶಿಗಳಾದ ಶ್ರೀ. ಎ. ಎಂ. ಶ್ಯಾಣಭಾಗ್ ವಕೀಲ್ ಇವರು ಆ ದಿನದ ಸಂಸ್ಥತ್ತಿನ ನಿರ್ಣಯವಾದ ಕೊಂಕಣಿಗನುಸಾರವಾಗಿ ಕೆಲಸ ಮಾಡಲು ಇಲ್ಲಿಗೆ ಬಂದಿರುವರು. ಆದುದರಿಂದ ತಾ ೨೮-೧೨ ಶುಕ್ರವಾರದಂದು ಸಂಜೆ ೫ ಗಂಟೆಗೆ ಕೆನರಾ ಹೈಸ್ಕೂಲ್ ಭವನೆಂದ್ರ ಸಭಾ ಭವನದಲ್ಲಿ ಕೊಂಕಣಿ ಭಾಷಾಪ್ರೇಮಿಗಳ ಸಭೆಯಿದೆ ನಿವೃತ್ತ ಡಿ ಜಡ್ಜರಾದ ಶ್ರೀ. ಎಂ ನರಸಿಂಗರಾಯರು ಅಧ್ಯಕ್ಷತೆ ವಹಿಸಿಲು ಒಪ್ಪಿರುವರೆಂದೂ, ಆದುದರಿಂದ ಎಲ್ಲರಿಗೂ ಸ್ವಾಗತವಿದೆಯೆಂದೂ ಶ್ರೀ ಎ ಶ್ರೀನಿವಾಸ ಪೈಗಳು ತಿಳಿಸುತ್ತಾರೆ

ಕಾರ್ಕಳ

ಮಂಗಳೂರು ಕೇಂದ್ರದಲ್ಲಿ ಇಲ್ಲಿಂದ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ರಾಷ್ಟ್ರಭಾಷಾ ಪ್ರವೇಶಿಕ ಮತ್ತು ವಿಶಾರದ ಪರೀಕ್ಷೆಗಳನ್ನು ಕಳೆದ ನವಂಬರ ತಿಂಗಳಲ್ಲಿ ಕೊಟ್ಟ ವರು ಮುಂದಿಯ ಪೈಕಿ ಶ್ರೀಗಳಾದ ಕಮಲಾಕ್ಷ ಭಟ್ಟ, ಆರ್ ಪೈಕುಂರ ಶೆಣೈ ಮತ್ತು ಕೆ ರಮಾನಾಥ ಭಟ್ಟ ಇವರು ವಿಶಾರದ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆಂದು ಸ್ಥಳೀಯ ಹಿಂದೀ ಪ್ರಚಾರಕ ಶ್ರೀ ಕಟಲಾಡಿ ಶ್ರೀನಿವಾಸ ಶೆಣೈಯವರು ತಿಳಿಸುತ್ತಾರೆ

ಶ್ರೀ ವೆಂಕಟ್ರಮಣ ವಿದ್ಯಾ ಇಲಾಖಾ ಬೋರ್ಡಿನ ಹೊಸ ಸದಸ್ಯರ ಹಿಂದು ಸಭೆಯು ಕಳೆದ ವಾರ ಕೂಡಿ ಶ್ರೀ ಕೆ ಮಂಜುನಾಥ ಕಾಮತ ರವರು ಎರಡನೆ ಬಾರಿಗೆ ಆ ಬೋರ್ಡಿನ ಸದಸ್ಯರಾಗಿ ಸರ್ವಾನುಮತಿಯಿಂದ ಆಯ್ಕೆಮಾಡಿದರು

ಕಾಸರಗೋಡು

ಶಿಶುಸಪ್ತಾಹ—ಸೆರಡಾಲ ಬೋರ್ಡಿನ ಶಾಲೆ ಮತ್ತು ೨೦ ಎಸ್ ಕಾಲೇಜು ಇವ ರಡು ಶಾಲೆಗಳ ಸಹಕಾರದಿಂದ, ಬದಿಯಡ್ಕದಲ್ಲಿ ಬದಿಯಡ್ಕ ಪಂಚಾಯತ ಬೋರ್ಡಿನ ಸಹಾಯದಿಂದ ಆರೋಗ್ಯ ಮತ್ತು ಶಿಶುಸಪ್ತಾಹಗಳು ಅನೇಕ ಕಾರ್ಯಕ್ರಮಗಳಿಂದ ಯಶಸ್ವಿಯಾಗಿ ಜರುಗಿತು. ಅನೇಕ ಸ್ಪರ್ಧೆಗಳು ವಿವಿಧ ವಿನೋದಗಳೂ ಏರ್ಪಡಿಸಲಾಗಿತ್ತು. ಬಾಲಕರಿಗೆಬಹುಮಾನ ವಿತರಣೆಗಳನ್ನು ಮಾಡಲಾಯಿತು

ಹಳೆಯ ವಿದ್ಯಾರ್ಥಿ ಸಂಘ—ಸೆರ್ಡಾಲ ಎಂ ಎಸ್ ಕಾಲೇಜಿನ ಹಳೆಯ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಶ್ರೀ ಕಡಂಗೋಡ್ಲು ಶಂಕರ ಭಟ್ಟರ ಅಧ್ಯಕ್ಷತೆಯಲ್ಲಿ ತಾ ೨೬ರಂದು ಬಹಳ ವಿಜೃಂಭಣೆಯಿಂದ ನೆರವೇರಿತು. ಅಧ್ಯಕ್ಷರು ತಮ್ಮ ವಿಚಾರ ಪರಿಪೂರ್ಣವಾದ ಭಾಷಣದಲ್ಲಿ ಪೌರಸ್ತ್ಯ ವಿದ್ಯಾ ಸಂಸ್ಕೃತಿಗಳ ಮಹತ್ವವನ್ನು ವರ್ಣಿಸಿ, ಅದರ ಪಾಲನೆಗಾಗಿ ಮಾಡತಕ್ಕ ಕರ್ತವ್ಯದ ಕುರಿತೂ, ಮೊತ್ತ ಶಾಲಾ ಮಂದಿರಕ್ಕೆ ಹಳೆಕ ವಿದ್ಯಾರ್ಥಿಗಳು ನಲ್ಲಿಸತಕ್ಕ ಸೇವೆಯ ಕುರಿತೂ ಅನೇಕ ಉಪಯುಕ್ತ ಸಲಹೆಗಳನ್ನಿತ್ತರು ರಾತ್ರಿ ನಾಟಕ ಮೊದಲಾದ ವಿವಿಧ ವಿನೋದಾವಳಿಗಳಿದ್ದುವು.

ಕಾಲೇಜ್ ವರ್ಧಂತಿ—ತಾ ೨೪ ರಂದು ಸೆರ್ಡಾಲ ಎಂ ಎಸ್ ಕಾಲೇಜಿನ ವರ್ಧಂತ್ಯುತ್ಸವವು ಜಿಲ್ಲಾ ಜಡ್ಜರಾದ ಶ್ರೀ ಪಿ. ರಾಜಗೋಪಾಲಾಚಾರ್ಯರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿತು. ಪ್ರಿನ್ಸಿಪಾಲರಿಂದ ವರದಿವಾಚನ, ಮಹಾನೀಯರ ಭಾಷಣ ಅಧ್ಯಕ್ಷ ಭಾಷಣಗಳೇ ಮೊದಲಾದವುಗಳು ನಡೆದ ಮೇಲೆ ಶಾಲಾ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆಗಳಾದುವು. ರಾತ್ರಿ ನಾಟಕ ವಿವಿಧ ವಿನೋದಾವಳಿಗಳಿದ್ದುವು.

ಕುಂದಾಪುರ

ಪಂಚಾಯತು ಬೋರ್ಡು, ಬೈಂದೂರು—ಬೈಂದೂರು ಸರ್ಕಲಿನ ೪೦ ಗ್ರಾಮಗಳಲ್ಲಿ ೧೩ ಗ್ರಾಮಗಳ ಪಂಚಾಯತು ಬೋರ್ಡುಗಳ ಮೆಂಬರರೂ ಮತ್ತು ಎಲ್ಲಾ ಗ್ರಾಮಗಳ ಗ್ರಾಮ ಉದ್ಯೋಗಸ್ಥರೂ, ಸದ್ರಿ ಸರ್ಕಲಿನ ಜಿಲ್ಲಾ ಬೋರ್ಡು ಮೆಂಬರ್ ಶ್ರೀ. ಬಿ. ಸುಬ್ಬಣ್ಣ ಶೆಟ್ರು ಕೂಡಾವಿಳಿಯಿಂದ ಕಳೆದ ಜನವರಿ ೩೧ನೇ ವಾರದ ಪ್ರಾರಂಭದ ೭ ದಿವಸಗಳ ವರೆಗೆ ಸೂರೆತ್ ಜಿಲ್ಲಾ ಬೋರ್ಡಿನ ಗ್ರಾಮೋದ್ಧಾರ ವಾರವನ್ನು ಆಚರಿಸುವುದೆಂತ ನಿಶ್ಚಯಿಸಿದ್ದಾರೆ ಬೈಂದೂರು ಸರ್ಕಲಿನ ಈಗಿರುವ ೧೩ ಗ್ರಾಮಗಳ ಪಂಚಾಯತ ಬೋರ್ಡುಗಳಲ್ಲದೆ ಇನ್ನುಳಿದ ೧೪ ಗ್ರಾಮಗಳಲ್ಲಿ ಗ್ರಾಮ ಪಂಚಾಯತು ಬೋರ್ಡುಗಳನ್ನು ೧೯೪೦ನೇ ಇಸವಿ ಮಾರ್ಚ್-ತಾ ೩೦ರೊಳಗೆ ಸ್ಥಾಪಿಸುವರೆ ಇನ್ಸ್‌ಪೆಕ್ಟರ್ ಆಫ್ ಲೋಕಲ್ ಬೋರ್ಡ್ ಮತ್ತು ಜಿಲ್ಲಾ ಪಂಚಾಯತು ಅಫೀಸರುಗಳ ಮುಖಂಡರು ವ್ಯವಸ್ಥೆ ಮಾಡಿರುವರೆಂದು ತಿಳಿಯುತ್ತೇವೆ.

ರೇಡಿಯೋವ್ಯವಸ್ಥೆ—ದಶಂಬರ ತಾ ೧೯ನೇ ಮಂಗಳವಾರ ಮಧ್ಯಾಹ್ನ ೪ ಗಂಟೆ ಸಮಯ ಬೈಂದೂರು ಸಾರ್ವಜನಿಕ ಸ್ಕೂಲಿನ ಮುಂದಿಗಡೆ ಇರುವ ಬೋರ್ಡು ಮಿಡ್ಲ ಸ್ಕೂಲಿನಲ್ಲಿ ಬೈಂದೂರು ನಡುವಿನ ಉಪ್ಪುಂದ, ಪಡ್ಲಂ ಎಡ್ತರೆ, ತರೂರು ಈ ಎಲ್ಲಾ ಗ್ರಾಮಗಳ ಜನರ ಅಲ್ಲದೆ ಸದ್ರಿ ಶಾಲಾ ವಿದ್ಯಾರ್ಥಿಗಳ ಪ್ರಯೋಜನಾರ್ಥವಾಗಿ ರೇಡಿಯೋ ಯಂತ್ರವನ್ನು ಇರಿಸಲಾಗಿತ್ತು ಈ ಯಂತ್ರದಿಂದ ಪ್ರತಿ ದಿವಸವೂ ಮಧ್ಯಾಹ್ನ ೪ ಗಂಟೆಯಿಂದ ೮ ಗಂಟೆ ವರೆಗೆ ಬೋರ್ಡಿನ ಕೆಲವು ಪೇಡಿಯೋ ಸ್ಟೇಷನುಗಳಿಂದ ವಾರ್ತೆಗಳನ್ನು ಕೇಳುತ್ತ ಗಾಯನಗಳನ್ನು ಮಿಡ್ಲ ಸ್ಕೂಲಿನ ಮುಂಭಾಗದಲ್ಲಿರುವ ಹೊರಬೋಟದಲ್ಲಿ ಜನರು ಕೂಡಿ ಕೇಳುವ ವ್ಯವಸ್ಥೆ ಮಾಡಿದ್ದಾರೆ ಈ ಯಂತ್ರವನ್ನು ತರಿಸಲು ಸಹಾಯ ಮಾಡಿದ ಊರಿನ ಶ್ರೀಮಂತರಿಗೂ ಸಾಹುಕಾರರಿಗೂ, ಸರಕಾರಿ ಮತ್ತು ಜಿಲ್ಲಾ ಬೋರ್ಡು ನೌಕರರಿಗೂ ಶ್ರೀ. ಬಿ ಸುಬ್ಬಣ್ಣ ಶೆಟ್ರು ತ್ತ ವಂದನೆಗಳನ್ನು ತಿಳಿಸುತ್ತಾರೆ—

ಮೆಟರ್ನಿಟಿ ವಾರ್ಡ್—ಬೈಂದೂರು ಲೋಕಲ್ ಫಂಡ್ ಆಸ್ಪತ್ರೆಯ ಕಂಪೋಂದಿನಲ್ಲಿ ಬೈಂದೂರು ಮತ್ತು ಅದರ ಸುತ್ತುಮುತ್ತಲಿನ ಗ್ರಾಮಗಳ ಸಾರ್ವಜನಿಕರ ಸಹಾಯದಿಂದ ಕಟ್ಟಿಸಿದ 'ಮೆಟರ್ನಿಟಿ ವಾರ್ಡ್' ಇದೇ ಬರುವ ಜನವರೀ ತಾರೀಕು ೧೫ ಇನ್ನೂ ೧೯೪೦ ಸೋಮವಾರ ದಿವಸ ಶ್ರೀ. ಸಿ ಬಿ ಶೆಟ್ರು ಎಮ್ ಎಲ್ ಎ ಇವರಿಂದ ತೆರೆಯಲ್ಪಡುವುದು ಈ ಸಮಾರಂಭಕ್ಕೆ ಜಿಲ್ಲೆಯ ಎಲ್ಲಾ ಬೋರ್ಡು ಮೆಂಬರರೂ ಮತ್ತು ಇತರ ಮಹನೀಯರೂ ಬರಬೇಕಾಗಿ ಮೆಟರ್ನಿಟಿ ವಾರ್ಡ್ ಕಮಿಟಿಯ ಪರವಾಗಿ ಶ್ರೀ. ಬಿ ಸುಬ್ಬಣ್ಣ ಶೆಟ್ರು ಈ ಮೂಲಕ ವಿನಂತಿಸಿಕೊಳ್ಳುತ್ತಾರೆ.

ಕೋಟೇಶ್ವರ—ಗೌಡಸಾರಸ್ವತ ಬ್ರಾಹ್ಮಣ ಪೃಂದದವರಿಂದ ಹೊಸತಾಗಿ ಕಟ್ಟಿಸಿದ ದೇವಸ್ಥಾನದಲ್ಲಿ ಇದೇ ಬರುವ ಮಾಘ ಶು ೩ ಯು ಬುಧವಾರ ತಾ. ೧೪—೬—೧೦ ದಿವಸ ಶ್ರೀ ರಾಮದೇವರನ್ನು ಪ್ರತಿಷ್ಠಿಸಬೇಕೆಂತ ಈ ಊರಿನ ಪ್ರಮುಖರ ಸಭೆ ಸೇರಿ ಮುಹೂರ್ತ ನಿಶ್ಚಯಿಸಿ ಆ ಬಗ್ಗೆ ವಿನಂತಿ ಪತ್ರಿಕೆಯನ್ನು ಶ್ರೀ ಸಂಸ್ಥಾನ ಕಾಶಿ ಮಠಾಧೀಶ ಶ್ರೀಮತ್ಸುಶ್ರೀಂದ್ರ ಶ್ರೀ ಪಾದಂಗಳವರ ಸನ್ನಿಧಾನಕ್ಕೆ ಕಳುಹಿಸಿ ಕೊಡೋಣಾಗಿದೆ.

ತೋಟಿಗಳ ಮುಷ್ಕರ—ಉಡುಪಿ ನಗರದ ತೋಟಿಗಳು ಮತ್ತು ಜಾಡಮಾಲಿಗಳು ಕೆಲವೊಂದು ಕಾರಣದಿಂದಾಗಿ ತಾ. ೧೬ರಿಂದ ಮುಷ್ಕರವನ್ನಾರಂಭಿಸಿರುವರು. ಮೂರು ದಿನಗಳ ನಂತರ ಉಡ್ಪಿ ಮುನ್ಸಿಪಲ್ ಅಧಿಕಾರಿಗಳು ಪರಊರಿನಿಂದ ತೋಟಿಗಳನ್ನು ತರಲು ಪ್ರಯತ್ನಿಸಿದ ಫಲವಾಗಿ ಮಂಗಳೂರಿನಿಂದ ೯ ಜನರು ಮತ್ತು ಕಾರ್ಕಳದಿಂದ ೧೧ ಜನರು ಒಟ್ಟಿಗೆ ೨೦ ಜನರು ತರಲ್ಪಟ್ಟು ಕೆಲಸವನ್ನಾರಂಭಿಸಿರುವರು.

ಶ್ರೀ ಎಚ್ ಸುಬ್ಬರಾಯರ ನಿಧನ

ಡಿಸ್ಟ್ರಿಕ್ಟ್ ಬೋರ್ಡಿನ ನಿವೃತ್ತ ಹೆಡ್‌ಕ್ಲಾರ್ಕರಾಗಿದ್ದ ಎಚ್ ಸುಬ್ಬರಾಯರು ತನ್ನ 75ನೇ ವಯಸ್ಸಿನಲ್ಲಿ ತಾ 12-12-39ರಲ್ಲಿ ಕಾರ್ಕಳದಲ್ಲಿ ದಿವಂಗತರಾದರೆಂಬ ವಾರ್ತೆಯು ವಿಷಾದಕರವಿದೆ ಇವರು ತಮ್ಮ ಸರಳ ಸ್ವಭಾವ, ವಿನಯದಿಂದಲೂ ಜನಪ್ರೀತರಾಗಿದ್ದರು ಮೃತರ ಬಂಧುಬಳಗದವರ ದುಃಖದೊಂದಿಗೆ ನಾವೂ ಸಹಭಾಗಿಗಳಾಗಿದ್ದೇವೆ.

ಮೃತರ ಪುತ್ರರಾದ ಶ್ರೀ ಎಚ್ ದೇವರಾಯರು "ನನ್ನ ತಂದೆಯವರ ನಿಧನದ ಕುರಿತು ಸಂಬಂಧಿಕರಿಂದಲೂ, ಸ್ನೇಹಿತರಿಂದಲೂ ದುಃಖ ಸೂಚಕಪತ್ರಗಳು ದಿನಂಪ್ರತಿ ಬರುತ್ತಿವೆ ಅವೆಲ್ಲಾ ಪ್ರತ್ಯೇಕ ಉತ್ತರವೀಯುವುದು ಅಸಾಧ್ಯವಾಗಿದೆ. ಹೀಗೆ ಪತ್ರಬರೆದವರಿಗೆಲ್ಲಾ ನಾನು ಚಿರಋಣಿಯಾಗಿದ್ದೇನೆ" ಎಂದು ತಿಳಿಸುತ್ತಾರೆ

ಕರ್ನಾಟಕ ಬೆಳಗಾವಿ

ಸಾಹಿತ್ಯ ಸಮ್ಮೇಳನ—ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನವು ತಾ ೨೪ರಂದು ಬೆಳಗಾಂವಿಯಲ್ಲಿ ಜರಗಿತು ಸಮಸ್ತ ಕರ್ನಾಟಕದಿಂದ ಹಲವು ಮಂದಿ ಸಾಹಿತಿಗಳು ಸಮ್ಮೇಳನಕ್ಕೆ ಆಗಮಿಸಿದ್ದರು ಸಮ್ಮೇಳನದ ಅಧ್ಯಕ್ಷತೆವಹಿಸಿದ ಶ್ರೀ ಮುದವೀಡು ಕೃಷ್ಣರಾಯರನ್ನು ಸ್ಟೇಷನಲ್ಲಿ ಸ್ವಾಗತಿಸಿ ಮೆರವಣಿಗೆಯಿಂದ ಕೊಂಡೊಯ್ದರು ಹಾದಿಯುದ್ದಕ್ಕೂ ಜಯಘೋಷಗಳು ಕೇಳಬರುತಿದ್ದುವು

ಅಧ್ಯಕ್ಷರೊಡನೆ ಕಳೆದ ವರ್ಷದ ಪರಿಷತ್ತಿನ ಅಧ್ಯಕ್ಷರಾದ ಶ್ರೀ ದಿವಾಕರರೂ ಆಗಮಿಸಿದ್ದರು ಪರಿಷತ್ತಿನ ಸಭಾ ಕಾರ್ಯದ ಪ್ರಾರಂಭದಲ್ಲಿ ಅಧ್ಯಕ್ಷರನ್ನು ಸೂಚಿಸಿ ಅನುಮೋದಿಸುವಾಗ, ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಶ್ರೀ ದ ರಾ ಬೇಂದ್ರೆ, ಶ್ರೀ ದಿವಾಕರ ಮೊದಲಾದವರು ಸಮಯೋಚಿತ ಭಾಷಣಗಳನ್ನು ಮಾಡಿದರು ಸ್ವಾಗತ ಗೀತೆಯು ಹಾಡಲ್ಪಟ್ಟಿತು. ಶ್ರೀ ಎಂ ಪಿ ಪಾಲಿಯವರು ಸ್ವಾಗತ ಭಾಷಣ ಮಾಡಿದರು ಶ್ರೀ ಮುದವೀಡು ಕೃಷ್ಣರಾಯರು ಆಮಂತ್ರಿತರಾದ ಹಲವರ ತಾಸುಗಳ ತನಕ ವಿಚಾರಪರಿಪೂರ್ಣವಾದ ಉದ್ದಾಮ ಭಾಷಣ ಮಾಡಿದರು.

ಈ ವರ್ಷದ ಪರಿಷತ್ತಿನ ಘಟನಾವಳಿಯಲ್ಲಿ ವಿಶೇಷ ಬದಲಾವಣೆಗಳಾಗಲಿವೆಯೆಂದು ತಿಳಿದು ಬಂದಿದೆ ಹಿಂದೆ ಪರಿಷತ್ತಿನ ಅಧ್ಯಕ್ಷರು ಕೇವಲ ಹೆಸರಿಗೆ ಮಾತ್ರ ಅಧ್ಯಕ್ಷರಾಗಿದ್ದು, ಉಪಾಧ್ಯಕ್ಷರಿಗೆ ಸರ್ವಾಧಿಕಾರಗಳಿರುತಿದ್ದುದರಿಂದ, ಈ ವರ್ಷ ಅರಿಸಲ್ಪಟ್ಟ ಅಧ್ಯಕ್ಷರಿಗೆ ಒಂದು ಇಡೀ ವರ್ಷದ ವರೆಗೆ ಪೂರ್ಣ ಕೆಲಸಗಳು ಇರಬೇಕೆಂದೂ ಅವರಿಗೆ ಹಿಂದಿನಿಂತ ಹೆಚ್ಚಿನ ಸ್ವಾತಂತ್ರ್ಯಗಳಿರಬೇಕೆಂದೂ ಇನ್ನೂ ಕೆಲವು ತಿದ್ದುಪಡಿಗಳಿಂದ ಪರಿಷತ್ತಿನ ಘಟನಾವಳಿಯಲ್ಲಿ ಬದಲಾವಣೆಗಳಾಗುವವೆಂದೂ ತಿಳಿದುಬರುತ್ತದೆ.

ಯುದ್ಧವಾರ್ತೆ!

ಜಗತ್ತಿನ ಶಾಂತಿಗಾಗಿ ಜಗದ್ಗುರುಗಳ ಹಂಬಲ!

ವೀರ ಛಿನ್ನರ ಪ್ರಚೆಂಡ ಸಾಹಸ! ರಕ್ಷಕ್ಕೆ ಬೆಂಬಲ ಬೇಕಂತೆ!!

ತಟಸ್ಥ ರಾಷ್ಟ್ರಗಳಿಗೆ ನಷ್ಟ! ಪಶ್ಚಿಮ ರಣರಂಗದಲ್ಲಿ ಹೆಪ್ಪುಗಟ್ಟುವ ಹಿಮ!

ಪಿನ್–ರಶ್ಯಾ ಯುದ್ಧ

ಕಳೆದ ವಾರ ರಿಯಿದ ಸೈನ್ಯವು ಪಿನ್‌ಲೆಂಡಿನ ಗಡಿಯಲ್ಲಿ ಒಟ್ಟು ಸೇರಿಸಲ್ಪಟ್ಟಿತು ಅವರು ಮುನ್ನುಗ್ಗುತ್ತಿರುವರೆಂದು ಸುದ್ದಿ ಬಂದಿತ್ತು ಆದರೆ ಪಿನ್‌ಲೆಂಡಿನ ಸೈನಿಕರೆಗೆ ರಕ್ಷಸರನ್ನು ಮುಂದುವರಿಯದಂತೆ ಬಲವಂತವಾಗಿ ಕಾದಿ ಹಿಂದಕ್ಕಟ್ಟುತ್ತಿರುವುದರಿಂದ ಸ್ಥಾಲಿನನು ಕಳವಳಗೊಂಡಿರುವುದಾಗಿ ತಿಳಿದು ಬಂದಿದೆ ಅದಷ್ಟು ಬೇಗನೇ ಯುದ್ಧವನ್ನು ಕೊನೆಗೊಳಿಸಬೆಕೆಂದು ಆತನ ಸಾಧನೆಯಾಗಿದೆ ಪಿನ್‌ಲೆಂಡಿನಂತಹ ಚಿಕ್ಕ ರಾಷ್ಟ್ರವು ರಕ್ಷಣಂತಹ ಪ್ರಬಲ ರಾಷ್ಟ್ರದೊಡನೆ ಅಮಿತ ಸಾಹಸದಿಂದ ಹೀಗೆ ಕಾದಾಡುತ್ತಿರುವುದು ಪ್ರಪಂಚವನ್ನೇ ದಿಗಿಲುಗೊಳಿಸಿದೆ ವಿಸ್ಮಯ ಸಾಹಸವನ್ನು ಎಲ್ಲರೂ ಪ್ರಶಂಸಿಸುತ್ತಿದ್ದಾರೆ ಪರಾಕ್ರಮಿಗಳಾದ ಪಿನ್ನರೊಡನೆ ಯುದ್ಧ ಮಾಡುತ್ತಿರುವಾಗ, ಹಿಂದೆ ಬೀಳುವ ಸಂದರ್ಭವೊದಗುತ್ತಿರಲು, ಅದರಿಂದ ರಕ್ಷಸರು ಜೇಡಿಗಳಂತೆ ಸುರಿದು ನಿಲ್ಲಬಾರದೆಂದು ಅವರನ್ನು ಹುರಿದುಂಬಿಸಲು ರಕ್ಷದ ಕೆಲವು ಸೈನ್ಯಾಧಿಕಾರಿಗಳು ಮುಂದೆ ಬಂದು ಸೈನಿಕರನ್ನು ಹುರುಪುಗೊಳಿಸುತ್ತಾರೆ

ರಕ್ಷಸರ ಹಲವು ವಿಮಾನಗಳು ಪಿನ್ನರ ಪ್ರಧಾನ ನಗರವಾದ ಹೆಲ್ಸಂಕಿಯ ಮೇಲೆ ಬಾಂಬಿನ ಮಳೆ ಕರೆದಿವೆ ನಿರಪರಾಧಿ ನಾಗರಿಕರ ಮೇಲೆಯೂ ರಕ್ಷಸ ವಿಮಾನಗಳು ಬಾಂಬುಗಳನ್ನೆಸೆಯುತ್ತಿವೆ

ರಕ್ಷದ ಸೈನಿಕರು ಎಸ್‌ಲೆಂಡಿನಲ್ಲಿ ಬಹು ದೂರ ನುಗ್ಗಿ ಎಸ್‌ಲೆಂಡನ್ನು ಎರಡು ಪಾಲು ಮಾಡಿರುವರಾಗಿ ವಾರ್ತೆ

ಜರ್ಮನ್–ಬ್ರಿಟಿಸ್ ಪ್ರಾಣಸ್ಸುಗಳ ಯುದ್ಧ

ಎಂದಿನಂತೆ ಸಮುದ್ರ ಯುದ್ಧವೇ ಭರದಿಂದ ಸಾಗುತ್ತಿವೆ ಬ್ರಿಟಿಷ್ ಹಡಗುಗಳು ಮುಳುಗಿವೆ ಜರ್ಮನರ ಕೆಲವು ಹಡಗುಗಳನ್ನು ಸಂಕಟದಲ್ಲಿ ಕೆಡಹಲು ಅವುಗಳು 'ಆತ್ಮಹತ್ಯೆ' ಮಾಡಿಕೊಂಡವು ಗ್ರಾಫ್‌ಸ್ಪೀ ಹಡಗದಂತೆ ಜರ್ಮನಿಯ ಕೊಲಂಬಸ್ ಎಂಬ ಹಡಗವೂ ತಾನಾಗಿ ಮುಳುಗಿತು ಗ್ರಾಫ್‌ಸ್ಪೀ ಹಡಗದಲ್ಲಿದ್ದ ೧೩೦ ಮಂದಿಯನ್ನು ಸೆರೆ ಹಿಡಿದಿರುವರೆಂದೂ, ಅದರ ಕೆಪ್ಟನ್‌ನಾದ ಲಾಂಗ್ಸ್‌ದೋರ್ಫನು ಆತ್ಮಹತ್ಯೆ ಮಾಡಿಕೊಂಡಿರುವುದಾಗಿಯೂ ತಿಳಿದಿದೆ.

ನಾರ್ವೆ, ಸ್ವೀಡನ್, ಡೆನ್ಮಾರ್ಕ್ ಈ ತಟಸ್ಥ ರಾಷ್ಟ್ರಗಳ ಹಡಗುಗಳೂ ಗುತ್ತಿ ಹಡಗುಗಳಿಂದ ಮುಳುಗಿಸಲ್ಪಟ್ಟಿವೆ

ಪಶ್ಚಿಮ ರಣರಂಗ

ಪಶ್ಚಿಮ ರಣರಂಗದಲ್ಲಿ ಚಳಿಯು ವಿಪರೀತವಾಗಿದೆ ಹಿಮವು ನಿರಂತರ ಬೀಳುತ್ತಿದೆ ಹಾಗಾಗಿ ಹೆಚ್ಚು ಸೈನಿಕ ಚಟುವಟಿಕೆಗಳು ಇರುವುದಿಲ್ಲ

ವಿಮಾನ ಯುದ್ಧಗಳೂ ತೀವ್ರವಾಗಿ ನಡೆಯುತ್ತಿವೆ ಬ್ರಿಟಿಷ್ ವಿಮಾನಗಳು ಜರ್ಮನ ಸೈನ್ಯವನ್ನು ಸಂದರ್ಶಿಸಿ ಹೋದವು ಹಂಲೆಂಡಿನ ಯುಟ್ರೆಜ್ ನಗರದಲ್ಲಿ ವಿಮಾನ ಯುದ್ಧವು ನಡೆಯಿತು

ಸೀನ್ ಪ್ರೆಡ್ ಡುಗರವನ್ನು ಬೆಳೆಸಿ ಕಟ್ಟುತ್ತಿರ ವರಾಗಿ ಸುದ್ದಿ

ಮುಂದಕ್ಕೆ ಬೇಗನೆ ಕಾಲದಲ್ಲಿ ಭಯಂಕರ ಯುದ್ಧವನ್ನು ಸುರುಮಾಡಲು ಇಂದು ಇಗ್ಲಿಷುವರೂ ಬಹಳ ಸಿದ್ಧತೆ ನಡೆಸುತ್ತಿರುವರಾಗಿ ತಿಳಿದುಬರುತ್ತದೆ

ಕೊಲೊಂಬಸ್ ಹಡಗವು ಅಮೇರಿಕದಲ್ಲಿ ತಾನಾಗಿಯೇ ಮುಳುಗಿಕೊಂಡಿತು ಈ ಹಡಗದ ಬರವನ್ನೇ ಹಾರೈಸಿ ಬ್ರಿಟಿಷ್ ಹಡಗುಗಳು ದಾಳಿಯ ಕಿಂಚಿದ್ದವು ಕತ್ತುಗಳ ತೈಗೆ ಸಿಗುವುದು ಬೇಡವೆಂದು ಅದ ಹಾಗೆ ಮುಳಗಿರುವುದಾಗಿ ತಿಳಿದಿದೆ

ಉತ್ತರ ಸಮುದ್ರದಲ್ಲಿ ಸಿಟಿ ಆಫ್ ಕೋಟೇ ಎಂಬ ಭಾರೀ ಹಡಗು ತೋಟಿಯಿಂದ ಧ್ವಂಸವಾಯಿತು ಡೇರಿಯೋ ಎಂಬ ಬ್ರಿಟಿಷ್ ಹಡಗೂ ಮುಳುಗಿತು

ಎಸ್‌ಲೆಂಡಿನ ಯುದ್ಧದಲ್ಲಿ ರಷ್ಯವು ಮುಂದೊತ್ತುವುದಾಗಿ ತಿಳಿದಿದೆ!

ಯುದ್ಧವಾರಂಭವಾದಂದಿನಿಂದ ಜರ್ಮನಿಯ ೨೩ ಹಡಗುಗಳು ನಾಶವಾದುದೆಂದೂ ಇವು ೧೪೦೦೦ ಟನ್ ತೂಕವುಳ್ಳವುಗಳೆಂದೂ ತಿಂ ೨೦ರಂದು ಬ್ರಿಟಿಷ್ ಸರಕಾರವು ಪ್ರಕಟಪಡಿಸಿದೆ ಒಟ್ಟು ೧೯ ಜರ್ಮನ್ ಹಡಗುಗಳು ಮಿತ್ರರಾಷ್ಟ್ರಗಳ ಸ್ವಾಧೀನವಿದೆಯೆಂದೂ ತಿಳಿದಿದೆ

ಜರ್ಮನ್ ಗೆಸ್ಟಪೋ ಸೈನ್ಯದ ನಾಯಕನಾದ ಹೆರ್ ಹಿಮ್ಲರನು ರೋಮಿಗೆ ತೆರಳಿರುವನು

ಅಮೇರಿಕ ೨೧ ರಾಷ್ಟ್ರಗಳು ತಾವು ತಟಸ್ಥವಾಗಿರುವೆವೆಂದು ಪುನಃ ಸಾರಿ ಹೇಳಿ, ಯುದ್ಧ ಹಡಗುಗಳನ್ನು ರಕ್ಷಿಸುವುದಿಲ್ಲವೆಂದು ಹೇಳಿವೆ

ಎಸ್ಟೋನಿಯದ ಹಡಗು ಉಳೆಗೋ ಎಂಬುದು ಜರ್ಮನ್ ಧಾಳಿಗೆ ಮುಳುಗಿತು ಸ್ಕಾಟಿಷ್ ಟ್ರಾಲರ್ 'ಟ್ರಿನಿಟಿ' ಎಂಬುದು ಜರ್ಮನ್ ಧಾಳಿಗೆ ಭಗ್ನವಾಯಿತು 'ಅಡಾಲ್ಫ್ ವಾಲ್ಟರ್' ಎಂಬ ಸ್ವೀಡಿಷ್ ಹಡಗೂ ತೋಟಿಗೆ ತಗಲಿ ಮುಳುಗಿತು

ಇಟಲಿಗೂ ಜರ್ಮನಿಗೂ ಬಾಲ್‌ಸಾನೋ ಪ್ರದೇಶದ ವರೆಗೆ ಒಪ್ಪಂದವಾಯಿತು

ಗ್ರಾಫ್‌ಸ್ಪೀ ಹಡಗಕ್ಕೆ ಹೆಚ್ಚಿನ ಸಮಯಾನುಕೂಲವನ್ನು ಕೊಡದ ವಿಷಯದಲ್ಲಿ ಜರ್ಮನಿಯು ಉರುಗ್ವೆ ಸರಕಾರದ ಮೇಲೆ ತೀವ್ರ ಪ್ರತಿಭಟನೆ ತೋರಿಸಿತ್ತೆ? ಈ ವಿಷಯದಲ್ಲಿ ತಾವು ಮಾಡಿದ್ದು ಸರಿಯೆಂದೂ ಜರ್ಮನಿಯ ಪ್ರತಿಭಟನೆಯನ್ನು ಧಿಕ್ಕರಿಸಿ, ಉರುಗ್ವೆ ಸರಕಾರವು ಒಂದು ಪ್ರತಿಭಟನೆಕಟ್ಟಿದೆ

'ಆ ಯುದ್ಧದಲ್ಲಿ ಒಂದೋ ನಾವು ಪ್ರಬಲ ಪರಾಕ್ರಮಿಗಳೆನಿಸಿ ಕಾದಾಡಿ ಸಾಯಬೇಕು ಇಲ್ಲವೇ ಗೆಲ್ಲಬೇಕು" ಹೀಗೆ ಜರ್ಮನಿಯ ಪ್ರಚಾರ ಮಂತ್ರಿ ಗೋಬೆಲ್ಸನು ಹೇಳಿದನು



ಡಲಾಡಿಯರು

ಫ್ರೆಂಚ್ ಪ್ರಧಾನರಾದ ಡಲಾಡಿಯರು ತಮ್ಮೊಂದು ಭಾಷಣದಲ್ಲಿ ಪಿನ್ನರಿಗೆ ಫ್ರಾನ್ಸಿನಿಂದ ಸಹಾಯಕೊಡುವುದಾಗಿ ಹೇಳಿದರು ಎನ್ನರ ಸಾಹಸಗಳನ್ನು ಕೊಂಡಾಡಿ ಅವರಿಗೊದಗಿದ ಸಂಕಷ್ಟದಲ್ಲಿ ತಮ್ಮ ಸಹಾನುಭೂತಿಯ ನ್ನೂ ಸೂಚಿಸಿದರು

ರಕ್ಷದ ಸಂಕಟ

ರಕ್ಷಾ ಎಸ್‌ಲೆಂಡ್ ಯುದ್ಧದಲ್ಲಿ ಇತ್ತೀಚೆಗೆ ಎನ್ನರು ವಿಜಯಗಳಾಗುವ ವಾರ್ತೆಯೇ ಬರುತ್ತಿದೆ ಅನೇಕ ಸಲ ರಕ್ಷಸರನ್ನು ಹಿಂದಕ್ಕಟ್ಟಿ ಪಿನ್ನರ ಕೈಮುಲ ವಂಶಕ್ಕುಳವನ್ನು ತೋರಿಸಿದರು

ಹೀಗಾಗಿ ರಕ್ಷವು ಇಂದಿನ ಯುದ್ಧದಲ್ಲಿ ಕನಗೆ ಜರ್ಮನಿಯು ಬೆಂಬಲ ಕೊಡಬೇಕಾಗಿ ಒಂದು ವಿನಂತಿಯನ್ನು ಹಿಟ್ಲರನಿಗೆ ಕಳುಹಿಸಿರುವುದಾಗಿಯೂ, ಅದಕ್ಕೆ ಹಿಟ್ಲರನು ನಕಾರ ಉತ್ತರವಿತ್ತಿರುವುದಾಗಿಯೂ ಬಲವಾದ ವದಂತಿಯಿದೆ

ಆಂಗ್ಲ–ಜಪಾನರ ವ್ಯವಹಾರ

ಟೋಕಿಯೋದಲ್ಲಿ ಆಂಗ್ಲ ಜಪಾನ ಸರಕಾರಗಳೊಳಗೆ ಮಾತುಕತೆ ನಡೆಯುತ್ತಿರುವುದಾಗಿಯೂ, ಹಿಂದಿನ ಟ್ರಿನಿಸ್ಟೆನ್ ಪ್ರಕರಣವು ಈ ಮಾತುಕತೆಯಲ್ಲಿ ತೀರ್ಮಾನಕ್ಕೆ ಬರುವುದಾಗಿಯೂ ತಿಳಿದಿದೆ

ಜರ್ಮನ್ ರಕ್ಷಗಳ ರಕ್ಷ ಸಂಬಂಧ 'ರಕ್ಷ ಮತ್ತು ಜರ್ಮನಿಗಳ ಅನ್ಯೋನ್ಯತೆಯು ರಕ್ಷದಿಂದ ಒಂದುಗೂಡಿನಲ್ಪಟ್ಟಿರೆ'ಯೆಂದು ಸ್ಥಾಲಿನನು ಹೇಳಿದನು

ಕಳೆದ ವಾರದಲ್ಲಿ ತಟಸ್ಥರಾಷ್ಟ್ರಗಳ ಎಂಟು ಹಡಗಗಳು ಮುಳಗಿದುವು

ಪೋಪರ ಶಾಂತಿಯ ಯತ್ನ!

ಅನ್ಯಾಯದಿಂದ ದರ್ಪ ದುರಹಂಕಾರಗಳಿಂದ, ನಿರಪರಾಧಿಗಳಾದ ಮಕ್ಕಳು ಹೆಂಗಸರು, ನಾಗರಿಕರು ಮೊದಲಾದವರ ಮೇಲೆ ಬಾಂಬ ಸೆಡದಲಾದ ಪುಗಳನ್ನೆಸೆಯುವ ಮಾರಣ ಕೆಲಸವು ಖಂಡಿತವಾಗಿಯೂ ದೇವರಿಗೆ ಮೆಚ್ಚದ ಕೆಲಸವೆಂದೂ ಅದುದರಿಂದ ಇಂದಿನ ಪ್ರಬಲರಾಷ್ಟ್ರಗಳು ಯುದ್ಧ ಸಂಘರ್ಷಗಳನ್ನುಬಿಟ್ಟು ಕೊಟ್ಟು ರಾಜಿಮಾಡಿಕೊಳ್ಳಬೇಕೆಂದೂ ಶಾಂತಿಸಂಧಾನಗಳ ಕಾರ್ಯದಲ್ಲಿ ಅಮೇರಿಕದ ಅಧ್ಯಕ್ಷರಾದ ರೂಸ್‌ವೆಲ್ಟರು ಶ್ರಮ ಕ್ಷ ನಡಬೇಕೆಂದೂ ಪೋಪರು ಹೇಳಿದರು

ಭಾರತೀಯ ವೃತ್ತಾಂತ

ಮದ್ರಾಸ್ ಪ್ರಾಂತ್ಯದ ಸಹಕಾರ ಸಂಸ್ಥೆಗಳ ಉದ್ದಮಿಗಳ ಸಮೇಳನವು ದಿನೆಂಬರ್ ೨೫ರಲ್ಲಿ ನಡೆಯಿತು

ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯ ಎಂಬ ಶಬ್ದಗಳಿಗೆ ಒಂದೇ ರೀತಿಯ ಅರ್ಥ ಸರಿಯಲ್ಲ ಪ್ರಜಾಪ್ರಭುತ್ವದಲ್ಲಿ ವ್ಯಕ್ತಿಯ ಸ್ವಾತಂತ್ರ್ಯವನ್ನು ಬಲಿಸುವ ಅನೇಕ ನಿಯಮಗಳೂ ವಿಧಿಗಳೂ ಏರ್ಪಾಡಾಗಿರುತ್ತವೆ ಎಂದು ಸರ್ ಸ್ಟಾಫರ್ಡ್ ಕ್ರಿಪ್ಸರವರು ಬೊಂಬಾಯಿಲ್ಲಿಂದು ಕಡೆ ಭಾಷಣ ಮಾಡುತ್ತಾ ಹೇಳಿದರು ಯೂರೋಪಿನಲ್ಲಿ ಸ್ವತಂತ್ರ ರಾಷ್ಟ್ರಗಳಿಲ್ಲವೆಂದೂ ಹೇಳಿದರು

ಸರ್ ಜಾನ್ ಉಡ್‌ಹೆಡ್‌ರವರು ಇಂಡಿಯಾ ಕಾನೂನಿನ ೨೭ರನೇ ಕಲಮಿನ ಪ್ರಕಾರ ಎಡ್ಮೆಸರರಾಗಿ ನೇಮಕವಾಗಿರುವರು

ಪಂಚೆಟ್ಟಿಯಲ್ಲಿ ನಕಲು ಮಾಡಿದ್ದರಿಂದ ದೊರೆತ ಶಿಕ್ಷೆಯ ಪರಿಣಾಮವಾಗಿ ಅಲಹಾಬಾದಿನ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯೊಬ್ಬನು ರೈಲಿಗೆ ಸಿಕ್ಕಿ ಆತ್ಮಹತ್ಯೆ ಮಾಡಿಕೊಂಡನು

ಮುಸ್ಲಿಂ ಲೀಗು ಕಾಂಗ್ರೆಸ್ ಮಂತ್ರಿಮಂಡಳಗಳ ಮೇಲೆ ಮಾಡಿರುವ ಆರೋಪಗಳನ್ನು ನಿಷ್ಪಕ್ಷಪಾತವಾಗಿ ವಿಚಾರಣೆಮಾಡಲು ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಸಂಸ್ಥೆಗಳ ಪ್ರತಿನಿಧಿಗಳ ಒಂದು ಕಮಿಷನನ್ನೂ ಸ್ಥಾಪಿಸಬೇಕೆಂದು ವಿಮೇಶ್ ಅಬುಲ್ ಮಜೀದ್ ಸಿಂಧಿಯವರು ಮಾಡಿದ ಸಲಹೆಯನ್ನು ಮೌಲಾನಾ ಅಬುಲ್ ಕಲಾಂ ಆಜಾದರು ಒಪ್ಪಿರುವರು

ಅಖಿಲಭಾರತ ಸ್ವಾತಂತ್ರ್ಯ ದಿನವನ್ನು ಜನವರಿ ೨೬ರಲ್ಲಿ ಮಾಮೂಲಿನಂತೆ ಆಚರಿಸಬೇಕೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ತಿಳಿಸಿದೆ

ಬ್ರಿಟಿಷ್ ಪ್ರಾಂತ್ಯಗಳಲ್ಲಿ ಯಾವ ರಾಜಕೀಯ ಪಂಗಡಗಳೂ ಸೇರದ ಮಂತ್ರಿಮಂಡಲಗಳು ಸ್ವಾವಲಂಬನೆಯಾಗಬೇಕು ಪಕ್ಷ ಸರ್ಕಾರಗಳೆಗಿಂತ ರಾಷ್ಟ್ರೀಯ ಸರ್ಕಾರವೇ ಮೇಲು ಎಂದು ಮದ್ರಾಸಿನ ಶ್ರೀ ಎಸ್. ಶ್ರೀನಿವಾಸಯ್ಯಂಗಾರ್‌ರು ಕುಂಭಕೋಣಂದಲ್ಲಿ ಭಾಷಣಮಾಡುತ್ತಾ ಹೇಳಿದರು

ತಿರುವಾಂಕೂರು ಸರ್ಕಾರದವರು ತಮ್ಮ ಸಂಸ್ಥಾನದಲ್ಲಿಯೇ ಒಂದು ಸಾಬೂನು ಕಾರ್ಖಾನೆಯನ್ನು ಸ್ಥಾಪಿಸುವರ

ಹೈದರಾಬಾದಿನಲ್ಲಿ ದಿಸೆಂಬರ್ ೧೯ರಲ್ಲಿ ಭಾಷಣಗಾರ್ತ ಕ್ಷ ಹೇಳಿದರು ಹೈದರಾಬಾದ್ ಕಾಂಗ್ರೆಸ್ಸಿನವರು ಇತರ ಮುಖಂಡರೂ ರಾಜಕೀಯ ಸುಧಾರಣೆಗಳಿಗಾಗಿ ಚಳುವಳಿ ನಡೆಸಬೇಕು ಎಂದು ಅವರು ಹೇಳಿದರು

ಅಖಿಲಭಾರತ ಪರಿಷತ್ತುಗಳು

ಲಕ್ನೋದಲ್ಲಿ ತಾ ೨೬ರಂದು ಜರಗಿದ ಅಖಿಲ ಭಾರತ ಶಿಕ್ಷಣ ಪರಿಷತ್ತಿನ ಉದ್ಘಾಟನೆಯ ಸಮಾರಂಭವನ್ನು ಪಂಡಿತ ನೆಹರುಗಳು ನೆರವೇರಿಸಿದರ

ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತು ಜನವರಿ ೧ ೯ ತ್ತು ೨೦ರಂದು ನವ ದಿಲ್ಲಿಯಲ್ಲಿ ಶ್ರೀ ಸುಭಾಷ್‌ಚಂದ್ರಬೋಸರ ಅಧ್ಯಕ್ಷತೆಯ ಂದ ನೆರವೇರಿಯುವುದು

ಸರ್ ಸ್ಟಾಫೋರ್ಡ್ ಕ್ರಿಪ್ಸರ ಭಾರತ ಕ್ರಯಾಣ ಮುಗಿಸಿ ತಿಂ ೨೬ರಂದು ಕಲ್ಕತ್ತೆಯಿಂದ ರಂಗೂನ್‌ಗೆ ತೆರಳಿದರು

ಹೊಸ ವರ್ಷದ ಅಭಿನಂದನೆ!

ನಮ್ಮ ಚಂದಾದಾರರಿಗೂ, ಜಾಹೀರಾತುದಾರರಿಗೂ ವಾಚಕರಿಗೂ, ಬರೆಹಗಾರರಿಗೂ, ಪ್ರತಿನಿಧಿಗಳಿಗೂ, ಏಜಂಟರಿಗೂ, ಪ್ರೋತ್ಸಾಹಕರಿಗೂ ಮತ್ತು ಎಲ್ಲಾ ಹಿತಚಿಂತಕರಿಗೂ

ಇದೀಗ ಬರುವ

ಹೊಸ ವರ್ಷವು

ಆನಂದದಾಯಕವಾಗಲೆಂದು ನಾವು ಹೃತ್ಪೂರ್ವಕವಾಗಿ ಹಾರೈಸುತ್ತೇವೆ

To

Our Subscribers Advertisers

Readers Writers Representatives

Agents Well wishers & Patrons we wish

A Bright & Happy New Year

ಮದ್ರಾಸ್ ಪ್ರಾಂತದ ಶಿಕ್ಷಣ ಕಮಿಶನರಾಗಿ ಶ್ರೀ ಡಿ ಎಚ್ ಎಲ್ಲಿಸ್ಸರು ನೇಮಕವಾದರು

ವಾರ್ಧಾದಲ್ಲಿ ಮಹಾತ್ಮಾ ಗಾಂಧಿಯವರೊಡನೆ ಸರ್ ಸ್ಟಾಫರ್ಡ್ ಕ್ರಿಪ್ಸ್‌ರವರು ದಿಸೆಂಬರ್ ೧೯ರಲ್ಲಿ ಸುಮಾರು ೯೦ ನಿಮಿಷಗಳ ಹೊತ್ತಿಗೆ ಮಾತುಕತೆ ನಡೆಸಿದರು ಸರ್ ಕ್ರಿಪ್ಸ್‌ರವರು ವರ್ಕಿಂಗ್ ಕಮಿಟಿಯ ಸಭೆಯಲ್ಲಿಯೂ ಆ ದಿನ ಸ್ವಲ್ಪ ಹೊತ್ತು ಹಾಜರಿದ್ದರು

ಕಾನ್‌ಸ್ಟಿಟ್ಯೂಯೆಂಟ್ ಅಸೆಂಬ್ಲಿಯಲ್ಲಿ ಸಂಸ್ಥಾನ ಪ್ರತಿನಿಧಿಗಳಿಗೆ ಸ್ಥಾನವಿರಬೇಕೆಂದು ಸರ್ ಸ್ಟಾಫರ್ಡ್ ಕ್ರಿಪ್ಸ್‌ರವರು ಭಾರತವನ್ನು ಬಿಡುವಾಗಿ ಈ ರಾಷ್ಟ್ರವು ಬೇಗನೇ ಸ್ವತಂತ್ರವಾಗಿಲಿ ಎಂದು ಸಂದೇಶವಿತ್ತರು

ವಿಚಾರಣ ಸಮಿತಿಗೆ ಒಪ್ಪಿಗೆ

ಮುಸ್ಲಿಂ ಲೀಗು ಕಾಂಗ್ರೆಸು ಮಂತ್ರಿಗಳ ಮೇಲೆ ಹೊರಿಸಿದ ಆರೋಪಗಳನ್ನು ಕಾಂಗ್ರೆಸು ಮತ್ತು ಇತರ ಪ್ರತಿನಿಧಿಗಳುಳ್ಳ ಹಿಂದು ಮಂಡಲಕ್ಕೆ ಎಚ್ಚಾರಿಕೆ ಕೊಡಬೇಕಾಗಿ ತೇಜ್ ಅಬ್ದುಲ ಮಜೀದ್ ಸಿಂಧಿಯವರ ಒಂದು ಕರೆಯಿದೆ ಕಾಂಗ್ರೆಸು ಇದಕ್ಕೆ ಅನುಮಾನವಿಲ್ಲದೆ ಒಪ್ಪಿಕೊಳ್ಳುವುದಾಗಿ ಮೌಲಾನಾ ಆಜಾದರು ಪ್ರಕಟಿಸಿರುವರು.

ಸ್ವಾತಂತ್ರ್ಯ ದಿನಾಚರಣೆ

೧೯೪೦ನೇ ಇಸ್ವಿಯ ಜನವರಿ ೨೬ನೇ ತಾರೀಖಿನ ದಿವಸ ಸ್ವಾತಂತ್ರ್ಯ ದಿನವನ್ನು ಯೋಗ್ಯವಾಗಿಯೂ ಪಕಶಿಸ್ತೆಯಿಂದಲೂ ಆಚರಿಸುವದು ಅವಶ್ಯವಿದೆ ಎಂಬುದರ ಕಡೆಗೆ ವರ್ಕಿಂಗ್ ಕಮಿಟಿಯು ಯಾವ ತ್ತು ಕಾಂಗ್ರೆಸ ಕೂಟಗಳೆ ಮತ್ತು ಕಾಂಗ್ರೆಸ್ಸಿನವರು ವ ತ್ತು ರಾಷ್ಟ್ರದ ಲಕ್ಷವನ್ನು ಎಳೆಯುತ್ತದೆ ಹಿಂದುಸ್ತಾನವು ಮತ್ತು ಜಗತ್ತು ಆಗ ಸಂಕಟದಲ್ಲಿ ಹೊಯ್ದಾಡುತ್ತಿರುವದರಿಂದಲೂ ಮತ್ತು ನಮ್ಮ ಸ್ವಾತಂತ್ರ್ಯ ಸಂಗ್ರಾಮವು ಇನ್ನು ಮೇಲೆ ಹೆಚ್ಚು ತೀಕ್ಷ್ಣಸಂಗುವ ಸಂಭವವಿರುವದರಿಂದಲೂ ಮುಂದಿನ ಸಲದ ಸ್ವಾತಂತ್ರ್ಯ ದಿನಾಚರಣೆಗೆ ವಿಶೇಷ ವ ಹತ್ವ ಬಂದಿರುವದು ಆದ್ದರಿಂದ ಆ ಹೊತ್ತಿನ ದಿವಸ ನಾವು ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಾರ್ವಾವನ್ನು ಘೋಷಿಸಬೇಕಲ್ಲದೆ ಹೋರಾಟದ ಸಿದ್ಧತೆಯನ್ನು ಮಾಡಬೇಕ ಆದ್ದರಿಂದ ವರ್ಕಿಂಗ್ ಕಮಿಟಿಯು ಎಂತಹ ಕಾಂಗ್ರೆಸ ಕೂಟಗಳನ್ನು ಕಾಂಗ್ರೆಸ್ಸಿನವರಿಗೂ ಇ ಪ್ರತಿಜ್ಞೆಯನ್ನು ಅಂದಿನ ದಿವಸ ಕೈಮುಟ್ಟಿರುವ ಸರ್ವಜನರ ಸಭೆಗಳಲ್ಲಿ ತಗೆದುಕೊಳಲು ಕೇಳಿಕೊಳ್ಳುತ್ತದೆ

ಯಾರಾಗಿದ್ದರೂ ಅಸ್ಪೃಶ್ಯತೆ ಮತ್ತು ಅಂಗ ಬರ್ಗಳ ಮೂಲಕ ಸಭೆಗಳ ಹಾಜರಿ ಎದ ತಗದಿದ್ದರೆ ಅವರು ಪ್ರತಿಜ್ಞೆಯನ್ನ ಕೈಮುವ ನೆಗಳಲ್ಲಿ ಭಾಗ ತ್ತಿ ಕವಾಗಿಯಾಗಲಿ ಸಾಮೂಹಿಕವಾಗಿಯಾಗಲಿ ತಗದುಕೊಳ್ಳಕ್ಕಿದ್ದು ವತ್ತು ಹೀಗೆ ಪ್ರತಿಜ್ಞೆ ತೆಗದ ಕೂಂಡ ಮೇಲೆ ಕಾಂಗ್ರೆಸು ಸಂಸ್ಥೆಗಳೂ ವ್ಯಕ್ತಿಗಳೂ ತಮ್ಮ ಪ್ರಾಂತಿಕ ಕಾಂಗ್ರೆಸ ಕಮಿಟಿಗಳಿಗೆ ತಮ್ಮ ಹೆಸರ ಹಾಗೂ ವಿಳಾಸ ಸಹಿತ ಕಳಿಸತಕ್ಕದ್ದು

ಪ್ರತಿಜ್ಞೆಯನ್ನ ತೆಗದುಕೊಳ್ಳುವ ಮನಸ್ಸಿಲ್ಲದವರ ಮೇಲೆ ಒತ್ತಾಯದಿಂದ ಪ್ರತಿಜ್ಞೆಯನ್ನು ಹೇರ ದಿರು ವರ್ಕಿಂಗ್ ಕಮಿಟಿಯ ಇಚ್ಛೆಯಲ್ಲ ಅಹಿಂಸಾತ್ಮಕ ಸಂಸ್ಥೆಯಲ್ಲಿ ಒತ್ತಾಯಕ್ಕೆ ಸ್ಥಳವೂ ಎದೆ ಸಗದು ಸಮಯ ಕಾಯದೆ ಭಂಗವನ್ನು ಸುರು ಮಾಡದರೆ ಅದರ ಅವಶ್ಯಕ ಕಾರಣಗಳನ್ನು ಶಿಸ್ತಿನಿಂದ ಪಾಲಿಸಬೇಕಾಗುತ್ತದೆ

ದಕ್ಷಿಣಭಾರತ ಹಿಂದೀ ಪ್ರಚಾರಸಭೆಯ ಒಂಬತ್ತನೇ ವಾರ್ಷಿಕ ಪದವೀದಾನ ಸಮಾರಂಭದ ದಿನವು ಮುಂಬಯಿಯ ಮೂಜಿ ಪ್ರಧಾನರಾದ ಶ್ರೀ ಬಿ. ಜಿ ಖೇರರ ಅಧ್ಯಕ್ಷತೆಯಿಂದ ಜರಗಿತು

ಕಾಶೀ ವಿಶ್ವವಿದ್ಯಾನಿಲಯಕ್ಕೆ ವರ್ಷ ಹಿಂದರ ಒಂದು ಲಕ್ಷ ರೂಪಾಯಿ ಸಾಕಾಗದೆ ಬರುತ್ತದೆಯೆಂದೂ ಅದನ್ನ ಭಾರತ ಸರಕಾರವೂ ಜನತೆಯೂ ಸರೇಂದ್ರರೂ ಉದಾರ ಸಹಾಯ ಮಾಡಿ ಸದಿಹರಿಸಬೇಕೆಂದೂ ವಿದ್ಯಾಸಿಲಯದ ವೈಸ್ ಛಾನ್ಸಲರರಾದ ಸರ್ ರಾಧಾಕೃಷ್ಣನ್‌ರವರು ಒಂದು ಬಿನ್ನಹ ಹೊರಡಿಸಿದ್ದಾರೆ

ಗೋರಕಪುರದಲ್ಲಿ ತಾ ೨೨ರಂದು ಹಿಂದೂ ಮುಸ್ಲಿಂ ಗೊಂದಲವಾಯಿತು ಗೀತಾ ಜಯಂತಿ ಸಂಬಂಧ ಮೆರವಣಿಗೆಯು ನ ಸೀದಿಯ ಬಳಿ ಹಾದು ಹೋದ ದೇ ಇದರ ಕಾರಣವೆಂದು ತಿಳಿದಿದೆ

ಮಂಡಿಯಯಲ್ಲಿ ವಿಶೇಷವಾದ ದಿನಾಚರಣೆಯು ನಡೆಯಿತ ಜಿನ್ನಾ ಅಂಬೇಡ್ಕರ್ ಮೊದಲಾದವರು ಕಾಂಗ್ರೆಸಿನ ವೆಲೆ ಆರೋಪ ಹೊರಿಸಿ ಪಲಾಯನ ಸಿದರು ಮದ್ರಾಸಿನಲ್ಲಿ ಎಚ್ಚಾರ್ಜ ಹೇಗೆ ಕೆಲವು ಕಡೆಗಳಲ್ಲಿ ದ

ಜಲಾಂತರ್ಗಾಮಿ ನಾವೆಗಳು

ಇಂದಿನ ಭೀಕರ ಯುದ್ಧಾಸ್ತ್ರ

[ಎಷ್ಟು ಹಡಗಗಳು ಮುಳುಗಿದುವು? ಗೊತ್ತಿದೆಯೆ? ಎನಿತೊಂದು ನಷ್ಟವಾಯಿತು? ನಿರಪರಾಧೀ ಜನರು ಎಷ್ಟು ಮಂದಿ ಮೃತ್ಯು ಮುಖರಾದರು? ರಾಷ್ಟ್ರಗಳ ವ್ಯಾಪಾರ ವಹಿವಾಟುಗಳು ಹೇಗೆ ಯಾದುವು? ನಿಜವಾಗಿ ಇಂದು ಸಮುದ್ರಯಾನವೆಂದರೆ ಮೃತ್ಯು ಪ್ರಯಾಣವಾಗಿದೆ! ಸುತ್ತಲೂ ಎತ್ತಲೂ ಮರಣ ಭೀತಿ! ಆಕಾಶ ದಲ್ಲಿ ಹಾರಾಡಿ ಬಾಂಬೆಸೆವ ವಿಮಾನಗಳನ್ನು ಕಾಣಬಹುದು! ಏದು ರಾಗಿ ಬರುವ ವಿರೋಧೀ ಹಡಗವನ್ನು ನೋಡಬಹುದು! ಆದರೆ ಕಾಣದಂತೆ, ಕೇಳದಂತೆ, ಅನಿರೀಕ್ಷಿತವಾಗಿ ಬಂದು ಹಾನಿಗೊಳಿಸುವ ಜಲಾಂತರ್ಗಾಮಿ ನಾವೆಗಳ ಉಪಟಳವು ತಡೆಯಲಾರದುದು!]

ಬ್ರಿಟಿಷರ 'ಕರೇಜಸ್' 'ರೋಯಲ್ ಓಕ್' ಮೊದಲಾದ ಮಹಾಮಹಾ ಹಡಗುಗಳನ್ನು ಜರ್ಮನರ ಜಲಾಂತರ್ಗಾಮಿ ನಾವೆ (Sub-marines)ಗಳು ಮುಳುಗಿಸಿದವು ಎಂದು ವಾರ್ತೆ ಬರುತ್ತಿರುವಾಗ ಸಹಜವಾಗಿ ಪ್ರತಿಯೊಬ್ಬನಿಗೂ ಅಂತಹ ನಾವೆಗಳ ವಿಷಯವಾಗಿ ತಿಳಿವ ಕುತೂಹಲವು ಹೆಚ್ಚಿದೆ. ಅದರ ಪೂರ್ವಾಪರಗಳನ್ನು ಈಗ ವಿಚಾರಿಸುವ

ಯಾವಾಗ ಯಾರು ರಚಿಸಿದರು?

ಕಳೆದ ಶತಮಾನಗಳಲ್ಲಿ ಅಮೇರಿಕದಲ್ಲಿ ಸ್ವಾತಂತ್ರ್ಯಕ್ಕಾಗಿ ಯುದ್ಧವಾಯಿತು. ತಮಗೆ ತೊಂದರೆ ಕೊಡುತ್ತಿರುವ ಶತ್ರುಗಳ ಹಡಗುಗಳನ್ನು ನಾಶಮಾಡಬೇಕೆಂದು ನಿಶ್ಚಯಿಸಿದ ಒಬ್ಬ ಬುದ್ಧಿಶಾಲಿಯಾದ ವೈಜ್ಞಾನಿಕನು, ನೀರಿನಡಿಯಲ್ಲಿ ಗುಪ್ತವಾಗಿ ಸಂಚರಿಸುವ ದೋಣಿಯೊಂದನ್ನು ರಚಿಸಿದನು. ಅದೇ ಇಂದಿನ ಜಲಾಂತರ್ಗಾಮಿ ನಾವೆಯಾಗಿದೆ! ಇದು ಗಿಜಿಶರಂದು ಬೋಸ್ಟನ್ ನಗರದಲ್ಲಿ ನಡೆಯಿತು!

ನೀರ ಮೇಲೆ ಕೊಡವನ್ನು ಕಮಚಿಕೆಳಗೆ ದಬ್ಬಿದರೆ ಕೊಡದೊಳಗೆ ನೀರು ಹೋಗುವುದಿಲ್ಲವಷ್ಟೆ? ಈ ರೀತಿಯಂದಲೇ ಈ ದೋಣಿಯೂ ನೀರಿನೊಳಗೆ ಇಳಿಯುವುದು. ಅದಕ್ಕೆ ಒಳಗಡೆಯೊಂದು ಮೇಲ್ಗಡೆಯೊಂದು ಬಾಗಿಲುಗಳು ಇವೆ. ಮೇಲಿನ ಬಾಗಿಲಿನ ಲೋಹದ ಭಾರದಿಂದ ಅದು ಕೆಳಕ್ಕೆ ಜಗ್ಗುವುದು. ಹೊರಗಿನ ವಸ್ತುಗಳನ್ನು ನೋಡಲು ಅದರೊಳಗೆ ಕಿಟಕಿಗಳಿವೆ. ಎಂಜಿನಿನ ಮೂಲಕ ಬೇಕಾದ ಕಡೆಗೆ ತಿರಿಗಿಸಬಹುದಾಗಿದೆ. ಇದರ ಮುಂಗಡೆಯಲ್ಲಿ ಟಾರ್ಪೆಡೋ ಎಂಬ ಶತ್ರು ಹಡಗುಗಳನ್ನು ಜಜ್ಜಿ ಪುಡಿಪುಡಿಮಾಡುವ ಆಯುಧವೊಂದನ್ನು ಇಟ್ಟಿರುತ್ತಾರೆ. ಈ ಟಾರ್ಪೆಡೋಗಳು ಬಹಳತೀವ್ರಗತಿಯುಳ್ಳವುಗಳಾಗಿರುತ್ತವೆ. ನಾವೆಯನ್ನು ಅಂದು ಬಹುಕಾಲ ನೀರೊಳಗೆ ಇಡಲು ಸಾಧ್ಯವಿರದೆ ಆಗಾಗ ಅರ್ಧ ತಾಸಿಗೊಮ್ಮೆ ನೀರ ಮೇಲೆ ಬರಬೇಕಾಗಿತ್ತು.

ರಚನೆಯಲ್ಲಿ ಪ್ರಗತಿ

ಇಂದಿನ ಜಲಾಂತರ್ಗಾಮಿ ನಾವೆಗಳು ಬಹಳ ಪ್ರಗತಿ ಹೊಂದಿವೆ. ಅಂದಿನ ಮೊದಲ ನಾವೆಯ ರಚನೆಯನ್ನು ಕಂಡು ಯೂರೋಪಿನ ಸಕಲ ರಾಷ್ಟ್ರಗಳೂ ತಮ್ಮ ತಮ್ಮ ಉಪಯೋಗಗಳ ಸಲುವಾಗಿ ಅನೇಕ ನೂತನ ಯಂತ್ರ ಸಾಮಾಗ್ರಿಗಳ ಸಲುಭತೆಯಿಂದ ಅಂತಹ ನಾವೆಗಳನ್ನು ಕಟ್ಟಿದರು. ಇಂದು ಒಳಗಡೆ ವಿದ್ಯುದ್ದೀಪಗಳೇ ಮೊದಲಾದ ಸೌಕರ್ಯಗಳಿವೆ. ಅವು ಸಾವಿರಾರು ಟನ್ನು ಭಾರದವುಗಳಿರುತ್ತವೆ. ಶಕ್ತಿ ಆಕಾರ ಸೌಕರ್ಯಗಳು ಹೆಚ್ಚಿದ್ದು ಅಂದು ಪುಟ್ಟಿದ ವಿಷ ಬೀಜವೇ ಇಂದು ದೊಡ್ಡ ವಿಷ ವೃಕ್ಷವಾಗಿ ಪರಿಣಮಿಸಿದೆ!



ಜರ್ಮನ್ ಜಲಾಂತರ್ಗಾಮಿ ನಾವೆಗಳು

ಜರ್ಮನರ ಯುಬೋಟ್ ಹಾವಳಿ!

ಜರ್ಮನರ ಯುಬೋಟುಗಳೆಂಬ ಜಲಾಂತರ್ಗಾಮಿ ನಾವೆಗಳು ಇಂದಿನ ಯುದ್ಧದಲ್ಲಿ ಬಹಳ ಹಾನಿಕಾರಕಗಳಿವೆ. ಎಷ್ಟೋ ಹಡಗುಗಳನ್ನು ಅವು ಮುಳುಗಿಸಿದವು. ಒಂದು ಹಡಗು ಹೋಗುವುದೆಂದರೆ ಮಿಲಿಯಾಂತರ ರೂಪಾಯಿಗಳ ನಾಶ. ಅಂತಹ ಸಾವಿರಾರು ಹಡಗುಗಳು ಮುಳುಗುವುದೆಂದರೆ ಒಂದು ರಾಷ್ಟ್ರಕ್ಕೆ ಎಷ್ಟು ನಷ್ಟವಾಗಲಾರದು ಎಂಬುದನ್ನು ನಾವು ಊಹಿಸಿ ತಿಳಿಯಬಹುದು.

ಒಂದು ಯುಬೋಟಿನಲ್ಲಿ ಹಲವು ಟಾರ್ಪೆಡೋಗಳೆಂಬ ಸಿಡಿದ ಮದ್ದಿನ ಆಯುಧಗಳಿವೆ. ಒಂದು ಗುಂಡಿಯನ್ನು ಒತ್ತಿದ ಕೂಡಲೇ ಆ ಟಾರ್ಪೆಡೋಗಳು ಹೊರಟು ಸವಿರಾರುಶತ್ರು ಹಡಗಕ್ಕೆ ಹೋಗಿ ಬಡಿದು ಸಿಡಿವವು. ಅದರಿಂದ ಎಂತಹ ಹಡಗವಾದರೂ ಒಡೆದು ಭಗ್ನ ಭಗ್ನವಾಗಿ ಬಿಡುವುದು.

ಉಸಿರಾಟವೆಂತು?

ಹಿಂದಕ್ಕೆ ಕೇವಲ ಅರ್ಧ ತಾಸುಗಳಷ್ಟು ಮಾತ್ರ ಇವುಗಳು ನೀರಿನೊಳಗೆ ಮುಳುಗಿ ನಿಲ್ಲುತ್ತಿದ್ದುವು. ಆದರೆ ಈಗ ಬಹಳಕಾಲ ನಿಲ್ಲ ಬಲ್ಲುವು. ಆದರೆ ಮೇಲೆ ಎಂದಾದರೊಮ್ಮೆ ಬರದೆ ಅವುಗಳಿಗೆ ಸಾಧ್ಯವೇ ಇಲ್ಲ. ಸಂಪೂರ್ಣಹಡಗು ಮೇಲೆ ಬರದಿದ್ದರೂ, ಅದರ ತುದಿಯಾದರೂ ಮೇಲೆಬಂದು ಗಾಳಿ ಹೀರಬೇಕು.

ಇಂದು ಕಳೆದ ಮಹಾಯುದ್ಧ ಕಾಲಕ್ಕಿಂತ ಈ ನಾವೆಗಳು ಬಹಳ ಪ್ರಗತಿ ಹೊಂದಿ ಹಾವಳಿ ಹೆಚ್ಚು ಮಾಡುತ್ತಿವೆ. ಆದರೆ ಇವುಗಳನ್ನು ತಡೆಯುವ ಯತ್ನಗಳೂ ಇತ್ತೀಚೆಗೆ ಬಹಳವಾಗಿ ನಡೆಯುತ್ತವೆ!

ಪರ್ವತಾರೋಹಣವು ಮಾನವನ ಸಹನಾ ಶಕ್ತಿಯನ್ನು ಪರೀಕ್ಷಿಸುವುದಕ್ಕೆ ಬಹಳ ಶ್ರೇಷ್ಠವಾದ ಸಾಧನವಾಗಿರುತ್ತದೆ. ಜಗತ್ತಿನ ಅತ್ಯುನ್ನತ ಶಿಖರಗಳನ್ನು ಏಕಬೇಕೆಂದು ಪಣತೊಟ್ಟ ಮನುಷ್ಯನ ಪ್ರತಿಜ್ಞೆಗೆ ಬಹಳ ಕೆಡುಕಾದ ಹವೆಯಿಂದ ಕೂಡಿದ ಹಿಮಾಲಯ ಪರ್ವತಗಳ ಬಹಳ ಭಂಗವನ್ನುಂಟುಮಾಡ ತ್ತವೆ. ಇತ್ತೀಚೆಗೆ ಹಿಮಾಲಯ ಪರ್ವತಾರೋಹಣವನ್ನು ಕೈಕೊಂಡ ಫೊಲೆಂಡಿನ ದಳದ ಮೇಲ್ವಿಚಾರಕರಾದ ಡಾಕ್ಟರರು ಓವಲ್ಟಿನ್ ನನ್ನು ತಯಾರಿಸ ವರೆಗೆ ಬರೆದ ಪತ್ರವೊಂದು ಓದುಗರಿಗೆ ಬಹಳ ಸ್ವಾರಸ್ಯವಾಗಿ ಕಂಡು ಬರಲಿದೆ. ಈ ಪತ್ರದಲ್ಲಿ 'ಓವಲ್ಟಿನ್' ಪರ್ವತಾರೋಹಣದ ತಾತ್ಪರ್ಯದಾಯಕವಾದ ಈ ಕಾರ್ಯದಲ್ಲಿ ಫೊಲೆಂಡಿನ ಪರ್ವತಾರೋಹಿ ದಳದವರಿಗೆ ಆಹಾರ ಪಾನೀಯವಾಗಿ ಯಾವ ರೀತಿಯಲ್ಲಿ ಸುಖವನ್ನೊತ್ತಿದೆ ಎಂದು ವಿವರಿಸುವರು. ಪತ್ರವು ಈ ಕೆಳಗಿನಂತಿದೆ –

'ಫೊಲೆಂಡಿನ ಪರ್ವತಾರೋಹಿ ದಳದ ನಾಯಕರಾದ ಮಿ. ಎಡ್ಮಂಡ್ ಕಾರ್ಸಿನ್‌ಸ್ಕಿಯವರ ಶೋಚನೀಯ ನಿಧನದಿಂದ ನೀವು ಬಹುಮಾನವಿತ್ತ ೫೦ ಪೌಂಡು ಓವಲ್ಟಿನ ಗುಣ ವಿವೇಚನೆಯನ್ನು ನಿಮಗೆ ಇಷ್ಟಗ ತನಕ ಬರೆಯಲು ಆಗಲಿಲ್ಲ. ಪರ್ವತಾರೋಹಿ ದಳದ ಇತರರು ಬ್ಬರು ಸದಸ್ಯರು ಈ ವಿಷಯ ನಿಮಗೆ ಬರೆಯಲು ನನಗೆ ಹೇಳಿರುತ್ತಾರೆ. ನಾನು ಈ ಪರ್ವತಾರೋಹಿ ದಳದ ವೈದ್ಯಕೀಯ ಚಿಕಿತ್ಸಕನಾದುದರಿಂದ ಪರ್ವತಾರೋಹಿಗಳು ತಮ್ಮ ಸಾಹಸದ ಕೆಲಸದಿಂದ ಮರಳಿ ನಂದಾದೇವಿ ಮತ್ತು ತ್ರಿಶೂಲಿ ಪರ್ವತಗಳ ಬುಡದ ತಮ್ಮ ಬಿಡಾರಕ್ಕೆ ಬಳಲಿ ಬಂದಾ 'ಓವಲ್ಟಿನ್' ಪಾನೀಯವನ್ನು ಕುಡಿಯಲು ಕೊಡುತಿದ್ದೆನು. ಈ ಪಾನೀಯವು ಉತ್ತಮವಾದ ಆಹಾರವು ಮಾತ್ರವಲ್ಲ, ದಣುವಿಕೆಯನ್ನು ಹೋಗಲಾಡಿಸಿ ನವಚೈತನ್ಯವನ್ನುಂಟುಮಾಡುವ ಉತ್ತಮ ಔಷಧಿಯಾಗಿರುತ್ತದೆ.

ಪೋಲಿಸ್ ಪರ್ವತಾರೋಹಿಗಳು ನಿಮ್ಮ ಬಹುಮಾನವನ್ನು (ಓವಲ್ಟಿನ್) ಬಹಳವಾಗಿ ಪ್ರಸಂಶಿಸಿರುತ್ತಾರೆ. ಪರ್ವತಾರೋಹಿಗಳು ಅಲ್ಮೋರ ಸ್ಟೇಷನಿಗೆ ಬಂದೊಡನೆ ತಮ್ಮ ತಮ್ಮ ಮನೆಗೆ ಹೊರಟು ಹೋಗಿರುತ್ತಾರೆ. ನಾನು ನಿಮ್ಮ ಕೈ ಹಿಂತಿರುಗಿ ಅಲ್ಲಿಂದ ಈ ವರುಷ ಮೇ ತಿಂಗಳಲ್ಲಿ ಹೊಂಟಿರುವ ದಳವನ್ನು ಸೇರಿರುವೆನು.'

ಅವಳ ಅತಿಯಾದ ರಕ್ತದ ಒತ್ತಾಟವು ಕಡಿಮೆಯಾಯಿತು

ಮತ್ತು ಬೊಜ್ಜಾಗಿ ಬಲಿತ ದೇಹವು ಸ್ವಲ್ಪ ಕೃಶವಾಯಿತು–ಕ್ರುಶನ್ ಲವಣಕ್ಕೆ ವಂದನೆಗಳು

ರಕ್ತದ ಅತಿಯಾದ ಒತ್ತಾಟಕ್ಕೆ ಒಂದು ಕಾರಣವು ಅತಿಯಾದ ಕೊಬ್ಬು ದೇಹದಲ್ಲಿರುವುದು. ಸಾವಿರಾರು ಡಾಕ್ಟರರು ಹೇಳುತ್ತಾರೆ. ಹೆಚ್ಚಾದ ಕೊಬ್ಬನ್ನು ದೇಹದಿಂದ ನಾಶಮಾಡಿದರೆ ಬೊಜ್ಜಾಗಿ ಬೆಳೆದ ದೇಹದವರು ರಕ್ತದ ಒತ್ತಾಟದಿಂದ ನಿವೃತ್ತರಾಗಬಹುದು. ಈ ಹೆಂಗಸು ಕ್ರುಶನ್ ಲವಣವನ್ನು ಸೇವಿಸಿದರಿಂದ ಅವುಗಳಿಂದ ನಿವೃತ್ತಳಾದಳು. ಅವಳ ಪತ್ರವನ್ನು ಓದಿರಿ

'ನನಗೆ ರಕ್ತದ ಒತ್ತಾಟ ವಿಳಿ ಮತ್ತು ಬೆನ್ನಿನ ಮೇಲೆ ನೋವು ಇದ್ದಿತು. ಅದಲ್ಲದೆ ಯಾವಾಗಲೂ ನನಗೆ ಬಚ್ಚಿತಿತ್ತು. ಮತ್ತು ನಾನು ಭಾರದಲ್ಲಿ ೨೦ ರಾತ್ಲ ಹೆಚ್ಚಾಗಿದೆ. ಎರಡ ಸೀಸೆ ಕ್ರುಶನ್ ಲವಣವನ್ನು ನಾನು ಸೇವಿಸಿದೊಡನೆ ಒಂದು ವಾರದಲ್ಲಿಯೆ ನಾಲ್ಕ ರಾತ್ಲ ಭಾರವು ಕಡಿಮೆ ಯಾಯಿತು. ಬೆನ್ನಿನ ಬೇನೆಯು ಸಹಿತ ರಕ್ತದ ಒತ್ತಾಟ ವಿಳಿಯ ಕಡಿಮೆ ಯಾಯಿತು. ಈಗ ನಾನು ಅತ್ಯಂತ ಸುಖಿಯಾಗಿದ್ದೇನೆ ಮತ್ತು ಒಳ್ಳೇ ಆರೋಗ್ಯವಲ್ಲಿದ್ದೇನೆ. ಕ್ರುಶನ್ ಲವಣಕ್ಕೆ ವಂದನೆಗಳು. ನಾನು ಅದನ್ನೇ ಯಾವಾಗಲೂ ಹೊಗಳುತ್ತೇನೆ

(ಮಿಸಿಸ್ ಡಿ ಡಬ್ಲ್ಯು.)

ನಿಮ್ಮ ದೇಹದ ಅವಯವಗಳು ಯಾವಾಗ ಚೈತನ್ಯವಂತವಾಗಿಲ್ಲವೋ ಆಗ ದೇಹದಲ್ಲಿದ್ದ ಕಶ್ಮಲವು ಹೊರಗ ತಳ್ಳಲ್ಪಡದೆ ಉಳಿದ ಕಶ್ಮಲವು ದೇಹದನು ಸೇರುತ್ತದೆ. ಈ ಕಶ್ಮಲವು ರಕ್ತದ ಹರಿವಿಕೆಯನ್ನು ತಡೆಯುತ್ತದೆ. ಮತ್ತು ರಕ್ತನಾಳಗಳನ್ನು ಒತ್ತುತ್ತದೆ. ಕ್ರುಶನ್ ಕ್ಷಾರಗಳ ಮತ್ತು ಲವಣಗಳ ಸಮ್ಮೇಳನವಾಗಿರುತ್ತದೆ. ಮತ್ತು ದೇಹದ ಎಲ್ಲಾ ಅವಯವಗಳನ್ನು ಶುಚಿಕರಿಸುತ್ತದೆ. ರಕ್ತವನ್ನು ಶುದ್ಧವಾಗಿರಿಸುತ್ತದೆ. ಇದರಿಂದ ಶುಚಿಯಾದ ರಕ್ತವು ನಿಮ್ಮ ದೇಹದ ವಿವಿಧ ಅಂಗಾಂಗಗಳನ್ನು ಪ್ರವೇಶಿಸುತ್ತದೆ. ಕ್ರುಶನ್ ಲವಣವು ಎಲ್ಲಾ ಕೆಮಿಸ್ಟರಲ್ಲಿಯೂ, ಸ್ಟೋರ್‌ಗಳಲ್ಲಿಯೂ, ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ



No 1V

ಪ್ರಾಂತಿಕ ಸ್ವರಾಜ್ಯವೆಂಬುದು
ಬರಿಯ ಮೋಸದ ಮಾಯಾಜಾಲ!

...ದು ಸ್ವರ್ಗಸುಖವಲ್ಲ! ನಿಜವಾಗಿ ನರಕ ಬಂಧನ!

ಮಂತ್ರಿಗಳೊಬ್ಬರ ಹೃದಯೋದ್ಗಾರ

...ರ್ಣಯನೆ ಇದುವಿಯ ರಾಜಕೀಯ ಸ...ರತೆಗನುಗುಣವಾದ ಪ್ರಾಂತಿಕ ಸ್ವರಾ...ವು ಹಿಂದುಸ್ಥಾನದ ಎಲ್ಲ ಪ್ರಾಂತ್ಯಗ...ಲ್ಲಿಯೂ ಬಹಳ ಯಶಸ್ವಿಯಾಗಿರುವ...ಂದು ವಾಚ್ಯಾರಾಯರು ಅದನ್ನು ಮು...ಕಂದಿಂದ ಹೊಗಳಿದ್ದಾರೆ ಪ್ರಾಂತಿಕ ...ರಾಜ್ಯದಲ್ಲಿ ಜನರು ಸ್ವರ್ಗ ಸುಖವನ್ನು ...ನುಭವಿಸುತ್ತಿದ್ದಾರೆ ಎಂದು ಅವರು ...ಮ್ಮ ಕೃತಿಯನ್ನು ಸೂಚಿಸಿದ್ದಾರೆ

ಆದರೆ ಪ್ರಾಂತಿಕ ಸ್ವರಾಜ್ಯವು ನಮ್ಮ ...ದೇಶದಲ್ಲಿ ಯಶಸ್ವಿಯಾಗಿದೆ ಎಂದು ಹೇ...ಳಿಕ್ಕೆ ಯಾವ ಆಧಾರ ಪ್ರಮಾಣಗಳೂ ...ರುವದಿಲ್ಲ. ಪ್ರಾಂತಿಕ ಸ್ವರಾಜ್ಯಘಟ...ಯು ತುಂಬಾ ಲೋಪದೋಷ ಕುಂದು ...ಕೊರತೆಗಳಿಂದ ತುಂಬಿಕೊಂಡಿರುತ್ತದೆ ...ಈ ಸ್ವರಾಜ್ಯದಲ್ಲಿ ರೂಪಾಯಿಗೆ ಎಂಡಾ...ಣೆಯಷ್ಟರ ಅಧಿಕಾರವು ಮಾತ್ರ ಜನರ ...ಕೈಗೆ ಬಂದಿರಬಹುದು ಆದ್ದರಿಂದಲೇ ...ಕಾಂಗ್ರೆಸಿನಂಥ ಪ್ರಬಲ ರಾಜಕೀಯ ...ಸಂಸ್ಥೆಗೆ ಕೂಡ ಪ್ರಾಂತಿಕ ಸರಕಾರಗಳ ...ನ್ನು ನಡೆಸಲು ಒಪ್ಪುವದು ಅಸಾಧ್ಯವೆಂದು ...ಂದು ಬಂದಿತು. ಹನ್ನೊಂದು ಪ್ರಾಂತ್ಯ...ಗಳ ಸೈತಿ ಎಂಟು ಪ್ರಾಂತ್ಯಗಳಲ್ಲಿ ಅಧಿ...ಕಾರ ಸೂತ್ರವನ್ನು ಕೈಗೆ ತೆಗೆದುಕೊಂಡ ...ಕಾಂಗ್ರೆಸ್ ಮಂತ್ರಿಮಂಡಲಗಳು ರಾಜ...ನಾಮೆಯನ್ನಿತ್ತು ಹೊರಬಂದುವು ವಿಷ...ಯದ ನಿರ್ಧಾರವನ್ನು ಬಹುಸಂಖ್ಯೆಯ ...ಮೇಲಿಂದ ಮಾಡುವುದು ಪ್ರಜಾಸತ್ತೆಯ ...ರೀತಿನೀತಿಯಾಗಿದೆ ಅದಕ್ಕನುಸರಿಸಿ ಹೇ...ಳುವದಾದರೆ ನಮ್ಮ ದೇಶದಲ್ಲಿ ಬ್ರಿಟಿಷರ ...ವರದಾನವಿದ್ದಾಗಿರುವ ಪ್ರಾಂತಿಕ ಸ್ವರಾ...ಜ್ಯವು ಸಫಲವಾಗಲಿಲ್ಲವೆಂದೇ ಹೇಳ...ಬಹುದು. ಏಕೆಂದರೆ ಹನ್ನೊಂದು ಪ್ರಾಂತ್ಯಗಳ ಪೈಕಿ ಏಳು ಪ್ರಾಂತ್ಯಗಳ...ಲ್ಲಿ ಕಾಂಗ್ರೆಸ ಮಂತ್ರಿಮಂಡಳಗಳ ರಾಜಿ...ನಾಮೆಯಿಂದ ಅವುಗಳ ಸ್ಥಾನದಲ್ಲಿ ಬೇ...ರೆ ಮಂತ್ರಿಮಂಡಳಗಳನ್ನು ಸ್ಥಾಪಿಸಲಿ...ಕ್ಕಾಗದೆ ಗವರ್ನರುಗಳು ಸರ್ವಾಧಿಕಾರ...ಗಳನ್ನು ತಮ್ಮ ಕೈಗೆ ತೆಗೆದುಕೊಳ್ಳಬೇಕಾ...ಗಿ ಬಂದಿತು ಗವರ್ನರುಗಳ ಸರ್ವಾ...ಧಿಕಾರವು ಪ್ರಾಂತಿಕ ಸ್ವರಾಜ್ಯದ ಸಫಲ...ತೆಯ ಪುರಿಗಲ್ಲಾಗುವದಿಲ್ಲ

ಬಹು ಸಂಖ್ಯಾಕ ಪ್ರಾಂತ್ಯಗಳಲ್ಲಿ ಮಂ...ತ್ರಿಮಂಡಲಗಳ ಮೂಲಕ ಶಾಸನ ಕಾ...ರ್ಯವು ನಡೆಯುತಿದ್ದುದಾದರೆ ಪ್ರಾಂತಿಕ ...ಸ್ವರಾಜ್ಯ ಘಟನೆಯು ಸಫಲವಾಯಿತೆಂದು ...ಹೇಳಬಹುದಾಗಿತ್ತು. ಈಗ ಅದು ಸಫಲ...ವಾಗಿದೆ ಎಂದು ಹೇಳುವದು, ಜನರ ...ಕಣ್ಣಿಗೆ ಮಣ್ಣು ಹಾಕುವ ವ್ಯರ್ಥ ಪ್ರಯ...ತ್ನವಾಗಿದೆ.

ಮಂತ್ರಿಗಳೊಬ್ಬರ ಸರ್ಟಿಫಿಕೇಟು

ಬಹು ಸಂಖ್ಯಾಕ ಪ್ರಾಂತ್ಯಗಳಲ್ಲಿ ಮಂತ್ರಿಮಂಡಲಗಳು ರಾಜಿನಾಮೆಯನ್ನಿ...ತ್ತು ಗವರ್ನರುಗಳು ಸರ್ವಾಧಿಕಾರವನ್ನು ...ವಹಿಸಿಕೊಳ್ಳಬೇಕಾಯಿತು ಎಂಬುದರಿಂ...ದ ಮಾತ್ರ ಪ್ರಾಂತಿಕ ಸ್ವರಾಜ್ಯಕ್ರಮವು ...ಅಸಫಲವಾಯಿತೆಂದು ಹೇಳುವದಲ್ಲ. ...ಈಗ ಅಧಿಕಾರ ನಡೆಸುತ್ತಿರುವ ಕಾಂಗ್ರೆ...ಸ್ಸಲ್ಲದ ಮಂತ್ರಿಮಂಡಲದ ಒಬ್ಬ ಮಂತ್ರಿ...ಯುಕೂಡ—'ಪ್ರಾಂತಿಕ ಸ್ವರಾಜ್ಯವೆಂಬು...ದು ಒಂದು ದೊಡ್ಡ ಮೋಸ ಮಂತ್ರಿಗಳು ...ಜನೋಪಕಾರದ ಯಾವ ಮಹತ್ವದ ...ಕೆಲಸವನ್ನೂ ಮಾಡದಂತೆ ಅವರ ಕೈಗಳು ...ಕಟ್ಟಿಹಾಕಲ್ಪಟ್ಟಿವೆ ರಾಷ್ಟ್ರಹಿತಕ್ಕೆ ಸಾಧ...ಕವಾದ ಯಾವದಾದರೊಂದು ಯೋಜನೆ...ಯನ್ನು ತಯಾರಿಸಿದಾಗ—ಆರ್ಥಿಕ ...ವಿಭಾಗವು ಹಣವಿಲ್ಲವೆಂಬ ರಾಗಾಲಾಪ...ನೆಯನ್ನು ಮಾಡಿ ಯೋಜನೆಯೂ ಮೂ...ಲೆಸೇರುವಂತೆ ಮಾಡುತ್ತದೆ ಎಂದಿರುವ...ರು. ಅಂತೂ ಆರ್ಥಿಕ ಖಾತೆಯ ಅಧಿಕಾ...ರಿಗಳು ಈ ಸ್ವರಾಜ್ಯದಲ್ಲಿ ಸರ್ವತಂತ್ರ...ರಾಗಿದ್ದಾರೆ ಸರಕಾರದಲ್ಲಿ ಮಂತ್ರಿಗಳು ...ಅವರನ್ನು ವಿನಾ ಏನನ್ನೂ ಮಾಡಲಾರ...ದವರಾಗಿರುವೆರು

ಪ್ರಾಂತಿಕ ಸ್ವರಾಜ್ಯವು ಹೀಗೆ ಒಂದು ...ಹೆಸರು ಮಾತ್ರ ಆಗಿರುವದಾದರೆ, ಅಷ್ಟ...ರಿಂದ ಭಾರತೀಯರು ಹೇಗೆ ಸಂತೃಪ್ತ...ರಾಗಿರಬಹುದು. ಅವರು ನಿಜವಾದ ...ಅಧಿಕಾರ ಮತ್ತು ಸ್ವರಾಜ್ಯಪ್ರಾಪ್ತಿಗಾಗಿ ...ಪ್ರಯತ್ನಿಸುತ್ತಿರುವದು ಸ್ವಾಭಾವಿಕವಾಗಿ...ದೆ ಈ ಪ್ರಯತ್ನಗಳು ಯುದ್ಧಕಾಲದಲ್ಲಿ ...ಕಡಿಮೆ, ಮತ್ತು ಇತರ ಕಾಲಗಳಲ್ಲಿ ...ಹೆಚ್ಚಿಗೆಯಂದೇನೂ ಇರುವದಿಲ್ಲ ಸಂಪೂ...ರ್ಣ ಸ್ವರಾಜ್ಯ ಮತ್ತು ಸ್ವಾತಂತ್ರ್ಯವು ...ಮೊರೆಯದ ತನಕ ಆ ಪ್ರಯತ್ನಗಳು ...ನಡೆಯುತ್ತಲೇ ಇರುತ್ತವೆ. ಪರಂತು—...'ಭಾರತೀಯ ಸ್ವಾತಂತ್ರ್ಯದ ಕುರಿತು ನೀ...ವು ಹೇಳುವದೇನು? ಸ್ವಷ್ಟವಾಗಿ ಹೇಳಿ!' ...ಎಂದೇ ಕಾಂಗ್ರೆಸು ಬ್ರಿಟನನ್ನು ಕೇಳಿದರೆ, ...ಯುದ್ಧದ ಸಂಕಷ್ಟಕ್ಕೆ ಬಲಿಯಾದ ಬ್ರಿಟ...ನಿನ ಹತ್ತಿರ ಈಗ ಇಂಥ ಪ್ರಶ್ನೆಗಳನ್ನು ...ಕೇಳಬಾರದೆಂದು ಬ್ರಿಟಿಷರಲ್ಲಿ ಕಳುಹಿಸು...ವರು. ಬ್ರಿಟನಿನ ವಿಪತ್ತಿನ...ಉಪಯೋಗ ಮಾಡಿಕೊಂಡು ವ್ಯಾಪಾರಿ...ಲಾಭವನ್ನು ಪಡೆಯಲಿಕ್ಕೆ ಬ್ರಿಟನಿಗೆ ಕಾಂ...ಗ್ರೆಸು ಈ ಪ್ರಶ್ನೆಯನ್ನು ಹಾಕಿರುವದಿಲ್ಲ ...ಸ್ವಾತಂತ್ರ್ಯ ಸಾಧನೆಗೂ, ಅದರ ಮೂಲಕ ...ಲೋಕ ಶಾಂತಿಗೂ ಕಾಂಗ್ರೆಸು ಮಾಡ...ಬೇಕಾದ ಧ್ಯೇಯವೆಂದು ತಿಳಿಯುವದಕ್ಕೋ...ಸ್ಕರವೇ ಕಾಂಗ್ರೆಸು ಬ್ರಿಟನಿಗೆ ಈ ಪ್ರಶ್ನೆ...ಯನ್ನು ಹಾಕಿದೆ.

ಕಾಂಗ್ರೆಸಿನ ಕಾರ್ಯಕ್ರಮವೂ ಯು...ಕ್ತಿಯುಕ್ತವೂ ಆಗಿರುವದೆಂಬುದು ಈಗ ...ಲಾದರೂ ಜನರಿಗೆ ಸುಲಭವಾಗಿ ಗೊತ್ತಾ...ಗುವ ಹಾಗಿದೆ.



ಕೋಮಲವಾದ ಚರ್ಮಕ್ಕೆ
ಹೆಚ್ಚು ಪಾಲನೆಯ ಅವಶ್ಯವಿದೆ

ನಿಮ್ಮ ಮಕ್ಕಳ ಕೋಮಲವಾದ ಚರ್ಮಕ್ಕೆ ಕುಟಿಕೂರಾ ಟ್ಯಾಲೆಟ್ ಸಾಬೂನಿನಿಂದ (Cuticura Medicated Toilet Soap) ಹೆಚ್ಚಿನ ರಕ್ಷಣೆಯನ್ನು ಕೊಡಿರಿ ಇತರ ಸಾಬೂನುಗಳು ಮಕ್ಕಳ ಚರ್ಮದ ಕೋಮಲತ್ವವನ್ನೇ ನಾಶಮಾಡುವುವು. ಕುಟಿಕೂರಾ ಸಾಬೂನಿನಲ್ಲಿರುವ (Cuticura Soap) ಕ್ರಿಮಿನಾಶಕ ಗುಣವಿರುವ ಗುಣವುಳ್ಳ ವಿಷಧಿಯು ನೈಸರ್ಗಿಕ ಚರ್ಮವನ್ನು ನಿರ್ಮಲವಾಗಿರಿಸಿ ಕೋಮಲವಾಗಿರಿಸುವುದು

ಮಗು ವಿನ ಸಾನವು ಸಂಪೂರ್ಣವಾಗಬೇಕಾದರೆ ಅತ್ಯಂತ ನುಣುಪಾದ ಕುಟಿಕೂರಾ ಟಾಲಮ್ ಪೌಡರನ್ನು (Cuticura Talcum Powder) ಹಾಕಿರಿ

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರಿನಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಸೋಪ್
CUTICURA SOAP

Grand Xmas Offers

15 Cash Prizes to be won from—

1st to 31st December 1939

Rs 31 to the highest purchaser at a time

14 PRIZES 2nd Rs 25–3rd Rs 20–4thRs 15–5th Rs 10 & 10 prizes of Rs. 5 to the Lucky Numbers on cash Bills

Smartest Designs in piecegoods and Silk Sarees have lately received

Dont Fail to see them at—

JAYANTILAL BROS.,

CLOTH MERCHANTS,

Hampankatta, MANGALORE

N. B.—Drawing date will be 5th January 1940 at 5.30 p.m. Sri Dr K Vittal Shetty President, Dt. Bd Office S K has kindly consented to preside on this day

ಇಂದು ವಿಲಿಯಗಟ್ಟಿಲೆ ಜನರ ಪ್ರತಿದಿನದ ಉಪಯೋಗಕ್ಕಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್ (ರಜಿ)

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂ-ಳೂರು.

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

Estd. 1906

ಸ್ವದೇಶಾಭಿಮಾನಿ

SWADESHABHIMANI

KANNADA ILLUSTRATED WEEKLY

ಕಲ್ಪಿಂಚಕ ರಸ್ಯಕ್ಕ ಪ್ರಪಂಚವೇ ಎದುರು ನಿಂತಿದೆ!

ಇಟಲಿಯು ರಶ್ಯದೊಡನೆ ಕಾದುವುದು

ಜರ್ಮನಿಯು ಫಿನ್ಲೆಂಡಿಗೆ ಸಹಾಯ ಕೊಡುವುದು

ಅಮೇರಿಕವು ಸಮಯ ನೋಡುತ್ತಿದೆ

ಬ್ರಿಟನು ತೀವ್ರ ಆಲೋಚಿಸುತ್ತಿದೆ

ಫಿನ್ಲೆಂಡನ್ನು ಆಕ್ರಮಿಸಿರುವ ರಶ್ಯವು ತನ್ನ ಪ್ರಯತ್ನಗಳಲ್ಲಿ ಸಫಲವಾದರೆ ಯೂರೋಪದಲ್ಲಿ ರಶ್ಯವೇ ಪ್ರಬಲ ಶಕ್ತಿಯಾಗಿ ಪರಿಣಮಿಸುವುದು. ರಶ್ಯದ ಬೊಲ್ಶೆವಿಜಮ್ ತತ್ವವು ಆಗ ಯೂರೋಪಿನ ಎಲ್ಲ ರಾಷ್ಟ್ರಗಳಲ್ಲಿಯೂ ಹರಡಿಕೊಳ್ಳುವುದು. ಯೂರೋಪಿನ ಫಲಭರಿತ ಮೈದಾನುಗಳ ಮೇಲೆ ರಶ್ಯದ ಕರಡಿಯು ಮಾಡುವ ಹಾವಳಿಯನ್ನು ತಡೆಯುವುದು ಮತ್ತೆ ಯಾರಿಗೂ ಸಾಧ್ಯವಾಗದು ಆದ್ದರಿಂದ ರಶ್ಯವು ಈಗ ಯೂರೋಪಿನ ಎಲ್ಲ ರಾಷ್ಟ್ರಗಳ ಸಾಮಾನ್ಯ ಶತ್ರುವಾಗಿ ಪರಿಣಮಿಸಿದೆ.

ಜರ್ಮನಿಯ ಕ್ರೋಧ

ರಶ್ಯವು ಫಿನ್ಲೆಂಡನ್ನು ಆಕ್ರಮಿಸಿದ ಕುರಿತು ಹಿಟ್ಲರನಿಗೆ ಬಹಳ ಸಿಟ್ಟು ಬಂದಿರುವುದು ಆದರೆ ಅವನು ರಶ್ಯದೊಡನೆ ಅದೊಂದು ಒಡಂಬಡಿಕೆಯನ್ನು ಮಾಡಿಕೊಂಡಿರುವುದರಿಂದ ಬಂದ ಸಿಟ್ಟನ್ನು ಹಾಗೆಯೇ ನುಂಗಬೇಕಾಗಿ ಬಂದಿದೆ ಫ್ರೆಂಚರು ಮತ್ತು ಇಂಗ್ಲಿಷರೊಡನೆ ಹೋರಾಡುತ್ತಿರುವ ಹಿಟ್ಲರನಿಗೆ ರಶ್ಯದ ಮುನ್ನಗ್ಗುವಿಕೆಯನ್ನು ತಡೆಯುವುದೂ ಅಸಾಧ್ಯವಾಗಿದೆ ಆದ ಕಾರಣ ಅವನು ರಹಸ್ಯದಲ್ಲಿ ಫಿನ್ಲೆಂಡಿಗೆ ರಶ್ಯದ ವಿರುದ್ಧ ಮಾಡಬಹುದಾದ ಸಹಾಯವನ್ನಲ್ಲ ಮಾಡುತ್ತಲಿರುವನು ಅವನು ಫಿನ್ಲೆಂಡಿಗೆ ತಿಳಿಯದ ಹಾಗೆ ಪೆಟ್ರೋಲನ್ನು ಒದಗಿಸುತ್ತಿರುವನೆಂದು ಇಟಲಿಯ ಕಡೆಯಿಂದ ವಾರ್ತೆ ಇದೆ

ಇಟಲಿ ರಶ್ಯವನ್ನು ಹೋರಾಡುವುದು

ಅಮೇರಿಕದಲ್ಲಿ ಇಟಲಿಯ ರಾಯಭಾರಿಯು ಅಲ್ಲಿಯ ಅಧ್ಯಕ್ಷನಿಗೆ ರೂಜವೆಲ್ಟರನ್ನು ಕಂಡ ಸಂಭಾಷಿಸಿ ರಶ್ಯವು ಬಾಲ್ಟಿಕ ರಾಷ್ಟ್ರಗಳನ್ನು ಮುತ್ತುವುದಾದರೆ ಇಟಲಿಯ ಅದನ್ನು ತಡೆಯಲಿಕ್ಕೆ ತನ್ನ ಸೈನ್ಯವನ್ನು ಕಳುಹಿಸಿಕೊಡುವುದೆಂದು ಹೇಳಿದ್ದಾನೆ

ಅಮೇರಿಕ ಇಂಗ್ಲೆಂಡುಗಳ ಸಹಾಯ

ರಶ್ಯದ ಫಿನ್ಲೆಂಡಿನ ಅನ್ಯಾಯದಾಕ್ರಮಣಕ್ಕೆ ವಿರೋಧವು ಬೆಳೆಯುತ್ತ ಬಂದಿದೆ ಪ್ರಕಟವಾಗಿ ರಶ್ಯದ ಮೇಲೆ ಯುದ್ಧವನ್ನು ಸಾರಿದುದಾದರೆ, ಹಿಟ್ಲರನ ಶಕ್ತಿಯನ್ನು ಮುರಿಯುವುದು ಕಠಿಣವಾಗಬಹುದೆಂಬುದರಿಂದಲೇ ಇಂಗ್ಲಾಂಡು ಸುಮ್ಮನಿದೆ. ಆದರೂ ಕೂಡ ಅದು ಸಾಧ್ಯವಾದ ಮಟ್ಟಿಗೆ ಫಿನ್ಲೆಂಡಿಗೆ ಸಹಾಯವನ್ನು ಕೊಡುತ್ತಲಿದೆ. ಜನಾಂಗ ಸಂಘವು ಫಿನ್ಲೆಂಡಿಗೆ ಸಹಾಯ ಕೊಡಬೇಕೆಂದು ಎಲ್ಲ ರಾಷ್ಟ್ರಗಳನ್ನು ವಿನಂತಿ ಮಾಡಿಕೊಂಡಿರುವುದರಿಂದ ಅಮೇರಿಕ ಮೊದಲಾದ ಇತರ ರಾಷ್ಟ್ರಗಳಿಂದಲೂ ಫಿನ್ಲೆಂಡಿಗೆ ಸಹಾಯ ಬರಬಹುದು

ರಶ್ಯದ ದುರ್ಬಲತೆ

ಮೊದಲು ಯಾವ ಉತ್ಸಾಹದಿಂದ ರಶ್ಯವು ಫಿನ್ಲೆಂಡನ್ನು ಆಕ್ರಮಿಸಿತ್ತೋ ಈಗ ಆ ಉತ್ಸಾಹವು ರಶ್ಯದಲ್ಲಿ ಕಂಡು ಬರುವುದಿಲ್ಲ ಸೈನಿಕರಿಗೆ ಅನ್ನಬಟ್ಟೆಗಳ ಪೂರೈಕೆ ಕಡಿಮೆಯಾಗಿದೆ ಶತ್ರುವು ಹೊರಗಿನ ಶಕ್ತಿಯನ್ನು ಪಡೆದು ಪ್ರಬಲವಾಗುತ್ತಲಿರುವುದರಿಂದ ರಶ್ಯವು ತನ್ನ ಸೇನೆಗೆ ಹೊಸಬರನ್ನು ಕರೆಸಬೇಕಾಗಿಯೂ ಬಂದಿದೆ ಹಿಮವು ಈಗ ಜಾಸ್ತಿ ಬೀಳುತ್ತಲಿರುವುದೂ ಫಿನ್ಲೆಂಡಿಗೆ ಆತ್ಮರಕ್ಷಣೆ ಮಾಡಿಕೊಳ್ಳಲಿಕ್ಕೆ ಅನುಕೂಲವಾಗಿರುವುದು ಆದುದರಿಂದ ಫಿನ್ಲೆಂಡಿನ ರಣಭೂಮಿಯಲ್ಲಿ ರಶ್ಯವು ಹಿಮ್ಮೆಟ್ಟುತ್ತಿದೆಯಾದರೆ ಅದು ಆಶ್ಚರ್ಯವನ್ನುಂಟು ಮಾಡುವುದಿಲ್ಲ

ಹೊಟ್ಟೆಯುರಿ ಫಿನ್ಲೆಂಡಿನ ರಕ್ಷಣೆಗೆ

ಫಿನ್ಲೆಂಡ ಯೂರೋಪದ ಒಂದು ಸಣ್ಣ ರಾಜ್ಯ ಅದರ ಸೇನಾಶಕ್ತಿ ಅಲ್ಪವಾಗಿದ್ದು ಅದು ರಶ್ಯದ ಮಹಾಶಕ್ತಿಯ ತುಲನೆಗೆ ಎಷ್ಟು ಮಾತ್ರಕ್ಕೂ ಬಾರದು ಫಿನ್ಲೆಂಡನ್ನು ಅದರಷ್ಟಕ್ಕೆ ಬಿಟ್ಟರೆ ರಶ್ಯಕ್ಕೆ ಅದನ್ನು ತನ್ನ ಆಧೀನ ಮಾಡಿಕೊಳ್ಳುವುದು ದೊಡ್ಡ ಸಂಗತಿ ಏನೂ ಅಲ್ಲ ಪರಂತು ಯೂರೋಪಿನ ರಾಜಕೀಯ ರಂಗವು ಇಂದು, ಒಂದು ವಿಚಿತ್ರ ಪ್ರಕಾರದ ಈರ್ಷ್ಯೆಗಳಿಗೆ ಸ್ವಧಾರ ಭೂಮಿಯಾಗಿ ಪರಿಣಮಿಸಿದೆ ಅಲ್ಲಿಯ ಪ್ರತಿಯೊಂದು ರಾಷ್ಟ್ರವು—ಒಂದು ಇನ್ನೊಂದನ್ನು ತುಳಿದು ತಾನೇ ಸರ್ವಶಕ್ತ ಸ್ವತಂತ್ರವಾಗಿ ಇರಲು ಪ್ರಯತ್ನಿಸುತ್ತಲಿದೆ ಆದುದರಿಂದ ಒಂದರ ಉನ್ನತಿಯು ಇನ್ನೊಂದರ ಹೊಟ್ಟೆಯುರಿಗೂ ಒಂದರ ಅವನತಿಯೂ ಇನ್ನೊಂದರ ಸಂತೋಷಕ್ಕೂ ಕಾರಣವಾಗಿದೆ ಈ ಕಾರಣದಿಂದಲೇ ಫಿನ್ಲೆಂಡನ್ನು ರಶ್ಯವು ಆಕ್ರಮಿಸಿರುವಾಗ ಪರಸ್ಪರ ಶತ್ರುಗಳಾದ ಇಂಗ್ಲಾಂಡ ಜರ್ಮನಿಗಳು ಕೂಡ ಒಂದಾಗಿ ಫಿನ್ಲೆಂಡಿಗೆ ಸಹಾಯ ಮಾಡಲು ನೋಡುತ್ತವೆ. ಯೂರೋಪದ ರಾಷ್ಟ್ರಗಳ ಪರಸ್ಪರ ಈ ಹೊಟ್ಟೆಯುರಿಯೇ ರಶ್ಯದ ಕಾಲತುಳಿತದಿಂದ ದುರ್ಬಲ ಫಿನ್ಲೆಂಡನ್ನು ಕಾಪಾಡಬಹುದು.

ರಾತ್ರೆ ಸುಖವಾದ ನಿದ್ದೆ ಬೀಳಬೇಕಾದರೆ ಒಂದು ಕಪ್ಪು 'ಓವಲ್‌ಟಿನ್' ಕುಡಿಯಿರಿ!

ನಿದ್ದೆ ಮಾಡಲು ಹಾಸಿಗೆಗೆ ಹೋಗುವ ಕೊಂಚ ಸಮಯದ ಮೊದಲು ಒಂದು ಕಪ್ಪು 'ಓವಲ್‌ಟಿನ್' ಕುಡಿದರೆ ರಾತ್ರೆ ಸುಖವಾದ ನಿದ್ದೆಯೂ ಪ್ರಾತಃಕಾಲ ಏಳುವಾಗ ಒಂದು ತರದ ಶಕ್ತಿಯ ಉತ್ಸಾಹ ತುಂದೆಂದು ಖಂಡಿತ ಹೇಳಬಹುದು

ಇಷ್ಟು ಮಾತ್ರವಲ್ಲದೆ ಉತ್ತಮವಾಗಿ ಬಲಿತು ಮಾಗಿದ ಬಾರ್ಲಿ, ದೆನದ ಹಾಲು ಮತ್ತು ಇತರ ಅಮೂಲ್ಯವಾದ ವಿಟಮಿನ್ ಮತ್ತು ಫೊಸ್ಫೆಟ್ಟೈಡ್ಸ್‌ಗಳಿಂದ ತಯಾರಿಸಲ್ಪಟ್ಟ 'ಓವಲ್‌ಟಿನ್' ಉತ್ತಮ ಆಹಾರ ಮಾತ್ರವಲ್ಲದೆ, ರಾತ್ರೆ ಸುಖವಾದ ನಿದ್ದೆಯೂ, ಶರೀರ ಬೆಳವಣಿಗೆಗೂ ಸಹಕಾರಿಯಾಗಿರುತ್ತದೆ ಇತರ ನಕಲಿ ಪಾನೀಯಗಳನ್ನು ಬಿಡಿರಿ

'ಓವಲ್‌ಟಿನ್'

'OVALTINE ಒಂದು ಪುಷ್ಟಿಕರವಾದ ಆಹಾರಪಾನೀಯವು'

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.

ವಿತರಣಾಕಾರರು:—

ಜೇಮ್ಸ್ ರೈಟ್ ಲಿಮಿಟೆಡ್,

148 ಬ್ರೋಡ್‌ವೇ, ಮದ್ರಾಸು

ಕಲ್ಕತ್ತಾ, ಬೊಂಬಾಯಿ ಮತ್ತು ಕರಾಚಿ.

'ಓವಲ್‌ಟಿನ್' ಬಿಸ್ಕುಟುಗಳು:—

ರುಚಿಕರ, ಜೀರ್ಣಕರ ಮತ್ತು ಪೋಷಣಯುಕ್ತವಾದುವು ಎಲ್ಲ ಸಮಯಗಳಿಗೂ ಉತ್ತಮವಾದ ಬಿಸ್ಕುಟುಗಳು. ಇವುಗಳಲ್ಲಿ ವಿಶಿಷ್ಟ ಬೆಲೆಯ 'ಓವಲ್‌ಟಿನ್' ಸೇರುವುದು, 4 ಮತ್ತು 8 ಔನ್ಸುಗಳ ಪೆಕೆಟುಗಳಲ್ಲಿ ಮತ್ತು ಒಂದು ರಾತ್ರಿನ ಟಿನ್ನುಗಳಲ್ಲಿ ದೊರಲ್ಪಡುತ್ತದೆ.

OV 66/39

ಜಿಲ್ಲಾ ಸಮಾಚಾರ

ಮಂಗಳೂರು

ಸಭೆ:—ತಾ. ೧೫ರಲ್ಲಿ ಬೀದಿ ಕೆಲಸಗಾರರ ಸಭೆಯೊಂದು ಮೈದಾನದಲ್ಲಿ ನಡೆಯಿತು. ಮುಷ್ಕರದ ಕುರಿತು ಭಾಷಣಗಳಾದುವು.

ಗೀತಾ ಜಯಂತ್ಯುತ್ಸವವು:—ಈ ದಿನ ಸಾಯಂ. ೬ ಘಂಟೆಗೆ ನರಿಯಾಗಿ ಉಳ್ಳಾಲ ರಘುನಾಥಯ್ಯನವರ ಸ್ಮಾರಕ ಮಂದಿರದಲ್ಲಿ ಶ್ರೀ. ಸ್ವಾಮಿ ಸುವೀರಾನಂದಜಿಯವರ ಅಧ್ಯಕ್ಷತೆಯಲ್ಲಿ ಜರಗುವುದು. ಡಾ॥ ಯು. ಶಿವರಾಯರೂ, ಮೈಸೂರಿನ ಡಾ॥ ಶ್ರೀನಿವಾಸಾಯರೂ, ಶ್ರೀ॥ ಮೂಲ್ಕಿ ಸುಬ್ರಹ್ಮಣ್ಯಾಯರೂ ಮತ್ತು ಶ್ರೀ॥ ಶ್ರೀ॥ ಸಿದ್ಧೋದಿ ಅನಂತ ಉಪಾಧ್ಯಾಯರೂ ಗೀತೆಯ ವಿಷಯವಾಗಿ ಪ್ರವಚನಗಳಿರುವುವು.

ದ. ಕ. ವಿದ್ಯಾರ್ಥಿಗಳ ಸಮ್ಮೇಳನ:—ಮುಂದಿನ ವೀರ ನರಿಮೇನರ ಅಧ್ಯಕ್ಷತೆಯಲ್ಲಿ ಮಂಗಳೂರಲ್ಲಿ ಜನವರಿ ತಿಂಗಳ ಕಡೆಯ ವಾರದಲ್ಲಿ ಜರಗಿಸುವ ಆಲೋಚನೆ ನಡೆಯುತ್ತಿದೆಯೆಂದು ತಿಳಿದುಬರುತ್ತದೆ.

ಯು. ಎಲ್. ಎ. ಯವರ ಪತ್ರ:—ಶ್ರೀ॥ ಕೆ. ಉದ್ದಪ್ಪ ಯು. ಎಲ್. ಎ. ಅವರು ತಾ. ೬. ಯು. ಸಿ. ಇಜಾಗೊಂದು ಪತ್ರ ಬರೆದು ಅದರಲ್ಲಿ ಶ್ರೀ॥ ರಾಜಾಜಿ, ಕಾಂಗ್ರೆಸ್ಸು ಕಾಂ. ಮಂತ್ರಿಮಂಡಲವನ್ನೂ ಮೂಲವ್ಯವಸ್ಥೆಯನ್ನೂ ಕುರಿತು ಸ್ವಲ್ಪ ಹೇಳಿದ್ದರೂ (ಕೆಲವೆಡೆಗಳಲ್ಲಾದರೂ) ದೊರೆತು ದು ರಾಷ್ಟ್ರಸಭೆಯ ಮತ್ತು ಕಾಂಗ್ರೆಸ್ ಕಡೆಯ ಮಂತ್ರಿಗಳ ಸಹಾಯದಿಂದ ಎಂದೂ ಹೇಳಿ ಈ ರೀತಿಯ ಟೀಕೆಗಳಿಂದ ಸಾಜನವಾಗಿ ದೊರಕಬಹುದಾದ ಸೌಲಭ್ಯಗಳನ್ನು ಶ್ರೀ॥ ರಾಜಾಜಿ ಕೆಡಿಸುವರೆಂದೂ ತಿಳಿದಂತಾಗುತ್ತದೆ.

ದ. ಕ. ಜಿಲ್ಲಾ ಬೋರ್ಡು ಎಲಿಮೆಂಟರಿ ಶಾಲಾ ಅಧ್ಯಾಪಕರ ಸಂಘ, ಮಂಗಳೂರು:—ಈ ಸಂಘದ ಸಂಸ್ಥಾಪನೆಯ ಒಗ್ಗೆ ಹಾಗೂ ಅದರತೆ ಮಂಗಳೂರಿನ ಒಗ್ಗೆ, ಇಲ್ಲಿಂದ ಇನ್ನು ಅನವು ತಿಂಗಳ ಮೇಲೆ ಒಂದೇ ಸಾರಿದಲ್ಲಿ ಮಹಾಸಭೆಯನ್ನು ಜರಗಿಸುವುದಾಗಿ ನಿಶ್ಚಯಿಸಿದ್ದೆವೆ. ಸರಿಯಾದ ತಾರೀಕನ್ನು ಹಿಂದಿನಂದೆ ಪ್ರಚುರಪಡಿಸಲಾಗುವುದು. ಆದ್ದರಿಂದ ಈ ಜಿಲ್ಲೆಯಲ್ಲಿ ತಾಲೂಕು ಸಂಘಗಳು ಇರುವಲ್ಲಿ ಅಂತಹ ಸಂಘದಿಂದ ಕನಿಷ್ಠ ಪಕ್ಷ ೧೦ ಮಂದಿ ಪ್ರತಿನಿಧಿಗಳನ್ನು, ತಾಲೂಕ ಸಂಘ ಇಲ್ಲದಿದ್ದಲ್ಲಿ ಪ್ರತಿ ಒಂದು ಸೆಂಟರ್ ಸಂಘದಿಂದ ಒಬ್ಬೊಬ್ಬ ಪ್ರತಿನಿಧಿಯನ್ನು ಆಯಸಿ ಕಳುಹಿಸಿಕೊಡಬೇಕಾಗಿ ಅಪೇಕ್ಷಿಸೋಣಗುತ್ತದೆ. ಈ ವರೆಗೆ ಸಂಘದ ಮೆಂಬರಾಗಿ ಸೇರಿದ್ದವರು ಅದಷ್ಟು ಬೇಗನೇ ಸೇರಿ ಸಂಘದ ಪುರೋಭಿವೃದ್ಧಿಯಲ್ಲಿ ಕೈಗೊಟ್ಟು ನಡೆಸಬೇಕಾಗಿ ಸವಿನಯ ವಿನಂತಿ ಎಂದು ಅಧ್ಯಕ್ಷರಾದ ಮುಲ್ಕಿ ಶ್ರೀ ಬಿ. ಭೋಜರಾಜ್ ಇವರು ತಿಳಿಸುತ್ತಾರೆ.

ಸುರತ್ಕಲ್:—ಇದೇ ತಾ. ೩೩ನೆಯ ಶುಕ್ರವಾರ ರಾತ್ರಿ ಗಂಟೆ ೮ರಿಂದ ೨ರ ತನಕ ಇಲ್ಲಿಯ 'ಧರ್ಮಶಾಲೆ'ಯಲ್ಲಿ ಗೌಡ ಸಾರಸ್ವತ ಬ್ರಾಹ್ಮಣರು ವಿಶೇಷವಾಗಿ ನಡೆಯಿಸುತ್ತಿರುವ 'ಭಜನೆ'ಯ ಮಂಗಳೋತ್ಸವವು ಮಹಾ ಸಂಭ್ರಮದಿಂದ ನೆರವೇರಲಿದೆ ಸರ್ವರಿಗೂ ಸುಸ್ವಾಗತವಿದೆ.

ಕಾಸರಗೋಡು

ಪೆರಡಾಲ:— ಹಳೆಯ ವಿದ್ಯಾರ್ಥಿ ಸಂಘ, ಎಂ. ಎಸ್. ಕಾಲೇಜ್:—ಪೆರಡಾಲ ಮಹಾಜನ ಸಂಸ್ಕೃತ ಕಾಲೇಜಿನ ಹಳೆಯ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ತಾ. ೩೩ರಂದು ಕರ್ನಾಟಕ ಪ್ರಸಿದ್ಧ ಸಾಹಿತಿಗಳಾದ ವಿದ್ವಾನ್ ಶ್ರೀ॥ ಕಡಗೋಡ್ಲು ಶಂಕರಭಟ್ಟರ ಅಧ್ಯಕ್ಷತೆಯಿಂದ ಜರಗಲಿರುವುದು. ಕಾಲೇಜಿನ ಹಳೆಯ ವಿದ್ಯಾರ್ಥಿಗಳೆಲ್ಲರೂ ಆ ದಿನ ಬಂದು ಉತ್ಸವದಲ್ಲಿ ಭಾಗವಹಿಸಬೇಕಾಗಿ ಆಗ್ರಹದ ವಿನಂತಿ.

ಕಾಲೇಜ್ ದೇ:—ಪೆರಡಾಲ ಎಂ. ಎಸ್. ಕಾಲೇಜಿನ ಕಾಲೇಜ್ ದೇ ದಿನಾಚರಣೆಯು ದಕ್ಷಿಣಕನ್ನಡದ ಜಿಲ್ಲಾ ಜಡ್ಜರಾದ ಶ್ರೀ ರಾಜಗೋಪಾಲಾಚಾರ್ಯರ ಅಧ್ಯಕ್ಷತೆಯಿಂದ ತಾ. ೩೩ರಂದು ಜರಗುವುದಾಗಿ ತಿಳಿದುಬರುತ್ತದೆ.

ಉಡುಪಿ

ನಗರಸಭೆ:—ಯವರು ಸಿಯಾಯ ಮಹೋತ್ಸವದ ಸಮಯ ಅದೇಶ್ಯ ವ್ಯವಸ್ಥೆಯ ಬಗ್ಗೆ ತಂ ರಾ ಮಂಜೂರು ಮಾಡಿದ್ದಾರೆ.

ಮೂಲ ಪಾಠ ಶಾಲಾ ಮಾಸ್ತರರ ಸಭೆ:—ಉಡುಪಿ ತಾಲೂಕು ಎಲಿಮೆಂಟರಿ ಮೂಲ ಪಾಠ ಶಾಲಾ ಮಾಸ್ತರರ ಯೂನಿಯನ್ನಿನ ಕಾರ್ಯಕಾರಿ ಮಂಡಳಿಯ ಸಭೆಯು ಮಿ॥ ಸಿಲ್ವೆಸ್ಟರ್ ಫೆರ್ನಾಂಡೀಸರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಸ್ತುತ ಜ್ಯಾರಿಯಲ್ಲಿರುವ ವರುಷ ಒಂದರ ಬದಲು ಶಾಲಾ ದಿನಗಳನ್ನು ೨೦೦ಕ್ಕೆ ಏರಿಸುವ ಯೋಜನೆಯನ್ನು ಸಮೀಕ್ಷಿಸಲಾಯಿತು. ಹಾ. ಎ. ಶಾಲೆಗಳಿಂದ ಹೈಸ್ಕೂಲುಗಳಿಗೆ ಈ ವರೆಗೆ ಯಾವ ರೀತಿಯಲ್ಲಿ ಪ್ರವೇಶ ದೊರೆಯುತ್ತಿತ್ತೊ ಅಂತೆಯೇ ಮುಂದಕ್ಕೆ ಪ್ರವೇಶ ಇರಬೇಕೆಂದೂ, ಚುನಾವಣೆಗಳಲ್ಲಿ ಪ್ರಾಥಮಿಕ ಶಾಲೆಯ ಅಧ್ಯಾಪಕ ವೃಂದವು ಕೈಯಿಂದ ಕಡಿಮೆಯಾದರೆ ಅಧ್ಯಾಪಕರ ಸಂಗಡ ಸಕ್ಕ ಬಂಧುತ್ವಗಳಿಗೆ ತಡೆ ಹಾಕಿದಂತಾಗುವುದೆಂದೂ, ಈ ಕಾರಣ ಪ್ರಾಥಮಿಕ ಗಣೇಕರೆಂದೂ ಸೂಚಿಸಲಾಯಿತು. ಉಪಾಧ್ಯಾಯ ವೃತ್ತಿಯಿಂದ ೫೫ ವರ್ಷಗಳಿಗೆ ನಿವೃತ್ತಿಹೊಂದಬೇಕೆಂದು ಸೂಚಿಸಿದ ಯೋಜನೆಯನ್ನು ನಿಷೇಧಿಸಿ ಮುಂದಿನಂತೆಯೇ ೬೦ ವರ್ಷಗಳ ವಿಧಾನವನ್ನು ಊರ್ಜಿತದಲ್ಲಿಟ್ಟುಕೊಳ್ಳತಕ್ಕ ವಿನಂತಿ ಸರಕಾರವನ್ನು ವಿನಂತಿಸಲಾಯಿತು.

ಕಾರ್ಕಳ

ಗೌಡಸಾರಸ್ವತ ಬ್ರಾಹ್ಮಣ ಸಮಾಜದ ಗುರುವರ್ಯರಾದ ಶ್ರೀಮತ್ ಭುವನೇಂದ್ರ ತೀರ್ಥ ಸ್ವಾಮಿಯವರ ಪುಣ್ಯತಿಥಿಯು ತಾ॥ ೧೦-೧೨-೩೯ರ ದಿನ ಇಲ್ಲಿ ನಗರ ಸಂಕೀರ್ತನ, ಬ್ರಾಹ್ಮಣ ಸಂತರ್ಪಣೆ ಉತ್ಸವ, ಪೂಜೆ, ವಿಶೇಷೋಪಾದಿಗಳಿಂದ ಶ್ರೀ ವೆಂಕಟ್ರಮಣ ದೇವಾಲಯದಲ್ಲಿ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು.

ಕಳೆದ ವರ್ಷ ಹೊಸದಾಗಿ ಸ್ಥಾಪಿತವಾದ ಎಡಿಶನಲ್ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನ ಅವಧಿಯು ಮುಗಿದು ಅದನ್ನು ಬೇರೆ ಕಡೆಗೆ ವರ್ಗಾಯಿಸಿದ ನಿಮಿತ್ತ, ಅದರ ಮುನ್ಸಿಫರಾಗಿದ್ದ ಶ್ರೀ ವೆಂಕಟಪ್ಪ ಬಿ. ಎ., ಬಿ. ಎಲ್, ರವರನ್ನು ಬೀಳ್ಕೊಡುವ ಒಂದು ಸಮಾರಂಭವು ಕಳೆದ ವಾರ ಕೋರ್ಟಿನ ವಠಾರದಲ್ಲಿ ನಡೆದು ಉಪಹಾರ ಸತ್ಕಾರ ಮತ್ತು ಸಂದರ್ಭೋಚಿತ ಭಾಷಣಗಳಾದುವು.

ಪುತ್ತೂರು

ಧರ್ಮಸ್ಥಳ:—ವಿವಿಧ ಧರ್ಮ ಸಮ್ಮೇಳನ:—ತಾ. ೧೯ರಂದು ವಿವಿಧ ಧರ್ಮ ಸಮ್ಮೇಳನವು ಧರ್ಮಸ್ಥಳದಲ್ಲಿ ಜರಗಿತು. ಶ್ರೀ ಮಂಜಯ್ಯ ಹೆಗ್ಗಡೆಯವರು ಸ್ವಾಗತ ಭಾಷಣ ಮಾಡಿದರು. ಪ್ರವೀಣ ಬೆಳ್ಳೂರದ ಶ್ರೀ ಚಾಂದುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮಿಯವರಿಂದ ಆ ದಿನದ ಸಭಾಕಾರ್ಯದ ಉದ್ಘಾಟನೆಯಾಯಿತು. ಆ ದಿನ ಶ್ರೀ॥ ಕೆ. ಬಿ. ಜನರಾಜ ಹೆಗ್ಡೆ ಎಂ. ಎಲ್. ಎ. (ಕೇಂದ್ರ) ಇವರು ಅಧ್ಯಕ್ಷರಾಗಿದ್ದರು. ಬಿಜಾಪುರದಿಂದ ಶ್ರೀ. ಭ. ಪರ್ವೀಕರ್ ಮಂಜಪ್ಪನವರೂ ಹೊಂಬುಜ ಮಠದ ಶ್ರೀ ಅರ್ಹದ್ವಾಸವಾರ್ಷಸಾಗರ ವರ್ಣಿಯವರೂ ಆಗಮಿಸಿದ್ದರು. ಆ ದಿನ ಜೇಮಸ್ಥಾನಗಳ ಮತ್ತು ಮಠಗಳ ಕರ್ತವ್ಯ, ದೇವತೆಗಳ ಆಸ್ತಿತ್ವ ಮತ್ತು ಮತ್ತು ಈ ವಿಷಯದ ಕುರಿತು ವಿದ್ವಾಂಸರ ಭಾಷಣಗಳಾದುವು.

ಮಾರನೆಯ ದಿನ ಶ್ರೀ. ಭ. ಮಂಜಪ್ಪನವರು 'ಶಿವಲಿಂಗದ ಮಹತ್ವ'ದ ವಿಷಯ ಭಾಷಣ ಮಾಡಿದರು. ಆ ಮೇಲೆ ಶ್ರೀ ಎನ್. ಅನಂತೋಪಾಧ್ಯಾಯರು ವೇದಗಳ ಕುರಿತೂ, ಶ್ರೀ ಅರ್ಹದ್ವಾಸವಾರ್ಷಸಾಗರ ವರ್ಣಿಯವರು ಕಾಲ ಮತ್ತು ಆಕಾಶದ ಕುರಿತೂ ಭಾಷಣಮಾಡಿದರು. ಶ್ರೀ ಮಂಜಯ್ಯ ಹೆಗ್ಗಡೆಯವರು ಒಂದನೆ ದಿನ ಎಂಗಳ ಆಚಾರ ಮನ್ನಿಸಿದರು.

ಕರ್ನಾಟಕ

ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು:—ತಾ. ೧೧-೧೨-೩೯ರಲ್ಲಿ ಕರಿಷತ್ತಿನ ಕಾರ್ಯಸಮಿತಿಯ ಅಧಿವೇಶನದಲ್ಲಿ ಸರ್ವಾನುಮತದಿಂದ ಅಂಗೀಕಾರವಾದ ನಿರ್ಣಯ:—

'ಇತ್ತೀಚೆಗೆ ಪರಿಷತ್ತಿನ ಘೋಷಣೆಯ ಮತ್ತು ಕಾರ್ಯಕಲಾಪಗಳ ವಿಷಯದಲ್ಲಿ ಅದರ ಉಪಾಧ್ಯಕ್ಷರನ್ನು ಕುರಿತು ಕೆಲವೆಂದು ಪತ್ರಿಕೆ ಮತ್ತು ವ್ಯಕ್ತಿಗಳು ಪ್ರಚುರಪಡಿಸುತ್ತಿರುವ ಆಕ್ಷೇಪ ಮತ್ತು ಅಭಿಪ್ರಾಯಗಳನ್ನು ಕುರಿತು ಕಾರ್ಯಸಮಿತಿಯು ತನ್ನ ಅಭಿಪ್ರಾಯವನ್ನು ಸ್ಪಷ್ಟಪಡಿಸುವ ಅವಶ್ಯಕತೆ ಕಾಣಿಸಿರುವುದರಿಂದ ಪರಿಷತ್ತಿನ ಕಾರ್ಯಸಮಿತಿಯು ಈ ಸಭೆ ಅಂತಹ ಆಕ್ಷೇಪಣೆಗಳು ನಿರಾಧಾರವಾದುವೆಂದೂ ಕಾರ್ಯಸಮಿತಿಯ ಘೋಷಣೆಯನ್ನೇ ಉಪಾಧ್ಯಕ್ಷರು ನಿರ್ವಹಿಸಿರುವರೆಂದೂ ಮತ್ತು ಅವರಲ್ಲಿ ಸಂಪೂರ್ಣ ನಂಬಿಕೆಯನ್ನು ಸಮಿತಿ ಇರಿಸುತ್ತಿದೆಯೆಂದೂ ಸರ್ವಾನುಮತದಿಂದ ಹೇಳುತ್ತದೆ' ಎಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಮೊಗವೀರ ವ್ಯವಸ್ಥಾಪಕ ಮಂಡಳಿ ಮುಂಬಾಯಿ

ದುಃಖಸೂಚಕ ಠರಾವು:—ಮೊಗವೀರ ವ್ಯವಸ್ಥಾಪಕ ಮಂಡಳಿಯ ದ್ವಿತೀಯ ಪೋಷಕರಾಗಿದ್ದು ಇದರ ಮಂಗಳೂರು ಶಾಖೆಯ ಅಧ್ಯಕ್ಷರಾಗಿದ್ದ ಶ್ರೀಯುತ ಮುಲ್ಕಿ ಕೆ. ಎಮ್. ಸೋಮನವರು ಇದೇ ಕಳೆದ ತಿಂಗಳ ತಾರೀಕು ತಾ॥ ೧೧-೧೨-೩೯ರಲ್ಲು ದೈವಾಧೀನರಾದ ವಿಷಯವಾಗಿ ಬೊಂಬಯಿ ಮೊಗವೀರ ವ್ಯವಸ್ಥಾಪಕ ಮಂಡಳಿಯವರು ತಾ. ೧೦-೧೨-೩೯ರಲ್ಲು ದುಃಖಸೂಚಕ ಠರಾವು ಮಂಜೂರುಮಾಡಿದರು.

ಬೆಳಗಾವಿ

ಗ್ರಂಥ ಪ್ರದರ್ಶನ:—ಕನ್ನಡ ಸಾಹಿತ್ಯ ಪ್ರದರ್ಶನವೊಂದನ್ನು ಏರ್ಪಡಿಸಿಕೊಳ್ಳಾಗಿದೆ.

ಶಿಕ್ಷಕರಿಗೆ ರಜೆ:—ಕನ್ನಡ ಸಮ್ಮೇಳನ ತಿಳಿದೇ ಅಧಿವೇಶನದ ಸಮಯದಲ್ಲಿ ಶಿಕ್ಷಕರಿಗೆ ರಜೆ ಕೊಡುವುದು ಬಂಬಯಿ ಸರಕಾರದ ಡಾಯರೆಕ್ಟರ್ ಸಲ್ಲಿಕೆ ಇನ್ಸ್‌ಪೆಕ್ಟನ್ ಅವರು ಆಜ್ಞೆ ಸಿಕ್ಕಿರುತ್ತಾರೆ.

ಮೈಸೂರು ಕಾಂಗ್ರೆಸ್ ವ್ಯವಹಾರ

ಶ್ರೀ॥ ಮಹದೇವದೇಸಾಯಿಯವರ ರಾಯಭಾರ:—ಮಹಾತ್ಮ ಗಾಂಧಿಯವರ ಆಪ್ತ ಕಾರ್ಯದರ್ಶಿಗಳಾದ ಶ್ರೀ ಮಹಾದೇವದೇಸಾಯಿಯವರು ಇತೆಯ ತಾ. ಬೆಂಗಳೂರಿಗೆ ಬಂದಿರುವರು. ಸರಕಾರಕ್ಕೂ ಕಾಂಗ್ರೆಸ್ಸಿಗೂ ಗೌರವಯುತವಾದ ಒಪ್ಪಂದ ಮಾಡುವ ಸಂಭವವಿದೆಯೇ ಎಂಬುದನ್ನು ಸಂಸ್ಥಿತಿಯ ಮೂಲಕ ಪರೀಕ್ಷಿಸುವರು.

ಬೆಂಗಳೂರು

ಮೈಸೂರು ಕಾಂ ವರ್ಕಿಂಗ್ ಕಮಿಟಿ:—ಮೈಸೂರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಮೂರು ದಿನಗಳ ವರೆಗೆ ನಡೆದು ಮೈಸೂರು ರಾಜಕೀಯ ಸಂಘರ್ಷಗಳ ಅಂಗೀಕಾರ ಕಾರ್ಯವಾಗಿಲ್ಲವೆಂದೂ, ಜವಾಬ್ದಾರಿ ಸರಕಾರದ ಘೋಷಣೆಯನ್ನು ಸೂಚಿಸಿದ್ದಿಲ್ಲವೆಂದೂ, ಕಾನೂನ ಸಭೆಗಳಲ್ಲಿ ಕೋಮುವಾರಿ ಪ್ರಾತಿನಿಧ್ಯ ವಿಲ್ಲದೆ ಕೆಲಸ ನಡೆಯಲು ಇಚ್ಛಿಸುವುದೂ ಕೊಂದರೆಯಾಗಿದೆಯೆಂದೂ, ವಿಧಾನಸಭೆಗಳಿಗೆ ಕೊಟ್ಟಿರುವ ಅಧಿಕಾರವು ಜವಾಬ್ದಾರಿ ಸರಕಾರದ ಕೇಳಿಕೆಗೆ ಅವನತವಾದ ಮಾಡಿದಂತಾಗಿದೆ ' ಎಂದೂ ಠರಾವು ಮಾಡಿತು.

ಮೈಸೂರಿನಲ್ಲಿ ಹೋಳಿಯನ್ನು ಮತ್ತಷ್ಟು ತೀವ್ರವಾಗಿ ಮುಂದುವರಿಸುವುದಾಗಿ ಠರಾವು ಮಾಡಿತು. ಶ್ರೀಯುತ ಚಾಂದಲಾಯ ರೆಡ್ಡಿಯವರು ಮಹಾತ್ಮಾಗಾಂಧಿಯವರನ್ನು ಒಳಗೊಂಡ ಮೈಸೂರಿನ ಪರಿಸ್ಥಿತಿಯನ್ನು ಆಗಾಗ್ಗೆ ಮಹಾತ್ಮಾ ಗಾಂಧಿಯವರಿಗೆ ತಿಳಿಸಬೇಕೆಂದೂ ತೀರ್ಮಾನವಾಯಿತು.

ಹೊಸಕೋಟೆ ಕೃಷ್ಣರಾಯರ ಅಕಾಲ ನಿಧನ:—ಶ್ರೀ ಹೊಸಕೋಟೆ ಕೃಷ್ಣರಾಯರು ಒಂದೂವರೆ ರಾತ್ರಿ ಉಡುಪಿಯ ಮರಣಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಕಳೆದ ಅನೇಕ ದಿವಸಗಳಿಂದ ಇವರಿಗೆ ಅತಿಸಾರದಿಂದ ಬಳಲುತ್ತಿದ್ದರು.

ಶ್ರೀ ಹೊಸಕೋಟೆ ಕೃಷ್ಣರಾಯರು ಶ್ರೀಂಗೇರಿಯ ಸಮೀಪದ ಅಡಗದ್ದೆಯಲ್ಲಿ ಶ್ರೀಮಂತ ಕುಟುಂಬದಲ್ಲಿ ಜನಿಸಿದರು. ಇವರು ಕರೂರ ಜಿಲ್ಲಾ ಬೋರ್ಡಿನ ಮೆಂಬರರು ಕೆಲಕಾಲ ಪ್ರಸಿಡೆಂಟರೂ ಕೆಗಿದ್ದರಲ್ಲದೆ ಮೈಸೂರು ಕೌನ್ಸಿಲ್ ಮತ್ತು ಅಸೆಂಬ್ಲಿಯ ಸದಸ್ಯರಾಗಿದ್ದರು. ಇವರು ಸಾರ್ವಜನಿಕ ಜೀವನದಲ್ಲಿ ಮುಖಂಡರುಗಳಾಗಿ ಅನೇಕ ವರ್ಷಗಳ ವರೆಗೆ ಕಾರ್ಯ ಮಾಡಿದರು. ಕಾಂಗ್ರೆಸಿನ ಚಳವಳಿದಲ್ಲಿ ಬಹಳವಾಗಿ ಮುಖಂಡತೆ ಹೆಚ್ಚಿನ ದೇಶಸೇವೆ ಸಲ್ಲಿಸಿದರು. ಅದರ ಇತ್ತೀಚೆಗೆ ಪ್ರಕೃತಿಯ ಅಸ್ವಸ್ಥತೆ ಮೂಲಕ ಅವರು ಸಾರ್ವಜನಿಕ ಕಾರ್ಯಗಳಿಂದ ನಿವೃತ್ತರಾಗಬೇಕಾಯಿತು. ಇವರ ಮರಣದಿಂದ ಕನ್ನಡ ನಾಡು ಪ್ರಸಿದ್ಧ ದೇಶಭಕ್ತರೊಬ್ಬರನ್ನು ಕಳೆದುಕೊಂಡಂತಾಗಿ ಕನ್ನಡದವರಿಗೆ ಅಪಾರ ನಷ್ಟ

ಯುದ್ಧವಾರ್ತೆ!

ಮಧ್ಯದಲ್ಲಿ ಸಿಲುಕಿದ ಜರ್ಮನ್ನ್ ಹಡಗಿನ ದುರಂತ!

ಗ್ರಾಫ್ ಸ್ಪೀ ಹಡಗದ ವಿಧ್ವಂಸ!

ನೋರ್ವೇ ಗಡಿಯಲ್ಲಿ ರಶ್ಯದ ಸೈನಿಕರು

ಭಯಂಕರ ಯುದ್ಧ ! ಪಶ್ಚಿಮ ರಣರಂಗದಲ್ಲಿ ಯುದ್ಧಗೊಂದಲ

ಅಧಿವೇಶನ

ಮುಂಡಳವು ಸಭೆ ವಿನ್‌ಲೆಂಡುಗಳ ರಾಷ್ಟ್ರ ಸಂಘವು ದೊಂತ್ತಿದ್ದಿತೆಷ್ಟೆ? (ಲೀಗ್ ಓಫ್ ನೇ ಪ್ರಿ ಜನಿಸಾದಲ್ಲಿ ಸಭೆ ಅದರಲ್ಲಿ ರಶ್ಯವನ್ನು ಸಂ ರಾಷ್ಟ್ರಗಳ ಪ್ರತಿನಿಧಿಗಳು ಹಲವು ಪ್ರತಿನಿಧಿಗಳು ವೇಶವರ ಭಾಷಣಮಾಡಿದರು ಸಂಘವು ನಿಯಮಿಸಿದ ಗ್ರ ತಿಯು ರಶಿಯವು ಯುದ್ಧ ಸಬೇಕೆಂದೂ ೨೪ ತಾಸು ರ ಕೊಡದಿದ್ದರೆ ರಶ್ಯವನ್ನು ಹೊರಗೆ ಹಾಕಲಾಗುವು ಳಿಸಿತು

ರಶ್ಯದ ಉತ್ತರ

ಲಹಕಂಬಳಕಾಗಿ ದುರ್ಬಲ ಫಿನ್ಲೆಂಡನ್ನು ಕಬಳಿಸಲು ಮುಂದೊತ್ತಿದ ಸ್ಪಾರಿನನು ಗೆ ಭಯವಡುವನೆ? 'ಫಿನ್ ತಾನು ಯುದ್ಧಮಾಡುವು ರಾಷ್ಟ್ರ ಸಂಘಕ್ಕೆ ಉತ್ತರ ಂದಿನ ಮೇಲೆ ನಿರಂತರದ ಗುಂಡುಗಳ ಮಳೆ ಸುರಿಸಿ ರಕ್ತ ನ್ನು ಹರಿಸುತ್ತಿರುವನು ಸಂಘದ ಮಾತಿಗೆ ಇತ್ತೀಚೆಗೆ ಫಿನ ಹಲವು ರಾಷ್ಟ್ರಗಳು ಸೇರಿಟ್ಟಿವೆ ಸಾಮ್ರಾಜ್ಯ ಶಾಹಿ ದ ಪ್ರಮುಖವಾದ ಇಟಲಿ ರ್ಮನ ಗಳೂ ಹಿಂದೆ ಇದೇ ಷ್ಟ್ರ ಸಂಘವನ್ನು ಅಪ ದವು

ಲಕ್ಷ್ಯಸಂಘದ ಬಹಿಷ್ಕಾರ

ನಿರ್ಲಕ್ಷ್ಯ ರೀತಿಯ ಉತ್ತರದಿಂ ಷ್ಟ್ರ ಸಂಘದವರು ರಶ್ಯವನ್ನು ದ ಬಹಿಷ್ಕರಿಸಿರುವರು ಸ್ವಾತಂ ಕಾಶಾಡುತ್ತಿರುವ ಫಿನ್ನರಿಗೆ ಸ ಳಿ ಸಹಾಯಗಳನ್ನುಮಾಡಬೇ ವೆ ಸಂಘದಲ್ಲಿನಿರ್ಣಯವಾಯಿ ಬ್ಲಾಕಾರ್ಯಗಳಲ್ಲಿಯೂ ಬ್ರಿ ನ್ನು ರಾಷ್ಟ್ರಗಳ ಕೈಯು ತ್ತೆಂದು ತಿಳಿಯುತ್ತದೆ ಪೋಸಿನಲ್ಲಿ ನಾಜೀ ಮತ್ತು ಬಾಲ್ಶೆ ತತ್ವಗಳು ಪ್ರಚಾರಕ್ಕೆ ಬರುತ್ತಿರುವು ದು ತಮ್ಮ ಅಸ್ತಿತ್ವಕ್ಕೇ ತೊಂದರೆ ಬರ ಬಹುದೆಂದು ಬೆದರಿದ ಈ ರಾಷ್ಟ್ರಗಳು ಗೆ ಮಾಡಿರಬೇಕೆಂದು ಹೇಳಿದರೆ ಕ್ಷರ್ಯವೆನಿಸಬಾರದು

ರಶ್ಯಾ ಫಿನ್ಲೆಂಡ್ ಯುದ್ಧ

ಲಾಡೋಗಾ ಸರೋವರದ ಬಳಿ ಮಾಸೂರಿ ಎಂಬ ದ್ವೀಪವನ್ನು ರಶ್ಯನರು ವಶಪಡಿಸಿಕೊಂಡಿರುವರು ಫಿನ್ಲೆಂಡನ್ನು ಇಬ್ಭಾಗಮಾಡಿ ಅದಕ್ಕೂ ಸ್ಕಿಡಿನಿಗೂ ಇರುವ ಮೈತ್ರಿ ಸಂಬಂಧವನ್ನು ತಪ್ಪಿಸಲು ರಶ್ಯನರು ಯತ್ನಿಸುತ್ತಿರುವರು

ಫಿನ್ಲೆಂಡಿನಲ್ಲಿ ಒಂದು ಕೈಗೊಂಬೆಯ ಸರಕಾರವನ್ನು ನಿರ್ಮಿಸಿ ಅದರೊಡನೆ ಒಪ್ಪಂದ ಮಾಡಿಕೊಂಡು ಅದನ್ನೇ ಫಿನ್ಲೆಂಡಿನ ಸರಕಾರವೆಂದು ರಶ್ಯನರು ಕರೆಯುತ್ತಿದ್ದಾರೆ

ರಶ್ಯ ಫಿನ್ಲೆಂಡುಗಳೊಳಗೆ ಭಯಂಕರ ಕಾದಾಟಗಳಾಗುತ್ತಿವೆ ಲಾಡೋಗ ಸರೋವರದ ಬಳಿಯ ಹೆಚ್ಚಿನ ಕಾಳಗ ಗಳಲ್ಲಿ ರಶ್ಯನರೇ ಸೋತಿದ್ದಾರೆ ವೆಬಾ ಮೋ ಬಂದರದ ಬಳಿಯಲ್ಲಿ ೨೦೦ ರಶ್ಯ ದ ಸೈನಿಕರು ಭಾಗವಹಿಸಿದರು ಅವ ರಲ್ಲಿ ೧೦೦೦ ವೈಮಾನಿಕರು ಮರಣ ಹೊಂದಿದರು ಕರೇಲಿಯನ್ ಪ್ರಾಂತ ದಲ್ಲಿಯೂ ರಶ್ಯದ ಮುಂದೊತ್ತುವಿಕೆಯು ತಡೆಹೊಂದಿದೆ

ರಶಿಯದಿಂದ ದಿನದಿಂದ ದಿನಕ್ಕೆ ಬಹಳ ಸೈನ್ಯಗಳು ಬರುತ್ತಿವೆ ಆದರೆ ಸಿನ್ನರ ಅಭೇದ್ಯವ್ಯೂಹಗಳನ್ನು ಭೇದಿಸಿ ಒಳಒರು ವುದ ರಶ್ಯನ್ ಸೈನಿಕರಿಗೆ ಆಗದ ಸಾ ಹಸವಾಗಿದೆ!

ಸಿನ್ನರ ಗಡಿಯಲ್ಲಿ ರಶ್ಯನರು ಭೂ ಜಲ ವಾಯು ಶಕ್ತಿಗಳನ್ನು ಸಂಗ್ರಹಿಸು ತ್ತಿದ್ದಾರೆ ೧೦೦೦ ವಿಮಾನಗಳೂ ೫ ಲಕ್ಷ ಸೈನಿಕರೂ ಅಮಿತ ಯುದ್ಧ ಸಾ ಮಗ್ರಿಗಳೂ ರಶ್ಯನರ ಸಂಗ್ರಹದಲ್ಲಿ ಸಿದ್ಧವಾಗಿದ ಇನ್ನೂ ಬರುತ್ತಿದೆ

ಸಿನ್ನರ ರಶ್ಯನರಿಗಿಂತ ವೀರರಾದ ದಂಡಾಳುಗಳಾಗಿದ್ದಾರೆ ಆದುದರಿಂದ ಇಂದಿನ ಯುದ್ಧದಲ್ಲಿ ಸಿನ್ನರನ್ನು ಸೋ ಲಿಸಿ ಮುಂದುವರಿಯುವುದು ಅಸಂಖ್ಯ ರಶ್ಯನರಿಗಾದರೂ ಅಸಾಧ್ಯವಾಗಿದೆ ಆದರೆ ಅವರು ಈವರೆಗೂ ೩ ಲಕ್ಷ ಸೈನಿಕ ರುವ ರಶ್ಯನರ ಕಲಿತನದ ಮುಂದೆ ಸಿನ್ನರು ಎಷ್ಟರ ವರೆಗೆ ಕಾದಾಡುವರೋ ಹೇಳಲುಬರುವುದಿಲ್ಲ ಆದರೂ ಅವರು ಇಂದು ಜೀವದ ಹಂಗು ತೊರೆದೇ ಯುದ್ಧಮಾಡುತ್ತಿರುವರು

ಪಶ್ಚಿಮ ರಣರಂಗದ ವಾರ್ತೆ

ಪಶ್ಚಿಮ ರಣರಂಗದಲ್ಲಿ ಉಭಯ ಸೈನ್ಯದವರೂ ಈಗ ಜೋರಾಗಿ ಯುದ್ಧ ನಡೆಯುತ್ತಿದೆ, ತಮ್ಮ ತಮ್ಮ ಕೋಟೆ ಗಳಲ್ಲಿ ಮಧ್ಯಭಾಗದ್ದ ಎರಡು ಸೈನ್ಯ ದವರೂ ಸುರಕ್ಷಿತರಾಗಿರುವರು ಬ್ರಿ ಟಿಷ್ ಫ್ರೆಂಚ್ ಸೈನ್ಯಾಧಿಪತಿಗಳು ತಮ್ಮ ಸೈನಿಕರನ್ನು ಹುರಿದುಂಬಿಸುತ್ತಿರುವರು

ವ್ಯಾಚಿನೋ ದುರ್ಗದ ಒಂದು ಭಾಗ ವು ಬ್ರಿಟಿಷ್ ಸೈನಿಕರ ವಶಕ್ಕೆ ಕೊಡ ಲಾಗಿದೆ

ಬ್ರಿಟಿಷ್ ಸಾಮ್ರಾಟರಾದ ಆರನೇ ಜಾರ್ಜರು ಪಶ್ಚಿಮ ರಣರಂಗವನ್ನು ಸಂ ದರ್ಶಿಸಿ ಹೋದರು ಆ ಬಳಿಕ ಬ್ರಿಟಿಷ್ ಸೈನಿಕರ ಯುದ್ಧೋತ್ಸಾಹವು ಇಮ್ಮಡಿ ಯಾಗಿದೆ

ಹಲವು ಹಡಗುಗಳ ಹಾನಿ

ಇಂಗ್ಲೆಂಡಿನ ದಕ್ಷಿಣ ತೀರದಲ್ಲಿ ಮಲನ ಎಂಬ ಹಡಗು ಕೋಟೆಯ ಹಾ ವಳಿಗೆ ಮುಳುಗಿತು ಅದರಲ್ಲಿ ಇಬ್ಬರು ಮಾತ್ರ ಪಾರಾದರು

ಥಾಮಸ್ ವೆಲ್ಸನ್ ಹಡಗವು ನಾರ್ವೆ ಯ ಉತ್ತರ ದಂಡೆಯಲ್ಲಿಯೂ ಹವಾ ಸೋಟ ಎಂಬ ಹಡಗು ಅಟ್ಲಾಂಟಿಕ್ ಸಾಗರದಲ್ಲಿಯೂ ಮುಳುಗಿಸಲ್ಪಟ್ಟಿವೆ

'ಕೊರ್ಸಾ' ಎಂಬ ಹಡಗು ತೋಟೆಗೆ ಸಿಲುಕಿ ಮುಳುಗಿತ ಬ್ರಾಂಡೋ ಎಂಬ ಹಡಗು ಪಶ್ಚಿಮ ಕರಾವಳಿಯಲ್ಲಿ ಮುಳುಗಿತು ಕಿಂಗ್ ಎಡ್ವರ್ಡ್ ಎಂಬ ಮೋಟರ್ ನೌಕೆಯು ಮುಳುಗಿಸಲ್ಪ ಟ್ಟಿತು

ರಶ್ಯವು ಜರ್ಮನಿಯ ಒಂದು ಹಡಗ ವನ್ನು ಮುಳುಗಿಸಿದೆ ಅದರ ಹೆಸರು ಬೊಲೀಮ ಎಂದಿತ್ತ

ಜರ್ಮನ್ ನಾಕೇಟು ಯುದ್ಧ ಹಡಗು ದಕ್ಷಿಣ ಅಮೇರಿಕಕ್ಕೆ ಹೋಗಿದ್ದು ಅಲ್ಲಿ ಹಡಗು ಮುಳುಗಿಸುವ ಯತ್ನ ನಡೆಸುತ್ತಿದೆ ಇದನ್ನು ಕಂಡು ಹಲವು ಅಮೇರಿಕನ್ ಹಡಗುಗಳು ಅದನ್ನು ಬೆನ್ನಟ್ಟಿ ಓಡಿಸಿವೆ

ನಾರ್ವೆ ದೇಶದ ಗಿಮ್ಲೆ ಹಡಗವು ಇಂಗ್ಲೆಂಡಿನ ಪೂರ್ವ ದಂಡೆಯಲ್ಲಿ ಮುಳುಗಿಸಲ್ಪಟ್ಟಿತು ೩ ಕಸಾರಿಯೆಂಬ ಇಸ್ತೋನಿಯನ್ ಹಡಗು, ನಾರ್ವೇ ಬೇಲಿಯಾ ಎಂಬ ಗ್ರೀಕ್ ಹಡಗೂ ಜಲಾಂತರ್ಯಾಮಿ ನಾವೆಗಳಿಗೆ ಆಹುತಿ ಯಾದುವು

ಹ್ಯಾಲೋಲ್ ಎಂಬ ಸ್ವೀಡಿಷ್ ಹಡಗು ಸ್ಕೀಡನ್ ಬಳಿ ತೋಟೆಗೆ ಬಲಿ ಯಾಯಿತ

ಬ್ರಿಟಿಷರ ಇನಾಮುಗಳು

ಬ್ರಿಟಿಷರ ಹಡಗುಗಳನ್ನು ಮುಳುಗಿಸಿ ತೊಂದರೆ ಕೊಡುತ್ತಿರುವ ಜರ್ಮನಿಯ ಜಲಾಂತರ್ಗಾಮಿ ನಾವೆಗಳನ್ನು ಮುಳು ಗಿಸಲು ಸಾಹಸ ಪಡುವ ವೀರರಿಗೆ ಬ್ರಿ ಟಿಷ್ ಸರಕಾರವು ವಿಶೇಷ ಬಹುಮಾನ ಬಿಡುಗಡೆಗಳನ್ನು ಕೊಡುವುದಾಗಿ ಪ್ರಕಟಿ ಸಿದೆ

ಬ್ರಿಟಿಷರ ಕೈಯಿಂದ ತಪ್ಪಿಸಿಕೊಳ್ಳಲು ಜರ್ಮನ್ ಹಡಗವೊಂದು ತಾನಾಗಿಯೇ ಮುಳುಗಿಕೊಂಡಿದೆ

ಗ್ರಾಫ್ ಸ್ಪೀ ಪ್ರಕರಣ

ಇದೊಂದು ಬ್ರಿಟಿಷರ ಬಹಳ ಸಾಹ ಸದ ವಿಷಯ ವಾಗಿ ಪ್ರಕಟವಾಗಿದೆ ಗ್ರಾಫ್‌ಸ್ಪೀಯೆಂಬುದು ಒಂದು ಜರ್ಮ ನಿಯ ಭಯಂಕರ ಯುದ್ಧ ಹಡಗು ಮಾಂಟಿವಿಡೀಯನ ಬಳಿ ಬ್ರಿಟಿಷ್ ಹಡಗುಗಳು ಮುತ್ತಿದವು ನೌಕಾ ಯುದ್ಧದಲ್ಲಿ ಗ್ರಾಫ್ ಸ್ಪೀಯು ಸೋತು ಮಾಂಟಿವಿಡೀಯ ಬಂದರದಲ್ಲಿ ಯೇ ಬಂದು ಸಿಕ್ಕಿತು ಇದನ್ನು ಯುದ್ಧದಲ್ಲಿ ಹಡದಮಾಡಿದ ಬ್ರಿಟಿಷ್ ನೌಕಾ ಸೈನಿಕ ರನ್ನು ಬ್ರಿಟಿಷರನಲ್ಲಿ ಬಹಳ ಕೊಂಡಾಡಿ ಬಿಟ್ಟರು ಇನ್ನು ಮುಂದೆ ಯುದ್ಧ ಮಾಡಲು ಸಾಧ್ಯವಿಲ್ಲದಷ್ಟು ಅದು ಕೆಟ್ಟು ಹೋಗಿತ್ತು

ಗ್ರಾಫ್ ಸ್ಪೀ ಮುಳುಗಿಸಲ್ಪಟ್ಟಿತು

ಬ್ರಿಟಿಷ ಯುದ್ಧ ಹಡಗುಗಳೊಡನೆ ಯುದ್ಧದಲ್ಲಿ ಗಾಯ ಗೊಂಡಿದ್ದ ಗ್ರಾಫ್ ಸ್ಪೀಯು ಮೊಂಟೇವಿಡೀಯದಲ್ಲಿ ಹೋಗಿ ಶರಣು ಹೊಂದಿರಲು ಅದನ್ನು ಕೆಲವೇ ತಾಸುಗಳೊಳಗೆ ಬಂದರು ಬಿಟ್ಟು ಹೋ ಗಬೇಕೆಂದು ಅಲ್ಲಿನ ಸರಕಾರವು ಸೋ ಟೀಸು ಕೊಟ್ಟಿತು! ಹಡಗವು ರಿಪೇರಿ ಯಾಗುವ ಸಮಯ ಕೇಳಿಕೊಡ ಬೇಕೆಂದು ಜರ್ಮನರ ಕೇಳಿಕೊಂಡರೂ ನೋಟೀಸು ಕೊಟ್ಟ ಅವಧಿಯಲ್ಲಿಅದನ್ನು ಹೊರ ಹಾಕಲಾಯಿತು ಜರ್ಮಂಗಿ ಆ ಹಡಗವು ಅಲ್ಲಿಂದ ಹೊರಬಂದು ಶತ್ರುಗಳ ಕೈವಶವಾಗುವ ದುರ್ಮರಣ ಬೇಡವೆಂದು ತಾನಾಗಿ ಭಯಂಕರ ಸ್ಫೋ ಟನದಿಂದ ಮುಳುಗಿತು! ಆಕಾಶವೆಲ್ಲಾ ಹೊಗೆ ತುಂಬಿತು!

ಎಲ್ಲಂಡಿನಲ್ಲಿ ಯುದ್ಧವು ತೀವ್ರವಾಗು ತ್ತಾ ಬಂದಿದೆ ರಶ್ಯನರ ಸೈನ್ಯವು ನಾ ರ್ವೆಯ ಗಡಿನಾಡಿಗೆ ಬಂದು ಕಲಸಿದೆ

ತಾನಾಗಿ ಮುಳುಗಿಕೊಂಡ ಜರ್ಮನ್ ಯುದ್ಧ ನೌಕೆ ಗ್ರಾಫ್ ಸ್ಪೀಯು ನಾವಿಕ ಸ್ಥಾನ, ಅದರಲ್ಲಿದ್ದ ನಿವಾಸಿಕರೂ ಮೊದ ಲೇ ಸುರಕ್ಷಿತರಾಗಿದ್ದರೆಂದು ತಿಳಿಯು ತ್ತದೆ

ಜರ್ಮನಿಯು ಗ್ರಾಫ್ ಸ್ಪೀ ಹಡಗಿನ ನಿವೀರಿಗೆ ಸಮಯ ಕೊಡದಿರುವುದಾಗಿ ಉರಾಗುವೇ ಸರಕಾರದ ವರ್ತನೆಯನ್ನು ಖಂಡಿಸಿದೆ

ಜಿನ್ನರ ಪ್ರಮಾದ!

ಈ ವಾರದ ಸೈಕ್ಲೇಸ್ ವಾರ್ತಾಯಲ್ಲಿ ಜಿನ್ನಾ ಸಾಹೇಬರ ವಿವರ್ತನೆಯ ದಿನದ ವಿಷಯವೇ ಪ್ರಧಾನವಾದುದು ಅದು ರಾಷ್ಟ್ರಭಾತುಕವಾದುದೆಂದು ಅವರ ಅನು ಯಾಯಿಗಳೇ ಹಲವರು ಅಂದರು ಮುಸ್ಲಿಮರು ಅನ್ಯಾಯದ ಹಾದಿ ಯನ್ನು ತುಳಿಯುತ್ತಿ ಮತ್ತಾಗಬೇಡಿರೆಂದು ಅವರ ಮಿತ್ರರು ಮೊರೆಯಿಟ್ಟರು ಕಾಂ ಗ್ರೆಸಿನ ಅಧ್ಯಕ್ಷರು, ಜಿನ್ನರು ಹೇಳಿರುವ ಅಭೇದ್ಯವಾದ ಸಂಪೂರ್ಣ ಅಸತ್ಯ ವೆಂದೂ ಅಲ್ಪವಾದರೆ ಅವರು ಅಪ ಗಳನ್ನು ರುಜುವಡಿಸಬೇಕೆಂದೂ ಯಾವು ದೇ ರೀತಿಯ ವಿಚಾರಣೆಗೆ ಕಾಂಗ್ರೆಸು ಸಿದ್ಧವಿದೆಯೆಂದೂ ಹೇಳಿದರು ನೆಹರು ವರೇ ರಾಜಾಜಿ ಪ್ರಭೃತಿಗಳು ತೆಗ ತೀವ್ರ ಸಂತಾಪವನ್ನು ಸೂಚಿಸಿದರ ನಾಗೆ ನಾಡೇ ಜಿನ್ನರ ಅಪ್ರಬುದ್ಧ ಪ್ರಕ ಟಣೆಯ ಮಹಾ ಪ ಮಾಡವೆಂದು ಸಾರಿ ಹೇಳಿತು

ಸರ್ ಕ್ರಿಪ್ಸರು

ಸರ್ ಕ್ರಿಪ್ಸರು ಹಿಂದುಸ್ಥಾನಕ್ಕೆ ಬಂದ ಈಗಾಗಲೆ ಹಲವು ದಿನಗಳಾದುವು ಇಲ್ಲಿ ಯ ಸ್ಥಿತಿಯೇನೆಂಬ ದನ್ನು ಅರಿಯಲಿ ದುಕೊಂದಿರಬಹುದು ಬ್ರಿಟನಿನಲ್ಲಿಯೂ ಕೂಡ ಟೋರಿ ಪ್ರಾಬಲ್ಯ ಹೆಚ್ಚು ಭಾರತದ ಬೇಡಿಕೆಯ ಕಡೆಗೆ ಲಕ್ಷವನ್ನು ಹೊರಳಿಸಿ ರುವರೆಂದು ಪ್ರತೀತಿಯಿದೆ ರಾಜ್ಯಘಟನಾ ಸಮಿತಿಯ ಸಂಬಂಧದಲ್ಲಿ ವೈಸರಾ ಯರ ಭವನದಲ್ಲಿ ವಿಚಾರಾಲೋಚನೆ ನಡೆದಿದೆಯೆಂದು ಮುಂತಾಗಿ ಸುದ್ದಿಯಿದೆ ಅಂತೂ ಭಾರತೀಯರಿಲ್ಲ ಮತ್ತದಿಂದ ಬೇಡಿದರೆ ಯಾವದಾದರೂ ಒಂದು ಬಗೆ ಯಿಂದ ವೈಸ್ರಾಯರ ಕಾಯ ದಿಯಂತೆ ಸಾಮಂತರಾಜ್ಯವನ್ನು ಕೊಡುವ ಆಲೋ ಚನೆಯು ಬ್ರಿಟನಿಗಿದೆ ಎಂಬಂತೆ ಭಾಸ ವಾಗಲು ಸಕ್ಷಿಗಳು ಹಚ್ಚಿವೆ ಒಟ್ಟಿ ನಲ್ಲಿ ಕಾಂಗ್ರೆಸಿನ ಬೇಡಿಕೆ ಏನು? ಎಂಬು ದನ್ನು ಅನುಲಕ್ಷಿಸಿ ನಮ್ಮವರಿಗೆ ಸರ್ ಕ್ರಿಪ್ಸರು ತಿಳಿಸಬಹುದೆಂದೂ ಸೂಚಿಸಿ ಲಾಗಿದೆ

ಗಡಿನಾಡು ಪ್ರಾಂತ್ಯದಿಂದ ಪಂಜಾ ಬಗೆ ಗೋಧಿಯನ್ನು ರಫ್ತುಮಾಡಕೂಡ ದೆಂದು ಸರಕಾರವು ಆಜ್ಞೆಮಾಡಿತು

ದಿವಂಗತ ಶ್ರೀ ಅಲಾಬಾಲ್ಖ್ ಪಕರಾಯರ ಮಗನಾದ ಡಾ! ಅಮ್ಬೆಡ್ಕರ್‌ರೆಂಬ ವರು ಬುದ್ಧಿ ಸ್ವಾಸ್ಥ್ಯವಿಲ್ಲದೆ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ತಿಳಿದಿದೆ

ಗಡಿನಾಡಿನ ಗಾಂಧಿಜಿಯವರೆಂದು ಪ್ರಸಿದ್ಧರಾದ ಅಬ್ದುಲ್ ಗಫರ್‌ಖಾನರ ಮಗನು ಅಲ್ಪಾಬಾದಿನ ಕಾಲೇಜಿನ ಪ್ರಾಂಸಿ ಯ ಪ್ರಾಧ್ಯಾಪಕರಾಗಿದ್ದರೆಂದು ಅಂತರ್ಜಾ ತೀಯ ವಿವಾಹವಾದನು

ಹಿಂದೂದೇಶದ ಸವ ಸ್ಥಿತಿ ರಾಜಕೀ ಟನಾ ಸಮಿತಿಯೇ ಪರಿಹಾರವೆಂದು ಸರ್ ಸ್ಟಾಫೋರ್ಡ್ ಕ್ರಿಪ್ಸರೂ ಆಹೋರಿ ನಲ್ಲಿ ಹೇಳಿದರು ಸಂಸ್ಥಾನಾಧೀಶರು ಸಾಂಕುಶರಾಗಬೇಕೆಂದೂ ಅವರ ಅಭಿ ಪ್ರಾಯ

ನವಧಿಲ್ಲಿಯಲ್ಲಿ ಲೇಬರ್ ಮಂತ್ರಿಗಳ ಸಮ್ಮೇಳನವು ಜನವರಿ ತಿಂಗಳ ೨ ರಂದಿ ವಾರದಲ್ಲಿ ಜರಗುವುದು

ಅವರು ಎಲ್ಲವನ್ನೂ ಮಹಾತ್ಮಾಜಿಯ ವರೆಗೆ ತಿಳಿಸಿ ವರೊಂದಿ ಗೊತ್ತಾಗಿದ ಪಿನ್ನಿಂಡಿಗೆ ಹಿಂದೂದೇಶದ ದ ತೀರ್ತ ವರ್ತಮಾನವನ್ನು ತಾ ಗಳಿಂದ ಎಲ್ಲರ ಲ್ಪಟ್ಟಿದೆ

ವಿದೇಶ ಪ್ರಭುತ್ವವು ಬಹುಕಾಲ ಉಳಿಯುವುದಿಲ್ಲ

ಫಿಲಿಪ ದಕ್ಷಿಣಭಾರತ ಸಂಘದಲ್ಲಿ ಭಾಷಣ ಮಾಡುತ್ತಾ ಕಳೆದವಾರ ಶ್ರೀ ಸಿ ರಂಜಗೋಪಾಲಾಚಾರ್ಯರ ಹಿಂ ದೂ ಸಿ ಸ್ಥಾನದ ವಿಷಯ ದೆತ್ತಿ ಬಲ ವ ಕಾಂದ ಎಲೀಕೆಯ ಅದಕ್ಕೆ ಸ ನಮ್ಮ ದೇಶದಲ್ಲಿ ವಿವಾಹಗಳಿಗೆ ಕಲಹವುಂಟಾಗಿ ಯಾಗುವುದಿಲ್ಲವೆ ದೂ ಅದರೆ ವಿದೇಶೀ ಅಡಳಿತೆಯ ಬಹುಕಾ ಲ ಬಾಳಲಾರದೆಂದೂ ಹೇಳಿದರ

ಆಹಾರ ಜೀನಸುಗಳ ಬೆಲೆ ಹೆಚ್ಚಿಸಿದ ಕಾರಣ ಕಲ್ಕತ್ತದ ಅಂಗಡಿಯೊಂದರಲ್ಲಿ ಲೂಟಿಯಾಗಿದೆ

ಸ್ವರಾಜ್ಯಕ್ಕಾಗಿ ನೂಲುವುದು

ಮಹಾತ್ಮಾಜಿಯವರು ಒಂದು ಹರಿ ಜನ ದ ಲೇಖನದಲ್ಲಿ ಬಾಯಿಯ ಕೆಲ ಸವು ಅಖಿಲ ಹಿಂದುಸ್ಥಾನದಲ್ಲಿ ಯಶಸ್ವಿ ಯಾಗದ ಎಸಳೆ ನನಗೆ ಭಾರತೀಯ ರ ಶಿಸ್ತಿಸಿದ್ಧತೆಗಳ ಬಗ್ಗೆ ಏನೂ ವಿಶ್ವಾಸ ವಿಲ್ಲವೆ ದೂ ಆದುದರಿಂದ ಅದು ಯಶ ಸ್ವಿಯಾಗ ವ ತನಕ ಪ್ರತ್ಯಕ್ಷ ಚಳವಳಿ ದೂಡುವು ನನಗೆ ಇಷ್ಟವಾಗಲಿ, ಅವ ರಲ್ಲಾಗಲಿ ವಿಶ್ವಾಸವಿಲ್ಲವೆಂದೂ ಬರೆ ದಿರುವರು

ನೆಹರೂಗಳು ಒಂದು ಪ್ರಕಟಣೆ ಕೊ ಡುತ್ತಾ ಅದರಲ್ಲಿ ಇಂದಿನ ಎಲ್ಲಾ ಸಮ ಸ್ಯೆಗಳಿಗೆ ನಮ್ಮ ರಾಜ್ಯಘಟನೆಯನ್ನು ನಾವು ತಯಾರಿಸುವ ಹಕ್ಕು ಸಿಗುವುದೇ ಪರಿಹಾರವೆಂದು ಒತ್ತಿ ಹೇಳಿದರು

ಗವರ್ನರರ ಮೌನವೇ ಸ್ಪಷ್ಟ ರುಜು!

ಜಿನ್ನರಿಗೆ ಸರ್ ಕ್ರಿಪ್ಸರ ಉತ್ತರ

ಜಿನ್ನರು ಕಾಂಗ್ರೆಸು ಸರಕಾರಗಳ ವೇಳೆಲೆ ಹೊರಡಿಸಿದ ಆರೋಪಗಳಲ್ಲಿ ಯ ಥಾರ್ಥತೆಯಿಲ್ಲವೆಂಬ ದಕ್ಕೆ ಗವರ್ನರರ ಮೌನವೇ ಸಾಕ್ಷ್ಯ ರುಜುವಾಗಿದೆಯೆಂ ದು ಸರ್ ಸ್ಟಾಫೋರ್ಡ್ ಕ್ರಿಪ್ಸರು ಹೇಳಿ ದರು

ಸ್ವತ್ಯ ಕಾರ್ಯಗಳಿಗೆ ತಡೆಯಾಯಿತು!

ಕಾಂಗ್ರೆಸು ಮಂತ್ರಿಗಳ ರಾಜಿನಾಮೆ ಯ ಕುರಿತು ಹೇಳ ತ್ತಾ ಸರ್ ಸಾಮು ವೆಲ್ ಹೋರರು ಕಾಂಗ್ರೆಸ ವ ಮಂತ್ರಿಗಳ ಸ್ವತ್ಯ ಕಾರ್ಯಗಳಿಗೆ ಅದರಿಂದ ತಡೆ ಯಾದದ್ದು ದೇಶದ ದೌರ್ಭಾಗ್ಯವೆಂದರ

ಶ್ರೀ ಎಂ ಎನ್ ರಾಯ್

ಸಂಯುಕ್ತ ಪ್ರಾಂತಕ ಕಾಂಗ್ರೆಸು ಕಮಿಟಿಯ ಕಾರ್ಯಕಾರಿ ಸಮಿತಿಯ ಶ್ರೀ ಎ ಎನ್ ರಾಯರು ಮತ್ತು ರಾಜ ನಂಮಿ ಕೊಡಲಾ ಅದಗಲಿ ತಾನ ರಾಜನಾಮೆ ಕೊಟ್ಟರೂ ಕಾಂಗ್ರೆಸಿನ ಸೇವೆಗೆ ತನ ಕರೆದಾಗ ಒಪ್ಪುವುದಾಗಿ ತಿಳಿಸಿರ ವ

ಶ್ರೀ ಎಸ್ ವಿ ಘಾಟೆ

ಶ್ರೀ ಎಸ್ ವ ಘಾಟೆ ಇ ಗ ಎಲ ಕಾಸ ಗಲೀಳಗೆ ವಧ್ಯಕ್ಷ ದ ಮಂ ಗಳಿಗೆ ಹೊರಟು ಹೋಗಬೇಕೆಂದು ಸರಕಾರವು ಆಜ್ಞೆ ಕೊಟ್ಟಿದೆ ಇವರ ಕ್ರಾ ತಿಕಾರಿಗಳ ದ ಎರಕಾದ ಅಭಿಪ್ರಾಯ ಶ್ರೀ ಘಾಟೆಯವರು ಮಂಗಳೂರಿಗೆ ಬಂದಿ ದ ವರ

ಅಖಿಲಭಾರತ ವಿದ್ಯಾರ್ಥಿ ಸಂಘ ದ ಸಮ್ಮೇಳನವು ತಾ ೨೦ ಲಾರಲ್ಲಿ ಲಕ್ನೋ ದಲ್ಲಿ ಜರಗಿತು ಶ್ರೀಮತಿ ಸರೋಜಿನಿ ದೇವಿಯವರು ಅಧ್ಯಕ್ಷರಾಗಿದ್ದರು

ಶತ್ರು ಪಕ್ಷದವರೊಡನೆ ವ್ಯಾಪಾರ ಮಾಡಿದರೆಂದು ಬೊಂಬಾಯಿ ವ್ಯಾಪಾರಿ ಗಳು ಕೆಲವರ ವೇಲೆ ಆಪಾದನೆ ಹೊರ ಡಲಾಗಿದೆ

ಮಹಾತ್ಮಾಜಿಯ ವರ ಕಾರ್ಯದರ್ಶಿ ಗಳಾದ ಮಹಾದೇವ ದೇಸಾಯಿಯವರು ಮೈಸೂರು ಸಂಸ್ಥಾನದ ಸ್ಥಿತಿಗತಿಗಳನ್ನು ತಿಳಿದುಕೊಳ್ಳುವರೆ ಮೈಸೂರಿಗೆ ಬಂದಿರು ವರೆ ದಿವಾನರೊಡನೆಯೂ ಕಾಂಗ್ರೆಸು ಮ ಖಂಡರೊಡನೆಯೂ ಭೇಟಿಯಾಗಿ ಮಾತುಕತೆ ನಡೆಸಿದರು ಜೈಲುಗಳಿಗೆ ಭೇ ಟಿಯ ಕೊಟ್ಟು ರಾಜಕೀಯ ಕೈದಿಗಳ ಸ್ಥಿತಿ ಗತಿಗಳನ್ನು ತಿಳಿದುಕೊಂಡರ

ವೈಸರಾಯರ ಭಾಷಣ

ಕಲ್ಕತ್ತದಲ್ಲಿ ವೈಸರಾಯರು ಭಾಷಣ ಮಾಡ ತ್ತಾ ಆದರಲ್ಲಿ ಹಿ ದಿನ ಪೆಡರೆ ಶನ್ ಯೋಜನೆಯ ಕುರಿತ ತನಗೆ ವಿಶ್ವಾಸವಿರ ವುದೆಂದೂ ಸ್ವಾತಂತ್ರ್ಯದ ಹಾಗೂ ಇ ಇಂದ ಹಿ ದೂ ಮುಸ್ಲಿ ಕೊಂದರೆಯಾಗಿ ದೂ ಬಂಗಾಳ, ಪಂಜಾಬ ಗಳಲ್ಲಿ ಸಾ ತಿಕ ಸರಕಾರ ಗಳ ಯಶಸ್ವಿಯಾಗಿ ನಡೆಯ ತ್ತಿವೆ ಯೆಂದೂ ತಾನು ಹಿ ದೂದೇಶದ ಸಾ ಸ್ಥೆಯ ಸ್ಥ ಬಗೆಹರಿ ವರೆ ಉತ್ತಮಕಾ ಗಿರ ವೆನೆಂದೂ ಹೇಳಿದರು

ಜಿನ್ನರ ಎರಡನೆಯ ಪ್ರಕಟಣೆ

ಜಿನ್ನರು ಎರಡನೆಯ ಪ್ರಕಟಣೆಯೊಂ ದನ್ನು ಹೊರಡಿಸಿ ತ

ಗಾಂಧಿ ನೆಹರುಗಳಲ್ಲಿ ಅಭಿಪ್ರಾಯ ಸಂಘರ್ಷವುಂಟೆ?

ಹಿತಶತ್ರುಗಳ ಅಪಪ್ರಚಾರ!

ಗಾಂಧಿಜಿಯವರ ಸ್ಪಷ್ಟೀಕರಣ!

ಗಾಂಧಿ ನೆಹರುಗಳೊಳಗೆ ಪರಸ್ಪರ ಸ್ನೇಹವು ಆರಂಭವಾಗಿರುವದಾಗಿಯೂ ಅವರುಗಳಿಗೆ ತೀವ್ರ ಮತಭೇದವು ಇರುವದೂ ಕುದಾರ ಪಕ್ಷದ ಕೆಲವು ಪತ್ರಿಕೆಗಳು ಸಾರಿ ಸಂತೋಷಿಸುತ್ತಿದ್ದು ಸ್ಥಿತಿಯ ಕಡೆಗೆ ಸೂಕ್ಷ್ಮವಾಗಿ ನೋಡಿದರೆ ಈ ಪತ್ರಿಕೆಗಳು ಈ ಸಂಬಂಧದಲ್ಲಿ ಸುಳ್ಳು ವಾರ್ತೆಯನ್ನು ಹರಡಿ ಗಾಂಧಿ ನೆಹರುಗಳ ಸ್ನೇಹ ಮತ್ತು ಪವಿತ್ರ ಸಂಬಂಧಕ್ಕೆ ಕಲಂಕವನ್ನು ಹಚ್ಚುವ ಪ್ರಯತ್ನ ಮಾಡುತ್ತಿರುವರೆಂಬುದು ತಿಳಿಯುತ್ತದೆ ಆದರೆ ಅವುಗಳ ಈ ಪ್ರಯತ್ನಗಳು ವ್ಯರ್ಥವೇ ಸರಿ!

ತನ್ನ ಧ್ಯೇಯವಂತಾಗಲೀ ಪಂಡಿತ ಜವಾಹರಲಾಲ ನೇಹರುಗಳಾಗಲೀ ಕರ್ಮ್ಮಯೋಗಿಗಳಾಗಿರುವ ಮತಭೇದಗಳಿಕುರಿತು ಏನನ್ನಾದರೂ ಮಾತನಾಡಿರುವದಿಲ್ಲ. ನೇಹರುಗಳು ಹಿಂದುಸ್ಥಾನಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನು ಇಚ್ಛಿಸುವರೆಂದೂ, ಗಾಂಧಿಯವರು ಸಾಮಂತ ಸ್ವರಾಜ್ಯವಂದ ತೃಪ್ತರೆಂದೂ, ಆದ್ದರಿಂದ ಆವರಿಬ್ಬರ ಧ್ಯೇಯಾದರ್ಶಗಳಲ್ಲಿ ಆಕಾಶ ಪಾತಾಳದ ಅಂತರವಿದೆ ಎಂದೂ ಕೆಲವರು ಹೇಳುತ್ತಾರೆ. ಈ ವಾದದಲ್ಲಿಯೂ ಹುರುಳಿರುವದಿಲ್ಲ. ಆದರೆ ಗಾಂಧಿಯವರು ಭಾರತಕ್ಕೆ ಇಚ್ಛಿಸುವ ಸಾಮಂತ ಸ್ವರಾಜ್ಯದ ಸ್ವರೂಪವು ಈ ಎದುರಾಳಿಗಳ ಕಲ್ಪನೆಗೆ ಮೀರಿದ್ದಾಗಿದೆ. ಅವರ ಸಾಮಂತ ಸ್ವರಾಜ್ಯ ಮತ್ತು ನೇಹರೂ ಅವರ ಸಂಪೂರ್ಣ ಸ್ವಾತಂತ್ರ್ಯದಲ್ಲಿ ಮಾತಿನ ಭೇದವು ಇರುವದೇ ಹೊರತು ಅರ್ಥಭೇದವು ಇರುವದಿಲ್ಲ. ಜವಾಹರಲಾಲರು ಹೇಳುತ್ತಿರುವದನ್ನೇ ಗಾಂಧಿಯವರು ಕೆಲವು ಮಾತು ಬದಲಿಸಿ ಹೇಳುತ್ತಾರೆ. ಆದ್ದರಿಂದ ಭಾರತದ ಸ್ವರಾಜ್ಯ ಮತ್ತು ಅದರ ಸಾಧನೆಯ ಕುರಿತು ಈ ಇಬ್ಬರು ವಿಭೂತಿ ಪುರುಷರೊಳಗೆ ಯಾವ ಮತ ಭೇದವೂ ಇರುವದಿಲ್ಲ. ತಮ್ಮಿಬ್ಬರ ಧ್ಯೇಯಾದರ್ಶಗಳು ನ್ಯಾಯಶಃ ಒಂದೇಯಾಗಿರುವವೆಂದು ಜವಾಹರಲಾಲರೇ ಅನೇಕ ಭಾಷಣ ಲೇಖನಗಳಲ್ಲಿ ಸ್ಪಷ್ಟಮಾಡಿದ್ದಾರೆ. ಅವರ ಕಾರ್ಯಕ್ರಮವು ಕೂಡ ಒಂದೇಯಾಗಿರುವದೆಂದು ಅವರು ಹೇಳಿರುವರು

ಗಾಂಧಿಯವರ ಸ್ಪಷ್ಟೀಕರಣ

ತನ್ನ ಕಲ್ಪನೆಯ ಸಾಮಂತ ಸ್ವರಾಜ್ಯ ಅಥವಾ ಡೊಮಿನಿಯನ್ ಸ್ಟೇಟಸು ಎಂಥದೆಂದು ಕೆಲವೇ ದಿನಗಳ ಹಿಂದೆ ಗಾಂಧಿಯವರು ಸ್ಪಷ್ಟ ಮಾಡಿದ್ದಾರೆ. ಅದರ ಪ್ರಕಾರ ಸಾಮಂತ ಸ್ವರಾಜ್ಯಕ್ಕೂ ಸಂಪೂರ್ಣ ಸ್ವಾತಂತ್ರ್ಯಕ್ಕೂ ವ್ಯತ್ಯಾಸವಿರುವದಿಲ್ಲ. 'ಹಿಂದುಸ್ಥಾನವು ಸಂಪೂರ್ಣ ಸ್ವತಂತ್ರವಾಗದೆ ಅದಕ್ಕೆ ಕೃಷ್ಣಿ ಇಲ್ಲ. ಡೋಮಿನಿಯನ್ ಸ್ಟೇಟಸಿನ ಮೂಲಕ ಅದು ಸಂಪೂರ್ಣ ಸ್ವತಂತ್ರವಾಗಿ ಇರಲಾರದಾದರೆ, ಹಿಂದುಸ್ಥಾನವು ಅಂಥ ಡೋಮಿನಿಯನ ಸ್ಟೇಟಸನ್ನು ಎಷ್ಟುಮಾತ್ರಕ್ಕೂ ಸ್ವೀಕರಿಸಿ ಸುಮ್ಮನಾಗದು, ಸ್ವತಂತ್ರ ಹಿಂದುಸ್ಥಾನವು ರಾಜಕೀಯ ಸುಲಿಗೆಯಲ್ಲಿ ಭಾಗಿಯಾಗಲಿಚ್ಛಿಸುವದಿಲ್ಲ. ಪರಂತು ಪ್ರಪಂಚದ ಎಲ್ಲವರ ಸ್ವಾತಂತ್ರ್ಯ ರಕ್ಷಣೆಗೆ ಹಿಂದುಸ್ಥಾನವು ಬ್ರಿಟನ್ನೊಂದಿಗೆ ಸಂಧಿಮಾಡಿಕೊಂಡು ಸ್ನೇಹ ಮತ್ತು ರಾಜಿಯಿಂದ ಇರಲಿಕ್ಕೆ ಯಾವಾಗಲೂ ಸಮ್ಮತಿಸುವುದು. ಡೋಮಿನಿಯನ್ ಸ್ಟೇಟಸು ಪೂರ್ಣ ಸ್ವಾತಂತ್ರ್ಯಕ್ಕಿಂತ ಕಡಿಮೆತರದ್ದು ಮತ್ತು, ಆ ಸ್ಟೇಟಸನ್ನು ನಡೆದ ಹಿಂದುಸ್ಥಾನವು ಯಾವ ಸಂದರ್ಭದಲ್ಲಿಯಾದರೂ ಎಷ್ಟು ಮಾತ್ರಕ್ಕಾದರೂ ಬ್ರಿಟಿಷ ಜನಾಂಗ ಮಂಡಲಿಯಿಂದ ಹೊರಗಾಗಲಾರದೆನ್ನುವದಾದರೆ, ಅಂಥ ಸ್ಟೇಟಸು ಹಿಂದುಸ್ಥಾನಕ್ಕೆ ಬೇಕಾಗಿಲ್ಲ' ಎಂದು ಗಾಂಧಿಯವರು ಇತ್ತೀಚೆಗೆ ಹೇಳಿದ್ದಾರೆ ಗಾಂಧಿಯವರಂತೆ ಜವಾಹರಲಾಲರಾದರೂ ಶಬ್ದ ಭೇದಕ್ಕಾಗಿ ಕರ್ಮ್ಮಯೋಗಿ ಜಗಳಾಡುವವರಲ್ಲ. ಅವರಿಗೆ ಮಾತಿನ ಜಗಳ ಬೇಡ, ಕಾರ್ಯ ಸಾಧನೆಯು ಬೇಕು

ಅಥವಾ ಜವಾಹರಲಾಲರ ಸಮಾಜವಾದದ ವಿಷಯವಾಗಿಯಾದರೂ ಗಾಂಧಿಯವರ ಮತಭೇದ ಉಂಟೆನ್ನುವದು ತಪ್ಪು ಈ ವಿಷಯದಲ್ಲಿಯೂ ಅವರಿಬ್ಬರು ಏಕಮತವುಳ್ಳವರಾಗಿದ್ದಾರೆ ಪೂರ್ಣ ಟ್ರೇಕ್ಟರುಗಳು ಹಿಂದುಸ್ಥಾನದ ಕೃಷಿ ಭೂಮಿಗೆ ತಕ್ಕುದಲ್ಲವೆಂದು ಹೇಳಿ ಜವಾಹರಲಾಲರು ಎಂದಿಗೂ ಕಡು ಸಮಾಜವಾದಿಗಳ ಕನಸಿನ ಕಲ್ಪನೆಗೆ ಬಲವಾದ ಅಘಾತವನ್ನು ಕೊಟ್ಟಿದ್ದಾರೋ ಆಗಿನಿಂದ ಅವರು ಗಾಂಧಿಯವರಿಗೆ ಎಷ್ಟು ಸಮೀಪವಾಗಿದ್ದಾರೆ ಎಂಬುದು ತಿಳಿಯುತ್ತದೆ ಗಾಂಧಿಯವರಂತೆ ಅವರಾದರೂ ಚರಕವು ಹಿಂದುಸ್ಥಾನದ ರಾಜಕೀಯ ಮತ್ತು ಆರ್ಥಿಕ ಪ್ರಶ್ನೆಗಳನ್ನು ಹಿಂದುಸ್ಥಾನಕ್ಕೆ ತೃಪ್ತಿಕರವಾಗುವಂತೆ ಬಿಡಿಸಲು ಸಮರ್ಥವಾಗಿದೆ ಎಂದು ಜವಾಹರಲಾಲರು ಹೇಳಿ ಬಹಳ ದಿನಗಳು ಕಳೆದು ಹೋಗಿಲ್ಲ

ಜವಾಹರಲಾಲರು ದೇಶೀ ಅರಸರ ವಿರೋಧಿಗಳಲ್ಲ

ಗಾಂಧಿಯವರು ದೇಶೀ ಅರಸರ ಅನುಕೂಲರೆಂದೂ ಜವಾಹರಲಾಲರು ಅವರಿಗೆ ಪ್ರತಿಕೂಲರೆಂದೂ ಕೆಲವರು ಹೇಳುತ್ತಾರೆ. ಅದೂ ನಿಜವಲ್ಲ ದೇಶಿ ರಾಜರ ಅನ್ಯಾಯದ ಆಳ್ವಿಕೆಯನ್ನು ಹೇಗೆ ದ್ವೇಷಿಸುತ್ತಾರೋ, ಗಾಂಧಿಯವರು ಕೂಡ ಹಾಗೆಯೇ ದ್ವೇಷಿಸುತ್ತಾರೆ ದೇಶೀರಾಜರ ಸರ್ವನಾಶವಾಗಲಿ ಎಂದು ಜವಾಹರಲಾಲರು ಎಲ್ಲಿಯಾದರೂ ಹೆಳಿದ್ದು ಇರುವದಾದರೆ, ಆ ರಾಜರ ಅನಾಚಾರಗಳನ್ನು ಕಣ್ಣಿಂದ ನೋಡಲಿಕ್ಕಾಗದೆ ಮಾತಾವಗೊಂಡು ಅವರು ಹಾಗೆ ಹೇಳಿರುವರೇ ಹೊರತು ಅನ್ಯಥಾ ಅಲ್ಲ ಜವಾಹರಲಾಲರಿಗೆ ದೇಶೀ ರಾಜರ ಮೇಲೆ ವ್ಯಕ್ತಿಗತ ದ್ವೇಷವಿರುವದಿಲ್ಲ ಅವರು ಅನ್ಯಾಯ ದಶತ್ರುಗಳೇ ಹೊರತು ವ್ಯಕ್ತಿಗಳ ಶತ್ರುವಲ್ಲ ಪ್ರತಿಯೊಂದ ಕಡೆ ಅದು ಬ್ರಿಟಿಷ ಭಾರತವಾಗಿರಲಿ, ಅದವಾ ದೇಶೀ ಭಾರತವಾಗಿರಲಿ ಅವರು ನ್ಯಾಯ ಸದಾಚಾರಗಳನ್ನು ಅಶಿಸುತ್ತಾರೆ

ಜವಾಹರಲಾಲರೂ ಗಾಂಧಿಯವರೂ ಒಂದೇ ರಥದಲ್ಲಿ ಕೂತು ಒಂದ ಮನಸ್ಸು ಒಂದು ವಿಚಾರ, ಒಂದು ಧ್ಯೇಯ ಒಂದು ಧೋರಣೆಯಿಂದ ಪ್ರೇರಿತರಾಗಿ ಸ್ವರಾಜ್ಯ ಮತ್ತು ಸ್ವಾತಂತ್ರ್ಯ ಹಾವಿಯಲ್ಲಿ ಭಾರತವನ್ನು ಮುಂದ ಮುಂದಕ್ಕೆ ನಡೆಸ ತಿದ್ದಾರೆ

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿರಿ

THE PIE-MONEY BANK LTD.,
Maidan Road, MANGALORE

Undertakes all kinds of Banking Business Current accounts at 2½% per annum. Savings Bank Deposits at 4½% per annum

FIXED DEPOSITS.

For 2 Years 5% 1 Year 4½% For 6 months 4% 3 months 3½%

Auction [illegible] ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public

Apply for particulars—

K. R. GURU, *Managing Director*

ನೋಟೀಸು

ಶ್ರೀಮದ್ ಅನಂತೇಶ್ವರ ದೇವಸ್ಥಾನ, ಮಂಜೇಶ್ವರ

ಮಂಜೇಶ್ವರ ಶ್ರೀ ದೇವಸ್ಥಾನದಲ್ಲಿ ಕಾಣಿಕೆಗೆ ಬಂದ ಬಾಬ್ತು ಚಿನ್ನದ ಅಂದಾಜು ತೊಲೆ 400 ಮತ್ತು ಬೆಳ್ಳಿ ಕೂಡ ಇದೇ ದಶಂಬರ ತಾ. 24ನೇ ಶನಿವಾರ ಮತ್ತು ಅನಂತರದ ದಿವಸಗಳಲ್ಲಿ ಬೇಗ್ಗೆ ಘಂಟೆ 10ರಿಂದ 12 ವರೆಗೆ ಮತ್ತು ಮಧ್ಯಾಹ್ನ ಘಂಟೆ 3ರಿಂದ 5ರ ವರೆಗೆ ಮಂಗಳೂರು ಹಂಪನಕಟ್ಟೆಯಲ್ಲಿರುವ ಆಯ್ಯಿಯಲ್ ಫೊಟೋ ಹೌಸ್ ಇವರಲ್ಲಿ ಬಹಿರಂಗವಾಗಿ ಏಲಂ ಕರದು ಮಾರಾಟಮಾಡುವ ಸಂಗತಿಯು ಈ ಮೂಲಕ ಪ್ರಕಟಿಸಿರುತ್ತದೆ

ಏಲಮಿಗೆ ಸಲ್ಲುವವರು ಮೇಲೆ ನಿರೂಪಿಸಿದ ಘಂಟೆಗಳಲ್ಲಿ ಬಂದು ಚಿನ್ನ ಬೆಳ್ಳಿ ಪರೀಕ್ಷೆಮಾಡಿ ನೋಡಬಹುದು ಏಲಂ ಕಾಯಂ ಆದ ಕೂಡಲೇ ಅಚ್ಚೆರ ದರಖಾಸ್ತದಾರನು ಸೇಕಡ 10ರಂತೆ ವಜನ್ನು ತೆರಬೇಕು ಮಿಕ್ಕ ಐವತ್ತು 8 ದಿನಗಳೊಳಗೆ ಪಾವತಿಮಾಡಿ ಚಿನ್ನ ಪಡಿಯತಕ್ಕದ್ದು

ಏಲಂ ಕಾಯಂಮಾಡುವ ಅಧಿಕಾರವು ಶ್ರೀ ದೇವಸ್ಥಾನ ಎಕ್ಸಿಕ್ಯೂಟಿವ್ ಆಫೀಸರದ್ದಾಗಿರುತ್ತದೆ.

ಶ್ರೀ ಧರ್ಮ ಅಗ್ರಹಾರ, 12-12-'39 } B. N. Baliga, *Manager*

ನೋಟಗಳು!

ಕಳೆದ ಕೆಲ ದಿನಗಳಿಂದ ಬ್ರಿಟಿಷ್ ನೌಕಗಳಿಗೆ ಧಾಳಿಯಿಡುತ್ತಿದ್ದ ಜರ್ಮನಿಯ 'ಗ್ರಾಫ್ ಸ್ಪೀ' ಎಂಬ ಹಡಗದ ಸುದ್ದಿಯು ಬಹಳ ಗೊಂದಲಹುಟ್ಟಿಸಿತ್ತು!

◆

ಅಟ್ಲಾಂಟಿಕ್ ಸಾಗರದಲ್ಲಿ ಸಂಚರಿಸುತ್ತಿದ್ದ ವ್ಯಾಪಾರದ ಹಡಗುಗಳಿಗೆ 'ಗ್ರಾಫ್‌ಸ್ಪೀ'ಯು ಅನೇಕ ಸಲ ಪೀಡೆ ಕೊಟ್ಟಿತ್ತು! ಕಳೆದ ಮಹಾಯುದ್ಧ ಕಾಲದ 'ಎಮ್ಡನ್' ಹಡಗದಂತೆ ಇಂದಿನ ಯುದ್ಧದಲ್ಲಿ 'ಗ್ರಾಫ್ ಸ್ಪೀ'ಯು ಬ್ರಿಟಿಷ್ ಪ್ರಾಣ್ಸುಗಳನ್ನು ಹೆದರಿಸಿಬಿಟ್ಟಿತ್ತು!

◆

'ಗ್ರಾಫ್ ಸ್ಪೀ'ಯು ಜರ್ಮನರ ನೌಕಾರಚನೆಯ ಕುಶಲತೆಯ ಒಂದು ಉತ್ತಮ ಮಾದರಿಯಾಗಿದೆ! ಈ ವಾಕೆಟ್ ಯುದ್ಧ ಹಡಗವು ಇಂದು ಇರುವ ಎಲ್ಲಾ ಹಡಗಗಳನ್ನು ವೇಗದಿಂದ ಮೀರುವುದಾಗಿತ್ತೆಂದೂ ಎಂತಹ ಹಡಗವನ್ನಾದರೂ, ಕತ್ತರಿವಷ್ಟರ ಅವಧಿಯಲ್ಲಿ ಮುಳುಗಿಸಬಹುದಾಗಿತ್ತೆಂದೂ ಒಬ್ಬ ನೌಕಾಧಿಕಾರಿಯು ಅಭಿಪ್ರಾಯಪಟ್ಟನು

◆

ಈ ಹಡಗವನ್ನು ಹಿಂಬಾಲಿಸಿ, ಅದರೊಡನೆ ಯುದ್ಧ ಹೂಡಲು ಇಡೀ ಜಗತ್ತಿನಲ್ಲಿ, ಎಚ್ ಎಮ್ ಎಸ್ ಹುಡ್, ರಿನೌನ್ ಮತ್ತು ರಿಪಲ್ಸ್ ಈ ಮೂರು ಹಡಗಗಳಿಗೆ ಮಾತ್ರ ಸಾಧ್ಯವಿತ್ತೆಂದು ತಿಳಿಯುತ್ತದೆ.

◆

ನಿಜವಾಗಿ ಇಂತಹ ಪ್ರಬಲವಾದ ಯುದ್ಧನೌಕೆಯನ್ನು ಹಿಡಿದು ದಂಗುಬಡೆದ ವಿಷಯವು ಮಹಾ ಸಾಹಸದ ಕಾರ್ಯವಾಗಿದೆ

◆

'ಗ್ರಾಫ್‌ಸ್ಪೀ'ಗೆ ಹಡಗ ಯುದ್ಧದಲ್ಲಿ ಬಹಳ ಪೆಟ್ಟಾಗಿತ್ತು! ಅದು ತಟಸ್ಥ ರಾಷ್ಟ್ರದ ಬಂದರದಲ್ಲಿ ಹೋಗಿ ಲಂಗರು ಬಿಟ್ಟರೂ ಕೆಲವೇ ತಾಸುಗಳಲ್ಲಿ ಬಂದರು ಬಿಟ್ಟು ತೊಲಗಬೇಕಾಗಿ ನೊಂಟಿವಿಡೋ ಸರಕಾರವು ಆಜ್ಞೆಮಾಡಿತು! ರಿಪೇರಿಗೆ ಇನ್ನೂ ಸ್ವಲ್ಪ ಅವಧಿಕೊಡಿರೆಂದು ಜರ್ಮನ್ ಅಧಿಕಾರಿಗಳು ಕೇಳಿಕೊಂಡರು! ಆದರೆ, ಮೊದಲು ಕೊಟ್ಟ ನೋಟೀಸಿನ ಅವಧಿಯಲ್ಲಿ ಹಡಗು ಬಂದರವನ್ನುಬಿಡಲೇಬೇಕಾಯಿತು! ಇನ್ನೆಲ್ಲಿ ತಪ್ಪಿಸಿ ಓಡಿಹೋಗುತ್ತದೋ ಎಂದು ವಿಶ್ರ ರಾಷ್ಟ್ರಗಳ ನೌಕಾಧಿಕಾರಿಗಳಿಗೆ ಎದೆ ಬಡಿಯುತ್ತಿತ್ತು! ಆದರೆ ಮೊದಲೇ ಭಗ್ನವಾಗಿದ್ದ ಹಡಗು ತಪ್ಪಿಸಲಾರದೆ ಶತ್ರುಗಳ ಮಧ್ಯೆ ಸಿಕ್ಕಿಬಿತ್ತು!

◆

ಗ್ರಾಫ್‌ಸ್ಪೀಯು ತಾನಾಗಿ ಆಸ್ಫೋಟನಗೊಂಡು ಮುಳುಗಿದಾಗ ಅದರ ಹೊಗೆಯನ್ನು ನೋಡುತ್ತಾ ಬ್ರಿಟಿಷ್ ಪ್ರಾಣ್ಸು ಸರಕಾರಗಳು ಒಮ್ಮೆ ಸಂತೋಷದಿಂದ ನಿಟ್ಟುಸಿರೆಳೆದವು!

ಯೂರೋಪನ್ನು ಆಳಬೇಕು ಇಲ್ಲವೇ ಸಾಯಬೇಕು

ಗೆಸ್ಟಾಪೊದಲ್ಲಿ ಹಿಟ್ಲರನು ಹೀಗೆ ಹೇಳಿದ್ದ!

ಹಿಂದೆ ಡಾನ್ಜಿಂಗ್ ಸೆನೇಟಿನ ಅಧ್ಯಕ್ಷನಾಗಿದ್ದ ಹೆರ್ ಹರ್ಮಾನ್ ರಾಶ್‌ನಿಂಗನು 'ಹಿಟ್ಲರನು ಮಾತನಾಡುತ್ತಾನೆ' ಎಂಬ ಒಂದು ಪುಸ್ತಕವನ್ನುಬರೆದಿದ್ದಾನೆ ಆ ಪುಸ್ತಕದಲ್ಲಿ ಕೆಲವು ಸಂಗತಿಗಳು ಬಹಳ ಆಕರ್ಷಕವಾಗಿವೆ ಅವುಗಳ ಕೆಲವು ವಿಷಯಗಳು ಇಂದಿನಪರಿಸ್ಥಿತಿಗೆ ತೀರಾ ಅನ್ವಯಿಸುತ್ತದೆ

ಹಿಟ್ಲರನ ಆಕ್ಷಚರಿತ್ರೆಯಲ್ಲಿರುವ ಮಾತುಗಳನ್ನು ಈ ಪುಸ್ತಕವು ವಿವರಿಸುವುದು ಆ ಕ್ರೂರ, ಭಯಾನಕ ಹಿಟ್ಲರ್ ಸಾಮ್ರಾಜ್ಯಶಾಹಿಯ ಚಿತ್ರವನ್ನು ಈ ಪುಸ್ತಕವು ಚೆನ್ನಾಗಿ ಚಿತ್ರಿಸುವುದು ಎಂದು ಟೈಮ್ಸ್ ಪತ್ರಿಕೆಯು ಹೇಳಿದೆ

'ಅದ್ವಿತೀಯ, ಅಮಾನುಷ, ಅಸಾಮಾನ್ಯನಾದ ಆ ಹಿಟ್ಲರನ ಮನಸ್ಸನ್ನು ನಾವಿದರಲ್ಲಿ ನೋಡಬಹುದು ಅವನ ಕಾರ್ಯಕ್ಕೆ ಪ್ರೇರಕವಾದ ಪಾಶವೀ ಆಕಾಂಕ್ಷೆಯನ್ನು ಹೆಚ್ಚಾಗಿ ಇದರಲ್ಲಿ ನೋಡಬಹುದು' ಎಂದು ಮಾಂಚೆಸ್ಟರ್ ಗಾರ್ಡಿಯನ್ ಬರೆಯುತ್ತದೆ

ರಶ್ಯಾ

ರಶ್ಯಾದೊಡನೆ ಎಂದಾದರೊಂದು ದಿನ ರಾಜಿಮಾಡಿಕೊಳ್ಳಬೇಕಾಗುವುದೆಂದು ಹಿಟ್ಲರನು ಗೆಸ್ಟಾಪೊಲ್ಲಿಯೇ ಹೇಳಿದ್ದನ ಪೋಲೆಂಡನ್ನು ಹಂಚಿಕೊಳ್ಳಬೇಕಾಗುವುದೆಂದೂ ಸೂಚಿಸುತ್ತಿದ್ದನು ಆದರೆ ರಶ್ಯಾವು ಸಮಯವನ್ನು ಸಾಧಿಸಿ ಎಲ್ಲವನ್ನೂ ಕಸಿದುಕೊಳ್ಳಬಹುದೆಂಬ ಅಂಜಿಕೆಯನ್ನೂ ಅವನ ಆಗಾಗ ತೋರಿಸುತ್ತಿದ್ದನು

'ಆ ಅಪಾಯವು ಇದ್ದೇ ಇದೆ ರಶ್ಯದ ಕೈಯ್ಯಲ್ಲಿ ನಾವು ಹೇಗಾದರೂ ಒಂದು ದಿನ ಸಿಕ್ಕಿಬೀಳುವುದು ಖಂಡಿತ ಅದರೊಡನೆ ಸ್ನೇಹ ಬೆಳೆಸಿದರೆ, ಫಜೀತಿಯಾಗುವುದು ನಿಜ ಅದು ಕೇಳಿದ ಸ್ಥಳ್ಳಾ ಕೊಟ್ಟು, ಮಾಡಿದ್ದನ್ನೆಲ್ಲ ನೋಡಿಕೊಂಡು ಸುಮ್ಮಸಿರಬೇಕಾಗುವುದು. ಇಲ್ಲದಿದ್ದರೆ ಅದರ ಸಹವಾಸವನ್ನೇ ಬಿಟ್ಟು ಅದರ ಕಡೆಗೆ ನೋಡುವುದನ್ನು ಬಿಟ್ಟು ನಮ್ಮಷ್ಟಕ್ಕೇ ನಾವಿರಬೇಕು. ಆದರೆ ಹಾಗಿರುವುದು ನಮಗೆ ಸಾಧ್ಯವಲ್ಲ. ಪರಿಸ್ಥಿತಿಯ ಒತ್ತಾಯದ ಮೂಲಕ ನಾವು ರಶ್ಯದೊಡನೆ ಸ್ನೇಹ ಮಾಡಲೇ ಬೇಕು.'

ಹಿಟ್ಲರನ ಆಕಾಂಕ್ಷೆ

'ಜರ್ಮನಿಯ ಉದ್ದೇಶವು ಮಿತವಾಗಿರಬೇಕು. ತನ್ನ ಮಟ್ಟಿಗೆ ಇರಬೇಕು, ಎಂದು ಹಿಂದೆ ಬಿಸ್ಮಾರ್ಕನು ಹೇಳುತ್ತಿದ್ದ ಮಾತುಗಳು ಹಿಟ್ಲರನಿಗೆ ಸೇರಲಾರವು. ಅವನ ಧ್ಯೇಯ ದೊಡ್ಡದು. ಭಾರೀ ಆಕಾಂಕ್ಷೆ. ಅಸಾಧ್ಯವನ್ನೂ ಸಾಧ್ಯಮಾಡುವ ಸಾಹಸ 'ನಾವು ಇದೀ ಯೂರೋಪನ್ನೇ ಆಳಬೇಕು. ಆ ನಮ್ಮ ವಿಶಾಲವಾದ ರಾಜ್ಯದ ಕೇಂದ್ರದಲ್ಲಿ ಮೊದಲು ಜರ್ಮನಿ, ಬಲಿಕ ಆಸ್ಟ್ರಿಯ, ಬೊಹೆಮಿಯ, ಮೊರೇವಿಯ, ಪಶ್ಚಿಮ ಪೋಲೆಂಡ್, ಬಾಲ್ಟಿಕ್ ರಾಜ್ಯಗಳು, ಬಾಲ್ಕನ್ ರಾಜ್ಯಗಳು, ಯುಕ್ರೆನ್, ಮತ್ತು ಜಾರ್ಜಿಯ ಮೊದಲಾದ ರಾಷ್ಟ್ರಗಳು ನಮಗೆ ಇರಬೇಕು'

ತಾನು ಮತ್ತು ಸಹೋದ್ಯೋಗಿಗಳು ಅವಿಶ್ರಾಂತ ಯತ್ನದಿಂದ, ಅಸಾಧಾರಣ ಕಾರ್ಯಶಕ್ತಿಯಿಂದ ಅವೆರಿಕವು ದೊಡ್ಡ ಕ್ರಾಂತಿಯಿಂದ ನಾಶವಾಗದಂತೆ ಬ್ರಿಟಿಷ್ ಜರ್ಮನಿಗೆ ಸೇರದಂತೆ, ಹಾಲೆಂಡ್ ಬೆಲ್ಜಿಯಂ ಮತ್ತು ಸ್ಕಾಂಡಿನೇವಿಯಗಳ ಮಧ್ಯಾಂತರ ನುಗ್ಗಿ ಬ್ರಿಟಿಷ್ ಸಾಮ್ರಾಜ್ಯವನ್ನು ಗೆಲ್ಲದಂತೆ ಮಾಡಬಹುದೆಂದು ಹಿಟ್ಲರನು ತಿಳಿದಿದ್ದನು.

'ಚಿಕ್ಕ ಯುದ್ಧ ಯಾವ ದೇಶವಿಲ್ಲ' ಎಂದು

ಸ್ಕಾಂಡಿನೇವಿಯ ಮೇಲೆ ಹತ್ತಿಗೆ ಹಾಕಿದ್ದುದಾಗಿ ಹಿಟ್ಲರನು 'ಅವನನ್ನು ಸೆಳ್ಳುವಂಗಿಲ್ಲ ಅದರೆ ಅವರು ಸ್ನೇಹಿತರನ್ನು ಮಾಡಿಕೊಳ್ಳಬೇಕು ನೆಮ್ಮದಿಯಾಗಿ ನಡೆಯಬೇಕ' ಇದು ಮಾತು

ಹಿಟ್ಲರನು ವಿಸೇನ ಬಗೆದ ಅದೆಲ್ಲವನ್ನು ಕಾರ್ಯರೂಪದಲ್ಲಿಯೂ ಅತನು ಪ್ರಚಂಡನಾ

ಸಾದರ—ಸ್ವೀಕಾರ

೧ ನವಭಾರತಃ— (ವಾರ ಸಂಪಾದಕರು ಶ್ರೀ ಟಿ ಬಿ ಕೇಶ ಬಳ್ಳಾರಿ ವಾರ್ಷಿಕ ಚಂದಾ ರೂ ೨

ಬಳ್ಳಾರಿಯಂಥಹ ಕನ್ನಡದ ಗಡಿ ಹೊರಯವ ಈ ಕನ್ನಡ ಉಜ್ವಲ ರಾಷ್ಟ್ರಪತ್ರಿಕೆಗೆ ನಮ್ಮ ಸ್ವಾಗತ

೨ ಕನ್ನಡ ಸಾಹಿತ್ಯಃ— ಪ ವಿದ್ಯಾನಿಲಯದ ಪ್ರಕಟಣೆ

ಕ್ಷೌರವು ಸಿದ್ಧವಾದ ಉತ್ತಮ.



ನೀಲಿ ಬಣ್ಣದ ಜಿಲೆಟ್ ಬ್ಲೇಡುಗಳನ್ನುಪಯೋಗಿಸಿರಿ ಆಗ ಮಾತ್ರ ನೀವು ಜಗತ್ತಿನಲ್ಲಿ ಅತ್ಯುತ್ಕೃಷ್ಟ ಬ್ಲೇಡುಗಳನ್ನುಪಯೋಗಿಸುತ್ತೀರಿದಾಯಿತೆ ಅತ್ಯಂತ ಸೂಕ್ಷ್ಮವಾಗಿ ಹರಿತವಾಗಿದ ರೀತಿಯಲ್ಲಿ ಅವು ಮಸೆಯಲ್ಪಟ್ಟಿವೆ—ಇದರಿಂದಾಗಿ ನಿಮಗೆ ಇತರ ಬ್ಲೇಡುಗಳಿಗಿಂತ ಉತ್ತಮವೂ, ನಯವೂ ಆದ ಕ್ಷೌರವಾಗುವುದು ಮತ್ತು ಇವು ಬಹಳ ಸೂಕ್ಷ್ಮರೀತಿ ಹರಿತವಾಗಿರುವುದರಿಂದ—ಜಿಲೆಟ್ ಬ್ಲೇಡುಗಳ ಕ್ಷೌರವು ಉತ್ತಮವೂ ಲಗ್ಗವೂ ಆಗಿರುತ್ತದೆ



ನೀಲಿವರ್ಣ ಜಿಲೆಟ್ ಬ್ಲೇಡುಗಳು

ವಿಜ್ಞಾನಯುಗ

ಟೆಲ್ಪಿಶನ್

ಂಬ ಹೊಸ ಯಂತ್ರವು
ಾಗಿದೆಯಷ್ಟೆ? ಇದರಿಂದ
ಲ್ಲಿ ಆದ ಘಟನೆಗಳನ್ನು ಅದೇ
ಇನ್ನೊಂದು ಕಡೆಯಲ್ಲಿರುವ
ನು ಕೂತಲ್ಲಿಂದಲೇ ಕಾಣುವು
ುವುದು ಎರಡೂ ಮಾಡುವನು.
ಂತಹ ಚಿತ್ರಗಳನ್ನು ಬಣ್ಣ
ತೋರಿಸುವ ಪ್ರಯೋಗವ
ಎಲ್. ಬೈರ್ಡ್ ಎಂಬ ಟೆಲ್ಪಿ
ರಿಶೋಧಕನು ೧೯೨೮ರಲ್ಲಿಯೇ
ಹುಡುಕುತ್ತಿದ್ದನು. ಆದರೆ ಆ
ದಲ್ಲಿ ಮುಂದೆ ಹೆಚ್ಚಿನ ಸಂಶೋ
ು ಆ ದಾರಿಯಲ್ಲಿ ನಡೆದಿಲ್ಲ.
ಸಾಹಸಪಟ್ಟರೂ ಆ ಕಾರ್ಯವ
ಮುಂದುವರಿಸುವುದು ಪ್ರಕೃತಕ್ಕೆ
ಗಳಿಗೆ ಆಗುವುದಿಲ್ಲವೆಂದು ತಿಳಿ

ೋವು ಆಗಲು ಕಾರಣ?

ಸ್ಯವಾಗಿ ತಲೆನೋವು ಆಗು
ವು ನೋಡಲು ಇಷ್ಟವಿಲ್ಲದ
ಭೇಟಿ ಮಾಡುವುದರಿಂದ,
ತ್ರಿಸಿದವರು ನಮ್ಮನ್ನು ಕಾ
ವರನ್ನು ಮಾತನಾಡಿಸುವು
ವು ಹೆಚ್ಚಾಗುವುದರಿಂದ,
ರೂ ಅವಮಾನವಾಗುವು
ಸರವುಂಟಾಗುವುದರಿಂದ
ನ ಸ್ಪೆಶಲಿಸ್ಟ್ ಆದ ಡಾ
ಕುರಾನ್ ಎಂಬವರು

ಕ್ಷವಾತದ ಗುಣ

ಏತದ ವಿಷಯ ಸ್ವಿಜ
ಲ್ಕ್ಸ್ ಕೊಂಟೀಟ್
ುವೊಂದನ್ನು ಕಂ

ರ್ಷ ಹಿಂದೆ, ಬಂ
ವ್ಯರ್ ಪ್ರಯೋಗಿಸಲು
ಅತಿಯಾದ
ಎದೆನೋವು ಇವು
ು ರೋಗಿಯನ್ನು

ಗಳ, ಡಾಕ್ಟರರು
ಟ್ ಪ್ರಯೋಗಿಸಿ
ಗಳ ಮೇಲೆ ಅವರು
ಕ್ಷೆ ಮಾಡಿದ್ದು ಸರಿ
ಯಿತು. ಮಗು
ವಾತವು ಇತ್ತು.
ರು ಹಳೆ ಕೃಮಿಗಳನ್ನು
ನೆರಂ ಇಂಜೆಕ್ಶನು ಕೊ
ದಿನ ಹೋದಂತೆ ಗುಣ
ು ವಾರದಲ್ಲಿ ಸಂಪೂ

ಹೀಗೆಯೇ ಅವರು ಇನ್ನೊಂದು ರೋ
ಗಿಯನ್ನು ಪೊಟೇಶಿಯಂ ಕ್ಲೋರೇಟ್
ಮತ್ತು ಸೆರಂ ಇಂಜೆಕ್ಶನುಗಳನ್ನುಕೊಟ್ಟು
ನೋಡಿ ಗುಣಕಂಡರು. ಮೂರು ತಿಂಗ
ಳೊಳಗೆ ಹದನಾರು ಮಂದಿ ಹುಡುಗರ
ನ್ನು ಆ ರೀತಿಯಿಂದ ಡಾಕ್ಟರು ಗುಣಪ
ಡಿಸಿದರು. ಆ ಮೇಲೆ ಸೆರಮ್ಮನ್ನು ಅವರು
ಬಿಟ್ಟುಕೊಟ್ಟು ಪೊಟೇಶಿಯಂ ಕ್ಲೋರೇಟ
ನ್ನೇ ಕೊಡಲು ಸುರುಮಾಡಿದ್ದರು.

ಶಸ್ತ್ರಚಿಕಿತ್ಸೆಯಿಂದ ಅವನ ಪ್ರೇ
ಯಸಿಯ ಮೆಚ್ಚಿಗೆ ಪಡೆದನು!

ಕವಿಯ ವಿಕಾರವನ್ನು ಶಸ್ತ್ರ ಚಿಕಿತ್ಸೆ
ಯಿಂದ ಆತನು ಸರಿಪಡಿಸಿಕೊಂಡ ಮೇ
ಲೆ ಅವನ ಪ್ರೇಮಯಾಚನೆಗೆ ಆಕೆ
ಸಮ್ಮತಿಕೊಟ್ಟಳು ಆ ರೋಮಾಂಚನ
ಕಾರಿಯಾದ ಒಂದು ಕಥೆಯು ಹೀಗಿದೆ

ಸ್ವೀಡನಿನಲ್ಲಿ ಒಬ್ಬ ಹುಡುಗ ಕವಿಗಳ
ಲ್ಲದೆ ಹುಟ್ಟಿದ. ಶರೀರದ ಮಿಕ್ಕ ಎಲ್ಲಾ
ಅಂಗಗಳೂ ಯಥಾಸ್ಥಿತಿಯಲ್ಲಿದ್ದುವು
ಆತ ಬೆಳೆದು ಶಾಲೆಗೆ ಹೋಗಿ ಎಲ್ಲರಂತೆ
ಕಲಿತು ದೊಡ್ಡವನಾದ.

ಸಹಜವಾಗಿ, ಶಾಲೆಯ ವಿದ್ಯಾರ್ಥಿ
ವಿದ್ಯಾರ್ಥಿನಿಯರು ಆತನ ಅಂಗವಿಕಾರ
ಕ್ಕಾಗಿ ಆತನನ್ನು ತಮಾಷೆ ಮಾಡದೆ ಇ
ರುತ್ತಿರಲಿಲ್ಲ. ಪ್ರಕೃತಿಯ ಅನೇಕ ವಿಕಾ
ರಗಳನ್ನು ಹೇಳುವ ಸಂದರ್ಭದಲ್ಲಿ ಉ
ಪಾಧ್ಯಾಯರೂ ಆತನ ಕವಿಯನ್ನು ಉ
ದಾಹರಿಸುತ್ತಿದ್ದರು

ಆತನು ತರುಣನಾದ ಒಬ್ಬಾಕೆಯಲ್ಲಿ
ಆತನಿಗೆ ಪ್ರೇಮ ಬಿತ್ತು. ಆದರೆ ಆಕೆಗೆ
ಆತನೊಡನೆ ಪ್ರೇಮ ಮಾಡುವುದು ಅಸ
ಹ್ಯವೆನಿಸಿತ್ತು. ಕವಿಯಲ್ಲದವನೆಂದು
ಅವನನ್ನು ಆಕೆ ಕಣ್ಣೆತ್ತಿ ಸಹ ನೋಡ
ಲಿಲ್ಲ

ಈ ವಿಷಯವು ಆತನ ತಾಯಿಗೆ ತಿಳಿ
ಯಿತು. ಡಾಕ್ಟರರಲ್ಲಿಗೆ ಆಕೆ ಹೋಗಿ,
ತನ್ನ ಮಗನ ಕವಿಗೆ ತನ್ನ ಕವಿಗಳನ್ನು
ಕೊಯ್ದು ಜತೆಗೂಡಿಸಬಹುದೇ ಎಂದು
ಕೇಳಿದರು. ಡಾಕ್ಟರರು ಅಗಬಹುದೆಂದೆ
ರು. ಒಂದು ಹೆಣದ ಕವಿಯನ್ನು ಆತನ
ಕವಿಗೆ ಜೋಡಿಸುವುದೆಂದು, ಆತನೊಡನೆ
ಹೇಳಿದರು. ಆತನಿಗೆ ಶಸ್ತ್ರಚಿಕಿತ್ಸೆಯಾ
ಯಿತು. ಕವಿ ಸೇರಿಸಲಾಯಿತು ಆ
ಮೇಲೆ ಒಂದು ದಿನ ತಾಯಿ ತನ್ನ ವಾರ್ತೆ
ಹೇಳಿದಳು. ತಾಯಿಯ ಸ್ವಾರ್ಥತ್ಯಾಗ
ದ ವಿಷಯ ಆತನು ಬಹಳವಾಗಿ ದುಃಖ
ಗೊಂಡಾಗ, ತಾಯಿಯು ತನ್ನ ಕವಿಯ
ನ್ನು ಕೂದಲಿನಿಂದ ಮುಚ್ಚಬಲ್ಲೆನೆಂದು
ಹೇಳಿ ಮಗನನ್ನು ಸಮಾಧಾನಪಡಿಸಿದಳು

ಆತನು ಪ್ರೇಮಿಸಿದಾಕೆ ಆ ಮೇಲೆ
ಅವನ ಕೈಹಿಡಿಯಲು ಒಪ್ಪಿದಳು ಕೆಲದ
ತಿಂಗಳು ಅವರು ವಿವಾಹಿತರಾದರು!

HALFTONE & LINE
BLOCK MAKING
UNDERTAKEN
Sharada Press,
MANGALORE

ಭಾರತ ಸ್ತ್ರೀಯರಿಗೆ ಉತ್ತಮೋತ್ತಮವಾದ ಟಾನಿಕ್

ಲೋ ದ್ರ

ಲೋ ದ್ರ

ಬಲವರ್ಧಕ ಔಷಧಗಳ ರಾಣಿ
ಸ್ತ್ರೀಯರ ಸಕಲ ಗರ್ಭಾಶಯರೋಗಗಳನ್ನು ಹೋಗಲಾಡಿಸಿ
ಸಂಪೂರ್ಣಾರೋಗ್ಯವನ್ನೂ, ಸುಖವನ್ನೂ ನೀಡುವ ಟಾನಿಕ್
ಕೇಸರಿ ಕುಟೀರಂ, ರಾಯಪೇಟೆ, ಮದರಾಸು.

"ನ ನಿಶ್ಚಿತಾರ್ಥಾ ದ್ವಿರಮಂತಿ ಧೀರಾಃ"

15

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

22—12—1939] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೨೨—೧೨ ೧೯

ಜಿನ್ನರೊಡನೆ ಮಾತುಕತೆ ನಡೆಸುವುದು ಅರಾಷ್ಟ್ರೀಯತೆ--ಅಗೋ

ದಶಂಬರ ೨೨ರಂದು ಕಾಂಗ್ರೆಸು ಸರಕಾರಗಳು ರಾಜಿನಾಮೆ ಕೊಟ್ಟ ವಿಷಯವಾಗಿ ಸಂತೋಷ ಪ್ರದರ್ಶನ ಮಾಡಲು ಮುಸ್ಲಿಮರು ಅಖಿಲ ಭಾರತದಲ್ಲಿ ವಿಮೋಚನೆಯ ದಿನವನ್ನಾಚರಿಸಬೇಕೆಂದು ಕೊಟ್ಟ ಪ್ರಕಟಣೆಯು ಕುರಿತು ಬೊಂಬಯಿಯ ಪ್ರಚಂಡ ಸಭೆಯೊಂದರಲ್ಲಿ ಪಂಡಿತ ನೆಹರುಗಳು, ತಾನು ಅವರೊಡನೆ ಜಾತೀಯ ಸಮಸ್ಯೆಯ ಕುರಿತು ಮಾತುಕತೆ ನಡೆಸಲು ಇನ್ನು ಮುಂದೆ ಯತ್ನಮಾಡ ವುದು, ರಾಷ್ಟ್ರೀಯತ್ವವನ್ನು ಬಿಟ್ಟಂತೆಯೂ, ಆತ್ಮಗೌರವವನ್ನು ಮರೆತಂತೆಯೂ ಆಗುವುದರಿಂದ ಅವರೊಡನೆ ಅ ಕುರಿತು ಮಾತುಕತೆ ಮುಂದೆ ನಡೆಸಲಾರೆ ನೆಂದರು ದಿಲ್ಲಿಯಲ್ಲಿ ಅವರೊಡನೆ ಮಾತುಕತೆ ನಡೆಸಿದಾಗ, ಕಾಂಗ್ರೆಸು ಮತ್ತು ಲೀಗುಗಳ ಧ್ಯೇಯಗಳು ದೇಶದ ಸ್ವಾತಂತ್ರ್ಯವೇ ಇರಲು, ಜಾತೀಯ ಸಮಸ್ಯೆಯನ್ನು ಪರಿಹರಿಸಿ ವೈಸರಾಯರಿಗೆ ಯೋಗ್ಯ ಉತ್ತರ ಕೊಡುವುದು ಸಾಧ್ಯವುಂಟೇ ಎಂದು ಅವರೊಡನೆ ಮಾತುಕತೆಗೆ ಒಪ್ಪಿಕೊಂಡಿರುವೆನೆಂದೂ, ಆದರೆ ಮಾತುಕತೆ ಸುರು ಮಾಡುವ ಮೊದಲೇ ಈ ಪ್ರಕಟಣೆ ಹೊರಡಿಸಿರುವುದರಿಂದ ತಾನು ಮನೆ ಸೊಂದಿರುವೆನೆಂದೂ ಜಿನ್ನರು ರುಜುಪಡಿಸದೆ ಕಾಂಗ್ರೆಸಿನ ಮೇಲೆ ಆರೋಪ ಹೊರಿಸುವುದು ಶಿಷ್ಟ ಸಂಪ್ರದಾಯಕ್ಕೆ ವಿರೋಧವೆಂದೂ ಹೇಳಿದರು.

ಮುಂದುವರಿಸುತ್ತಾ ಅವರು 'ಕಾಂಗ್ರೆಸಿನ ಮೇಲೆ ಈಗ ಹೊರಿಸಿರುವ ಆರೋಪಗಳು ನಿರಾಧಾರವೆಂದು ನನ್ನ ಶಕ್ತಿ ಹೊಣೆಗಾರಿಕೆಗಳನ್ನರಿತು ಕಂಠೋಕ್ತ ಹೇಳುವೆನು. ಈ ಕಾಂಗ್ರೆಸು ವಿರುದ್ಧ ಚಳವಳಿಯ ಅಸೂಯೆ ಸೂಚನೆಯದು, ಸುಳ್ಳು ಆರೋಪಗಳನ್ನು ನಂಬಿ 'ವಿಮೋಚನೆ'ಯ ದಿನಾಚರಣೆ ಮಾಡುವುದು ಅಪಾಯಕರವೆಂದೂ, ಜಿನ್ನರು ಹುಟ್ಟಿಸಿರುವ ಅಪಾಯ ಪರಿಸ್ಥಿತಿಯನ್ನು ನುಂಗಿಕೊಂಡು ಅವರೊಡನೆ ರಾಜಿ ಮಾತುಕತೆ ನಡೆಸಲು ಮಹಾತ್ಮಾಜಿಯವರೇ ಹೇಳಿದರೂ, ಒಪ್ಪಲಾರೆನೆಂದೂ ಜಾತೀಯ ಪ್ರಶ್ನೆಯು ಬಗೆಹರಿಸುವ ತನಕ ಸಾವಧಾನದಿಂದ ಕಾಯಬೇಕೆಂದೂ ಹೇಳಿದರು.'

ಪಂಡಿತ ಜವಾಹರಲಾಲರು ಈಗ ದಿನಕ್ಕೆ ಮುಕ್ಕಾಲು ತಾಸು ರಾಟೆಯಲ್ಲಿ ಪ್ರತಿನಿತ್ಯ ನೂಲುವ ವ್ರತಮಾಡಿಕೊಂಡಿದ್ದಾರೆ!

'ಜಾತಿಗೆ ಉರುಳು ಹಾಕುವುದೇ ಜಿನ್ನರ ಉದ್ದೇಶ'

ವೈಸರಾಯರೂ, ಗವರ್ನರರೂ, ಆರೋಪಗಳನ್ನು ವಿಚಾರಿಸಬೇಕು

ಸರ್ದಾರರ ಸಿಂಹನಾದ

ಜಿನ್ನರ ಪ್ರಕಟಣೆಯ ಕುರಿತು ಕಾಂಗ್ರೆಸ್ ಪಾರ್ಲಿಮೆಂಟರಿ ಸಬ್ ಕಮಿಟಿಯ ಅಧ್ಯಕ್ಷರಾದ ಸರ್ದಾರ ವಲ್ಲಭಭಾಯಿ ಪಟೇಲರು ಒಂದು ಮಹತ್ವದ ಅಭಿಪ್ರಾಯ ಕೊಟ್ಟಿರುವರು. ಅದರ ಸಾರಾಂಶ ಹೀಗಿದೆ

'ಹಿಂದೂ ಮುಸ್ಲಿಮರಲ್ಲಿ ದ್ವೇಷವನ್ನು ಹೆಚ್ಚುಮಾಡಬೇಕೆಂದೇ ಜಿನ್ನರು ಇಂತಹ ಪ್ರಕಟಣೆ ಕೊಟ್ಟಿರುವರು ಅವರ ಆರೋಪಗಳಿಗೆ ಆಧಾರವಿಲ್ಲ ಒಸತೆಯ ಮನ್ನಣೆಗೆ ಪಾತ್ರರಾದ ಸ್ವಾರ್ಥೀ ಕಾರ್ಯಕರ್ತರ ಮೇಲೆ ಜಿನ್ನರು ಈ ರೀತಿ ಆರೋಪ ಹೊರಿಸಿದ್ದಾರೆ ಈ ಅವರ ಅಡ್ಡ ದಾರಿಯನ್ನು ನೋಡಿದರೆ, ಜಾತಿಯ ಬೆಂಕಿಯನ್ನು ಪ್ರಜ್ವಲಿಸಲು ಅವರು ಪಣತೊಟ್ಟಂತೆ ತೋರುತ್ತದೆ ಇನ್ನೂ ಮುಂದಿನ ಕೆಲ ತಿಂಗಳಲ್ಲಿ ಜಾತೀಯ ಜಗಳದಿಂದ ಕಲುಷಿತವಾಗಿ ನನ್ನ ಕಾರ್ಯಗಳು ಹಿಂದಕ್ಕೆ ತಳ್ಳಲ್ಪಡುವವು. ಇದು ಸಾಮ್ರಾಜ್ಯ ಶಾಹಿಯ ಆಟವು.

'ವೈಸರಾಯರು ಗವರ್ನರರೂ ಈ ಬಗ್ಗೆ ಏನೂ ಪ್ರಕಟಮಾಡದಿರುವುದು ನನಗೆ ಆಶ್ಚರ್ಯಕರವೆನಿಸಿದೆ. ಕಾಂಗ್ರೆಸಿನ ಮೇಲೆ ಆರೋಪದಂತೆ ಜಿನ್ನರು ಅವರ ಮೇಲೂ ಆರೋಪಿಸಿರುವರು. ವೈಸರಾಯರು ಮತ್ತು ಗವರ್ನರರು, ಸಾರ್ವಭೌಮರು ತಮಗೆ ಕೊಟ್ಟ ಆಜ್ಞೆಯನ್ನು ಅಲಕ್ಷಿಸಿ ಕರ್ತವ್ಯಚ್ಯುತರಾಗಿರುವರೆಂದು ಅವರ ಆರೋಪದ ಅರ್ಥವಾಗುತ್ತದೆ. ಯಾವುದೇ ರೂಪದಲ್ಲಿ ಅವರು ಪ್ರಕಟಣೆ ಹೊರಡಿಸದಿರುವುದರಿಂದ ನ್ಯಾಯಕ್ಕೆ ಬೆಂಬಲ ಕೊಡಲು ಚ್ಯುತರಾದಂತಾಗುವುದು. ಕಾಂಗ್ರೆಸು ಸರಕಾರಗಳನ್ನು ಅಸತ್ಯ ಆರೋಪಗಳಿಗೆ ಗುರಿ ಮಾಡಿದಂತಾಗುವುದು. ಈ ಕಾಲದಲ್ಲಿ ಕಾಂಗ್ರೆಸು ಸರಕಾರಗಳು ಅಲ್ಪ ಸಂಖ್ಯಾತರಿಗೆ ಹಾಗೂ ಮುಸ್ಲಿಮರಿಗೆ ಅನ್ಯಾಯ ಮಾಡಿಲ್ಲವೆ ದೂ, ಆದುದರಿಂದಲೇ ನಾವು ವಿಶೇಷಾಧಿಕಾರವನ್ನು ಉಪಯೋಗಿಸಲಿಲ್ಲವೆ ದೂ ಅದರ ಪ್ರಕಟಣೆಯಲ್ಲಿ ಈ ಸ್ವಾತಂತ್ರ್ಯವು ಸಿಕ್ಕುತ್ತಿದೆ.'

ಜಿನ್ನರ ಧೋರಣೆ ರಾಷ್ಟ್ರಘಾತುಕವಾಗಿದೆ

ರುಜು ಮಾಡದಿದ್ದರೆ ನಾಲಿಗೆ ಬಿಗಿ ಹಿಡಿಯಿರಿ

ಮೌಲಾನಾ ಅಜಾದರ ಪ್ರತಿಭಟನೆ

ಜಿನ್ನರ ಪ್ರಕಟಣೆಯ ಕುರಿತು ಕಾಂಗ್ರೆಸು ಮುಂದಾಳುಗಳಾದ ಮೌಲಾನಾ ಅಬುಲ್ ಕಲಾಂ ಅಜಾದ್ ಒಂದು ಹೇಳಿಕೆಯನ್ನು ಹೊರಡಿಸಿರುವರು ಅದರ ಸಾರಾಂಶ ಹೀಗಿದೆ

ಕಾಂಗ್ರೆಸ ಮತ್ತು ಮುಸ್ಲಿಂ ಲೀಗುಗಳಲ್ಲಿದ್ದ ಮತಭೇದಗಳನ್ನು ಹೋಗಲಾಡಿಸಲು ನಾನು ಈಗ ೨ ವರ್ಷಗಳಿಂದಲೂ ಸತತ ಪ್ರಯತ್ನ ಮಾಡುತ್ತಿದ್ದೇನೆ ಈ ವಿಷಯದಲ್ಲಿ ಸ್ವಲ್ಪ ಸಹ ನಾನು ಹಿಂಜರಿಯಲ್ಲಿ ಆದರೆ ಪರಸ್ಪರಂಲ್ಲಿದ್ದ ಕಪ್ಪು ತಿಳುವಳಿಕೆಯನ್ನು ಹೋಗಲಾಡಿಸಲು ಹಾಗೂ ಒಪ್ಪಂದದ ಮಾತುಕತೆಗಳನ್ನು ಪ್ರಾರಂಭಿಸಲು ಕಾಂಗ್ರೆಸು ಲೀಗಿನವರೆ ದಿಟ್ಟತನದಿಂದ ಅತ್ಯಂತ ಆಯತ ಸಮಯದಲ್ಲಿ ವಿರೋಧಿ ಪಕ್ಷದವರೊಬ್ಬರು ಮುಂದೆ ಬಂದು ಮುಂಜಿ ಬಿಡುತ್ತಾರೆಂಬ ವಿಷಯವನ್ನು ನಾನು ಬಹಳ ವಿವಾದದಿಂದ ಹೇಳುತ್ತೇನೆ. ಅವರೇ ಜಿನ್ನಾರವರು.

ಸ್ವಾಭಿಮಾನದ ತಿಲಾ ಶವಾದರೂ ಇದ್ದ ಮುಸಲ್ಮಾನನು ತನ್ನ ಜಾತಿ ಬಂಧುಗಳಿಗೆ ಹೇಳುವ ಒಂದಾದರೂ ಹಿತೋಕ್ತಿ ಅದರಲ್ಲಿಲ್ಲ. ಮುಸಲ್ಮಾನರು ತಮ್ಮ ಹಕ್ಕು ಹಾಗೂ ಹಿತಸಂಬಂಧಗಳನ್ನು ರಕ್ಷಿಸಿಕೊಳ್ಳಲು ತಮ್ಮ ಮನಸ್ಸಿಗೆ ಬಂದ ಹೋರಾಟ ಕೈಕೊಳ್ಳಲು ಅವರಿಗೆ ಆದರೆ ಹೀಗೆ ಜಾತಿ ಮಾತ್ಸರ್ಯ ಹುಟ್ಟಿಸ್ಕೊಡದು ಹಿಂದುಸ್ತಾನದ ತ್ಯಕ್ಕೆ ವಿಪಾತಕುವಾದ ಯಾವ ಯುವನ್ನೂ ಕೈಕೊಳ್ಳತಕ್ಕದ್ದಲ್ಲ ಜಿನ್ನಾರವರ ಸದ್ದುದ ಧೋರಣೆ ಲ್ಮಾನರನ್ನ ದುರ್ದೈವದ ದಿಸೆಗೆ ತ್ತಲಿದೆ

ಜಿನ್ನಾರವರ ಕಾಂಗ್ರೆಸ ವಂಡಲಗಳ ಮೇಲೆ ಹೊರಿಸಿದ ಪಗಳು ಅತ್ಯಂತ ನಿರಾಧಾರವೆಂ ನನ್ನ ಸಂಪೂರ್ಣ ಹೊಣೆ ಹಿಂದಕ್ಕೆ ಎಷ್ಟೋ ಸಲ ಇಂತಹ ಗುರುತರದ ಆರೆ ಹೊರಿಸುವದಾದರೆ, ಈ ತ್ತಿನಲ್ಲಿದ್ದ ಯಾವದೊಂದು ಸಿದ್ಧ ಮಾಡ ವದು ಜಿನ್ನಾ ವಂತನಾದುದವರ ಕತ ಇದನ್ನು ಮಾಡಲು ಜಿನ್ನಾ ರ್ಧರಿದ್ದರೆ ಅವರ ತವ ಗೂ ಲೇಖಿಯ ನ್ನ ಬ ಕೆಂದು ಪ್ರತಿಯೊಬ್ಬ ವಿನೆ ಸವ.

DIAMONDS!
BEST BR'
K. R.
MA'
ಮಂಗಳೂರಿನ.
ವಜ್ರ
ಎಮ್ ಸ್ಟ್ರ
ಗಳು ಬಜಾ
ಸ್ಟೆಟಿಗೆ ಕದಿದೆ
ವಿಕ್ರಯ ಸಿಲ್ಪಡು
ನವ್ಮಲ್ಲಿ ಒ
ನೊಂತಿದಲ್ಲಿ ನ
ಚುನಾವಣೆಯ
ನಾಗಿಯೇ ತಿಳಿದ
ನಿಮಗೆ ಬೇಕ
ದೂ ಹಂಗಿಲ್ಲ
ಆಗ ತಾನೇ
ನಮ್ಮ ಬ್ರಾಂಚು
ಯ್ಯ
ಕೆ. ಆರ್. ಕೆ.

ಮಾನಿ

ಇ-2-1939

...ದ ಸಮಯದಲ್ಲಿ ...ಕೈಗಾರಿಕೆಗಳ ಅಭಿವೃದ್ಧಿ.

...ನ ಮಹಾಯುದ್ಧದಿಂದ ಉಂ...ಕರವಾದ ಆರ್ಥಿಕ ಸಮಸ್ಯೆ ... ವಿಚಾರಿಸಿ ನಮ್ಮ ರಾಷ್ಟ್ರದ ...ಕ ಪ್ರಗತಿಯಲ್ಲಿ ಯೋಗ್ಯ ... ಕಾರ್ಯಗಳನ್ನು ನಡೆಸಬೇಕಾದ ...ಕತೆಯು ಈ ಕಾಲದಲ್ಲಿ, ಅಖಿಲ ... ಔದ್ಯೋಗಿಕ ಸಮ್ಮೇಳನವು ...ಮೈಸೂರಲ್ಲಿ ಸೇರಿತು. ಕೈಗಾ... ಉದ್ಯಮಗಳಲ್ಲಿ ಕಳೆದ ಹಲವು ...ಗಳಿಂದ ಪ್ರಗತಿಯನ್ನು ಹೊಂದು... ಮೈಸೂರಿನಂತಹ ಆಶ್ರಿತರಾಜ್ಯ ...ಸಲದ ಸಮ್ಮೇಳನವು ಜರಗಿದು ವಿಶೇಷವಾದ ಇನ್ನೊಂದು ಮಹ ...ದೆ ಹಿಂದಿನ ಕೆಲವು ವರ್ಷಗಳ ...ಕೈಗಾರಿಕ ಕಾರ್ಯಗಳನ್ನು ಚರ್ಚಿ ...ಧೀಮಂತರಿಗೆ ಮುಖ್ಯಸಮಸ್ಯೆ ...ದುರುನಿಂತ ವಿಚಾರವೆಂದರೆ, ...ದೃಷ್ಟಿಯಿಂದ ವಿಭಿನ್ನವಾ ...ಷ್ ಭಾರತ ಮತ್ತು ಆಶ್ರಿತ ...ಡಳಿತೆಯ ಭಾರತ ಇವು ... ರಾಜಕೀಯವು ಹೇಗಿದ್ದ ...ದೇಶದ ಸರ್ವಾಂಗೀನ ಸ ...ವ, ದೇಶೀಯ ಕೈಗಾರಿಕೆ ಅಭಿವೃದ್ಧಿಯ ಚಳವಳವು ...ನ್ನದೆ ಬ್ರಿಟಿಷ್ ಭಾರತವೆ ...ಮುಖವಾಗಿ ವಸಗಸಬೇ ...ಷ್ಟಿಯಿಂದ ವಿಚಾರಿಸಿದರೆ ...ದ ಔದ್ಯೋಗಿಕ ಸಮ್ಮೇ ...ಮಹತ್ವದ್ದಾಗಿದೆ ... ಎಲ್ಲರ ದೃಷ್ಟಿಯ ...ಸರಿಸಿದ ದೇಶದ ...ಯುದ್ಧದ ತಾ ...ಗಳಿತ್ರ ಪೂ ...ಗ್ಯ ವಿಚಾರ ...ಪೆತ್ತಿನ ಪಾಲನೆ, ...ಕೆ ಉದ್ಯೋಗಗಳ ...ತ್ಸಾಹನವೂ ...ಕಾಗಿದೆ. ಒಂದು ...ರಿಕೆಗಳನ್ನು ಬೆಳೆ ...ಸೆಚ್ಚಿಸಿ ತಾನಾಗಿ ... ದೇಶದಲ್ಲಿ ಇತ ...ತಿಕ ಸುಧಾರಣೆ ...ಲ್ಲಲಾರವು.

...ದ್ಧದ ಸಮಯ ...ಶೀಯ ಉದ್ಯೋಗ ... ಉದ್ಯಮಗಳನ್ನು ... ತೊಡಗಿದ್ದರು. ...ದ ಆರಂಭಕಾಲ ...ವು ನಿಂತುಹೋ...ಗೆ, ಪರದೇಶದ ಅಸಂಖ್ಯ ಸಾಮಾನ್ಯ...ಗಳು ನಮ್ಮ ದೇಶಕ್ಕೆ ಕಡೆಯಲ್ಲದೆ ಬಂದುವು. ಹಲವು ವರ್ಷಗಳ ಉತ್ತಮ ...ಕರೆಬೇಕಿಯಿಂದ, ತೀವ್ರವಾಗಿ ಒದಗು...ತ್ತಿರುವ ಆ ವಸ್ತುಗಳೊಡನೆ, ಸ್ಪರ್ಧೆಗೆ ನಿಲ್ಲಲು, ಆಗ ತಾನೇ ತಲೆಯೆತ್ತಿದ ದೇಶೀಯ ಕೈಗಾರಿಕೆಗಳಿಗೆ ಸಾಧ್ಯವಾಗಲಿಲ್ಲ. ಆದುದರಿಂದ ಆ ಹಲವು ಕೈಗಾರಿಕೆಗಳು ಬಾಲಗ್ರಹ ಪೀಡೆಯಿಂದಲೇ ನಿಂತು ಹೋಗಿ, ಮುಂದಕ್ಕೆ ದೇಶದ ಧನವಂತರು ಆ ...ಕಡೆ ಗಮನಕೊಡುವುದರ ಕುರಿತು ಉದಾಸೀನರಾದರು. ಇಂತಹ ಸಂದರ್ಭದಲ್ಲಿ ಇಂಥಾದರೂ, ಹೊಸ ಉದ್ಯಮಗಳನ್ನು ಆರಂಭಿಸಿದರೆ, ವಿದೇಶೀಯ ಸ್ಪರ್ಧೆಯು ಅಡ್ಡ ಬರಲಾರದೆಂಬ ಸರ ಕಾರದ ಭರವಸೆಯು ಅವಶ್ಯವಾಗಿ ಬೇಕಾಗಿದೆ.

ನಮ್ಮ ದೇಶಕ್ಕೆ ಬೇಕಾದ ಎಷ್ಟೋ ವಿಷಯಗಳನ್ನು ನಮ್ಮಲ್ಲಿ ಉತ್ಪನ್ನ ಮಾಡಲು ಸಾಧ್ಯವಿದ್ದರೂ ಅವುಗಳಿಗಾಗಿ ವಿದೇಶಗಳನ್ನೇ ನಾವು ಅವಲಂಬಿಸಿದ್ದೇವೆ. ಔಷಧಿ, ಕಾಗದ, ಸಕ್ಕರೆ, ಟೋಪಿ ವಸ್ತು ಮೊದಲಾದುವುಗಳು ನಮ್ಮಲ್ಲಿ ಧಾರಾಳವಾಗಿ ತಯಾರಿಸಬಹುದು ಆದರೆ ಧನವಂತರು, ಸಾಹಸಿಗರು ವ್ಯಾಪಾರ ಉದ್ಯಮ ಕುಶಲರು ಆ ಕಡೆಗೆ ತಮ್ಮ ಮನಸ್ಸು ಸರಿಸಬೇಕು ಇದರಿಂದ ಹೊಸ ಹೊಸ ಉದ್ಯಮಗಾರರು ಊರ್ಜಿತ ಹೊಂದುವುದು ಸಾಧ್ಯ ಮಾತ್ರವಲ್ಲ, ಅದಕ್ಕೊಡನೆ ದೇಶದ ಸಂಪತ್ತು ವಿದೇಶಗಳಿಗೆ ಹರಿದು ಹೋಗುವುದು ನಿಂತು ಹೋಗುವುದು. ಆದುದರಿಂದ ಈ ಕುರಿತು ಗಮನ ಕೊಟ್ಟು ದೇಶೀಯರು ಕೈಗಾರಿಕೆ ಉದ್ಯಮಗಳಿಗೆ ಕೈ ಹಚ್ಚುವಂತೆ ಮಾಡಲು, ದೇಶೀಯ ಉದ್ಯಮಕ್ಕೆ ಬೇಕಾದ ಸಹಾಯಕೊಡುವುದು ಮಾತ್ರವಲ್ಲದೆ ಸರಕಾರವು ವಿದೇಶೀಯ ವಸ್ತುಗಳ ಸ್ಪರ್ಧೆಯು ಮುಂದೆ ನಡೆಯದಂತೆಯೂ ಯೋಗ್ಯ ಆಶ್ವಾಸನೆ ಕೊಡಬೇಕು

ಇದರಿಂದ ಹಿಂದಿನ ಯುದ್ಧದ ಕಾಲದಲ್ಲಿ ವ್ಯಾಪಾರ ಉದ್ಯಮಗಳ ಕುರಿತು ದೇಶೀಯ ಸಾಹಸಿಗಳ ಮನಸ್ಸಿನಲ್ಲಿ ಬೇರೂರಿದ ನಿರಾಶೆಯ ಮುಸುಕನ್ನು ಸರಕಾರವು ತೆಗೆಯಬೇಕಾಗಿದೆ!

ರಷ್ಯಕ್ಕೆ ಬಹಿಷ್ಕಾರ

ರಾಷ್ಟ್ರಸಂಘದ ನಿರ್ಣಯವನ್ನು ತಿರಸ್ಕರಿಸಿದ ರಶ್ಯವನ್ನು ರಾಷ್ಟ್ರಸಂಘವು ಇಂದು ಅನ್ಯಾಯಕ್ಕೆ ಪ್ರವೃತ್ತವಾದರಾಷ್ಟ್ರವೆಂದು ಸಾರಿ, ಅದರ ಸದಸ್ಯತ್ವದಿಂದ ತೆಗೆದು ಹಾಕಿದೆ! ಕೆಲವೇ ತಿಂಗಳ ಹಿಂದೆ, ಜಿನೇವದಲ್ಲಿ ರಶ್ಯದ ಪ್ರತಿನಿಧಿಯು ಅಂತರ್‌ರಾಷ್ಟ್ರೀಯ ಶಾಂತಿಯ ಸಲುವಾಗಿ ಉದ್ಬೋಧಕವಾದ ಭಾಷಣವನ್ನು ಕೊಟ್ಟಿದ್ದನು, ಅನ್ಯಾಯದ ಆಕ್ರಮಣವನ್ನು ಖಂಡಿಸಿ ಧರ್ಮಸತ್ಯನ್ಯಾಯಗಳು ಆಳಬೇಕೆಂದು ಸಾರಿದ್ದನು ಆದರೆ, ಯಾವ ಪಶುಬಲದ ಮದಾಂಧತೆಯು ಇ ಟಲಿಯನ್ನು ಅಬಿಸೀನಿಯದ ಮೇಲೆ ಧಾಳಿ ನಡೆಸುವಂತೆ, ಮಾಡಿತೋ, ಜರ್ಮನಿಯನ್ನು ಜೆಕೊಸ್ಲವೇಕಿಯಾ, ಪೋಲೆಂಡುಗಳ ಮೇಲೆ ಆಕ್ರಮಿಸಿ ಕಬಳಿಸುವಂತೆ ಪ್ರೇರೇಪಿಸಿತೋ, ಅದೇ ಸಾಮ್ರಾಜ್ಯಶಾಹೀ ಮದಾಂಧತೆಯು ರಶ್ಯವನ್ನೂ ಬಿಡದೆ ಇಂದು ದುರ್ಬಲವಾದರೂ ಸ್ವತಂತ್ರರಾದ ಫಿನ್ನರಮೇಲೆ ದುರಂತವೆಸಗುವಂತೆ ಮಾಡಿದೆ! ಇಂದಿನ ರಶ್ಯದ ಕರಿಣ ವರ್ತನೆಯನ್ನು ವಿಚಾರಿಸುವವರಿಗೆ, ರಾಷ್ಟ್ರಸಂಘದ ನಿರ್ಣಯವು ಎಷ್ಟರ ಮಟ್ಟಿಗೆ ನ್ಯಾಯವಾದುದು ಎಂದು ಖಚಿತವಾಗದಿರದು

ಆದರೆ ಇದರಿಂದ ಫಿನ್ನರಿಗೆ ಏನು ಲಾಭವಾಯಿತು ಎಂಬುದು ವಿಚಾರಿಸಬೇಕಾದ ವಿಷಯ ಅತುಲ ಸೈನ್ಯದಿಂದ ಅಪ್ಪಳಿಸಿ ಬರುತ್ತಿರುವ ರಶ್ಯನರಧಾಳಿಯನ್ನುತಡೆಯಲು ಫಿನ್ನರಿಗೆ ಧನ ಜನ ಸಹಾಯವು ದೊರಕಿತೇ? ಎಂಬುದು ಪ್ರಾಮುಖ್ಯ ಸಂಗತಿಯಾಗಿದೆ ರಾಷ್ಟ್ರಸಂಘಕ್ಕೆ ಹೋಗಿದ್ದ ಫಿನ್ನರ ಪ್ರತಿನಿಧಿಯಾದರೂ, ರಾಷ್ಟ್ರಸಂಘದ ಪ್ರತಿನಿಧಿಗಳೆದುರು ಕೇವಲ ಬಾಯಿಮಾತಿನ ಸಹಾನುಭೂತಿ ಬೇಡ, ಪ್ರತ್ಯಕ್ಷ ಸಹಾಯವೇ ಬೇಕಾಗಿದೆಯೆಂದು ಮೊರೆಯಿಟ್ಟಿದ್ದನು! ಆದರೆ ಪ್ರಬಲರಾಷ್ಟ್ರಗಳು ಅನ್ಯತ್ರ ಯುದ್ಧ ಪ್ರಸಕ್ತವಾಗಿದ್ದ ಈ ಸಮಯದಲ್ಲಿ ಫಿನ್ನರಿಗೆ ಇದಕ್ಕಿಂತ ಹೆಚ್ಚಿನ ಸಹಾಯವನ್ನೊದಗಿಸಲು ರಾಷ್ಟ್ರಸಂಘವೂ ಇಂದ ಅಸಮರ್ಥವಾಗಿದೆ

ಆದರೆ ರಾಷ್ಟ್ರ ಸಂಘದ ನೈತಿಕ ಸಹಾಯವಾದರೂ ಅದಕ್ಕೆ ಅಖಿಲ ಜಗತ್ತಿನ ಪ್ರಾಧಾನ್ಯತೆಯಿದೆ ರಾಷ್ಟ್ರಸಂಘದ ಸಹಾನುಭೂತಿಯೊಡನೆ ಪ್ರಪಂಚದ ಮಾನವ ಕೋಟಿಯೆ ಫಿನ್ನರ ದುರ್ದೆಶೆಗಾಗಿ ಮರುಗುವುದು ಇದು ವ್ಯರ್ಥವೆನ್ನುವುದು ಸಾಧ್ಯವಿಲ್ಲ ಅನ್ಯಾಯವು ಬಹುಕಾಲ ಮಾಡುವುದಿಲ್ಲ

ಜಿನ್ನಾ ಸಾಹೇಬರ ಹೊಸ ಕಲ್ಪನೆ

'ತನಗ ಹಿಂದೂ ಸಹೋದರರ ಮೇಲೆ ದ್ವೇಷವಿಲ್ಲ, ಕಾಂಗ್ರೆಸಿನ ರೀತಿ ನೀತಿಯು ಅನ್ಯಾಯ ದಾಗಿತ್ತೆಂದು, ಅದರ ಸಲುವಾಗಿ, ತಾನು ವಿಮೋಚನಾ ದಿನವನ್ನಾಚರಿಸಲು, ಮುಸ್ಲಿಂ ಲೀಗಿನವರಿಗೂ, ಕಾಂಗ್ರೆಸ್ಸನ್ನು ಅನುಸರಿಸದಿರುವ ಹಿಂದುಗಳಿಗೂ ಬಿನ್ನವಿಸಿಕೊಂಡಿದ್ದೇನೆ' ಹೀಗೆಂದು ಎರಡನೆಯ ಪ್ರಕಟಣೆಯೊಂದನ್ನು ಬಹಳ ದೀರ್ಘವಿಚಾರ ಮಾಡಿದ ಮೇಲೆ ಜಿನ್ನಾ ಸಾಹೇಬರು ಇಂದು ಹೊರಡಿಸಿದಂತೆ ತೋರುತ್ತದೆ.

ಏಕ ಪಕ್ಷದ ಪ್ರಾಧಾನ್ಯತೆಯಿಂದ ಮಂತ್ರಿಮಂಡಳವನ್ನು ರಚಿಸಿ ಆಳುವುದು ತನಗೆ ಇಷ್ಟವಿಲ್ಲ ಸರ್ವಪಕ್ಷೀಯರ ಐಕ್ಯ ಮಂತ್ರಿಮಂಡಳವಾಗಬೇಕು ಎಂಬ ಉದ್ದೇಶವು ಜಿನ್ನಾ ಸಾಹೇಬರದ್ದಾಗಿದ್ದರೆ, ನಿಜವಾಗಿ ಈ ರೀತಿಯ ರಾಜಕೀಯ ಮತಕ್ಕೆ ಬಹುಮತವನ್ನು ಒಲಿಸುವ ಸಲುವಾಗಿ ಅವರು ಸಾಧ್ಯವಾದ ವ್ಯಾಪಾರ ಪ್ರಯತ್ನಗಳನ್ನು ಮಾಡಬೇಕು. ತಾನು ಉದ್ದೇಶಿಸಿದ ಕಾರ್ಯಕ್ರಮವನ್ನು ಜನತೆಗೆ ಸಾರಿ ತಿಳಿಸಬೇಕು. ಕಾಂಗ್ರೆಸು ಚುನಾವಣಾಘೋಷಣೆ ಮಾಡಿ ಕಾರ್ಯಕ್ಷೇತ್ರಕ್ಕಿಳಿದು ಬಹುಮತ ಪಡೆದುಕೊಂಡಿತೋ, ಜಿನ್ನರಿಗೂ ಆ ರೀತಿಯಿಂದ ಕೆಲಸಮಾಡಲು ಯಾವ ಆತಂಕವೂ ಇಲ್ಲ

ಆದರೆ ಅವರ ಮಾತುಗಳಲ್ಲಿ ಅನ್ಯೋನ್ಯ ವೈಷಮ್ಯವು ತೋರುವುದು ವಿಷಾದಕರವಾಗಿದೆ ಮುಸ್ಲಿಂ ಲೀಗು ತನ್ನ ಏಕ ಮಾತ್ರ ಧ್ಯೇಯವಾಗಿ ಮುಸ್ಲಿಮರು ಪ್ರತ್ಯೇಕ ಜನಾಂಗವೆಂದೂ, ಆ ಜನಾಂಗದ ಹಿತ ಸಾಧನೆಯು ಹಕ್ಕು ರಕ್ಷಣೆಯು ಅಗತ್ಯವೆಂದೂ ಸಾರುತ್ತಿದೆ ಈ ಘೋಷಣೆಯನ್ನೇ ಪ್ರತಿಯೊಂದು ಜಾತಿಯವರೂ ಎತ್ತಬಹುದೆಂದು ಜಿನ್ನರು ವಿಚಾರಿಸಬೇಕು. ಅಂತಹ ಸಂದರ್ಭದಲ್ಲಿ, ಸಣ್ಣ ದೊಡ್ಡ ಜಾತಿ ಪಂಗಡಗಳು ತಮ್ಮ ಮೈಯುಕ್ತಿಕತೆಯನ್ನು ಮುಂದಿಟ್ಟು ಜಗಳಕ್ಕಿಳಿದರೆ ಜಿನ್ನರು ಕಲ್ಪಿಸುವಂತಹ 'ಎಲ್ಲಾ ಬಗೆಯ ಜನರಿಗೂ ನ್ಯಾಯವಾಗ ವ ಆಡಳಿತೆಯನ್ನು ಕೊಡುವ ಸರಕಾರವು' ಹೇಗೆ ಸ್ಥಾಪಿತವಾಗಬೇಕೋ ಅರ್ಥವಾಗುವುದಿಲ್ಲ ಅಂತೂ ಇದೊಂದು ಜಿನ್ನಾ ಸಾಹೇಬರ ಹೊಸ ಕಲ್ಪನೆಯೆನ್ನಲು ಯಾವ ಅಡ್ಡಿಯೂ ಇಲ್ಲ

CANARA BANK LIMITED

Head Office **Mangalore**

A net work of 37 branches

Alleppey	Calicut	Karkala
Arsikere	Cannanore	Kasaragode
Badagara	Cherai	Kayamkulam
Bangalore	Chickmagalur	Kumbla
Bantwala	Cochin	Mangalore-Bunder
Belgaum	Coondapoor	Mangalore-City
Belthangady	Davangere	Manjeshwar
Bombay Fort	Dharwar	Moolky
Bombay-Mandvi	Doddballapur	Payyannur
Bombay-Girgaum	Ernakulam	Puttur
Bombay-Kalbadevi	Gangulli	Quilon
Bombay-Parel	Hubli	Udipi
		Uppinangady

ನೆಗಡಿ ಮತ್ತು ಕೆಮ್ಮು ಇವುಗಳನ್ನು ಎಂದೂ ನಿರಾಕರಿಸದಿರಿ!

ನಿಮಗೆ ತಿಳಿಯುವುದಕ್ಕಿಂತಲೂ ಸುಲಭವಾಗಿ ಶೀತ, ನೆಗಡಿ, ಕೆಮ್ಮು ಮೊದಲಾದ ಬಾಧೆಗಳು ತಟ್ಟುವುವು. ಇದನ್ನು ನೀವು ಅಲಕ್ಷಿಸಿದಲ್ಲಿ ಕೂಡಲೇ ಬ್ರೊಂಕೈಟಿಸ್ ಯಾ ನಿಮೋನಿಯಾವಾಗಿ ಪರಿಣಮಿಸುವುದು ಅನೇಕರು ಆಗಾಗ ಕ್ರಿಮಿನಾಶಕ ಶ್ವಾಸನೀಯ ಪೆಪ್ಸು ಗುಳಿಗೆಗಳನ್ನು ಸೇವಿಸಿ ಶ್ವಾಸಕೋಶಗಳನ್ನೂ ಶ್ವಾಸೇಂದ್ರಿಯಗಳನ್ನೂ ಆರೋಗ್ಯದಲ್ಲಿರಿಸುತ್ತಿರುವರು

ಪೆಪ್ಸು ಬಾಯೊಳಗೆ ಕರಗುತ್ತಿರುವಾಗ ಅದರಿಂದ ಹೊರಟ ಔಷಧೀಯ ಧೂಮವು ನಿಮ್ಮ ಶ್ವಾಸಕೋಶಗಳನ್ನು ಆಳವಾಗಿ ಹೋಗುತ್ತವೆ ಈ ಪ್ರಕಾರವಾಗಿ ಪೆಪ್ಸು ರೋಗಾಣುಗಳನ್ನು ಬೇಸೆಯನ್ನು ನಿವಾರಿಸಿ ನಾಶಮಾಡಿ ಗಂಟಲು ಶ್ವಾಸೇಂದ್ರಿಯಗಳನ್ನು ಬಲಗೊಳಿಸುತ್ತದೆ

ಎಲ್ಲಾ ಔಷಧಿ ವ್ಯಾಪಾರಿಗಳು ಪೆಪ್ಸನ್ನು ಒಂದರಂತೆ ಮಾರುತ್ತಾರೆ
ಸಜಂಟ್ ವೆ ಸರ್ಸ್ ದಾಧಾ ಮತ್ತ ಕಂಪನಿ,
ನಾರ್ಕ್ಸ್‌ಟೌನ್ ಮದರಾಸು

ಯಾವಾಗಲೂ ಪೆಪ್ಸನ್ನು ಪಯೋಗಿಸಿರಿ

PEPS

ಕ್ರಿಮಿನಾಶಕ ಶ್ವಾಸನೀಯ ಗುಳಿಗೆಗಳು

Kenurese No. 6



ನಾವೆಲ್ಲರೂ ಉಪಯೋಗಿಸು

ಅಜ್ಜಿಯಿಂದ ಹಿಡಿದು ಸಣ್ಣ ಮಗುವಿನ ಒಡ ಸರ್ವರಿಗೂ ತಮ್ಮ ಮೈಯ ಚರ್ಮವಾಗಿರಿಸಲು ಕುಟಿಕೂರಾ ಟಾಲ್ಕಮ (Cuticura Talcum Powder) ಕುಟಿಕೂರಾ ಟಾಲ್ಕಮ (Cuticura ವನ್ನು ತಂವಾಗಿರಿಸಿ ಮನಸ್ಸಿಗೆ ಆಹ್ಲಾದಿಸುತ್ತದೆ ಇದಕ್ಕೆ ಇದರ ಔಷಧಿಯ ಕಾರಣವಾಗಿರುತ್ತದೆ ಮೈಗೆ ತುರಿಗಜ್ಜಿಗಳುಂಟಾದಲ್ಲಿ ಇದು ಕ ತಂವಾಗಿರಿಸುತ್ತದೆಮಾತ್ರವಲ್ಲದೆ ಬೆವರನ್ನು ಹೀರುವ ಗುಣವುಳ್ಳ ಮಕ್ಕಳಿಗೆ ಇದರಲ್ಲಿ ಉತ್ತಮ ಗುಣವನ್ನು ಕಂಡ ಡಾಕ್ಟರರ ಮಾಡುತ್ತಾರೆ ಕುಟಿಕೂರಾ ಪೌಡರ್ (Cuticura Talc ಪರಿಮಳವು ಅನೇಕ ಗಂಟೆಗಳ ತನಕ ಬಾಳುವುದು.

ನಿಮ್ಮ ಆರೋಗ್ಯದ ಉಪಯೋಗಕ್ಕೆ ಇದು ಎಷ್ಟು ಪ್ರಯೋಜನ ಕೊಳ್ಳಿರಿ ಇಂದೇ ಒಂದು ಟಿನ್ನನ್ನು ಕೂಡಲೆ ಕೊಳ್ಳಿರಿ ಕುಟಿಕೂರಾ ಟಾಲ್ಕಮ (Cuticura Talcum) ಒಂದರ ಹ

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರಿನಲ್ಲಿಯೂ ಮಾರ

ಕುಟಿಕೂರಾ ಟಾಲ್ಕಮ್ ಪೌಡರ್

CUTICURA TALCUM POWD

The Auttur & Jawahar Bank, L

ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್, ವ

ಹೆಡ್ ಆಫೀಸ್ ಕೆನರಾ ಹೈಸ್ಕೂಲ್ ರೋಡ್ ಪ್ರಿಂಟ್

ರಿಜಿಸ್ಟರ್ಡ್ ಮೂಲಧನ 1 00 000 ಪೈಸ್ಸು ಮೂಲ

ಅದರಿಂದ ಸರ್ವರಿಗೂ ಅನುಕೂಲವಾಗ ಸೇವೆಯನ್ನು ಅತ್ಯಾ

ಸಲಿಸಾಟಿಗಳ ಸೇವೆಯನ್ನು ಠೇವಣಾತಿಗಳ ಮೇಲಿನ ದರ

ಚಾಲ್ತಿ ಠೇವಣಾತಿ ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿ

ಸಲುವು ಠೇವಣಾತಿ ತಿಂಗಳಿಗೆ 1½% ಸಲುವು ಠೇವಣಾತಿ

6 ತಿಂಗಳಿಗೆ 4%

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದ ಕ

ಅತ್ತೂರು ವೈಕುಂಠಪ್ರಭು, ಮೆನೇಜಿಂಗ



ನಿಮಗೆ ಕೇವಲ ಯೋಗ್ಯವಾದದ್ದು!

ಇನ್ನು ಹೆಚ್ಚಿನ ಮಸ್ಸ್ ಸ್ಟ್ರಾ ಪ್ರತ್ಯೇಕ ಸಾಮಾನಾದ ಟೈಮ್‌ಪೀಸಿನ ಕಡೆಗೆ ಹೊರಳುತ್ತದೆ ಅದರಿಂದ ಅವರಿಗೆ ಬೇಕಾದ್ದನ್ನೇ ಸಾವೀಗ ಕೊಳ್ಳುತ್ತೇ ಸುಖಂದ ಸಮಯದ ತನಕ ಅಲಾರಂಇರುವ ಬೇಬಿ ಜಾಜ್ ಗಡಿಯಾರ ಬೆಲೆ ರೂ 7ಕ್ಕೂ ಅಥವಾ ಪೌಸ ಜಾಜ್ ಗಡಿಯಾರಗಳು ರೂ 9 - 0ಕ್ಕೂ ದೊರಕುತ್ತದೆ ಇದೂ ಸರಿಯಾದ ಸಮಯವನ್ನು ಸೂಚಿಸುತ್ತವೆ ನಮ್ಮ ಫರ್ಮ್‌ಗಳಿಗೆ ಬರೆಯಿರಿ

ವೆಸ್ಟ್ ಎಂಡ್ ವಾಚ್ ಕೋ ಬೊಂಬಾಯಿ ಕಲ್ಕತ್ತ

WEST END WATCH Co.

BOMBAY CALCUTTA

ಸಾವಕಾರ ಶ್ರೀನಿವಾಸರಂ

[ಸ್ಥಾಪನೆ: ಕ್ರಿ ಶ 1858]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವಕಾರ ಮಹಾಲ್, ಮಂಗಳೂರು.

ಧಾರ್ಮಿಕ ವಿಚಾರ

ಗೀತಾ ಜಯಂತಿ

೨೨ನೇ ದಶಂಬರ ೧೯೩೯

[ಲೇಖಕರು—ಶ್ರೀ. ಸಿ. ಕೇಶವರ, ಕಾರ್ಯದರ್ಶಿ, ಗೀತಾಧರ್ಮ ಮಂಡಲ, ಪು...]

ಗೊಂದಲವಿಲ್ಲದಂಥ ಸಮಯದಲ್ಲಿ ಅದು ಬರೆಯಲ್ಪಟ್ಟಿತು. ಆಗ ಯಾವತ್ತೂ ಮಾನವರಿಗೆ ಒಂದೇ ಧರ್ಮವಿತ್ತು. ಅದು ಇಡೀ ಜಗತ್ತು ಅಂದರೆ ಇಡೀ ಮಾನವ ವರ್ಗಕ್ಕಾಗಿ ಬರೆಯಲ್ಪಟ್ಟಿ ಪುಸ್ತಕವಿರುತ್ತದೆ. ಅದು ಬರೆಯಲ್ಪಟ್ಟಾಗ 'ಹಿಂದೂ' ಎಂಬ ಶಬ್ದವು ಹುಟ್ಟಿರಲೇ ಇಲ್ಲ ಮತ್ತು 'ಧರ್ಮ'ವು ಈಗಿನಷ್ಟು ಸಂಕುಚಿತವಾದ ಸ್ವರೂಪವು ಇದ್ದಿಲ್ಲ ಪ್ರಾಚೀನ ಮತ್ತು ಆಧುನಿಕ ಶ್ರೇಷ್ಠಪುರುಷರೆಲ್ಲರೂ ಗೀತೆಯಿಂದ ಆಕರ್ಷಿಸಲ್ಪಟ್ಟಿದ್ದಾರೆ ಮಹಾತ್ಮಾಗಾಂಧಿ, ಲೋಕಮಾನ್ಯ ತಿಲಕ, ಬಾಬು ಅರವಿಂದ ಘೋಷ, ಭಗವಾನದಾಸ, ರಾಜಗೋಪಾಲಾಚಾರ್ಯ ಇವರೇ ಮೊದಲಾದ ದೇಶಭಕ್ತರೂ ವಿದ್ವಾಂಸರೂ ಕಾರ್ಯ ಧುರಂಧರರೂ ಮಾರ್ಗದರ್ಶಿತ್ವಕ್ಕಾಗಿ ಇದರ ಉಪಯೋಗ ಮಾಡಿಕೊಂಡಿರುವರು ಮ್ಯಾಡೆಮ್, ಬ್ಲಾವಟಸ್ಕಿ, ಡಾ. ಆನಿ ಬೆಸೆಂಟ್, ಎಫ್. ಟಿ. ಬ್ರೂಕ್ಸ ಮೊದಲಾದವರು ಗೀತೆಯ ಮೇಲೆ ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಇದಲ್ಲದೆ ಜಗತ್ತಿನ ಅನೇಕ ಭಾಷೆಗಳಲ್ಲಿ ಗೀತೆಯು ಪದ್ಯ ಹಾಗು ಗದ್ಯರೂಪದಲ್ಲಿ ಭಾಷಾಂತರಿಸಲ್ಪಟ್ಟಿದೆ

ಗೀತಾ ರಹಸ್ಯವೆಂಬ ಮಹತ್ವವಾದ ಗೀತಾ ವ್ಯಾಖ್ಯಾನವೊಂದನ್ನು ಬರೆದು, ಗೀತೆಯ ಸಾರವನ್ನು ಜಗತ್ತಿಗೆ ತಿಳಿಸಿದ ಮಹಾಪುರುಷರು!

ಗೀತಾ ಜಯಂತಿ ಉತ್ಸವದಲ್ಲಿ ಹಿಂದುಗಳು ಇಷ್ಟೇ ಅಲ್ಲದೆ ಕ್ರಿಶ್ಚಿಯನರು ಮುಸಲ್ಮಾನರು ಸಹ ಭಾಗ ತೆಗೆದುಕೊಂಡಿರುವರು. ದಯಾನಂದರ ಗುರುಕುಲಗಳು, ಥಿಯಾಸಫಿಕಲ್ ಲಾಜುಗಳು, ಮತ್ತು ರಾಮಕೃಷ್ಣ ಮಠಗಳು ಮೊದಲಾದವುಗಳಲ್ಲಿಯೂ ಗೀತಾ ಜಯಂತಿಯು ಆಚರಿಸಲ್ಪಡುತ್ತಿರುವುದು. ಸನಾತನ ಜನರಂತೆ ಸಮಾಜಿಕ ಸುಧಾರಕರೂ ಗೀತೆಯನ್ನು ಪೂಜಿಸುತ್ತಿರುವರು.

ಆತ್ಮಶುದ್ಧಿಗೂ ವೈಯಕ್ತಿಕ ಪ್ರಯತ್ನಕ್ಕೂ ಮಹತ್ವ ಕೊಡುವ ಕಾರ್ಯ ಧುರಂಧರರು ಗೀತಾ ಜಯಂತಿ ದಿವಸ ತಮ್ಮ ಪ್ರಗತಿಯ ಸಿಂಹಾವಲೋಕನ ಮಾಡಿಕೊಳ್ಳುವರು. ಶ್ರೀ ವಿನೋಬಾ ಬಾವೆಯವರು ವರ್ಧಾ ಆಶ್ರಮದಿಂದ ಹೊರ ದಿಸುತ್ತಿರುವ ತಮ್ಮ ಪತ್ರಿಕೆಯಾದ 'ಮಹಾರಾಷ್ಟ್ರ ಧರ್ಮದಲ್ಲಿ' ಗೀತಾ ದಿನದ ಇದೇ ಮಹತ್ವವನ್ನು ಪ್ರತಿಪಾದಿಸಿ ಅವರು ಒಮ್ಮೆ ಪ್ರಾರ್ಥನೆ ಸಮಯದಲ್ಲಿ ವರ್ಧಾ ಆಶ್ರಮವಾಸಿಗಳಿಗೆ ಗೀತಾ ದಿನದ ಮಹತ್ವವನ್ನು ತಿಳಿಸಿಕೊಟ್ಟರು.

ಪ್ರತಿಯೊಬ್ಬ ಹಿಂದೂ ಬಾಲ-ಬಾಲಿಕೆಯು ಗೀತೆಯನ್ನು ಕಲಿಯಬೇಕೆಂದು ಮಹಾತ್ಮಾಗಾಂಧಿಯವರು ಹೇಳಿದ್ದಾರೆ. ಇದೇ ಗೀತೆಯನ್ನು ಓದಲು ಅವಕಾಶವಿಲ್ಲದವರು ಕನಿಷ್ಟ ಪಕ್ಷದಲ್ಲಿ ಗೀತೆಯ ೨ನೇ ಮತ್ತು ೩ನೇ ಪ್ರಕರಣಗಳನ್ನಾದರೂ ಓದಿ ಮನನ ಮಾಡಿಕೊಳ್ಳಬೇಕು ಯಾಕಂದರೆ ಇದೇ ಗೀತೆಯ ಸಾರವು ಈ ಪ್ರಕರಣಗಳಲ್ಲಿ ಒಂದಿದೆ. ಪತ್ರಿಕೆಗಳು ಗೀತಾ ದಿನದ ದಿವಸ ಗೀತೆಯ ಸಂಬಂಧದ ಲೇಖನಗಳನ್ನು ನಿಬಂಧಗಳನ್ನೂ ಪ್ರಸಿದ್ಧಿಸಬೇಕು ಶಾಲೆಗಳಲಿ ಅಂದು ಶಿಕ್ಷಕರು ವಿದ್ಯಾರ್ಥಿಗಳಿಗೆ ಗೀತಾ ದಿನದ ಮಹತ್ವವನ್ನು ಗೀತೆಯ ಮುಖ್ಯ ಸ್ವದೇಶವನ್ನೂ ತಿಳಿಸಿ ಕೊಡಬೇಕು

—ಈಶ್ವರ—

ಸ್ವದೇಶಾಭಿಮಾನಿಗೆ

ಚಂದಾದಾರರಾಗಿರಿ

SAVING & SPENDING

Every Rupee that you save adds materially to your present wealth for the satisfaction of a future want; while every Rupee that is spent leaves you poorer to that extent. Life's stormy voyage is a smooth sailing only for those who know this difference between SAVING and SPENDING and who have, by sheer force of will, built up a bulky Savings Bank Account.

The Canara Industrial & Banking Syndicate Ltd.

(Incorporated in British India)

ESTD) (1925

Head Office: UDIPI (S. India)

ಸರಕಾರವು ಕಾಂಗ್ರೆಸಿನೊಡನೆ ಒಪ್ಪಂದಮಾಡಿಕೊಳ್ಳದಿದ್ದರೆ?

ಜನತೆಯು ತಾಳ್ಮೆಗೆಟ್ಟಿದೆ!

ಸ್ವಾತಂತ್ರ್ಯಲಾಲಸೆಯು ಮೇರೆ ಮೀರಿದೆ

ಈ ರೀತಿ ಸರಿಯಲ್ಲ! ಇದು ವಿಲಂಬಕ್ಕೆ ಸಮಯವಲ್ಲ!

ಭಾರತದ ಮತ್ತು ವಿಲಾಯತಿಯ ಪತ್ರಿಕೆಗಳನ್ನು ಓದುವಾಗ ಇಲ್ಲಿ ಸರಕಾರಕ್ಕೂ ಕಾಂಗ್ರೆಸಿಗೂ ಉಂಟಾದ ಬಿಕ್ಕಟ್ಟು ಹೇಗಾದರೂ ನಿವಾರಣೆಯಾಗಿ ಭಾರತದ ಪ್ರಶ್ನೆಯ ಕೃಪ್ತಿಕರವಾದ ತೀರ್ಮಾನವಾಗಬಹುದಾಗಿ ತೋರುತ್ತದೆ. ಆದರೆ ಇದೇ ಕೆಲವು ದಿನಗಳಲ್ಲಿ ನಡೆಯುತ್ತಿರುವ ಘಟನೆಗಳನ್ನು ನೋಡುವಾಗ ಅಂಥ ಸಂಧಾನವು ಆಗಲಾರದೆಂಬ ಸಂದೇಹವೂ ಆಗುತ್ತಿದೆ!

ಪ್ರಾಂತಿಕ ಸರಕಾರಗಳ ಧೋರಣೆ

ಕಾಂಗ್ರೆಸ ಮಂತ್ರಿಮಂಡಲಗಳು ರಾಜೀನಾಮೆಯನ್ನಿತ್ತ ತರುವಾಯ ಕೆಲವು ಪ್ರಾಂತಿಕ ಸರಕಾರಗಳು ಅನುಸರಿಸಿದ ನವೀನ ಧೋರಣೆಯಿಂದ ನಮ್ಮ ಈ ಸಂದೇಹವು ಬಲಗೊಳ್ಳುತ್ತಲಿರುವುದು. ಪ್ರಾಂತಿಕ ಸರಕಾರಗಳ ಗವರ್ನರುಗಳಿಗೂ ಮಂತ್ರಿಮಂಡಲಗಳಿಗೂ ಮನಕ್ಲೇಶ ಬಂದು ಮಂತ್ರಿಮಂಡಲಗಳು ರಾಜೀನಾಮೆಯನ್ನಿತ್ತುದಲ್ಲವೆಂದೂ, ಮಂತ್ರಿಮಂಡಲಗಳು ಇಟ್ಟುಕೊಂಡ ಕಾರ್ಯಕ್ರಮವನ್ನೇ ತಾವು ಮುಂದುವರಿಸುತ್ತಿರುವುದಾಗಿಯೂ ಗವರ್ನರುಗಳು ತಮ್ಮ ಭಾಷಣಗಳಲ್ಲಿ ಹೇಳಿದುದಿದೆ. ಆದರೆ ಗವರ್ನರುಗಳ ನುಡಿಯು ಕಾಂಗ್ರೆಸಿಗೆ ಎಷ್ಟು ಅನುಕೂಲವಾಗಿದ್ದಂತೆ ತೋರುತ್ತದೋ, ಅವರ ನಡೆಯು ಅಷ್ಟೇ ಪ್ರತಿಕೂಲವಾಗಿರುವಂತೆ ಕಾಣುತ್ತದೆ. ಮೊದಲನೆಯದಾಗಿ ಸಂಯುಕ್ತ ಪ್ರಾಂತ್ಯದ ಕಾಂಗ್ರೆಸ ಮಂತ್ರಿಮಂಡಲವು ಎರಡೂ ಕಾಯಿದೆ ಸಭೆಗಳಲ್ಲಿ ಮಂಜೂರ್ಮಾಡಿಸಿಕೊಂಡ ಎಂಪ್ಲೊಯ್‌ಮೆಂಟ್ ಟೇಕ್ಸ ಮಸೂದೆಗೆ ವಿಲಾಯತಿ ಸರಕಾರವು ತನ್ನ ಅಸಮ್ಮತಿಯನ್ನು ಪ್ರಕಟಮಾಡಿದೆ. ಎರಡನೆಯದಾಗಿ ಬೊಂಬಾಯಿಯ ಕಾಂಗ್ರೆಸ ಮಂತ್ರಿಮಂಡಲವು ಮಂಜೂರುಮಾಡಿದ ಸೇಲ್ಸ ಟೇಕ್ಸಿನ ಕೆಲವು ಪ್ರಕರಣಗಳಿಗೆ ಗವರ್ನರರು ತಮ್ಮ ಒಪ್ಪಿಗೆಯ ಮುದ್ರೆಯನ್ನು ಒತ್ತಲಿಕ್ಕೆ ನಿರಾಕರಿಸಿದ್ದಾರೆ. ಬೀಹಾರದಲ್ಲಿ ಗ್ರಾಮೋದ್ಧಾರ ಮತ್ತು ಗ್ರಾಮೋನ್ನತಿ ಇಲಾಖೆಗೆ ಅಲ್ಲಿಯ ಕಾಂಗ್ರೆಸ ಮಂತ್ರಿಮಂಡಲವು ಪಂಡಿತ ಪ್ರಜಾಪತಿ ಮಿಶ್ರ ಎಂಬವರನ್ನು ನೇಮಿಸಿತ್ತು. ಅವರು ಈಗ ಸರಕಾರಿ ಕೆಲಸದಲ್ಲಿರುವ ತನಕ ಕಾಂಗ್ರೆಸಿನ ಸಂಬಂಧವನ್ನು ಕಟ್ಟಿಕೊಂಡಿರಬಾರದೆಂದು ಹೊಸ ಸರಕಾರವು ಅವರಿಗೆ ಸೂಚಿಸಿದೆಯಂತೆ! ಪಂಡಿತ ಮಿಶ್ರರು ಬಿಹಾರ ಪ್ರಾಂತಿಕ ಕಾಂಗ್ರೆಸ ಕಮಿಟಿ ಮತ್ತು ಅಖಿಲ ಭಾರತ ಕಾಂಗ್ರೆಸ ಕಮಿಟಿಯ ಸದಸ್ಯರೂ ಚಂಪಾರನ ಜಿಲ್ಲಾ ಕಾಂಗ್ರೆಸ ಕಮಿಟಿಯ ಅಧ್ಯಕ್ಷರೂ ಆಗಿದ್ದಾರೆ.

ಜನಮತದ ವಿರೋಧವಿಲ್ಲ

ಬೊಂಬಾಯಿಯ ಸೇಲ್ಸ್ ಟೇಕ್ಸ್, ಸಂಯುಕ್ತ ಪ್ರಾಂತದ ಎಂಪ್ಲೊಯ್‌ಮೆಂಟ್ ಟೇಕ್ಸ್ ಮೊದಲಾದ ಹೊಸ ಕರಗಳಿಗೆ ಜನಮತದ ವಿರೋಧವಿರುವುದರಿಂದ ಅವನ್ನು ನಿರಾಕರಿಸಬೇಕಾಯಿತೆಂದು ಸರಕಾರವು ಹೇಳಬಹುದು. ಆದರೆ ಜನಮತದ ಒಂದಂಶಕ್ಕೆ ವಿರೋಧವಾಗಿದ್ದ ಸಂಯುಕ್ತ ಪ್ರಾಂತದ ಟಿನೇನ್ಸಿ ಅಥವಾ ಒಕ್ಕಲುತನದ ಮಸೂದೆಗೆ ಅಲ್ಲಿಯ ಗವರ್ನರರು ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಇವೆಲ್ಲವು ಒಂದೇ ಕಾಂಗ್ರೆಸಿನ ಅಖಿಲ ಭಾರತ ಧೋರಣೆಗೆ ಅನುಕೂಲವಾಗಿ ಅಲ್ಲಲ್ಲಿಯ ಕಾಂಗ್ರೆಸ ಮಂತ್ರಿಮಂಡಲಗಳು ಇಟ್ಟುಕೊಂಡ ಕಾರ್ಯಕ್ರಮಗಳು ಆಗಿವೆ. ಇವುಗಳಲ್ಲಿ ಒಂದಕ್ಕೆ ಒಪ್ಪಿಗೆ, ಇನ್ನೊಂದಕ್ಕೆ ಒಪ್ಪಿಗೆ ಇಲ್ಲವೆನ್ನುವುದು ವಿಭಾಗಿಸಿ ಆಳುವ ತಂತ್ರದ ಒಂದು ಹೊಸ ರೂಪವಾಗಿರಬಾರದೇನು? ಜನಮತದ ವಿರೋಧವಿದ್ದುದರಿಂದ ಅವನ್ನು ತೆಗೆದುಹಾಕಬೇಕಾಯಿತೆನ್ನುವದು ಹಾಳು ಹರಟೆಯಾಗಿದೆ.

ಬ್ರಿಟಿಷ ಸರಕಾರಕ್ಕೂ ಕಾಂಗ್ರೆಸಿಗೂ ಒಪ್ಪಂದವಾಗಬೇಕಾದಲೆ, ಪುನಃ ರಾಜಕೂಟ್ಟ ಕಾಂಗ್ರೆಸ ಮಂತ್ರಿಮಂಡಲಗಳು ಅಧಿಕಾರಕ್ಕೆ ಬರಲೇ ಬೇಕಾಗುವುದು. ಅವು ಅಧಿಕಾರಕ್ಕೆ ಬಂದಾಗ ಈಗ ಗವರ್ನರರು ತಳ್ಳಿಹಾಕಿದ ಮಸೂದೆಗಳ ಗತಿ ಏನಾಗುವುದು? ಆಗಲಾದರೂ ಕಾಂಗ್ರೆಸ ಮಂತ್ರಿಮಂಡಲಗಳು ತಮ್ಮ ಹಿಂದಿನ ನೀತಿಗೆ ವಿರೋಧವಾಗಿ ನಡೆಯಲಾರವು ಅಥವಾ ಸರಕಾರವು ಕಾಂಗ್ರೆಸಿನೊಂದಿಗೆ ಸಂಧಿಕ್ಕೆ ನಿಂತು ಶಕ್ತಿ ಪ್ರದರ್ಶನ ಮಾಡಲಿಕ್ಕೆ ಅನುಕೂಲ ಸಮಯವನ್ನು ಕಾದಿರುವುದೆ? ವಿಲಾಯತಿಯ ಒಂದು ಪ್ರಸಿದ್ಧ ಪತ್ರಿಕೆಯಲ್ಲಿ ಒಬ್ಬ ಆಂಗ್ಲ ಲೇಖಕರೇ ಬರೆದಿರುವಂತೆ ಬ್ರಿಟಿಷ ಸರಕಾರವು ಹೀಗೆ ಸಮಯ ಸಾಧಿಸುತ್ತಿರಲಿಕ್ಕೂ ಸಾಕು ಇಲ್ಲವಾದರೆ ಕಾಂಗ್ರೆಸ ಮಂತ್ರಿಮಂಡಲಗಳು ರಾಜೀನಾಮೆಯನ್ನಿತ್ತು ತಿಂಗಳು ಕಳೆಯುವಷ್ಟರಲ್ಲೇ ಅಲ್ಲಲ್ಲಿಯ ಗವರ್ನರ-ಸರಕಾರಗಳು ಕಾಂಗ್ರೆಸ ಸರಕಾರದ ಧೋರಣೆಗೆ ಸರಿ ವಿರೋಧವಾಗಿ ನಡೆಯುತ್ತಿರಲಿಲ್ಲ. ಈಗ್ಯೆ ಕೆಲವು ದಿನಗಳಿಂದ ನಡೆಯುತ್ತಿರುವ ಘಟನೆಗಳ ಮೇಲಿಂದ ಹೇಳುವುದಾದರೆ ಬ್ರಿಟಿಷ ಸರಕಾರಕ್ಕೆ ಕಾಂಗ್ರೆಸಿನೊಡನೆ ಸ್ನೇಹ ಮತ್ತು ಗೌರವಪೂರ್ವಕ ಸಂಧಾನವು ಬೇಕಾಗಿಲ್ಲ, ಅದು ಕಾಂಗ್ರೆಸನ್ನು ಬಗ್ಗುಬಡಿಸಿ ಮೊದಲಿನಂತೆ ನಿರಂಕುಶವಾಗಿ ಆಳುವ ಕನಸು ಕಾಣುತ್ತದೆ ಎಂದು ಹೇಳಬಹುದಾಗಿದೆ!

ಮುಲ್ಕ್‌ರಾಜ್ ಆನಂದರ ಲೇಖ

ರಿನೋಲ್ಸ್ ನ್ಯೂಸ ಪತ್ರಿಕೆಯಲ್ಲಿ ತಮ್ಮ ಒಬ್ಬ ಆಂಗ್ಲೇಯ ಸ್ನೇಹಿತರಿಗೆ ಒಂದು ಪತ್ರವನ್ನು ಬರೆಯುತ್ತಾ ಸುಪ್ರಸಿದ್ಧ ಲೇಖಕರೂ ಗ್ರಂಥಕಾರರೂ ಆದ ಶ್ರೀ ಮುಲ್ಕ್‌ರಾಜ್ ಆನಂದರು 'ಬ್ರಿಟಿಷ ಮತ್ತು ಹಿಂದುಸ್ಥಾನದ ರಾಜಕೀಯ ಸಂಬಂಧದಲ್ಲಿ ಉಂಟಾದ ಕೆಲವು ಪರಿವರ್ತನೆಗಳನ್ನು ಕಂಡು ಕೇಳಿ ಇಂಗ್ಲಿಷ ಜನರು ಬೆಚ್ಚಿ ಬೀಳುವರು ಮಾತ್ರವಲ್ಲ, ತಪ್ಪನ್ನು ಒಪ್ಪಿ ಅವರು ಕ್ಷಮಾಯಾಚನೆ ಮಾಡಬಹುದಾಗಿಯೂ ತಿಳಿಸುತ್ತಾರೆ. ಅವರು ತಮ್ಮ ಪತ್ರದಲ್ಲಿ — ಬ್ರಿಟಿಷ ಮತ್ತು ಹಿಂದುಸ್ಥಾನಗಳೊಳಗೆ ಒಂದು ದೊಡ್ಡ ಕಾಳಗವು ಶೀಘ್ರದಲ್ಲಿ ಆರಂಭವಾಗುವುದು ಖಂಡಿತ ಎಂಬ ಹಾಗೆ ತೋರುತ್ತದೆ. ಕಳೆದ ಮಹಾಯುದ್ಧದ ಪರಿಣಾಮ ಎಂಬಂತೆ ಹಿಂದೀಯರಲ್ಲಿ ಸ್ವಾತಂತ್ರ್ಯಲಾಲಸೆಯು ಮಿತಿಮೀರಿರುವುದು. ಈಗ ಶಾಂತಿ ಉಂಟಾದರೆ ಯುದ್ಧವೇ ಮುಂದುವರಿದರೂ, ಕಾಂಗ್ರೆಸಿಗೆ ಬ್ರಿಟಿಸಿನ ಮಾತಿನ ಭರವಸೆಗಳ ವಿಶ್ವಾಸವಿರುವುದಿಲ್ಲ. ಕಳೆದ ೨೫ ವರ್ಷಗಳ ದೀರ್ಘ ಅವಧಿಯಲ್ಲಿ ಬ್ರಿಟಿಷರ ಮಾತುಗಳ ಬೆಲೆ ಎಷ್ಟೆಂಬುದರ ಕಹಿ ಅನುಭವವು ಹಿಂದುಸ್ಥಾನಕ್ಕಾಗಿದೆ.

ಹಿಂದುಸ್ಥಾನದಲ್ಲಿ ಅಲ್ಪಸಂಖ್ಯಾತರ ನಿಕಟ ಸಮಸ್ಯೆಯೊಂದು ಇರುವುದೂ ಅದನ್ನು ಬಿಡಿಸಲಿಕ್ಕೆ ಬ್ರಿಟನು ಹಿಂದುಸ್ಥಾನಕ್ಕೇ ಹೇಳಿ ತಾನು ದೂರ ಸರಿದು ನಿಲ್ಲುವುದಾದರೆ, ಆ ಸಮಸ್ಯೆಯನ್ನು ಬಿಡಿಸುವುದು ಹೊರಗೆ ತೋರುವಷ್ಟು ಕಠಿನವಾಗಿರುವುದಿಲ್ಲ. ಹಿಂದುಸ್ಥಾನವು ಪೂರ್ಣ ಸ್ವತಂತ್ರವಾದ ಹೊರತು ಕಾಂಗ್ರೆಸಿಗೆ ತೃಪ್ತಿಯಿಲ್ಲ, ಸಮಾಧಾನವಿಲ್ಲ, ಅಪ್ಪರ ತನಕ ಕಾಂಗ್ರೆಸು ಸುಮ್ಮಗೆ ಕೂತು ಕೊಳ್ಳುವ ಹಾಗೂ ಇಲ್ಲ—ಎಂದ ಮಹಾತ್ಮಾ ಗಾಂಧಿಯವರು ಅಂದಿದ್ದಾರೆ. ಸಂಪೂರ್ಣ ಸ್ವಾತಂತ್ರ್ಯದ ಗುರಿಯನ್ನು ಮುಟ್ಟುವುದರಲ್ಲಿಯೇ ಕಾಂಗ್ರೆಸಿನ ಅಸ್ತಿತ್ವವು ಸುರಕ್ಷಿತವಾಗಿರುವದೆಂದು ಕಾಂಗ್ರೆಸಿಗೆ ಚೆನ್ನಾಗಿ ತಿಳಿದಿದೆ' ಎಂದು ಹೇಳಿದ್ದಾರೆ.

ಗಾರ್ಡಿಯನ ಪತ್ರಿಕೆಯ ಬೋಧನೆ

ವಿಲಾಯತಿಯ ಮಾಂಚೆಸ್ಟರ ಗಾರ್ಡಿಯನ ಪತ್ರಿಕೆಯು ಕೂಡ—ಬ್ರಿಟನು ಭಾರತದ ಸ್ನೇಹ ಸಂಬಂಧದ ಕುರಿತು ಯುದ್ಧ—ಹಿಂದೀಯರಿಗೆ ಕೃಪ್ತಿಯ ಕೊಡುವ ಹಾಗೆ ಈ ಸಮಸ್ಯೆಯ ನಿರ್ಣಯವಾಗುವುದು ಅತಿ ಅಗತ್ಯದ ಬ್ರಿಟಿಸಿನ ಸಫಲತೆ ಅಥವಾ ಅಸಫಲತೆಯು ಈ ಸಮಸ್ಯೆಯ ಕೃಪ್ತಿ ತೀರ್ಮಾನವನ್ನು ಹೊಂದಿಕೊಂಡಿದೆಂದು ಎಚ್ಚರಿಕೆಯನ್ನು ಕೊಟ್ಟಿದೆ.

THE
Canara Banking Corporation Ltd.,
(INCORPORATED IN BRITISH INDIA)
THREE YEARS' CASH CERTIFICATES
bearing interest at 4%p.a.
in denominations of
RS.50/-,100/-,500/-,1,000/-, & 5,000/
are now issued at all our Branches.
For particulars call at or write to
any of our nearest Branches.

ತಯಾರಾಗಿವೆ!
1940ನೇ
ಇಸವಿಯ
ಶಾರದಾ ಡೈರಿಗಳು
ಸಣ್ಣ ಮತ್ತು ದೊಡ್ಡ
ಸೈಜುಗಳಲ್ಲಿ
ಈಗಾಗಲೇ ಮಾರಾಟಕ್ಕೆ
ಸಿದ್ಧವಾಗಿವೆ!
ದೊರೆಯುವ ಸ್ಥಳ:—
ಶಾರದಾ ಭಾಷಖಾನೆ,
ಮಂಗಳೂರು.

ಆತ್ಮಘಾತ ಮಾಡಿ ಹಿಟ್ಲರ್ ಸಾಯುವನೆಂತೆ!

ಬ್ರಿಟಿಷ ತಜ್ಞರ ನವೀನ ಶೋಧ

ವಿಚಿತ್ರ ಹುಚ್ಚಿನ ಭಯಂಕರ ಪರಿಣಾಮ

ಮೂರೋಪದಲ್ಲೆಲ್ಲ ತಾಂಡವ ನೃತ್ಯ ಹುತ್ತಿರುವ ಹಿಟ್ಲರನು ಒಂದು ಹುಚ್ಚಿನಿಂದ ಪೀಡಿತನಾಗಿರುವ ಹದಿಮೂರು ಮಂದಿ ಬ್ರಿಟಿಷ ಮನೋವಿಜ್ಞಾನಿಗಳು ಒಂದು ಅದ್ಭುತ ಶೋಧವನ್ನು ಮಾಡಿರುವರು! ಹಿಟ್ಲರನ ವಿಚಿತ್ರ ಹುಚ್ಚು ಈಗ ಪರಿಮಿತಿಯನ್ನು ಮೀರುತ್ತಿರುವುದರಿಂದ, ಅವನ ಅವಸಾನ ಸಲುವು ಸಮೀಪವಾಗಿದೆ ಎಂದು ಅವರು ಹೇಳಿದ್ದಾರೆ.

ಒಕ್ಸಫರ್ಡಿನ ಇನ್ಸ್ಟಿಟ್ಯೂಟ್ ಆಫ್ ಎಕ್ಸ್‌ಪೆರಿಮೆಂಟಲ್ ಸೈಕೋಲಜಿ ಎಂಬ ಸಂಸ್ಥೆಯ ಡೈರೆಕ್ಟರರಾಗಿರುವ ಡಾಕ್ಟರ ವಿಲಿಯಮ್ ಬ್ರೌನ್ ಎಂಬವರು—'ಇತರರನ್ನು ಪೀಡಿಸಿ ತಾನು ಸಂತೋಷಿಸುವಂಥ ಅದೊಂದು ಬಗೆಯ ಹುಚ್ಚಿನಿಂದ ಹಿಟ್ಲರನು ಗ್ರಸ್ತನಾಗಿದ್ದಾನೆ ಈ ಹುಚ್ಚು ಅವನಲ್ಲಿ ದಿನದಿನಕ್ಕೆ ಬೆಳೆಯುತ್ತ ಬರುತ್ತಲಿದೆ. ಆದ್ದರಿಂದ ಸಮಾಜದಿಂದ ಅವನನ್ನು ಪ್ರತ್ಯೇಕಿಸಿಡುವ ಒಂದು ದಿನವು ಸದ್ಯಕ್ಕೇ ಬರುವುದು ಆಗ ಅವನನ್ನು ಪ್ರತ್ಯೇಕಿಸದಿದ್ದರೆ ಅವನು ಜಗತ್ತಿನ ಮಹಾ ಪೀಡಕನಾಗಿ ಪ್ರಳಯವನ್ನುಂಟು ಮಾಡಬಹುದು' ಎಂದಿರುವರು.

ಇತರರೊಡನೆ ಸಾಮ್ಯ

ಹಿಟ್ಲರನಂತೆ ಇದೇ ರೀತಿಯ ಹುಚ್ಚಿಗೆ ಮೊದ ಬೇರೆ ಕೆಲವರು ಇರುವುದು ಇತಿಹಾಸದಲ್ಲಿ ಪ್ರಮಾಣಗಳಿವೆ ಮೆಲಿಯನ ಮತ್ತು ಫೆಡರಿಕ್ ಇವರು ಬ್ಬ ಹಿಟ್ಲರ-ಹುಚ್ಚಿನಿಂದ ಪೀಡಿತರಾಗಿ ಹಿಟ್ಲರನ ರಾಕ್ಷಸೀ ಸ್ವಭಾವಕ್ಕೆ ಲಹುಚ್ಚೇ ಮುಖ್ಯ ಕಾರಣವಾಗಿರುವ

ಹಿಟ್ಲರ ಹುಚ್ಚು ಒಂದು ಅಂಟುರೋಗ ಮಗಿಯೂ ಇರುತ್ತದೆ ಹಿಟ್ಲರನ ಸ್ನೇಹ ಸಂಪರ್ಕದಲ್ಲಿ ಇರುವವರಿಗೆಲ್ಲ ಈ ಹುಚ್ಚು ತಗಲುವ ಭಯವಿದೆ. ಇದು ಅಂಟುರೋಗವಾಗಿರುವುದರಿಂದಲೇ ಹಿಟ್ಲರನ ಅನುಯಾಯಿಗಳೆಲ್ಲ ಅವನಂತೆಯೇ ರಾಕ್ಷಸೀ ಸ್ವಭಾವವನ್ನು ತೋರಿಸುತ್ತಿದ್ದಾರೆ. ಅವರು ಪರಪೀಡಕರಾಗಿ ಜೀವಿಸುವುದರಲ್ಲಿ ತಮ್ಮ ಸಂತೋಷವನ್ನು ಪ್ರಕಟಮಾಡುತ್ತಿದ್ದಾರೆ.

ಹಿಟ್ಲರನ ಅವಸಾನ

ಹಿಟ್ಲರ ಹುಚ್ಚು ಮಿತಿಮೀರಿ, ಅದೇ ಹುಚ್ಚಿನ ದೆಸೆಯಿಂದಾಗಿ ಹಿಟ್ಲರನ ಮಾನಸಿಕ ಆರೋಗ್ಯವು ಕೆಡುವದೆಂದೂ, ಅವನು ಸ್ಟೈರ್ಯ ಕೆಟ್ಟು ಆತ್ಮಘಾತ ಮಾಡಿಕೊಂಡು ಸಾಯುವನೆಂದೂ ಆ ಹದಿಮೂರು ಮಂದಿ ಮನೋವಿಜ್ಞಾನಿಗಳು ಹೇಳಿರುವರು.

ಹಿಟ್ಲರನಿಗೆ ಮರಣದಂಡನೆಯೇ?

ಜರ್ಮನ್ ಸ್ವತಂತ್ರ ಪಕ್ಷದವರು ರೇಡಿಯೋ ಮೂಲಕ ಹಿಟ್ಲರನನ್ನು ಈ ರೀತಿ ಹೆದರಿಸಿದ್ದಾರೆ:—

"ಅಯ್ಯಾ ಹಿಟ್ಲರ್! ಜರ್ಮನ್ನಿಯ ಮಹಾಜನರು ನಿನಗೆ ಮರಣದಂಡನೆಯು ತೀರ್ಪಿಸುತ್ತಿದ್ದಾರೆ. ಇನ್ನು ೧೦೦ ದಿನಗಳಲ್ಲಿ ಯುದ್ಧವನ್ನು ನಿಲ್ಲಿಸಿ ಜರ್ಮನಿಯನ್ನು ಜರ್ಮನರಿಗೆ ಒಪ್ಪಿಸಿದೆಯಾದರೆ ಬದುಕಿದೆ ... ಎತ್ತರಿಕೆ!"

ಕಾಮನ್ಸಿನಲ್ಲಿ ಗುಪ್ತ ಅಧಿವೇಶನ

ಕಾಮನ್ಸಿನ ಗುಪ್ತ ಅಧಿವೇಶನವು ಕಳೆದ ವಾರ ಜರಗಿತು. ೭ ಗಂಟೆ ೩೩ ಮಿನಿಟುಗಳ ಕಾಲ ಬಾಗಿಲು ಮುಚ್ಚಿ ಮಾತುಕತೆ ನಡೆಸಿದರು.

ಫಿನ್ನರಿಗೆ ಸ್ವೀಡನಿನ ಸಹಾಯ

ಫಿನ್ಲಂಡಿನವರಿಗೆ ಔಷಧ ಸಹಾಯಕ್ಕಾಗಿ ಸ್ವೀಡನಿನಲ್ಲಿ ಒಂದು ನಿಧಿ ಏರ್ಪಟ್ಟು ಅರ್ಧ ಮಿಲಿಯ ಕ್ರೋನಿನಷ್ಟು ಹಣ ವಸೂಲಾಗಿದೆ.

ನಿಮ್ಮ ಮಕ್ಕಳಿಗೆ ಆರೋಗ್ಯದ ಪ್ರಥಮ ಸೂತ್ರವನ್ನು ಅಭ್ಯಾಸಮಾಡಿರಿ



ಎಂಡ್ರೂಸ್ ಲವಣವು ನಿಮ್ಮ ಹೊಟ್ಟೆಯನ್ನು ಸ್ವಚ್ಛವಾಗಿರಿಸುವುದು.

ರಕ್ತವನ್ನು ಶಾಂತವಾಗಿರಿಸುವುದಲ್ಲದೆ ಶುದ್ಧವಾಗಿರಿಸುವುದು

ಚರ್ಮವನ್ನು ನಿಚ್ಚಳವಾಗಿರಿಸುವುದು

ಉದರ, ಪ್ಲೀಹ, ಮೂಲಬದ್ಧತೆಯ ಬಾಧೆಯನ್ನು ಕೋಗಲಾಡಿಸುವುದು.

ಇದು ಅಭ್ಯಾಸವಾಗುವಂತಿಲ್ಲ ಚಿಕ್ಕ ಮಕ್ಕಳಿಂದ ಇಡೀ ಕುಟುಂಬಕ್ಕೆ ತಕ್ಕುವಾಗಿದೆ.

ಪ್ರತೀ ಮಕ್ಕಳಿಗೂ, ದೇಹದ ಒಳಭಾಗವನ್ನು ಶುದ್ಧವಾಗಿರಿಸುವ ಆರೋಗ್ಯದ ಪ್ರಥಮ ಸೂತ್ರದ ಆವಶ್ಯಕತೆಯನ್ನು ಕಲಿಸಬೇಕು. ದೇಹದ ಒಳಭಾಗವು ಶುದ್ಧವಾಗಿದ್ದ ಶರೀರವೇ ಆರೋಗ್ಯವಾದ ಶರೀರ ಮಕ್ಕಳಿಗೆ ಎಂಡ್ರೂಸ್ ಲವಣವನ್ನು ನೀವು ಸೇವಿಸಲು ಕೊಟ್ಟರೆ ಅವರು ಈ ಆರೋಗ್ಯ ಸೂತ್ರವನ್ನು ಕೂಡಲೇ ಕಲಿಯುತ್ತಾರೆ. ಮಕ್ಕಳು ಇದರ ಉತ್ತಿ ಬರುವ ಗುಣ ಮತ್ತು ರುಚಿಯನ್ನು ಬಹಳವಾಗಿ ಮೆಚ್ಚುತ್ತಾರೆ



ಎಂಡ್ರೂಸ್ ಲವಣವು ಮಕ್ಕಳಿಗೆ ಬಹಳ ಆದರ್ಶವಾದುದು ಇದು ಹೊಟ್ಟೆಯನ್ನು ಸೂಕ್ಷ್ಮವಾಗಿ ನಿರ್ಮಲವಾಗಿರಿಸಿ ಮೂಲಬದ್ಧತೆಯನ್ನು ನಿವಾರಿಸುವುದು ಹೊಟ್ಟೆ ವೇದನೆಯನ್ನು ನಿವಾರಿಸಿ, ಪ್ಲೀಹವನ್ನು ಆರೋಗ್ಯವಾಗಿ ಕಾರ್ಯನಿರ್ವಹಿಸುವಂತೆ ಮಾಡಿ ರಕ್ತವನ್ನು ಶುದ್ಧವಾಗಿರಿಸುವುದು.

ಪ್ರತೀನಿತ್ಯವು ಸೇವಿಸುವ ಒಂದು ಗ್ಲಾಸ್ ಎಂಡ್ರೂಸ್ ಲವಣವು ರೋಗಬಾಧೆಯನ್ನು ದೂರವಾಗಿರಿಸುವುದು ದೇಹಕ್ಕೆ ಒಲವನ್ನೂ ಉತ್ತೇಜನವನ್ನೂ ಕೊಡುವುದ

ಒಬ್ಬ ತಾಯಿಯು ಈರೀತಿಯಾಗಿ ಬರೆಯುತ್ತಾಳೆ 'ನಾನು ನನ್ನ ಮಕ್ಕಳಿಗೆ ಬಹಳ ಮೆಚ್ಚುಗೆಯಿಂದ ಎಂಡ್ರೂಸ್ ಲವಣವನ್ನಿತ್ತಿದೆನು— ಇದರಿಂದ ಉತ್ತಮ ಫಲತೋರುವುದು ದೊರಕಿದೆ ಪ್ಲೀಹ ಬಾಧೆಗಳೆಲ್ಲವೂ ಗಾಯಬಯವಾದ ಮಕ್ಕಳಿಗೆ ಇದು ಬಹಳ ಉತ್ತಮ ಮತ್ತು ಮಕ್ಕಳ ತೂಕವು ಹೆಚ್ಚಿರುತ್ತದೆ

ಎಂಡ್ರೂಸ್ ಲಿವರ್ ಸೋಲ್ಟ್

ANDREWS LIVER SALT

ದೇಹದ ಒಳಭಾಗವನ್ನು ನಿರ್ಮಲವಾಗಿರಿಸುವುದು

ಯೂರೋಪಿನ ಯುದ್ಧಯಜ್ಞದಲ್ಲಿ ಪಿನ್ಲೆಂಡಿನ ಸ್ವಾತಂತ್ರ್ಯವೂ ಆಹುತಿಯೆ?

ಸಂಸ್ಕೃತಿಯ ಬೆಳಕು ನಂದಿಹೋಗವುದೆ?

ನಾಗರಿಕತೆಯ ಬೆಳಸು ಬಾಡಿಹೋಗುವುದೆ?

ಹಿಂದಿನ ಮತ್ತು ಇಂದಿನ ಪಿನ್ಲೆಂಡಿನ ದುರಂತ ಚಿತ್ರ —

ಆ ಸಣ್ಣ ಪಿನ್‌ಲೆಂಡು ದ್ವೀಪ! ಇತಿಹಾಸದಲ್ಲಿ ಸ್ವಾತಂತ್ರ್ಯ ಸಮರದ ಮಾರ್ಗದರ್ಶಕವಾಗಿ ಮೆರೆಯುವಂತೆ, ಈಗ ಪ್ರಬಲ, ಅಸಂಖ್ಯ ಸೈನ್ಯ ವಿಮಾನಗಳೆದುರಿಗೆ ಎದೆಗೊಟ್ಟು ಎದುರಾಡಿ ಪ್ರಚಂಡವಾಗಿ ಸೆಣಸುತ್ತಿದೆ! ರಾಷ್ಟ್ರದ ಸ್ವಾತಂತ್ರ್ಯ ಧ್ವಜವನ್ನುಳಿಸಲು ಇಂದು ಅಭೂತಪೂರ್ವ ಆವೇಶವನ್ನು ತೋರಿಸುತ್ತಿದೆ.

ಇಪ್ಪತ್ತೊಂದು ವರ್ಷಗಳ ಹಿಂದೆ, ಹೀಗೆಯೇ ಆ ಭೂಮಿಯು ಸ್ವಾತಂತ್ರ್ಯ ರಕ್ಷಣೆಯ ಸಲುವಾಗಿ ಧೈರ್ಯ ಸ್ವಾರ್ಥತ್ಯಾಗಗಳಿಂದ ಕಾದಾಡಿ ಅಂದು ಜಯವಡೆದಿತ್ತು! ಏಳಿಗೆಯ ಸಂಸ್ಕೃತಿಯ ಸುವರ್ಣ ಜ್ಯೋತಿಯು ಆ ದ್ವೀಪವನ್ನು ಆ ಮೇಲೆ ಶುಭ್ರವಾಗಿ ಬೆಳಗಿಸಿತು!

ಅನೇಕ ಮಹಾ ಮಹಾ ರಾಷ್ಟ್ರಗಳಾದರೂ ಬೆರಗಾಗುವ ರೀತಿಯಲ್ಲಿ ಪಿನ್ಲೆಂಡು ಸಾಮ್ರಾಜ್ಯವನ್ನು ಕಟ್ಟಿ ಕಾಪಾಡಿ ಬೆಳೆದಿದೆ. ಅನಂತ ಸರೋವರಗಳಿಂದ ರಮಣೀಯವಾಗಿ, ನಿಬಿಡ ಅರಣ್ಯಗಳಿಂದ ಶೋಭಾಯಮಾನವಾಗಿ, ಸಲ ಜಲ ಸಮೃದ್ಧಿಯುಳ್ಳ ಬಯಲುಗಳಿಂದ ಪರಿಪೂರ್ಣವಾಗಿ ಕಳೆದ ಕೆಲವು ವರ್ಷಗಳಲ್ಲಿ ಪಿನ್ಲೆಂಡು ಊಹನಾತೀತವಾಗಿ ಅಭಿವೃದ್ಧಿ ಹೊಂದಿತ್ತು. ನಿರಕ್ಷರಕುಕ್ಷಿಗಳಾದ ಬೇಸಾಯಗಾರರು ಬರಹ ಬಲ್ಲವರಾದರು. ನವೀನ ಸಾಧನಗಳು ದೇಶದಲ್ಲಿ ಹರಿದಿರುವ ಶಾಲ ಕಾರ್ಖಾನೆಗಳು ಆ ದ್ವೀಪದ ಮೂಲೆ ಮೂಲೆಗಳಲ್ಲಿಯೂ ಇಂದು ಸ್ಥಾಪಿತವಾಗಿವೆ. ನಾಗರಿಕತೆಯ ವಟ್ಟಕ್ಕೆ, ಸ್ವಾತಂತ್ರ್ಯದ ಭದ್ರ ಸೀರೆಕ್ಕೆ ಕಾಲಿಡುವ ರಾಷ್ಟ್ರವನ್ನು ಇಂದು ರಶ್ಯವು ಅನ್ಯಾಯವಾಗಿ ಹಿಂಸೆಗೊಳಿಸುತ್ತಿದೆ!

ಕಳೆದ ಸ್ವಾತಂತ್ರ್ಯ ಸಮರವಾಗುವವರೆಗೆ ಅಲ್ಲಿನ ಗಂಡುಸರೂ ಹೆಂಗುಸರೂ ಬಹಳ ಅಪಾಗತಿಕರಾಗಿದ್ದರು. ಆದರೆ ಇಂದು ಪ್ರತಿಯೊಬ್ಬ ಪ್ರಾಯಸ್ಥನಿಗೂ ಅಲ್ಲಿ ಮಕದಾನದ ಹಕ್ಕಿದೆ. ಅದರ ಬಲೆಯೇ ನೆಂಬುದು ಅವನಿಗೆ ಚನ್ನಾಗಿ ಅರಿತಿದೆ!

★

ಪಿನ್ನರ ಭಾಷೆಯೂ ಬಹಳ ಏಳಿಗೆ ಹೊಂದಿದೆ! ಹಿಂದೆ ಅದು ಬರಿಯ ಹೊಲಗಾರರ ಗ್ರಾಮ್ಯ ಭಾಷೆಯಾಗಿತ್ತು. ಏಳುವರೆ ಶತಮಾನಗಳ ದಾಸ್ಯವನ್ನು ಕಳೆದು ಪಿನ್ನರು ಸ್ವಾತಂತ್ರ್ಯದ ಬೆಳಕು ಕಂಡೊಡನೆ, ಅವರ ಭಾಷೆಯಲ್ಲಿಯೂ ನವಚೈತನ್ಯವು ಹರಿಯಿತು! ಜಗತ್ತಿನ ಸಾಹಿತ್ಯ ಭಾಷೆಗಳಲ್ಲಿ ಇಂದು ಅದಕ್ಕೂ ಒಂದು ಗಣ್ಯ ಸ್ಥಾನವಿದೆ!

ಪಿನ್ನರ ಭಾಷೆಯಲ್ಲಿ ಅಸಂಖ್ಯ ಕವನ ಕಾವ್ಯಗಳು ನಿರ್ಮಾಣವಾಗಿವೆ. ಯೂರೋಪೀಯ ಭಾಷೆಗಳ ಉತ್ತಮೋತ್ತಮ ಕೃತಿಗಳು ಆ ಭಾಷೆಗೆ ಭಾಷಾಂತರಗೊಂಡಿವೆ. ಪಿನ್ನರ ಓದುವ ಹುಚ್ಚೆಷ್ಟಿರುವುದೆಂದರೆ, ಅಷ್ಟು ಸಣ್ಣದಾಗಿರುವ ಇತರ ಯಾವುದೇ ಪ್ರಗತಿಹೊಂದಿದ ಯೂರೋಪ್ ರಾಷ್ಟ್ರದಲ್ಲಾಗಲಿ ಅಷ್ಟು ಸಾಹಿತ್ಯ ಪತ್ರಿಕೆಗಳು, ವಾರ್ತಾ ಪತ್ರಿಕೆಗಳು ಇಂದು ಹೊರಡುವುದಿಲ್ಲ. ಅಲ್ಲಿ ಕೇವಲ ಮೂರು ಮಿಲಿಯ ಮಂದಿ ಮಾತ್ರ ಜನ ಸಂಖ್ಯೆಯಿದೆ!

ಅವರು ಪರಕೀಯರು ತಮ್ಮ ದೇಶಕ್ಕೆ ಬರಬಾರದೆಂದು ಗ್ರಹಿಸುವುದಿಲ್ಲ. ವಿದೇಶೀಯರಿಗೆ ಅಲ್ಲಿ ಸುಸ್ವಾಗತವಿದೆ. ಬರ್ನಾರ್ಡ್‌ಶಾರಂತಹರು ಉತ್ತಮೋತ್ತಮ ಕೃತಿಗಳಿಗೆ ಅಲ್ಲಿ ಬಹಳ ಜನಾದರವುಂಟು.



ವ್ಯಾಪಾರ ವಹಿವಾಟು, ಸೈನಿಕ ವಿಚಾರಗಳಲ್ಲಿಯೂ ಪಿನ್ನರು ಮುಂದುವರಿದಿರುವರು. ಅರಣ್ಯಗಳಿಂದ ಅವರು ಅನೇಕ ರತ್ನಗಳನ್ನು ಬೇರೆ ದೇಶಗಳಿಗೆ ಕಳುಹಿಸುತ್ತಾರೆ. ಪಿನ್‌ಲೆಂಡಿಗೆ ಒಂದು ಭದ್ರವಾದ ಬಂದರು ಇದೆ.

ಪಿನ್‌ಲೆಂಡಿನ ಯೋಧರು ಅವು ಉದಾರ ಹೃದಯಿಗಳು ಎಂದು ಪ್ರಸಿದ್ಧರಾದಂತೆ ಕಲಿತನದಲ್ಲಿಯೂ ಹೆಸರಾದವರು. ರಶ್ಯದ ಸಿಪಾಯಿಗಳು ಒರಿಯಾಟದ ಗೊಂಬೆಗಳೆಂದು ಅವರು ಹೇಳಿದ್ದ ಮಾತು ಕೇವಲ ಜಂಭದ್ದು ಎಂದು ತಿಳಿಯಬಾರದು. ಕಳೆದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕೇವಲ ಹದಿನೆರಡು ವರ್ಷ ಪ್ರಾಯದ ಪಿನ್‌ಬಾಲಕರೂ ಹೋರಾಡಿದ್ದರು. ಇಂದೂ ಸೈನಿಕರಲ್ಲಿ ಬಹುಸಂಖ್ಯರು ಅದೇ ಸಾಲಿನವರಾಗಿರುತ್ತಾರೆ.

★

ಅಂತಹ ಸುಂದರ, ಸ್ವಾತಂತ್ರ್ಯ ದ್ವೀಪವು ಇಂದು ರಶ್ಯದ ಅನ್ಯಾಯದ ಆಕ್ರಮಣದ ಪದಹತಿಗೆ ಜರ್ಜರಿತವಾಗಿದೆ. ಜಗತ್ತಿನ ಸಹಾನುಭೂತಿಯು ಪಿನ್ಲೆಂಡಿಗಿದೆ! ಹಲವು ರಾಷ್ಟ್ರಗಳು ಪ್ರತ್ಯಕ್ಷ ಸಹಾಯ ಕೊಡಲು ಸಿದ್ಧವಾಗಿವೆ. ಆದರೆ ಪಿನ್ಲೆಂಡಿಗಾಗಿ ಯಾರೂ ರಶ್ಯದೊಡನೆ ಕಲಹ ಮಾಡಿಕೊಳ್ಳಲು ಎದಿಗಾರಿಕೆ ತೋರಿಸುವುದಿಲ್ಲ. ಇಂದಿನ ಯೂರೋಪಿನ ಪರಿಸ್ಥಿತಿಯೇ ಹೀಗಾಗಿದೆ.

ಹೇಗಿದ್ದರೂ ಪಿನ್ಲೆಂಡು ಹಿಂದಿಗಿಂತ ಇಂದು ಒಳಶಾಲಿಯಾಗಿದೆ. ಅದರ ಗೌರವಪೂರ್ಣವಾದ ಅಂತರ್‌ರಾಷ್ಟ್ರೀಯ ಸಂಬಂಧದಿಂದ ಹಲವು ರಾಷ್ಟ್ರಗಳ ಗೆಳೆತನವು ಅದಕ್ಕಿದೆ. ಸ್ವೀಡನ್ ಮತ್ತು ಅದೇ ರೀತಿಗಳ ಅದರ ವಿಷಯ ವಿಶೇಷ ಸಹಾನುಭೂತಿಯುಳ್ಳವುಗಳ ಪಿನ್ಲೆಂಡಿನ ಹೆಂಗುಸರು ಗಂಡುಸರು ಬಾಲಾಪ್ಯದಿಂದ ತಮ್ಮ ಕೊನೆಯ ರಕ್ತದ ಬಿಂದುವಿನ ತನಕ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಚೆಲ್ಲಲು ಕಟಿಗಟ್ಟಿ ತಯಾರಾಗಿ ರಣರಂಗಕ್ಕೆ ಇಳಿದಿದ್ದಾರೆ!

ಆದರೆ ಕಳೆದ ಕೆಲ ವರ್ಷಗಳಲ್ಲಿ ನಿರಂತರ ಸಾಹಸದಿಂದ ಅವರು ಗಳಿಸಿದ ಅ ಮಹಾ ಸಂಸ್ಕೃತಿಯು ಮುಂದೆ ಉಳಿಯುವುದೋ ಯಾರು ಹೇಳಬಲ್ಲರು? ಅನೇಕ ಉದಾತ್ತ ವಿಭೂತಿ ಪುರುಷರ ಆ ಜೀವ ಸಾಧನೆಗಳ ಫಲವಾಗಿ ಎದ್ದು ನಿಂತ ರಾಷ್ಟ್ರವು ಇಂದು ರಶ್ಯದ ರಕ್ತದಾಹಕ್ಕೆ ತುತ್ತಾಗಿ ಹೋಗಿದೆ! ಮಾನವನ ಅಮಿತ ಸ್ನೇಹ ಸಮ್ಮಿಲನವು ನಿಷ್ಪ್ರಯೋಜಕವಾಗುತ್ತಿರುವುದೆಂಬ ವಿಷಯದಲ್ಲಿ ಇದೊಂದು ಮರೆಯಲಾರದ ದೃಷ್ಟಾಂತ! 'ದುರ್ಬಲ ರಾಷ್ಟ್ರಗಳು ಬದುಕಿರುವುದು ಬೇಡ' ಎಂಬಂತೆ ಸಾಮ್ರಾಜ್ಯಲಾಲಸೆಯ ಬಿರೋಷ್ಟ ಪ್ರಭುತ್ವಗಳು ಲೋಕಕಂಟಕ ಸೀತಿಯಿಂದ ಇಂದು ಮುಂದುವರಿಯುತ್ತಿವೆ.

ಹೊಟ್ಟೆನೋವು ಐದು ನಿಮಿಷಗಳೊಳಗೆ ಮಾಯವಾಯಿತು

ಉದರ ವೇದನೆಯಿಂದ ಬಳಲುವವರು ಅದೇ ವ್ಯಾಧಿಯಿಂದ ಬಳಲುತಿದ್ದ ಇತರರು ಹೇಗೆ ಗುಣಹೊಂದಿದರು ಎಂಬುದನ್ನು ಓದಲು ಬಹಳ ಆಸಕ್ತಿಯನ್ನು ತೋರಿಸುವರು. ಜೀವನವನ್ನೆ ಬೆದರಿಸುವ ಹೊಟ್ಟೆ ವ್ಯಾಧಿಯಿಂದ ಬಳಲಿದ ಓರ್ವನ ಪತ್ರವು ಇಲ್ಲಿದೆ. ಮೆಕ್ಲಿನ್ ಬ್ರಾಂಡ್ ಸ್ವೋಮಕ್ ಪೌಡರಿನಿಂದ ಆತನು ಗುಣಮುಖನಾದನೆಂಬ ಸಂಗತಿಯು ತಿಳಿಯಲು ಬಹಳ ಸುಲಭ

'ಮೆಕ್ಲಿನ್ ಬ್ರಾಂಡ್ ಸ್ವೋಮಕ್ ಪೌಡರು ಎಂಥ ಅದೋಷ ಔಷಧಿ ಎಂಬುದನ್ನು ವ್ಯಕ್ತಪಡಿಸುವುದು ನನ್ನ ಕರ್ತವ್ಯವಾಗಿದೆ. ಮಿ. ಇ. ಜಿ. ಯವರು ಬರೆಯುತ್ತಿರೆ 'ಎಲ್ಲಾ ಹವೆಗಳಲ್ಲಿಯೂ ನಾನು ಉದರವೇದನೆಯಿಂದ ಬಳಲುತಿದ್ದೆನು. ನಾನು ಒಂದು ಬಾಟ್ಲಿ ಸ್ವೋಮಕ್ ಪೌಡರನ್ನು ಕೊಂಡುಕೊಂಡೆನು. ಐದು ನಿಮಿಷಗಳಾಗಬೇಕಾದರೆ ನನಗೆ ಕೊಂಚ ಗುಣವು ದೊರಕಿತು. ಎರಡು ದಿವಸಗಳೊಳಗೆ ಎಲ್ಲಾ ಬಾಧೆಯು ನಾಶವಾಯಿತು. ಆದ ಕಾರಣ ಮೆಕ್ಲಿನ್ ಬ್ರಾಂಡ್ ಸ್ವೋಮಕ್ ಪೌಡರನ್ನು ಶ್ಲಾಘಿಸುವುದು ನನ್ನ ಪ್ರಥಮ ಕರ್ತವ್ಯವಾಗಿರುತ್ತದೆ. ಈಗ ನನಗೆ ಉದರವೇದನೆಯ ಬೆದರಿಕೆಯೇ ಇರುವುದಿಲ್ಲ'.

ನಿಮ್ಮ ಉದರವೇದನೆಯು ಕೂಡ ಒಂದು ದೋಸು ಮೆಕ್ಲಿನ್ ಬ್ರಾಂಡ್ ಸ್ವೋಮಕ್ ಪೌಡರನ್ನು ಬಾಲಸಲ್ಲಿಗಲಿ ನೀರಿನಲ್ಲಾಗಲಿ ಹಾಕಿ ಸೇವಿಸಿದರೆ ಗುಣವಾಗುವುದು. ಇದು ಹೊಟ್ಟೆಯೊಳಗಿರುವ ಆಮ್ಲವನ್ನು ಕಡಿಮೆಮಾಡಿ ಜೀರ್ಣವು ಸರಿಯಾಗುವಂತೆ ಮಾಡುತ್ತದೆ. ಆದರೆ ಅದು ಮಾತ್ರ ಅಸಲಿಯಾದ ಮೆಕ್ಲಿನ್ ಬ್ರಾಂಡ್ ಸ್ವೋಮಕ್ ಪೌಡರಾಗಿರಬೇಕು. ಮಾತಿಯಾದ ಪೌಡರು ಎಂಬ ದಸ್ತಕಿರ ಮ ಬಾಟಿಗಳ ದಸ್ತಕುಮತ್ತು ಕೆಂಪು ಸೀಲಿರ ಮ ಸೆಟ್ಟಿಗೆಗಳಲ್ಲಿ ದೊರಕುತ್ತವೆ. ಚಿಲ್ಲರೆಯಾಗಿ ಮಾರಲ್ಪಡುವುದಿಲ್ಲ. ಪಟ್ಟಿಗೆಗಳಲ್ಲಿರುವ ಬಾಟ್ಲಿಗಳಲ್ಲಿ (ಹುಡಿ ಮಾ ಮಾತ್ರೆಯ ರೂಪದಲ್ಲಿ) ಮಾರಲ್ಪಡುತ್ತದೆ. ಎಲ್ಲಾ ಕೆಮಿಸ್ಟರಿಂದಲೂ ಸ್ಟೋರಿಂಗಳಲ್ಲಿಯೂ ಮಾರಲ್ಪಡುತ್ತವೆ

707





ಸಮಯಸಿಮ್ಮೊಳಗೆ ನೀವು ರಾಜಿಮಾಡಿಕೊಳ್ಳಿರಿ

ಆದರೆ ಅದಕ್ಕೆ ಅಡ್ಡಗಾಲು ಹಾಕುವುದಿಲ್ಲವೆಂಬ ಭರವಸೆ ಬೇಕು

ಜಿಲ್ಲೆಂಡರ ಉದ್ಗಾರಕ್ಕೆ ರಾಜಾಜಿಯವರ ಉತ್ತರ



ಜಿಲ್ಲೆಂಡ್ ಸಾಹೇಬರ ಉದ್ಗಾರ!

ಮೊನ್ನೆ ಲಾರ್ಡ್ ಸಭೆಯಲ್ಲಿ ಮಾತನಾಡುತ್ತಾ ಭಾರತಮಂತ್ರಿಗಳಾದ ಜಿಲ್ಲೆಂಡ್ ಸಾಹೇಬರು ಈ ರೀತಿ ಉದ್ಗಾರವೆತ್ತಿದರು.

"ಜರ್ಮನರು ತಮ್ಮ ರೇಡಿಯೋ ಹಾಗೂ ಇನ್ನಿತರೆ ಪ್ರಚಾರಕಾರ್ಯಗಳ ಮೂಲಕ ಬ್ರಿಟಿಷ್ ವಿರುದ್ಧ ಹಿಂದೂಸ್ಥಾನದಲ್ಲಿ ಅಪಪ್ರಚಾರ ಮಾಡುತ್ತಿದ್ದರೂ, ಅಲ್ಲಿನ ರಾಜರು ಮತ್ತು ಜನರು ನಾಜೀ ವಿಮೋಚನೆಯನ್ನೇ ಬಕ್ತಪಡಿಸುತ್ತಿದ್ದಾರೆ. ಹಿಂದೂದೇಶದ ರಾಜ ವೈಶ್ಯರು ಯುದ್ಧ ಸ್ಥಳದಲ್ಲಿ ಅನೇಕ ಕಾಣಿಕೆ ಸಹಾಯಗಳನ್ನು ಕೊಟ್ಟಿದ್ದಾರೆ. ಅನೇಕ ರಾಜರು ತಾವು ಕೊಟ್ಟಿದ್ದರಿಂದ ಸಂತುಷ್ಟರಾಗದೆ ಯುದ್ಧ ಮುಗಿಯುವ ಮಟ್ಟಿಗೆ ಸ್ವಲ್ಪ ಸ್ವಲ್ಪ ಕೊಡುತ್ತಾ ಬರುವ ಮಾರ್ಗವನ್ನಿಟ್ಟಿರುವರು"

ಹಿಂದೂಸ್ಥಾನದ ಪರಿಸ್ಥಿತಿ!

ಮದ್ರಾಸ್, ಬಂಗಾಳ ಮತ್ತು ಸಿಂಧ ಪ್ರಾಂತಗಳಲ್ಲಿ ಪ್ರಾಂತಿಕ ಸರಕಾರಗಳು ಸುಸೂತ್ರವಾಗಿ ಸಾಗಿವೆ. ಕಾಂಗ್ರೆಸು ಸರಕಾರಗಳಿದ್ದ ಉಳಿದ ಏಳು ಪ್ರಾಂತಗಳ ಆಡಳಿತವನ್ನು ಗವರ್ನರರು ಮಹಿಸಿಕೊಂಡಿರುವರು. ಆದರಿಂದಾಗಿ ಹಿಂದೂಸ್ಥಾನದ ಪ್ರಗತಿಯು ಗಡಿಯಾರದ ಮುಳ್ಳು ಒಂದು ವರ್ಷಕ್ಕೆ ಹಿಂದಕ್ಕೆ ಅಂದರೆ ಮಿಂಟೋ ಸುಧಾರಣೆ ಕಾಲಕ್ಕೆ ಸರಿಯಾಗಿ ಮುಂತ್ರಿಮಂಡಳಗಳು ಹೋಗಿ ಗವರ್ನರರು ಅಧಿಕಾರ ಸ್ವೀಕಾರ ಮಾಡಿದ ಮೇಲೆ ಏನೂ ಗೊಯಲವಾಗಿಲ್ಲ. ಗವರ್ನರರು ಒಪ್ಪಿದ ಹಿಂದಿನ ಸುಧಾರಣೆಗಳನ್ನು ಕಾರ್ಯಗತಗೊಳಿಸಲ್ಕೆ ಇವಿಲಾಗುತ್ತದೆ.

ಹಿಂದೂ-ಮುಸ್ಲಿಂ ತುಕಡಿ

"ಹಿಂದೂಸ್ಥಾನದ ರಾಜಕೀಯ ಬಿಕ್ಕಟ್ಟಿಗೆ ಕೊಂದೂ ಮುಸ್ಲಿಂ ಮತಭೇದಗಳು ಮುಖ್ಯ ಕಾರಣ. ಕಾಂಗ್ರೆಸಿನ ಬೇಡಿಕೆಯನ್ನು ಕೊಡಲು ಜಾತಿ ಮತ ಭೇದವಿಲ್ಲದ ಅಲ್ಪಾ ಬಿಗುಪುವಿಲ್ಲದೆಯೆ ಕಾಂಗ್ರೆಸು ಸರ್ಕಾರ ಅಧಿಕಾರ ಹೇಳುತ್ತಿದೆ. ಆದರೆ ಸಾರ್ವಭೌಮ ಸರಕಾರವು ಅದನ್ನು ಒಪ್ಪುವುದಿಲ್ಲ. ಅಲ್ಪಸಂಖ್ಯಾತರ ಸಲ್ಲುಳಿ ಸೀಗದ ಯಾವ್ದ ಸುಧಾರಣೆಯೂ ಅಲ್ಲಿ, ಕಾರ್ಯಗತಗೊಳ್ಳಕ್ಕೆ ಬರುವುದಿಲ್ಲ. ಹಿಂದೂಸ್ಥಾನದಲ್ಲಿ ಅಲ್ಪಸಂಖ್ಯಾತರ ವಿಷಯಕ್ಕೆ ಐತಿಹಾಸಿಕ ಮಹತ್ವವಿದೆ. ಜಗತ್ತಿನ ಇಂದಿನ ಪ್ರಳಯಕ್ಕೆ ಯೂರೋಪಿನ ಅಲ್ಪಸಂಖ್ಯಾತರೇ ಕಾರಣ."

ರಾಜ್ಯ ಘಟನಾಸಮಿತಿ

"ಮಹಾತ್ಮಾಜಿಯವರು ಸೂಚಿಸಿದ ರಾಜ್ಯ ಘಟನಾಸಮಿತಿಗೆ ನಮ್ಮ ಸಮ್ಮತಿ ಹಾಕಿ. ಆದರೆ ಅಲ್ಪಸಂಖ್ಯಾತರ ಒಪ್ಪಿಗೆ ಸಿಗಬೇಕು. ಕಾಂಗ್ರೆಸು ಲೀಗುಗಳಿಗೆ ಒಪ್ಪಂದ ಮಾಡಲು ನೈಸರ್ಗಾಯರು ಬಹಳ ಮತ್ನಿಸಿದರು.

ವಿಮೋಚನೆ ದಿನ ಬೇಡ

"ಕಾಂಗ್ರೆಸು ಮಂತ್ರಿಮಂಡಳಗಳು ರಾಜನಾಮೆಯಿತ್ತುದರ ಸಂತೋಷ ಸೂಚನೆಗೆ ವಿಮೋಚನೆಯ ದಿನವನ್ನಾಚರಿಸಬೇಕೆಂದು ಮುಸ್ಲಿಂಲೀಗು ಪ್ರಕಟಿಸಿದೆ. ಆದರೆ ಜಿನ್ನಾ ನೆಹರುಗಳಲ್ಲಿ ಒಪ್ಪಂದದ ಮಾತುಕತೆಯಾರಂಭವಾಗಲಿರುವುದರಿಂದ ಎರಡು ಪಂಗಡದವರೂ ಕಂತ್ಯಾಲಿಕ ಒಪ್ಪಂದ ಮಾಡಿಕೊಳ್ಳುವುದು ಅವಶ್ಯವಾಗಿದೆ. ಶಾಸನ ಸಭೆಗಳಲ್ಲಿ ಶತ್ರ ಪ್ರಧಾನ್ಯತೆಗಿಂತ ಜಾತಿ ಪ್ರಾಧಾನ್ಯ ಪಕ್ಷಗಳಿದ್ದರೆ ಪ್ರಜಾಸತ್ತಾತೆಯು ಯಶಸ್ವಿಯಾಗಲಾರದು. ಹಿಂದೂಸ್ಥಾನದ ರಕ್ಷಣೆ, ಅಲ್ಪಸಂಖ್ಯಾತರು, ಹಿಂದೂಸ್ಥಾನವನ್ನು ಊರ್ಜಿತ ಸ್ಥಿತಿಗೆ ತಂದ ನಮ್ಮ ಜನರು, ಇವರ ಸಲುವಾಗಿ ನಾವು ಮಾಡತಕ್ಕ ಕಾರ್ಯ ಸಮಸ್ಯೆಗಳಿವೆ. ಆದರೆ ಈಗ ಅಲ್ಪಸಂಖ್ಯಾತರ ಸಮಸ್ಯೆಯೇ ಮಹತ್ವವಾದುದು.

ಜಿಲ್ಲೆಂಡರಿಗೆ ರಾಜಾಜಿಯವರ ಉತ್ತರ

ಜಿಲ್ಲೆಂಡರ ಲಾರ್ಡ್ಸ್ ಭಾಷಣಕ್ಕೆ ಉತ್ತರ ಕೊಡುತ್ತಾ ರಾಜಾಜಿಯವರು ಈ ರೀತಿ ಹೇಳಿದರು:—

ಜಾತಿ ಪ್ರಾಧಾನ್ಯ ಪಂಗಡಗಳಿರುವವರೆಗೆ ಪ್ರಜಾಸತ್ತಾತ್ಮಕ ಸಂಸ್ಥೆಗಳು ಯಶಸ್ವಿಯಾಗಲಾರವು ಎಂದು ಜಿಲ್ಲೆಂಡ ಸಾಹೇಬರು ಹೇಳಿದುದನ್ನು ಕೇಳಿ ನನಗೆ ಆನಂದವಾಗಿದೆ. ಜಾತಿಭೇದವನ್ನು ಬೆಳೆಸದೆ ಮುಂದೆ ಬ್ರಿಟಿಷರು ನ್ಯಾಯಧೋರಣೆಯನ್ನು ಮಹಿಸುವರೆಂದು ಇದು ಸೂಚಿಸುತ್ತದೆ.

"ಬ್ರಿಟಿಷರು ಇಂದು ಸಮ್ಮಿಗಿರಬಾರದು ಹಿಂದೀಯರು ತಮ್ಮ ತಮ್ಮಲ್ಲಿಯೇ ಒಪ್ಪಂದ ಮಾಡಿಕೊಳ್ಳಬೇಕೆಂದೂ ಅವರನ್ನು ಒತ್ತಾಯ ಮಾಡಲಾರೆವೆಂದೂ ಜಿಲ್ಲೆಂಡ್ ಸಾಹೇಬರು ಹೇಳಿದ್ದಾರೆ. ಮಹಾತ್ಮಾಜಿಯವರಿಗೂ ಇದೇ ಬೇಕಾಗಿದೆ. ಆದರೆ ಅವರು ಮಾಡಿಕೊಂಡ ಒಪ್ಪಂದದಂತೆ ತಾವು ನಡೆಯುವೆವೆಂದು ಬ್ರಿಟಿಷರು ಮಾತು ಕೊಡದಿದ್ದರೆ ಅದರಿಂದ ಪ್ರಯೋಜನವಾಗಲಾರದು. ಅಲ್ಪಸಂಖ್ಯಾತರಿಗೆ ತೃಪ್ತಿಯಾಗದೆ ರಾಜ್ಯ ಘಟನಾ ಸಮಿತಿಯನ್ನು ಕರೆಯಲಾರೆವೆಂದು ಅವರು ಹೇಳಿರುವರು. ಎಲ್ಲಾ ಪ್ರತಿನಿಧಿಗಳನ್ನು ಕರೆದು ನಿಮಗೆ ನಿಮಗೆ ತೃಪ್ತಿಯಿದ್ದಂತೆ ಒಪ್ಪಂದ ಮಾಡಿಕೊಳ್ಳಿರೆಂದು ಹೇಳುವ ಬದಲು ಒಪ್ಪಂದ ಮಾಡಿಕೊಳ್ಳದಿದ್ದರೆ ಯಲಾರೆವೆಂದು ಹೇಳಿ ಮಹತ್ವದ ವಿಷಯವನ್ನು ದೂರಮಾಡುತ್ತಿರುವರು

ಸತ್ಯಾಗ್ರಹವನ್ನು ಆರಂಭಿಸುವ ಮೊದಲು, ಯೋಗ್ಯರೀತಿಯ ಒಪ್ಪಂದಕ್ಕೆ ಕಾಂಗ್ರೆಸು ತಯಾರಿದೆ ಎಂಬ ನಿರ್ಣಯವನ್ನು ಜಿಲ್ಲೆಂಡ್ ಸಾಹೇಬರು ಸಮರ್ಥಿಸಿದ್ದು ಆನಂದದ ವಿಷಯ ಆದುದರಿಂದ ಹಿಂದೂಸ್ಥಾನದ ಸಮಸ್ಯೆಯನ್ನು ಬಗೆಹರಿಸಲು ರಾಜ್ಯಘಟನಾ ಸಮಿತಿಯನ್ನು ಬ್ರಿಟಿಷ್ ಸರಕಾರವು ಕರೆಯುವುದೆಂದು ಹಾರೈಸಬಹುದೆ?

ಗವರ್ನರರು ಅಧಿಕಾರ ಸ್ವೀಕಾರ ಮಾಡಿದ ಮೇಲೆ, ಕಾಂಗ್ರೆಸು ಸರಕಾರಗಳ ಹಿಂದಿನ ಯೋಜನೆಗಳನ್ನೂ ನೆರವೇರಿಸ ಮಾಡಿಲ್ಲವೆಂದು ಅವರು ಹೇಳಿದ್ದಾರೆ. ಅವರು ನುಡಿದಂತೆ ನಡೆಯಲಿ ಮದ್ಯಪಾನ ನಿಷೇಧ ಮಾಡಿದ ಮೇಲೆ, ಅದರ ಒಡಲಾಗಿ ಸರಕಾರಕ್ಕೆ ಬೇರೆ ಉತ್ಪತ್ತಿಯನ್ನೂ ಕಾಂಗ್ರೆಸು ಮಂತ್ರಿಮಂಡಲವು ಸೂಚಿಸಿ ಕೊಟ್ಟಿದೆ. ಆದ್ದರಿಂದ ಮದ್ಯಪಾನ ನಿರೋಧವನ್ನು ಮುಂದುವರಿಸುವುದರಲ್ಲಿ ಏನೂ ತೊಂದರೆಯಿಲ್ಲ.

ಹೊಳ್ಳುಮಾತು ಬೇಡ

ಗವರ್ನರರು ಹಿಂದೂಸ್ಥಾನದಲ್ಲಿ ಎಷ್ಟು ಅಪಪ್ರಚಾರ ಮಾಡಿದರೂ ಅಲ್ಲಿ ಎಲ್ಲ ತೃಪ್ತಿಕರವಿದೆ. ಆದರೆ ಜಾತಿ ವೈಷಮ್ಯದಿಂದ ಗೊಂದಲಗಳಾಗುತ್ತಿವೆಯೆಂದು ಅವರು ಹೇಳಿದುದಕ್ಕೆ ಮತ್ಸರಿಸುವುದು ಬೇಡ. ಆದರೆ ಬ್ರಿಟಿಷರಿಗೆ ನಾನು ಸ್ಪಷ್ಟ ಹೇಳುತ್ತೇನೆ. ತಮ್ಮ ರಾಜ್ಯಘಟನೆಯನ್ನು ರಚಿಸುವಂತೆ ಇಂದು ಹಿಂದೀಯರಿಗೆ ಸಂದರ್ಭ ಕಲ್ಪಿಸಿಕೊಡಲಿ. ಅಲ್ಪಸಂಖ್ಯಾತರ ಹಕ್ಕು ಬಾಧ್ಯತೆಗಳ ರಕ್ಷಣೆಗೆ ಬಹು ಸಂಖ್ಯಾತರು ಭರವಸೆ ಕೊಡುವುದಿದ್ದರೂ ಅದಕ್ಕೆ ಅಡ್ಡಗಾಲು ಹಾಕಿ ಹೀಗೆಲ್ಲಾ ಹೇಳಿದರೆ ಅದು ಬರೆದ ನಿರ್ಬಂಧವಾಗುವುದು."

Grand Xmas Offers

15 Cash Prizes to be won from—

1st to 31st December 1939

Rs 31 to the highest purchaser at a time

14 PRIZES 2nd Rs. 25–3rd Rs. 20–4th Rs 15–5th Rs 10 & 10 prizes of Rs. 5 to the Lucky Numbers on cash Bills

Smartest Designs in piecegoods and Silk Sarees have lately received

Dont Fail to see them at—

JAYANTILAL BROS.,

CLOTH MERCHANTS,

Hampankatta, MANGALORE.

N. B.—Drawing date will be 5th January 1940 at 5.30 P. M. Sri Dr K. Vittal Shetty President, Dt. Bd Office S. K has kindly consented to present on this day.

ನಿಮ್ಮ ಜಾಹಿರಾತುಗಳನ್ನು ಸ್ವದೇಶಾಭಿಮಾನಿಗಳಿಗೆ ಕೊಡಿರಿ

ಒಂದು ಸಣ್ಣ ಕತೆ

ಹಳೆಯ ನೆನಪು

[ಕನ್ನಡಿಸಿದವರು:—ಶಬ್ದಾಸ್ ಶ್ರೀವಾಸ್ ಶ್ರೀ, ಅಧ್ಯಾಪಕ, ಬಳ್ಳಾರಿ]

ಅದೊಂದು ಸಣ್ಣ ಪಟ್ಟಣದಲ್ಲಿ ಜಾರ್ಜನಾಥ, ಒಂದು ಸಣ್ಣ ಗೃಹಪತಿ. ಎರಡಂತಸ್ತಿನ ಆ ಸುಂದರ ಮನೆಯಲ್ಲಿ ಈಗ ಯಾರೂ ವಾಸಮಾಡುತ್ತಿರುವುದಿಲ್ಲ. ಹಾಗೆಂದೂ ಅದನ್ನು ಹರಾಜಿಗೆ ಇಟ್ಟಿರುವುದೂ ಇಲ್ಲ. 'ಆದರೆ ಮಾರಿಯಾಗಿದೆ; ಬಿಟ್ಟುಬಿಡಿ!' ಎಂದು ಆ ಪಟ್ಟಣದಿಂದ ಸಂಚರಿಸುವ ಜನರು ಹೇಳುವರು. ನಕ್ಕು ಹೇಳುವುದಾದರೆ, ಅದು ಮಾರಿಯಾಗಿ ಇರುವುದಿಲ್ಲ! ಹಳೆಯ ಒಂದು ನೆನಪು ಈಗಲೂ ಆ ಮನೆಯಲ್ಲಿ ವಾಸವಾಗಿರುವುದು.

ಮನೆಗೆಗೆ ಮಾತುಬರುವುದಿಲ್ಲವೆಂದು ಅಡಿಕೆಯುತ್ತಾರೆ. ಅದರ ಮನೆಗೆಗೆ ಮಾತುಬರುತ್ತದ್ದಾದರೆ, ರಾಯಪುರದ ಆ ಮನೆಯು ಒಂದು ಸುಂದರ ಇತಿಹಾಸವನ್ನೇ ಹೇಳಬಹುದು. ಇತಿಹಾಸವು ಸುಂದರವಾಗಿರುವಂತೆ ಹೇಳಬೇಕಾಗಿಯೂ ಇರುವುದು. ಅದೇ ಮನೆಯಲ್ಲಿ ಪ್ರೇಮದ ವೇದಿಕೆಯ ಮೇಲೆ ಒಬ್ಬ ಇನ್ನೊಬ್ಬನ ವಿಜಯದ ಬಲಿಯಾಗಿರುವುದು.

ಜಾರ್ಜನು ಇನ್ನೂರು ಮಾಡುವ ಕೆಲಸದಿಂದ ತೃಪ್ತಿಪಟ್ಟಿಕೊಂಡಿದ್ದ. ಅವನಿಗೆ ತನ್ನ ಉದ್ಯೋಗದಲ್ಲಿ ಸಾಕಷ್ಟು ಆದಾಯವಿತ್ತು. ಆದರೆ ಕೇವಲ ಹಣ ಸಂಪಾದನೆಯಿಂದ ಯಾರೂ ಈ ಪ್ರಪಂಚದಲ್ಲಿ ಸುಖಿಗಾಗಿ ಕಾಲಯಾಪನೆ ಮಾಡುವುದಿಲ್ಲ. ಹಾಗಿದ್ದರೆ ಜಾರ್ಜನು ಏಕಾಕಿಜೀವನವನ್ನು ಸಾಗಿಸಬಹುದಾಗಿತ್ತು. ಪರಂತು ದುರ್ಭಾಗ್ಯವು ಅವನನ್ನು ಕನಿಯಂತೆ ಮುತ್ತಿಕೊಂಡಿತ್ತು. ಪ್ರೇಮಜಾಲವಲ್ಲಿ ಸಿಕ್ಕಿಸಿದ್ದು ಅವನ ಭವಿಷ್ಯ ಜೀವನವು ನಾಶಾಂಧಗಾರದಿಂದ ಕುಂದಿಕೊಂಡಿತು!

ಮದ್ರಾಸಿನ ಒಂದು ಸಣ್ಣ ಓಣಿಯಲ್ಲಿ ಜಾರ್ಜನು ಈಗಲೂ ತನ್ನ ಆಯುಸ್ಸಿನ ಕೊನೆಯ ದಿನಗಳನ್ನು ಒಂದು ಸಣ್ಣ ಗುಡಿಸಲಿನಲ್ಲಿ ಕ್ಷಯರೋಗದಿಂದ ಪೀಡಿತನಾಗಿ ಕಳೆಯುತ್ತಾ ಇದ್ದಾನೆ. ರಾಯಪುರದ ಆ ದೊಡ್ಡ ಮನೆಯೂ ಅವನ ಹೆಸರಿನಲ್ಲಿಯೇ ಇದೆ. ಆದರೆ ಆ ಮನೆಯಲ್ಲಿ ವಾಸವಾಗಿದ್ದು ಆರೋಗ್ಯಲಾಭ ಮಾಡಿಕೊಳ್ಳಬೇಕೆಂಬ ಇಚ್ಛೆಯೂ ಅವನಿಗುಂಟಾಗುವುದಿಲ್ಲ. ಗುಡಿಸಲಿನಲ್ಲಿ ಕೂತುಕೊಂಡು ದಿನದಿನವೂ ಮುಪ್ಪು ಸೆಟ್ಟಿ ಮುಟ್ಟಿದ, ವೃದ್ಧಕಾಯನಾದ, ಯುವಕರು ಆ ಮಾರ್ಗದಿಂದ ಹೋಗುತ್ತಿರುವಾಗಲೆಲ್ಲ, ಅವರನ್ನು ಕಂಡು ಮನಸ್ಸಿನಲ್ಲಿಯೇ ನಮಸ್ಕರಿಸುವನು. ಒಂದು ದಿನ ಅವರಂತೆ ಜಾರ್ಜನೂ ದೃಢಕಾಯನಾಗಿದ್ದನು. ಆರೋಗ್ಯ ಶಾಲಿಗಳಾದ ಆದರ್ಶ ಯುವಕರಲ್ಲಿ ಅವನ ಗಣನೀಯನಾಗಿದ್ದನು!

ಆಗ ಅವನು ಬೆಂಗಳೂರಿನಲ್ಲಿ ವಾಸವಾಗಿದ್ದ ಆ ದಿನಗಳಲ್ಲಿ ಬೆಂಗಳೂರಿನಲ್ಲಿ ಜಗಜ್ಜಟ್ಟಿಗಳ ಒಂದು ದೊಡ್ಡ ಕಾಳಗದ ವ್ಯವಸ್ಥೆ ಏರ್ಪಟ್ಟಿತ್ತು. ಪ್ರಪಂಚದ ಹೆಸರುಹೊಂದಿದ ಜಟ್ಟಿಗಳೆಲ್ಲರೂ ಅಲ್ಲಿ ಬಂದು ಕೂಡಿದ್ದರು. ಪ್ರತಿದಿನವೂ ಸಾಯಂಕಾಲ ಬೆಂಗಳೂರಿನ ದೊಡ್ಡ ಮೈದಾನದಲ್ಲಿ ಈ ಜಟ್ಟಿಗಳಿಗೆ ಸ್ಪರ್ಧೆಯು ನಡೆಯುತ್ತಿತ್ತು. ಪ್ರತಿದಿನದ ಸ್ಪರ್ಧೆಗಾಗಿ ಹೋಗುತ್ತಿದ್ದ. ದೃಢಕಾಯರನ್ನು ಆರೋಗ್ಯವಂತರನ್ನು ನೋಡುವಾಗ ಅವನಿಗೆ ಪರಮ ಸಂತೋಷವಾಗುತ್ತಿತ್ತು.

ಆ ದಿನಗಳಲ್ಲಿಯೇ, ಜಟ್ಟಿ ಕಾಳಗವು ನಡೆಯುತ್ತಿದ್ದ ಆ ಮೈದಾನದಲ್ಲಿ ಜಾರ್ಜನಿಗೂ ಎಗ್ಗರ್ಟನಿಗೂ ಸ್ನೇಹವಾಯಿತು. ಎಗ್ಗರ್ಟ ಒಬ್ಬ ಪ್ರಸಿದ್ಧನಾದ ಜಟ್ಟಿ. ಅವನೂ ಕಾಳಗದಲ್ಲಿ ಭಾಗತೆಗೆದುಕೊಂಡು ಹೆಸರು ಪಡೆಯಬಲ್ಲೆ ಬಂದಿದ್ದ. ಒಂದು ಸಾಯಂಕಾಲ ಎಗ್ಗರ್ಟನು ಒಬ್ಬ ಹುಡುಗಿಯ ಸಮೇತ ಅವನ ಕಾಳಗದಲ್ಲಿ ಭಾಗವಹಿಸಲಿಕ್ಕೆ ಬಂದಿದ್ದ. ಒಂದು ಸಾಯಂಕಾಲ ಎಗ್ಗರ್ಟನು ಒಬ್ಬ ಹುಡುಗಿಯ ಸುಂದರಿಯಾದ ತಲುಗೆಯನ್ನು ಕರೆತಂದು, ಜಾರ್ಜನಿಗೆ ಅವಳ ಪರಿಚಯ ಮಾಡಿಕೊಟ್ಟನು. 'ನೋಡು ಜಾರ್ಜ, ಇವಳು ಎಮಿಲಿ ನನ್ನ ಪ್ರಾಣದ ಗೆಳತಿ. ಪ್ರತಿದಿನವೂ ನಾನಿಗೆ ಕಾಳಗ ನೋಡಲಿಕ್ಕೆ ಬರುವುದನ್ನು ಕಂಡು, ನೀನು ಯಾರು ಎಂದು ನನ್ನನ್ನು ಪ್ರಶ್ನಿಸಿದಳು. ಅಷ್ಟರಲ್ಲಿ ನಿನ್ನ ಅವಳ ಸ್ನೇಹ ಮಾಡಿಸಲಿಕ್ಕೆ ಇಲ್ಲಿಗೆ ಬಂದೆ' ಎಂದನು.

ಎಮಿಲಿಯ ಪರಿಚಯ ಮಾಡಿಕೊಟ್ಟ ಎಗ್ಗರ್ಟನು ಅವಳನ್ನು ಅಲ್ಲಿಯೇ ಬಿಟ್ಟು ತನ್ನ ಕೆಲಸಕ್ಕೆ ಹೊರಟುಹೋದ. ದಿನಗಳು ಕಳೆದಂತೆ ಜಾರ್ಜ ಮತ್ತು ಎಮಿಲಿಯ ಸ್ನೇಹಸಂಬಂಧವು ಬೆಳೆಯುತ್ತ ಬಂದಿತು. ಒಂದು ದಿನ ಅವರಿಬ್ಬರು ಆಟದ ಮೈದಾನದಲ್ಲಿ ಅಕ್ಕಪಕ್ಕಗಳಲ್ಲಿ ಕುಳಿತುಕೊಂಡಿದ್ದರು. ಮಾತಿಗೆ ಮಾತು ಬಂದು— 'ಎಮಿಲಿ' ಎಗ್ಗರ್ಟನು ನಿನ್ನನ್ನು ಎಷ್ಟು ಪ್ರೀತಿಸುತ್ತಿರಬಹುದೋ? ನಿನ್ನ ಪ್ರೇಮ ಸಾಗರದಲ್ಲಿ ಅತನು ಮುಳುಗಿ ದಿಕ್ಕುತ್ತ ಬಹಳ ಕಷ್ಟಪಡುತ್ತಿದ್ದಾನೆ ಜಾರ್ಜ!' ಎಂದು ಜಾರ್ಜನು ಅಂದ, ಅವಳ ಮೋರೆಯನ್ನೇ ದಿಟ್ಟಿಸಿ ನೋಡಿದ. ಈ ಮಾತುಗಳನ್ನು ಅವಳು ಕೇಳಿದಳೋ, ಇಲ್ಲವೋ, ಆ ಲಾವಣ್ಯವತಿಯ ಮುಖಾರವಿಂದವು ಸಸುಬೆಳಗಿನ ಸೂರ್ಯಬಿಂಬದಂತೆ ರಕ್ತವರ್ಣವಾಗಿ ಕೊಳಿಸಿತು. ಅವಳು ಮೆಲ್ಲಗೆ ಪಿಸುಗುಟ್ಟಿದಳು— 'ಇಲ್ಲ, ಜಾರ್ಜ' ಅವನಿಗೂ ನನ್ನ ಅಕ್ಕನಿಗೂ ವಿವಾಹ ಸಂಬಂಧವಾಗುವ ಇಚ್ಛೆಯವಾಗಿದೆ ನಾನು ಈಗಲೂ ಸಕಾತಿಯಾಗಿದ್ದೆನು ಒಬ್ಬ ಯೋಗ್ಯ... ಅವಳು ಅಲ್ಲಿಂದ ಮಾತನ್ನು ಮುಗಿಸಿದಳು.

ಪ್ರತಿದಿನವೂ ಹೀಗೆ ಜಾರ್ಜ ಮತ್ತು ಎಮಿಲಿ ಆಟದ ಮೈದಾನದಲ್ಲಿ ಸೇರುತ್ತಿದ್ದರು. ಒಟ್ಟಿಗೆ ಕೂತು ಸಂಭಾಷಣೆ ಮಾಡುತ್ತ ಸಾಯಂಕಾಲದ ಸಮಯವನ್ನು ಕಳೆಯುತ್ತಿದ್ದರು. ಒಂದು ದಿನ ಜಾರ್ಜನಲ್ಲಿ ಪ್ರೇಮ ಸಂಚಾರವಾದಂತೆ ಅವನಿಗೆ ಭಾಸವಾಯಿತು. ಅದೇ ದಿನದಲ್ಲಿಗೆ ಎಮಿಲಿ ಬಂದು, 'ಜಾರ್ಜ, ಇವತ್ತು ನಾವು ಜಟ್ಟಿಕಾಳಗಕ್ಕೆ ಹೋಗುವುದು ಬೇಡ ಸಿನೇಮಕ್ಕೆ ಹೋಗೋಣ!' ಎಂದಳು. ಜಾರ್ಜನಿಗೆ ಕೂಡ ಅಂತಹದೇ ಒಂದು ಸಂದರ್ಭವು ಬೇಕಾಗಿತ್ತು. ಅವನು ತಕ್ಷಣವೆ ಒಪ್ಪಿಕೊಂಡ. ಅವನು ಅಳಿಯನ್ನು ಎಷ್ಟು ಪ್ರೀತಿಸುತ್ತಿರುವನೆಂದು ಹೇಳಲಿಕ್ಕೆ ಸಿನೇಮ ಮಂದಿರದ ಕಡೆ ಹೋದರು. ಇಬ್ಬರೂ ಅಕ್ಕಪಕ್ಕಗಳಲ್ಲಿ ಕೂತಿದ್ದರು. ದೀಪಗಳೆಲ್ಲ ನಂದಿದುವು. ಸುತ್ತಲೂ ಅಂಧಕಾರವು ಮುಚ್ಚಿಕೊಂಡಿತು. ಚಿತ್ರಪ್ರದರ್ಶನಕ್ಕೆ ಆರಂಭವಾಯಿತು. ಎಮಿಲಿ ಮೆಲ್ಲಗೆ ತನ್ನ ಬೆಳ್ಳಗೆಯನ್ನು ಜಾರ್ಜನ ಹೊಡೆಯ ಪ್ರದೇಶದಲ್ಲಿ ಇಟ್ಟು 'ಜಾರ್ಜ, ಇವತ್ತು ನಾವು ಸಿನೇಮಕ್ಕೆ ಬಂದದ್ದೆಂದು ಗೊತ್ತಾಗಿದೆಯೆ? ಒಮ್ಮೊಮ್ಮೆ ನಾನು ಒಬ್ಬಳೇ ಆಗಿ ಇರಬೇಕೆಂದು ನನಗೆ ಬಹಳ ದಿನಗಳ ಆಸೆಯಿತ್ತು. ಅದೀಗ ಪೂರ್ಣವಾಯಿತು'.

'ಇವಳು ಎಮಿಲಿ, ನನ್ನ ಪ್ರಾಣದ ಗೆಳತಿ ಎಂದು ಎಗ್ಗರ್ಟ ಹೇಳಿದ.

ಎಮಿಲಿಯ ಆ ಮಾತುಗಳನ್ನು ಕೇಳಿ ಜಾರ್ಜನು ತನ್ನನ್ನು ತಾನು ಮರೆತು ಬಿಟ್ಟ, 'ಎಮಿಲಿ' ನೀನು ನನ್ನ ಹೃದಯೇಶ್ವರಿ ಕಾನು ಮನಸಿನ ಅರಾಧ್ಯದೇವತೆ" ಎಂದು ಮಾತುಗಳು ಅವನ ಬಾಯಿಯಿಂದ ಹೊರಗಿ ಹೋಯಿತು. ಒಂದುವೇ 'ಎಮಿಲಿ' ನನ್ನ ಮತ್ತು' ಇವನ್ನು ಕೇಳಲಿಕ್ಕೆ ನಾನಿಷ್ಟು ದಿನಗಳಿಂದ ಕಾದಿದ್ದೆ" ಎಂದು ಅವನು ಹೇಳಿದ.

ಹೀಗೆ ಜಾರ್ಜನ ಹಲವು ದಿನಗಳು ಸುಖದಿಂದ ಕಳೆದುವು. ಎಮಿಲಿ ಯಾವಾಗಲೂ ಅವನ ಸಂಗಾತಿಯಾಗಿ ಇರುತ್ತಿದ್ದಳು. ಅವಳು ಅವನ ಜೀವನ ಸರ್ವಸ್ವವಾಗಿ ಪರಿಣಮಿಸಿದ್ದಳು. ಅವಳಿಲ್ಲದೆ ಒಂದು ಕ್ಷಣವನ್ನಾದರೂ ಕಳೆಯುವುದು ಜಾರ್ಜನಿಗೆ ಕಠಿಣವಾಗುತ್ತಿತ್ತು.

ಒಟ್ಟಿಗಾಗಿ ಪ್ರತಿಯೊಬ್ಬರೂ ಕೊಡಿಸುವ ದಿನಗಳು ಕಳೆದುಹೋದುವು. ಒಂದು ದಿನ ಹೊರದಾ ಜಾರ್ಜನು ಕೆಲಸ ಮಾಡಿಕೊಂಡಿದ್ದ ಇನ್ಸೂರೆನ್ಸ್ ಕಂಪನಿಯ ಮೇಲಧಿಕಾರಿ ಆಟ ಹೋಟಲಿಕ್ಕೆ ಬಂದಿದ್ದ. ಜಾರ್ಜನ ಆಕೆಯನ್ನು ನೋಡಿ ಕಿಚ್ಚ ಸಂತುಷ್ಟನಾದನೆಂತೆ ಎಮಿಲಿಯ ಪರಿಚಯ ಮಾಡಿಸಿದ. ಮೇಲಧಿಕಾರಿ ಸಂಭಾಷಣೆ ಮಾಡುವುದರಲ್ಲಿ ಬಹಳ ಚತುರನಾಗಿದ್ದ. ಅವನು ಆಟ ಹೋಟಲಿಕ್ಕೆ ಬರಬೇಕಾಯಿತು?—ಸಮಯವೆಲ್ಲವೂ ಎಮಿಲಿಯೊಡನೆ ಸಂಭಾಷಣೆಯಲ್ಲಿ ಕಳೆದು ಹೋಯಿತು.

ಮರುದಿನ ಜಟ್ಟಿಕಾಳಗವು ಕೊನೆಗೊಂಡು ಜಟ್ಟಿಗಳ ವಿದಾಯಕೂಟವು ನಡೆಯುವುದರಲ್ಲಿತ್ತು. ಆ ದಿನ ಸಾಯಂಕಾಲ ಪ್ರತಿದಿನ ಬರುವ ದಕ್ಕಿಂತ ಒಂದು ತಾಸಿನ ಮೊದಲೇ ಮೈದಾನಕ್ಕೆ ಬರಬೇಕೆಂದು ಜಾರ್ಜನು ಎಮಿಲಿಯೊಡನೆ ಪ್ರತಿಜ್ಞೆ ಮಾಡಿದ್ದ. ಅವನು ಆ ದಿನ ನಿಶ್ಚಿತ ಸಮಯಕ್ಕೆ ಬಂದು ವಿಶಾಲವಾದ್ದರಿಂದ ತನ್ನ ಕೋಣೆಯಲ್ಲಿ ಹೋದಿದ್ದ. ಅದರೆ ಎಮಿಲಿ ಇಲ್ಲ. ಅವನು ಅವಳ ಪರಿಚಿತ್ತಯಲ್ಲಿ ಅಲ್ಲಿಯೇ ಒಂದು ಕುರ್ಚಿಯ ಮೇಲೆ ಕುಳಿತು, ವಿರಹದ ವೇದನೆಯನ್ನು ಮರೆಯುವುದಕ್ಕೋಸ್ಕರ ಒಂದು ಸಿಂಗರೆಟ್ ಹಾಕಿಕೆ ಆರಂಭ ಕೊಟ್ಟ. ಅದು ಬರುವುದರೊಳಗೆ ಅವಳ ಕೋಣೆಯಿಂದ ಎಮಿಲಿಯ ಮಧುರ ಮಾತುಗಳು ಕೇಳಿ ಬಂದುವು:

'ಟೋಮಿ' ನನಗೆಂಥ ಪೆಡ್ಡ' ನಿನ್ನ ಅಕ್ಕನಿಗೂ ಜಾರ್ಜನಿಗೂ ವಿವಾಹ ನಿಶ್ಚಯವಾಗಿರುವುದು ನಿನಗೆ ಗೊತ್ತಿಲ್ಲವೆ? ನಾನೀಗ ಒಬ್ಬಂಟಿಗಳಾಗಿದ್ದೆನು ಮಾತಾಡೋ ಮೊಲ್ಯದು .

ಇನ್ನೂದು ಕಂಠೆಯು ತನ್ನ ಮಾಲಕಿಯೊಡನೆ ಎಮಿಲಿ ಮೊತನಾಡಿದ ಈ ಮಾತುಗಳನ್ನು ಕೇಳಿ ಜಾರ್ಜನು ಅವಾಕ್ಕಾದನು. ಅವನು ಕಾಫಿ ಬಟ್ಟಲನ್ನು ಅಲ್ಲಿಯೇ ಒಗೆದು ಪಲಾಯನಮಾಡಿದ. ಅಂದಿನಿಂದ ಪಾಪದ ಜಾರ್ಜ ರಾಯಪುರದ ಆ ದೊಡ್ಡ ಮನೆಯಲ್ಲಿ ಇಷ್ಟುದಿನ ಕಾಲಿಟ್ಟಿಲ್ಲ. ಎಮಿಲಿಯೊಡನೆ ವಿವಾಹವಾದ ನಂತರ ಅಲ್ಲಿ ಉಳಿಯೊಂದು ಸ್ವರ್ಗಸುಖವನ್ನು ಅನುಭವಿಸಬೇಕೆಂದು ಜಾರ್ಜನು ಆ ಮನೆಯನ್ನು ಕ್ರಯಕ್ಕೆ ತೆಗೆದುಕೊಂಡಿದ್ದ. ಜಾರ್ಜನು ಎಮಿಲಿಯನ್ನು ಪ್ರೀತಿಸುತ್ತಿದ್ದಂತೆ ಅವಳೂ ಜಾರ್ಜನ ನ್ನ ತಾದಮನಗಳನ್ನು ಕೊಟ್ಟು ಪ್ರೀತಿಸುತ್ತಿದ್ದಳಾದರೆ ಎಷ್ಟು ಚೆನ್ನಾಗಿತ್ತು' ಆದರೆ ಒಬ್ಬೊಬ್ಬನನ್ನೇ ಪ್ರೀತಿಸುವುದೆ ಎಂದು ಕೇವಲ ಮಾಡುವುದು ಅವಳ ಅಭ್ಯಾಸವಾಗಿ ಹೋಗಿತ್ತು. ಎಗ್ಗರ್ಟನಿಗೆ, ಜಾರ್ಜನಿಂತ, ಅವಳು ಟೋಮಿಯನ್ನು ತನ್ನ ಬಳಿಗೆ ಕಾಳೆಯಿಂದಾಗಳು. ಹಿಂದೆ ಮುಂದೆ ಮತ್ತೆಷ್ಟು ಮಂದಿ ಅವಳು ಹಾಗೆ ಮೋಸ ಕೊಟ್ಟಿದ್ದ ಹೋಲ್ಯೇನು ಭಿಕ್ಷೆಯ ಕೈಯನ್ನು ಮುಂದಕ್ಕೆ ಎಂದು ಹಿಂದಕ್ಕೆ ತೆಗೆದಿದ್ದಾಳೋ ಯೇ ವರಿಗೆ ಗೊತ್ತು.

ಹೀಗಾಗಿ ಜಾರ್ಜನು ತನ್ನ ಸರ್ವಸ್ವವನ್ನು ಅವಳಿಗೆ ಪ್ರೇಮದ ಭಿಕ್ಷೆಯನ್ನು ಬೇಡಿದ್ದನೋ, ಆ ಎಮಿಲಿಯೊಂದಿಗೆ ಇನ್ನಾದ ಒಂದು ಮತ್ತೆಷ್ಟರನ್ನು ವಿವಾಹವಾಗುವ ಇಚ್ಛೆಯನ್ನು ಪ್ರಕಟಿಸಿದಳು. ಅವನ ಹೃದಯವು ಒಮ್ಮೆಗೆ ಪ್ರೇಮದಾಟದ ವೇದಿಕೆಯಲ್ಲಿ ಅಧಃಪತನವಾಗಿತ್ತು. ಮುಂದೆ ಜಾರ್ಜನ ದೌರ್ಭಾಗ್ಯದ ದಿನಗಳು ಅರಂಭವಾದುವು. ಎಮಿಲಿಯ ಸಂಸ್ಕಾರಕ್ಕೆಲ್ಲ ಅವನು ಒಂದೊಂದು ದಿನವನ್ನು ಒಂದೊಂದು ಯುಗದಂತೆ ಕಳೆಯತೊಡಗಿದ. ಮತ್ತೆ ಶ್ವಾಯರೋಗವೂ ಒಂದು ಅವನನ್ನು ನೆಗ್ಗಲೆಯಂತೆ ಕಿತ್ತತೊಡಗಿತು. ಇನ್ನೆಯೇ ಅವನು ತನ್ನ ಹೊನೆಯ ಶ್ವಾಸವನ್ನು ಬಿಟ್ಟನು. ಸಾಯುವಾಗ ತಾನು ಅವಳಿಗೆಯಲ್ಲಿದ್ದೆ. ಅವನು ಹೇಳಿದ,'ಮಿತ್ರ ನನ್ನಂತೆ ಎಮಿಲಿಯನ್ನು ಪ್ರೀತಿಸಿದ್ದರೆ!' ಅವನ ನಿಟ್ಟುಸಿರುಗಳಿಗೆ ನನ್ನದೂ ಒಂದು ನಿಟ್ಟುಸಿರು ಎನ್ನುವ ಈ ಸಂತಸ್ತ ಸಾಹಿತ್ಯಗಳಲ್ಲಿ ಬೆರೆತ ಹಾಯಿತು.

ಈಗ ರಾಯಪುರದ ಜಾರ್ಜನ ಆ ಮನೆಯು ಹಳೆಯ ನೆನಪಿನ ಪುಣ್ಯ ಸ್ಮಾರಕವಾಗಿ ಉಳಿದು ಬಂದಿದೆ. ಎಷ್ಟರ ಹಣ ಆ ಮನೆಯ ಅಲ್ಲಿ ಇರುವುದೋ ಅಷ್ಟರ ತನಕ ಈ ಪ್ರವಂತದ ಸ್ಮರಣೆಯು ಪ್ರೇಮಿಗಳ ಹೃದಯದ ಪ್ರೇಮವನ್ನು ಜಾಗರೂಕಗೊಳಿಸುವುದರಲ್ಲಿ ಸಂದೇಹವಿಲ್ಲ.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಾಜಪೂತ್ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಸ್ಟರ್ಡ್)

ಬಹಳ ಸಾರಿ ಹತಿಯುವುದೇನೆಂದರೆ ಹೆಂಗಸರಿಗೆ ಅತಿಯು ಅಕಸ್ಮಿಯಾಗುತ್ತಿದೆ. ಒಂದು ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ಮಕ್ಕಳನ್ನು ಹತಿಯುವುದು ಇಷ್ಟವಾಗದೇಇರುವುದು ಅಲ್ಲದೆ ಸುವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮಹಿಳೆಗೆ ಯಾವ ಸೇವಂತೆ ಹುರುಪಿರುವುದು. ತಂಬಾಕ್ಕೆ ವಿಷಕ ಅಂಶವಾಗಿದೆ ಸರ್ಕಾರದವರು ಪೂರ್ಣವಾಗಿ ಕೂಡಲೇ ಗರ್ಭಾಶಯ ಸಂಬಂಧವು. ಕಡಿಮೆಯಾದ ಮತ್ತು ಮಾಸಿಕದ ಸಂಬಂಧವುಳ್ಳವು. ಮೊದಲೇ ಈ ಚೂರ್ಣ ಉಪಯೋಗಿಸಿ ನಿಶ್ಚಿತ ಬೇಕಾದಿ, ಮನ್ನು ಸರ್ಟಿಫಿಕೆಟ್ಸ್ ಪ್ರೈಸ್ ಎಲ್. ಸಿ. ಪಿ. ಎಸ್. ಕೆಳವಾಮಾಡಿದ್ದು, ಇದೇ ಈ ಚೂರ್ಣದಿಂದ ಯಾರಿ ಕಡಿಮೆ ಅಂಶವು ಹೆಚ್ಚು ಗರ್ಭಾಶಯವೂ ಅನುವಿಲ್ಲ. ಕೂಡಲೆ ಸಂಬಂಧದ ಪ್ರಶ್ನೆಗಳಿ ಕಾಯಿದೆ. ೪-೩-೩

ಕೆ. ಕೆ.

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೋ. ಮಿರಜ್ S. M. C.

ನಿಮ್ಮನಿಮ್ಮೊಳಗೆ ನೀವು ರಾಜಿಮಾಡಿಕೊಳ್ಳಿರಿ

ಆದರೆ ಅದಕ್ಕೆ ಅಡ್ಡಗಾಲು ಹಾಕುವುದಿಲ್ಲವೆಂಬ ಭರವಸೆ ಬೇಕು

ಜಟ್ಲೆಂಡರ ಉದ್ಗಾರಕ್ಕೆ ರಾಜಾಜಿಯವರ ಉತ್ತರ



ಜಟ್ಲೆಂಡ್ ಸಾಹೇಬರ ಉದ್ಗಾರ!

ಮೊನ್ನೆ ಲಾರ್ಡ್ ಸಭೆಯಲ್ಲಿ ಮಾತನಾಡುತ್ತಾ ಭಾರತಮಂತ್ರಿಗಳಾದ ಜಟ್ಲೆಂಡ್ ಸಾಹೇಬರು ಈ ರೀತಿ ಉದ್ಗರಿಸಿದರು.

'ಜರ್ಮನರು ತಮ್ಮ ರೇಡಿಯೋ ಹಾಗೂ ಇನ್ನಿತರ ಉಪಕರಣಗಳ ಮೂಲಕ ಬ್ರಿಟಿಷ್ ವಿರುದ್ಧ ಹಿಂದೂಸ್ಥಾನದಲ್ಲಿ ಅಪಪ್ರಚಾರ ಮಾಡುತ್ತಿದ್ದರೂ, ಅಲ್ಲಿನ ರಾಜರು ಮತ್ತು ಜನರು ನಾಜೀ ವಿರೋಧವನ್ನೇ ವ್ಯಕ್ತಪಡಿಸುತ್ತಿದ್ದಾರೆ. ಹಿಂದೂದೇಶದ ರಾಜ ಪ್ರಜೆಗಳು ಯುದ್ಧಕ್ಕೆಂದು ಅನೇಕ ಕಾಣಿಕೆ ಸಹಾಯಗಳನ್ನು ಕೊಟ್ಟಿದ್ದಾರೆ. ಅನೇಕ ರಾಜರು ತಾವು ಕೊಟ್ಟಿದ್ದರಿಂದ ಸಂತುಷ್ಟರಾಗದೆ ಯುದ್ಧ ಮುಗಿಯುವ ವರೆಗೆ ಸ್ವಲ್ಪ ಸ್ವಲ್ಪ ಕೊಡುತ್ತಾ ಬರುವ ವಾಗ್ದಾನವಿತ್ತಿರುವರು!

ಹಿಂದೂಸ್ಥಾನದ ಪರಿಸ್ಥಿತಿ?

ಪಂಜಾಬ್, ಬಂಗಾಳ ಮತ್ತು ಸಿಂಧ ಪ್ರಾಂತಗಳಲ್ಲಿ ಪ್ರಾಂತಿಕ ಸರಕಾರಗಳು ಸುಸೂತ್ರವಾಗಿ ಸಾಗಿವೆ ಕಾಂಗ್ರೆಸು ಸರಕಾರಗಳಿದ್ದ ಉಳಿದ ಏಳು ಪ್ರಾಂತಗಳ ಆಡಳಿತವನ್ನು ಗವರ್ನರರು ವಹಿಸಿಕೊಂಡಿರುವರು. ಅದರಿಂದಾಗಿ ಹಿಂದೂಸ್ಥಾನದ ಪ್ರಗತಿಯ ಗಡಿಯಾರದ ಮುಳ್ಳು ಇರೆ ವರ್ಷಕ್ಕೆ ಹಿಂದಕ್ಕೆ ಅಂದರೆ ಮಿಂಟೋ ಸುಧಾರಣೆ ಕಾಲಕ್ಕೆ ಸರಿಯುತ್ತ ಮಂತ್ರಿಮಂಡಳಗಳು ಹೋಗಿ ಗವರ್ನರರು ಅಧಿಕಾರ ಸ್ವೀಕಾರ ಮಾಡಿದ ಮೇಲೆ ಏನೂ ಗೊಂದಲವಾಗಿಲ್ಲ. ಗವರ್ನರರು ಒಪ್ಪಿದ ಹಿಂದಿನ ಸುಧಾರಣೆಗಳನ್ನು ಕಾರ್ಯರೂಪಕ್ಕೆ ಇಳಿಸಲಾಗುತ್ತದೆ.

ಹಿಂದೂ-ಮುಸ್ಲಿಂ ತುತೂರಿ!

'ಹಿಂದೂಸ್ಥಾನದ ರಾಜಕೀಯ ಬಿಕ್ಕಟ್ಟಿಗೆ ಹಿಂದೂ ಮುಸ್ಲಿಂ ಮತಭೇದಗಳು ಮುಖ್ಯ ಕಾರಣ. ಕಾಂಗ್ರೆಸಿನ ಬೇಡಿಕೆಯನ್ನು ಕೊಡಲು ಜಾತಿ ಮತ ಭೇದವು ಅಡ್ಡಿ ಬರುವುದಿಲ್ಲವೆಂದು ಕಾಂಗ್ರೆಸು ವರ್ಕಿಂಗ್ ಕಮಿಟಿಯು ಹೇಳುತ್ತದೆ. ಆದರೆ ಸಾರ್ವಭೌಮ ಸರಕಾರವು ಅದನ್ನು ಒಪ್ಪುವುದಿಲ್ಲ. ಅಲ್ಪಸಂಖ್ಯಾಕರ ಸಮ್ಮತಿ ಸಿಗದ ಯಾವ ಸುಧಾರಣೆಯೂ ಅಲ್ಲಿ ಕಾರ್ಯರೂಪಕ್ಕೆ ಬರುವುದಿಲ್ಲ. ಹಿಂದೂಸ್ಥಾನದಲ್ಲಿ ಅಲ್ಪಸಂಖ್ಯಾಕರ ವಿಷಯಕ್ಕೆ ಐತಿಹಾಸಿಕ ಮಹತ್ವವಿದೆ. ಜಗತ್ತಿನ ಇಂದಿನ ವ್ಯಥೆಯಕ್ಕೆ ಯೂರೋಪಿನ ಅಲ್ಪಸಂಖ್ಯಾಕರೇ ಕಾರಣ.

ರಾಜ್ಯ ಘಟನಾಸಮಿತಿ

'ಮಹಾತ್ಮಾಜಿಯವರು ಸೂಚಿಸಿದ ರಾಜ್ಯ ಘಟನಾಸಮಿತಿಗೆ ನಮ್ಮ ಸಮ್ಮತಿಯಿದೆ. ಆದರೆ ಅಲ್ಪಸಂಖ್ಯಾಕರ ಒಪ್ಪಿಗೆ ಸಿಗಬೇಕು. ಕಾಂಗ್ರೆಸು ಲೀಗುಗಳಿಗೆ ಒಪ್ಪಂದ ಮಾಡಲು ವೈಸರಾಯರು ಬಹಳ ಯತ್ನಿಸಿದರು.

ವಿಮೋಚನೆ ದಿನ ಬೇಡ

'ಕಾಂಗ್ರೆಸು ಮಂತ್ರಿಮಂಡಳಗಳು ರಾಜಿನಾಮೆಯಿತ್ತುದರ ಸಂತೋಷಸೂಚನೆಗೆ ವಿಮೋಚನೆಯ ದಿನವನ್ನೊಳರಿಸಬೇಕೆಂದು ಮುಸ್ಲಿಂಲೀಗು ಪ್ರಕಟಿಸಿದ ಆದರೆ ಜಿನ್ನಾ ನೆಹರುಗಳಲ್ಲಿ ಒಪ್ಪಂದದ ಮಾತುಕತೆಯಾರಂಭವಾಗಲಿರುವುದರಿಂದ ಎರಡು ಮಂಗಡದವರೂ ತಾತ್ಕಾಲಿಕ ಒಪ್ಪಂದ ಮಾಡಿಕೊಳ್ಳುವುದು ಅವಶ್ಯವಾಗಿದೆ ಶಾಸನ ಸಭೆಗಳಲ್ಲಿ ತತ್ವ ಪ್ರಧಾನ್ಯಕ್ಕಿಂತ ಜಾತಿ ಪ್ರಾಧಾನ್ಯ ಪಕ್ಷಗಳಿದ್ದರೆ ಪ್ರಜಾಸತ್ತಾತೆಯು ಯಶಸ್ವಿಯಾಗಲಾರದು. ಹಿಂದೂಸ್ಥಾನದ ರಕ್ಷಣೆ, ಅಲ್ಲಿನ ರಾಜರು, ಹಿಂದೂಸ್ಥಾನವನ್ನು ಊರ್ಜಿತ ಸ್ಥಿತಿಗೆ ತಂದ ನಮ್ಮ ಜನರು, ಇವರ ಸಲುವಾಗಿ ನಾವು ಮಾಡತಕ್ಕ ಕಾರ್ಯ ಸಮಸ್ಯೆಗಳಿವೆ. ಆದರೆ ಈಗ ಅಲ್ಪಸಂಖ್ಯಾಕ ಸಮಸ್ಯೆಯೇ ಮಹತ್ವವಾದುದು

ಜಿಟ್ಲೆಂಡರಿಗೆ ರಾಜಾಜಿಯವರ ಉತ್ತರ

ಜಿಟ್ಲೆಂಡರ ಲಾರ್ಡ್ಸ್ ಭಾಷಣಕ್ಕೆ ಉತ್ತರ ಕೊಡುತ್ತಾ ರಾಜಾಜಿಯವರು ಈ ರೀತಿ ಹೇಳಿದರು.—

ಜಾತಿ ಪ್ರಾಧಾನ್ಯ ಮಂಗಡಗಳಿರುವವರೆಗೆ ಪ್ರಜಾಸತ್ತಾತ್ಮಕ ಸಂಸ್ಥೆಗಳು ಯಶಸ್ವಿಯಾಗಲಾರವು ಎಂದು ಜಿಟ್ಲೆಂಡ ಸಾಹೇಬರು ಹೇಳಿದುದನ್ನು ಕೇಳಿ ನನಗೆ ಆನಂದವಾಗಿದೆ ಜಾತಿಭೇಧವನ್ನುಬೆಳೆಸಿದ ಮುಂದೆ ಬ್ರಿಟಿಷರು ನ್ಯಾಯಧೋರಣೆಯನ್ನು ವಹಿಸುವರೆಂದು ಇದು ಸೂಚಿಸುತ್ತದೆ.

'ಬ್ರಿಟಿಷರು ಇಂದು ಸಮ್ಮಗಿರಬಾರದು ಹಿಂದೀಯರು ತಮ್ಮ ತಮ್ಮಲ್ಲಿಯೇ ಒಪ್ಪಂದ ಮಾಡಿಕೊಳ್ಳಬೇಕೆಂದೂ ಅವರನ್ನು ಒತ್ತಾಯ ಮಾಡಲಾರೆವೆಂದೂ ಜಿಟ್ಲೆಂಡ್ ಸಾಹೇಬರು ಹೇಳಿದ್ದಾರೆ ಮಹಾತ್ಮಾಜಿಯವರಿಗೂ ಇದೇ ಬೇಕಾಗಿದೆ ಆದರೆ ಅವರು ಮಾಡಿಕೊಂಡ ಒಪ್ಪಂದದಂತೆ ತಾವು ನಡೆಯುವೆವೆಂದು ಬ್ರಿಟಿಷರು ಮಾತು ಕೊಡದಿದ್ದರೆ ಅದರಿಂದ ಪ್ರಯೋಜನವಾಗಲಾರದು ಅಲ್ಪಸಂಖ್ಯಾಕರಿಗೆ ತೃಪ್ತಿಯಾಗದೆ ರಾಜ್ಯ ಘಟನಾ ಸಮಿತಿಯನ್ನು ಕರೆಯಲಾರೆವೆಂದು ಅವರು ಹೇಳಿರುವರು. ಎಲ್ಲಾ ಪ್ರತಿನಿಧಿಗಳನ್ನು ಕರೆದು ನಿಮಗೆ ನಿಮಗೆ ತೃಪ್ತಿಯಾದ್ದಂತೆ ಒಪ್ಪಂದ ಮಾಡಿಕೊಳ್ಳಿರೆಂದು ಹೇಳುವ ಬದಲು ಒಪ್ಪಂದ ಮಾಡಿಕೊಳ್ಳದಿದ್ದರೆ ಯಲಾರೆವೆಂದು ಹೇಳಿ ಮಹತ್ವದ ವಿಷಯವನ್ನು ಮರೆಮಾಡುತ್ತಿರುವರು.

ಸತ್ಯಾಗ್ರಹವನ್ನು ಆರಂಭಿಸುವ ಮೊದಲು, ಯೋಗ್ಯರೀತಿಯ ಒಪ್ಪಂದಕ್ಕೆ ಕಾಂಗ್ರೆಸು ತಯಾರಿದೆ ಎಂಬ ನಿರ್ಣಯವನ್ನು ಜಿಟ್ಲೆಂಡ್ ಸಾಹೇಬರು ಸಮರ್ಥಿಸಿದ್ದು ಆನಂದದ ವಿಷಯ ಆದುದರಿಂದ ಹಿಂದೂಸ್ಥಾನದ ಸಮಸ್ಯೆಯನ್ನು ಬಗೆಹರಿಸಲು ರಾಜ್ಯಘಟನಾ ಸಮಿತಿಯನ್ನು ಬ್ರಿಟಿಷ್ ಸರಕಾರವು ಕರೆಯ ವುದೆಂದು ಹಾರೈಸಬಹುದೆ?

'ಗವರ್ನರರು ಅಧಿಕಾರ ಸ್ವೀಕಾರ ಮಾಡಿದ ಮೇಲೆ, ಕಾಂಗ್ರೆಸು ಸರಕಾರಗಳ ಹಿಂದಿನ ಯೋಜನೆಗಳನ್ನೂ ನೂತ್ಯಸ ಮಾಡಿಲ್ಲವೆಂದು ಅವರು ಹೇಳಿದ್ದಾರೆ. ಅವರು ನುಡಿದಂತೆ ನಡಯಲಿ ಮದ್ಯಪಾನ ನಿಷೇಧ ಮಾಡಿದ ಮೇಲೆ, ಅದೇ ಬದಲಾಗಿ ಸರಕಾರಕ್ಕೆ ಬೇರೆ ಉತ್ಪತ್ತಿಯನ್ನೂ ಕಾಂಗ್ರೆಸು ಮಂತ್ರಿಮಂಡಲವು ಸೂಚಿಸಿ ಕೊಟ್ಟಿದೆ ಆದ್ದರಿಂದ ಮದ್ಯಪಾನ ನಿಷೇಧವನ್ನು ಮುಂದುವರಿಸ ವುದರಲ್ಲಿ ಏನೂ ತೊಂದರೆಯಿಲ್ಲ

ಟೊಳ್ಳುಮಾತು ಬೇಡ

ಜರ್ಮನರು ಹಿಂದೂಸ್ಥಾನದಲ್ಲಿ ಎಷ್ಟು ಅಪಪ್ರಚಾರ ಮಾಡಿದರೂ ಅಲ್ಲಿ ಎಲ್ಲ ತೃಪ್ತಿಕರವಿದೆ ಆದರೆ ಜಾತಿ ವೈಷಮ್ಯದಿಂದ ಗೊಂದಲಗಳಾಗುತ್ತಿವೆಯೆಂದು ಅವರು ಹೇಳಿದುದಕ್ಕೆ ಮತ್ಸರಿಸುವುದು ಬೇಡ ಆದರೆ ಬ್ರಿಟಿಷರಿಗೆ ನಾನಿಷ್ಟು ಹೇಳುತ್ತೇನೆ ತಮ್ಮ ರಾಜ್ಯಘಟನೆಯನ್ನು ರಚಿಸುವಂತೆ ಇಂದು ಹಿಂದೀಯರಿಗೆ ಸಂದರ್ಭ ಕಲ್ಪಿಸಿಕೊಡಲಿ. ಅಲ್ಪಸಂಖ್ಯಾಕರ ಹಕ್ಕುಬಾಧ್ಯತೆಗಳ ರಕ್ಷಣೆಗೆ ಬಹು ಸಂಖ್ಯಾಕರು ಭರವಸೆ ಕೊಡುವುದಿದ್ದರೂ ಅದಕ್ಕೆ ಅಡ್ಡಗಾಲು ಹಾಕಿ ಹೀಗೆಲ್ಲಾ ಹೇಳಿದರೆ ಅದು ಬರಿದೆ ವಿಡಂಬನವಾಗುವುದು '

Grand Xmas Offers

15 Cash Prizes to be won from—

1st to 31st December 1939

Rs. 31 to the highest purchaser at a time

14 PRIZES 2nd Rs 25–3rd Rs. 20–4thRs 15–5th Rs 10 & 10 prizes of Rs. 5 to the Lucky Numbers on cash Bills

Smartest Designs in piecegoods and Silk Sarees have lately received

Dont Fail to see them at—

JAYANTILAL BROS.,

CLOTH MERCHANTS,

Hampankatta, MANGALORE

N. B.—Drawing date will be 5th January 1940 at 5 30 P M. Sjt Dr K Vittal Shetty President, Dt. Bd Office S. K. has kindly consented to present on this day.

ನಿಮ್ಮ ಜಾಹಿರಾತುಗಳನ್ನು ಸ್ವದೇಶಾಭಿಮಾನಿಗೆನೇ ಕೊಡಿರಿ!

ರಾಯಪುರದ ಜನನಿಬಿಡವಾದ ರಾಜಮಾರ್ಗದ ಒಂದು ಪಕ್ಕದಲ್ಲಿ ನಿರ್ಜನವಾದ ಒಂದು ಭವ್ಯ ಗೃಹವಿದೆ. ಎರಡಂತಸ್ತಿನ ಆ ಸುಂದರ ಭವನದಲ್ಲಿ ಈಗ ಯಾರೂ ವಾಸಿಸುತ್ತಿರುವುದಿಲ್ಲ. ಹಾಗೆಂದೂ ಅದನ್ನು ಹರಾಜಿಗೆ ಇಟ್ಟಿರುವುದಾಗಲೀ ಇಲ್ಲ. 'ಅದು ಖಾಲಿಯಾಗಿದೆ, ಆಶ್ಚರ್ಯ!' ಎಂದು ಆ ಮಾರ್ಗದಿಂದ ಸಂಚರಿಸುವ ಜನರು ಹೇಳುವರು. ಸತ್ಯ ಹೇಳುವುದಾದರೆ, ಅದು ಖಾಲಿಯಾಗಿ ಇರುವುದಿಲ್ಲ! ಹಳೆಯ ಒಂದು ನೆನಪು ಈಗಲೂ ಆ ಮನೆಯಲ್ಲಿ ವಾಸವಾಗಿರುವುದು

ಮನೆಗಳಿಗೆ ಮಾತು ಬರುವುದಿಲ್ಲವೆಂದು ಆಡಿಕೊಳ್ಳುತ್ತಾರೆ. ಆದರೆ ಮನೆಗಳಿಗೆ ಮಾತು ಬರುತ್ತಿದ್ದುದಾದರೆ, ರಾಯಪುರದ ಆ ಮನೆಯು ಒಂದು ಸುಂದರ ಇತಿಹಾಸವನ್ನೇ ಹೇಳಬಹುದು.

ಇತಿಹಾಸವು ಸುಂದರವಾಗಿರುವಂತೆ ಬೇಸರಿಕೆವಾಗಿಯೂ ಇರುವುದು ಅದೇ ಮನೆಲ್ಲಿ, ಪ್ರೇಮದ ವೇದಿಕೆಯ ಮೇಲೆ ಒಬ್ಬ ಇನ್ನೊರೆನ್ನ ಬಲಿಯಾಯಿತು

ಜಾರ್ಜನು ಇನ್ನೂರು ಮಾರುದ ಕೆಲಸದಲ್ಲಿ ಪ್ರಾಸಿಲ್ಲಿಜೀವನ ಮಾಡಿಕೊಂಡಿದ್ದ ಅವನಿಗೆ ತನ್ನ ಉದ್ಯೋಗದಲ್ಲಿ ಸಾಕಷ್ಟು ಆದಾಯವಿತ್ತು ಆದರೆ ಕೇವಲ ಹಣ ಸಂಪಾದನೆಯಿಂದ ಯಾರೂ ಈ ಪ್ರಪಂಚದಲ್ಲಿ ಸುಖಿಗಳಾಗಿ ಕಾಲಯಾಪನೆ ಮಾಡುವುದಿಲ್ಲ ಹಾಗಿದ್ದರೆ ಜಾರ್ಜನು ಸುಖಜೀವನವನ್ನು ಸಾಗಿಸಬಹುದಾಗಿತ್ತು ಪರಂತು ದುರ್ಭಾಗ್ಯವು ಅವನನ್ನು ಶನಿಯಂತೆ ಮುತ್ತಿಕೊಂಡಿತ್ತು ಪ್ರೇಮಜಾಲದಲ್ಲಿ ಸಿಕ್ಕಿಬಿದ್ದು ಅವನ ಭವಿಷ್ಯ ಜೀವನವು ಗಾಢಾಂಧಕಾರದಿಂದ ತುಂಬಿಕೊಂಡಿತು!

ಮದ್ರಾಸಿನ ಒಂದು ಸಣ್ಣ ಹೋಟೆಯಲ್ಲಿ ಜಾರ್ಜನು ಈಗಲೂ ತನ್ನ ಆಯುಸ್ಸಿನ ಕೊನೆಯ ದಿನಗಳನ್ನು ಒಂದು ಸಣ್ಣ ಗುಡಿಸಲಿನಲ್ಲಿ ಕ್ಷಯರೋಗದಿಂದ ಪೀಡಿತನಾಗಿ ಕಳೆಯುತ್ತ ಇದ್ದಾನೆ ರಾಯಪುರದ ಆ ದೊಡ್ಡ ಮನೆಯಾ ಅವನ ಹೆಸರಿನಲ್ಲಿಯೇ ಇದೆ ಆದರೆ ಆ ಮನೆಯಲ್ಲಿ ವಾಸವಾಗಿದ್ದು ಆರೋಗ್ಯಲಾಭ ಮಾಡಿಕೊಳ್ಳಬೇಕೆಂಬ ಇಚ್ಛೆಯೂ ಅವನಿಗುಂಟಾಗುವುದಿಲ್ಲ. ಗುಡಿಸಲಿನಲ್ಲಿ ಕೂತುಕೊಂಡು ದಿನದಿನವೂ ಜಾರ್ಜನು ಗಟ್ಟಿಮುಟ್ಟಾದ ದೃಢಕಾಯರಾದ, ಯುವಕರು ಆ ಮಾರ್ಗದಿಂದ ಹೋಗುತ್ತಿರುವಾಗಲೆಲ್ಲ, ಅವರನ್ನು ಕಂಡು ಮನಸ್ಸಿನಲ್ಲಿಯೇ ನಮಸ್ಕರಿಸುವನು ಒಂದು ದಿನ ಅವರಂತೆ ಜಾರ್ಜನೂ ದೃಢಕಾಯನಾಗಿದ್ದನು ಆರೋಗ್ಯಶಾಲಿಗಳಾದ ಆದರ್ಶ ಯುವಕರಲ್ಲಿ ಅವನ ಗಣನೀಯನಾಗಿದ್ದನು!

ಆಗ ಅವನು ಬೆಂಗಳೂರಿನಲ್ಲಿ ವಾಸವಾಗಿದ್ದ ಆ ದಿನಗಳಲ್ಲಿ ,ಬೆಂಗಳೂರಿನಲ್ಲಿ ಜಗಜಟ್ಟಿಗಳ ಒಂದು ದೊಡ್ಡ ಕಾಳಗದ ವ್ಯವಸ್ಥೆ ಆಗಿತ್ತು. ಪ್ರೇಕ್ಷಣದ ಹೆಸರುಹೊಂದಿದ ಜಟ್ಟಿಗಳೆಲ್ಲರೂ ಅಲ್ಲಿ ಬಂದು ಕೂಡಿದ್ದರು ಪ್ರತಿದಿನವೂ ಸಾಯಂಕಾಲ ಬೆಂಗಳೂರಿನ ದೊಡ್ಡ ಮೈದಾನಿನಲ್ಲಿ ಈ ಜಟ್ಟಿಗಳಿಗೆ ಸ್ಪರ್ಧೆಯು ನಡೆಯುತ್ತಿತ್ತು ಪ್ರತಿದಿನದ ಸ್ಪರ್ಧೆಗಳು ಪೇಕ್ಷಕನಾಗಿ ಹೋಗುತ್ತಿದ್ದ ದೃಢಕಾಯರನ್ನು ಆರೋಗ್ಯವಂತರನ್ನು ನೋಡುವಾಗ ಅವನಿಗೆ ಪರಮ ಸಂತೋಷವಾಗುತ್ತಿತ್ತು.

ಆ ದಿನಗಳಲ್ಲಿಯೇ, ಜಟ್ಟಿ ಕಾಳಗವು ನಡೆಯುತ್ತಿದ್ದ ಆ ಮೈದಾನಿನಲ್ಲಿ ಜಾರ್ಜನಿಗೂ ಎಗ್ಬರ್ಟನಿಗೂ ಸ್ನೇಹವಾಯಿತು, ಎಗ್ಬರ್ಟ ಒಬ್ಬ ಪ್ರಸಿದ್ಧನಾದ ಜಟ್ಟಿ . ಅವನೂ ಕಾಳಗದಲ್ಲಿ ಭಾಗತೆಗೆದುಕೊಂಡು ಹೆಸರು ಪಡೆಯಲಿಕ್ಕೆ ಬಂದಿದ್ದ ಒಂದು ಸಾಯಂಕಾಲ ಎಗ್ಬರ್ಟನು ಒಬ್ಬ ಪರಮ ಸುಂದರಿಯಾದ ತರುಣಿಯನ್ನು ಕರಕೊಂಡು, ಜಾರ್ಜನಿಗೆ ಅವಳ ಪರಿಚಯ ಮಾಡಿಕೊಡುತ್ತ, 'ನೋಡು ಜಾರ್ಜ, ಇವಳು ಎಮಿಲಿ ನನ್ನ ಪ್ರಾಣದ ಗೆಳತಿ ಪ್ರತಿದಿನವೂ ನೀನು ಕಾಳಗ ನೋಡಲಿಕ್ಕೆ ಬರುವುದನ್ನು ಕಂಡು, ನೀನು ಯಾರು ಎಂದು ನನ್ನನ್ನು ಪ್ರಶ್ನಿಸಿದಳು. ಆದ್ದರಿಂದ ನಿನ್ನ ಅವಳ ಸ್ನೇಹ ಮಾಡಿಸಲಿಕ್ಕೆ ಇಲ್ಲಿಗೆ ಬಂದೆ' ಎಂದನು.

ಎಮಿಲಿಯ ಪರಿಚಯ ಮಾಡಿಕೊಟ್ಟ ಎಗ್ಬರ್ಟನು ಅವಳನ್ನು ಅಲ್ಲಿಯೇ ಬಿಟ್ಟು ತನ್ನ ಕೆಲಸಕ್ಕೆ ಹೊರಟುಹೋದ. ದಿನಗಳು ಕಳೆದಂತೆ ಜಾರ್ಜ ಮತ್ತು ಎಮಿಲಿಯ ಸ್ನೇಹಸಂಬಂಧವು ಬೆಳೆಯುತ್ತ ಬಂದಿತು. ಒಂದು ದಿನ ಅವರಿಬ್ಬರು ಆಟದ ಮೈದಾನಿನಲ್ಲಿ ಅಕ್ಕಪಕ್ಕಗಳಲ್ಲಿ ಕುಳಿತುಕೊಂಡಿದ್ದರು. ಮಾತಿಗೆ ಮಾತು ಬಂದು— 'ಎಮಿಲಿ' ಎಗ್ಬರ್ಟನು ನಿನ್ನನ್ನು ಎಷ್ಟು ಪ್ರೀತಿಸುತ್ತಿರಬಹುದೋ? ನಿನ್ನ ಪ್ರೇಮ ಸಾಗರದಲ್ಲಿ ಅತನು ಮುಳುಗಿ ಏಳುತ್ತ ಬಹಳ ಕಷ್ಟಪಡುತ್ತಿದ್ದಾನೆ ಪಾಪ!' ಎಂದು ಜಾರ್ಜನು ಅಡಿ, ಅವಳ ಮೋರೆಯನ್ನೇ ದಿಟ್ಟಿಸಿ ನೋಡಿದ ಈ ಮಾತುಗಳನ್ನು ಅವಳು ಕೇಳಿದಳೋ, ಇಲ್ಲವೋ, ಆ ಲಾವಣ್ಯವತಿಯ ಮುಖಾರವಿಂದವು ಪಸುಬೆಳಗಿನ ಸೂರ್ಯಬಿಂಬದಂತೆ ರಕ್ತವರ್ಣವಾಗಿ ಶೋಭಿಸಿತು ಅವಳು ಮೆಲ್ಲಗೆ ಪಿಸುಗುಟ್ಟಿದಳು— 'ಇಲ್ಲ, ಜಾರ್ಜ! ಅವನಿಗೂ ನನ್ನ ಅಕ್ಕನಿಗೂ ಮದುವೆ ಸಂಬಂಧವಾಗುವ ನಿಶ್ಚಯವಾಗಿರುವೆನು ಒಬ್ಬ ತೋಗ್ಯನು ಅವಳು ಅಲ್ಲಿಗೇ ಮಾತನ್ನು ಮುಗಿಸಿದಳು

ಪ್ರತಿದಿನವೂ ಹೀಗೆ ಜಾರ್ಜ ಮತ್ತು ಎಮಿಲಿ ಆಟದ ಮೈದಾನಿನಲ್ಲಿ ಸೇರುತಿದ್ದರು ಒಟ್ಟೊಟ್ಟಿಗೆ ಕೂತು ಸರಸಸಲ್ಲಾಪ ಮಾಡುತ್ತ ಸಾಯಂಕಾಲದ ಸಮಯವನ್ನು ಕಳೆಯುತ್ತಿದ್ದರು ಒಂದು ದಿನ ಜಾರ್ಜನಲ್ಲಿ ಪ್ರೇಮ ಸಂಚಾರವಾದಂತೆ ಅವನಿಗೆ ಭಾಸವಾಯಿತು ಅದೇ ದಿನ ಬೆಳಗೆ ಎಮಿಲಿ ಒಂದು, ಜಾರ್ಜ, ಇವತ್ತು ನಾವು ಜಟ್ಟಿಕಾಳಗಕ್ಕೆ ಹೋಗುವುದು ಬೇಡ ನೀನೆಮ್ಮಕ್ಕೆ ಹೋಗೋಣ!' ಎಂದಳು ಜಾರ್ಜನಿಗೆ ಕೂಡ ಅಂತಹದೇ ಒಂದು ಸಂದರ್ಭವು ಬೇಕಾಗಿತ್ತು. ಅವನು ಶಕರಾರು ಮಾಡದೆ ಒಪ್ಪಿಕೊಂಡ. ಅವನು ಆಳೆಯನ್ನು ಎಷ್ಟು ಪ್ರೀತಿಸುತ್ತಿರುವನೆಂದು ಹೇಳಲಿಕ್ಕೆ ನಿನೆಮ ಮಂದಿರವು ಅನುಕೂಲ ಸ್ಥಾನವಾಗಿತ್ತು

ಸಾಯಂಕಾಲ ಇಬ್ಬರೂ ನಿನೇಮ ಮಂದಿರಕ್ಕೆ ಹೋದರು. ಇಬ್ಬರೂ ಅಕ್ಕಪಕ್ಕಗಳಲ್ಲಿ ಕೂತಿದ್ದರು ದೀಪಗಳಿಲ್ಲ ನಂದಿದುವು ಸುತ್ತಲೂ ಅಂಧಕಾರವು ಮುಚ್ಚಿಕೊಂಡಿತು ಚಿತ್ರಪ್ರದರ್ಶನಕ್ಕೆ ಆರಂಭವಾಯಿತು ಎಮಿಲಿ ಮೆಲ್ಲಗೆ ತನ್ನ ಬೆಲ್ಲಕೈಯನ್ನು ಜಾರ್ಜನ ತೊಡೆಯ ಪ್ರದೇಶದಲ್ಲಿ ಇಟ್ಟು 'ಜಾರ್ಜ, ಇವತ್ತು ನಾವು ನಿನೇಮಕ್ಕೆ ಬಂದವೆಂದು ಗೊತ್ತಾಗಿದೆಯೆ? ನಿನ್ನೊಡನೆ ನಾನು ಒಬ್ಬಳೇ ಆಗಿ ಇರಬೇಕೆಂದು ನನಗೆ ಬಹಳ ದಿನಗಳ ಆಸೆಯಿತ್ತು ಅದೀಗ ಪೂರ್ಣವಾಯಿತು'

'ಇವಳು ಎಮಿಲಿ, ನನ್ನ ಪ್ರಾಣದ ಗೆಳತಿ' ಎಂದು ಎಗ್ಬರ್ಟ ಹೇಳಿದ

ಎಮಿಲಿಯ ಆ ಮಾತುಗಳನ್ನು ಕೇಳಿ ಜಾರ್ಜನು ತನ್ನನ್ನು ತಾನು ಮರೆತು ಬಿಟ್ಟು, 'ಎಮಿಲಿ' ನೀನು ನನ್ನ ಹೃದಯೇಶ್ವರಿ ಕನಸು ಮನಸಿನ ಆರಾಧ್ಯದೇವತೆ!' ಎಂಬ ಮಾತುಗಳು ಅವನ ಬಾಯಿಯಿಂದ ತಾನಾಗಿ ಹೊರಟು ಬಂದುವು 'ಎಮಿಲಿ' ನನ್ನ ಮತ್ತು' ಇದನ್ನು ಹೇಳಲಿಕ್ಕೆ ನಾನಿಷ್ಟು ದಿನಗಳಿಂದ ಕಾದಿದ್ದೆ' ಎಂದು ಅನೆನು ಹೇಳಿದ

ಹೀಗೆ ಜಾರ್ಜನ ಹಲವು ದಿನಗಳು ಸುಖದಿಂದ ಕಳೆದುವು ಎಮಿಲಿ ಯಾವಾಗಲೂ ಅವನ ಸಂಗಾತಿಯಾಗಿ ಇರುತ್ತಿದ್ದಳು. ಅವಳು ಅವನ ಜೀವನ ಸರ್ವಸ್ವವಾಗಿ ಪರಿಣಮಿಸಿದ್ದಳು ಅವಳಿಲ್ಲದೆ ಒಂದು ಕ್ಷಣವನ್ನಾದರೂ ಕಳೆಯುವುದು ಜಾರ್ಜನಿಗೆ ಕಠಿಣವಾಗುತ್ತಿತ್ತು

ಜಟ್ಟಿಕಾಳಗವು ನಡೆಯುತ್ತಿದ್ದ ಕೊನೆಯ ದಿನಗಳು ಹತ್ತಿರವಾದುವು. ಒಂದು ದಿನ ಮೊದಲು ಜಾರ್ಜನು ಕೆಲಸ ಮಾಡಿಕೊಂಡಿದ್ದ ಇನ್ನೂರು ಕಂಪೆನಿಯ ಮಾಲಿಕನೂ ಆಟ ನೋಡಲಿಕ್ಕೆ ಬಂದಿದ್ದ. ಜಾರ್ಜನು ಅವನನ್ನು ನೋಡಿ ಶಿಷ್ಟ ಸಂಪ್ರದಾಯದಂತೆ ಅತನಿಗೆ ಎಮಿಲಿಳ ಪರಿಚಯ ಮಾಡಿಸಿದ. ಮಾಲಿಕನು ಸಂಭಾಷಣ ಮಾಡುವುದರಲ್ಲಿ ಮಹಾ ಚತುರನಾಗಿದ್ದ. ಅವನು ಆಟ ನೋಡಲಿಕ್ಕೆ ಬಂದದ್ದೇನು?—ಸಮಯವೆಲ್ಲವೂ ಎಮಿಲಿಯೊಡನೆ ಸಂಭಾಷಣೆಯಲ್ಲಿ ಕಳೆದು ಹೋಯಿತು.

ಮರುದಿನ ಜಟ್ಟಿಕಾಳಗವು ಕೊನೆಗೊಂಡು ಜಟ್ಟಿಗಳ ವಿದಾಯಕೂಟವು ಪಡೆಯುವುದರಲ್ಲಿತ್ತು ಆ ದಿನ ಸಾಯಂಕಾಲ ಪ್ರತಿದಿನ ಬರುವುದಕ್ಕಿಂತ ಒಂದು ತಾಸಿನ ಮೊದಲೇ ಮೈದಾನಿಗೆ ಬರಬೇಕೆಂದು ಜಾರ್ಜನು ಎಮಿಲಿಯೊಡನೆ ನಿಶ್ಚಯ ಮಾಡಿದ್ದ. ಅವನು ಆ ದಿನ ನಿಶ್ಚಿತ ಸಮಯಕ್ಕೆ ಬಂದು ವಿಶ್ರಾಂತಗೃಹದ, ತನ್ನ ಕೋಣೆಯಲ್ಲಿ ನೋಡಿದ ಆದರೆ ಎಮಿಲಿ ಇಲ್ಲ. ಅವನು ಅವಳ ನಿರೀಕ್ಷೆಯಲ್ಲಿ ಅಲ್ಲಿಯೇ ಒಂದು ಕುರ್ಚಿಯ ಮೇಲೆ ಕುಳಿತು, ವಿಶಹದ ವೇದನೆಯನ್ನು ಮರೆಯುವುದಕ್ಕೋಸ್ಕರ ಒಂದು ಸಿಂಗಲ್ ಕಾಫಿಗೆ ಆರ್ಡರು ಕೊಟ್ಟ ಅದು ಬರುವುದರೊಳಗೆ ಆಚೆ ಕೋಣೆಯಿಂದ ಎಮಿಲಿಯ ಮಧುರ ಮಾತುಗಳು ಕೇಳಿ ಬಂದುವು

'ಟೋಮಿ' ನೀನೆಂಥ ಹೆಣ್ಣು' ನನ್ನ ಅಕ್ಕನಿಗೂ ಜಾರ್ಜನಿಗೂ ವಿವಾಹ ನಿಶ್ಚಯವಾಗಿರುವುದು ನಿನಗೆ ಗೊತ್ತಿಲ್ಲವೆ? ನಾನಾಗ ಒಬ್ಬಂಟಿಗಳಾಗಿರುವೆನು ಯಾರಾದರೂ ಬಂದಾರು

ಇನ್ನೂರು ಕಂಪೆನಿಯ ತನ್ನ ಮಾಲಿಕನೊಡನೆ ಎಮಿಲಿ ಮಾತನಾಡಿದ ಈ ಮಾತುಗಳನ್ನು ಕೇಳಿ ಜಾರ್ಜನು ಅವಾಕ್ಕಾದನು ಅವನು ಕಾಫಿ ಬಟ್ಟಲನ್ನು ಅಲ್ಲಿಯೇ ಬಗೆದು ಪಲಾಯನಮಾಡಿದ ಅಂದಿನಿಂದ ಪಾಪದ ಜಾರ್ಜ ರಾಯಪುರದ ಆ ದೊಡ್ಡ ಮನೆಯಲ್ಲಿ ಇಷ್ಟರ ತನಕ ಕಾಲಿಟ್ಟಿಲ್ಲ ಎಮಿಲಿಯೊಡನೆ ವಿವಾಹವಾದ ನಂತರ ಅಲ್ಲಿ ಆ ಳೆಕೊಂಡು ಸ್ವರ್ಗಸುಖವನ್ನು ಅನುಭವಿಸಬೇಕೆಂದು ಜಾರ್ಜನು ಆ ಮನೆಯನ್ನು ಕ್ರಯಕ್ಕೆ ತೆಗೆದುಕೊಂಡಿದ್ದ ಜಾರ್ಜನು ಎಮಿಲಿಯನ್ನು ಪ್ರೀತಿಸುತಿದ್ದಂತೆ ಅವಳೂ ಜಾರ್ಜ ನನ್ನ ತನುಮನಗಳನ್ನು ಕೊಟ್ಟು ಪ್ರೀತಿಸುತಿದ್ದಳಾದರೆ ಎಷ್ಟು ವೆನ್ನಾಗುತಿತ್ತು' ಆದರೆ ಒಬ್ಬೊಬ್ಬನನ್ನೇ ಪ್ರೀತಿಸುವಂತೆ ನಟಿಸಿ ಜೀವನ ಮಾಡುವುದು ಅವಳ ಅಭ್ಯಾಸವಾಗಿ ಕೋಗಿತ್ತು. ಎಗ್ಬರ್ಟನೆಂತೆ, ಜಾರ್ಜನಂತೆ, ಅವಳು ಟೋಮಿಯನ್ನೂ ತನ್ನ ಬಲೆಗೆ ಹಾಕಿಕೊಂಡಳು ಹಿಂದೆ ಮುಂದೆ ಮತ್ತನ್ನು ಮಂದಿಗೆ ಅವಳು ಹಾಗೆ ಮೋಸ ಕೊಟ್ಟಿದ್ದಳೋ ಪ್ರೇಮ ಭಿಕ್ಷೆಯ ಕೈಯನ್ನು ಮುಂದಕ್ಕೆ ಚಾಚಿ ಹಿಂದಕ್ಕೆ ತೆಗೆದಿದ್ದಾಳೋ ದೇವರಿಗೇ ಗೊತ್ತು'

ಯಾರಿಗಾಗಿ ಜಾರ್ಜನು ತನ್ನ ಸರ್ವಸ್ವವನ್ನೂ ಅರ್ಪಿಸಿ ಪ್ರೇಮದ ಭಿಕ್ಷೆಯನ್ನು ಬೇಡಿದ್ದನೋ, ಆ ಎಮಿಲಿಯಿಂದ ನಿರಾಶನಾದ ಅತ ಮತ್ತೆ ಊರನ್ನೂ ವಿವಾಹವಾಗುವ ಇಚ್ಛೆಯನ್ನು ಪ್ರಕಟಿಸಲಿಲ್ಲ. ಅವನ ಹೃದಯವು ಒಮ್ಮೆಗೆ ಪ್ರೇಮದೌಲಿ ವೇದಿಕೆಯಲ್ಲಿ ಅರ್ಪಿತವಾಗಿತ್ತು ಮುಂದೆ ಜಾರ್ಜನ ದೌರ್ಭಾಗ್ಯದ ದಿನಗಳು ಆರಂಭವಾದುವು ಎಮಿಲಿಯ ಸಂಸ್ಮರಣೆಯಲ್ಲಿ ಅವನು ಒಂದೊಂದು ದಿನವನ್ನು ಒಂದೊಂದು ಯುಗದಂತೆ ಕಳೆಯತೊಗಿದ. ಮತ್ತೆ ಕ್ಷಯರೋಗವು ಬಂದು ಅವನನ್ನು ಗೆದ್ದಲೆಯಂತೆ ತಿನ್ನತೊಡಗಿತು ನಿನ್ನೆಯೇ ಅವನು ತನ್ನ ಕೊನೆಯ ಶ್ವಾಸವನ್ನು ಬಿಟ್ಟನು. ಸಾಯುವಾಗ ನಾನು ಅವನ ಬಳಿಯಲ್ಲಿದ್ದೆ ಅವನು ಹೇಳಿದ'ಮಿಶ್ರ ನನ್ನಂತೆ ಎಮಿಲಿಯೂ ಪ್ರೀತಿಸಿದ್ದರೆ!' ಅವನ ಬಿಟ್ಟು ಸಿರಿನೊಂದಿಗೆ ನನ್ನದೂ ಒಂದು ಬಿಟ್ಟುಸಿರು ಎದ್ದು ಆ ಸಂತಪ್ತ ವಾತಾವರಣದಲ್ಲಿ ವಿಲೀನವಾಯಿತು.

ಈಗ ರಾಯಪುರದ ಜಾರ್ಜನ ಆ ಮನೆಯ ಹಳೆಯ ನೆನಪಿನ ಪುಣ್ಯ ಸ್ಮಾರಕವಾಗಿ ಉಳಿದು ಬಂದಿದೆ ಎಷ್ಟರ ತನಕ ಆ ಮನೆಯು ಇರುವುದೋ ಅಷ್ಟರ ತನಕ ಈ ದುರಂತ ಸ್ಮರಣೆಯು ಪ್ರೇಮಿಗಳ ಕೋಮಲ ಹೃದಯವನ್ನು ಕಾತರಗೊಳಿಸುವುದರಲ್ಲಿ ಸಂದೇಹವಿಲ್ಲ

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ಅತಿಶಯ ಅಶಕ್ತಿಯಾಗುತ್ತದೆ ಒಬ್ಬ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣವು ಬಂದಂಗಾಗುವುದು. ಕಷಾಯಂದರೆ ಏನು ಮಾಡಿದರೂ ಸುರುವಾಗುವುದಿಲ್ಲ. ಹೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಂಬಯಿ ಸರ್ಟಿಫಿಕೆಟ್ ಡಾ. ವೈದ್ಯ ಎಲ್ ಸಿ. ಪಿ. ಎಸ್ ಕೆಳವಾಮಾಹಿತಿ, ಕಾಗೇ ಈ ಚೂರ್ಣದಿಂದ ಯಾವ ಕರದ ಅಪಾಯವೂ ಆಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿಗೆ ಕ್ರಯರೂ ೪-೦-೦

ವಿ ಪಿ

ವಿಲಾಸ, ಸಂಜೀವಿನೀ ಔಷಧಾಲಯ ಮು. ಪೊ. ಮಿರಜಿ, S. M. C.

ಸಾಮಂತ ಸ್ವರಾಜ್ಯವೋ ಸಂಪೂರ್ಣ ಸ್ವಾತಂತ್ರ್ಯವೋ?

'ಸುಲಿಗೆಗೆ ಎಡೆಯಿರುವ ಸ್ವರಾಜ್ಯಕ್ಕೆ ಒಪ್ಪಿಗೆಯಿಲ್ಲ'

—ಗಾಂಧಿಜಿಯವರ ಸ್ಪಷ್ಟೀಕರಣ—

ಯೂರೋಪಿನ ಯುದ್ಧವು ನ್ಯಾಯಕ್ಕಾಗಿಯೆ?

[ಮಹಾತ್ಮಾಗಾಂಧಿಯವರು ಸಂಪೂರ್ಣ ಸ್ವಾತಂತ್ರ್ಯವನ್ನು ಅಪೇಕ್ಷಿಸುವುದಿಲ್ಲ. ಅವರು ಸಾಮಂತ ಸ್ವರಾಜ್ಯದಿಂದ (Dominion Status) ತೃಪ್ತರು ಎಂದು ಕೆಲವರು ಉಗ್ರಗಾಮಿಗಳಿಸಿಕೊಳ್ಳುವ ತಾಳ್ಮೆಗೆಟ್ಟವರ ಟೀಕೆ. ಅದರೆ ಸತ್ಯಾಂಶವನ್ನು ಅರಿಯದೆ ಹಾಗೆ ಹೇಳುವುದು ಪ್ರಮಾದ ಗಾಂಧಿಜಿಯವರ ಮನೋಕಾಂಕ್ಷೆಯೇನೆಂಬುದರ ಈ ಲೇಖನದಲ್ಲಿ ವಿವರವಾಗಿದೆ!]

ಸುಲಿಗೆಯಾಗುತ್ತಿರುವ ದೇಶಗಳಲ್ಲಿ ಹಿಂದೂಸ್ಥಾನವೂ ಒಂದು. ಅದರ ಸ್ಥಾನಮಾನಗಳನ್ನು ದಕ್ಷಿಣ ಆಫ್ರಿಕ ಮುಂತಾದ ಸಾಮಂತ ಸ್ವರಾಜ್ಯದ ರಾಷ್ಟ್ರಗಳಿಗೆ ಹೋಲಿಸುವುದು ಸರಿಯಲ್ಲ. ಯಾಕಂದರೆ; ದಕ್ಷಿಣ ಆಫ್ರಿಕವೂ ಸುಲಿಗೆ ಯಾಗುತ್ತಿರುವ ದೇಶಗಳಲ್ಲಿ ಒಂದು. ಸುಲಿಗೆ ಮಾಡುವುದನ್ನು ಸ್ವತಂತ್ರ ಹಿಂದೂದೇಶವು ಎಂದೂ ಒಪ್ಪಲಾರದು. ಅದರ ಧ್ಯೇಯವು ಉದಾತ್ತ ಮತ್ತು ಉಚ್ಚದ್ದಿದೆ, ಹೀಗೆಂದು ಮಹಾತ್ಮಾಜಿಯವರು ಕಳೆದ ವಾರದ 'ಹರಿಜನ'ದಲ್ಲಿ 'ಸಾಮಂತ ಸ್ವರಾಜ್ಯವೋ ಸಂಪೂರ್ಣ ಸ್ವಾತಂತ್ರ್ಯವೋ' ಎಂಬ ಹೆಸರಿನ ಒಂದು ಲೇಖನದಲ್ಲಿ ಬರೆದಿರುವರು. ಆ ಲೇಖನದಲ್ಲಿ ಅವರು ಸಾಮಂತಸ್ವರಾಜ್ಯ ಮತ್ತು ಸಂಪೂರ್ಣ ಸ್ವಾತಂತ್ರ್ಯ ಇವುಗಳ ಭೇದಗಳೇನೆಂದು ವಿವರಿಸಿದ್ದಾರೆ. ಅದರ ವಿವರ ಹೀಗಿದೆ:-

'ಸಾಮಂತಸ್ವರಾಜ್ಯವು ಸಾಕೆಂದು ಮೊದಲು ಹೇಳುತ್ತಿದ್ದ ನಾನು, ಈಗ ಸಂಪೂರ್ಣ ಸ್ವಾತಂತ್ರ್ಯವನ್ನು ಕೇಳುವುದನ್ನು ನೋಡಿ ತಮಗೆ 'ಆಶ್ಚರ್ಯವಾಗುತ್ತಿದೆಯೆಂದು ಹಲವರು ಹೇಳುತ್ತಾರೆ. ಒಬ್ಬ ಇಂಗ್ಲಿಷ್ ಸ್ನೇಹಿತನು ನನಗೆ ಬರೆದ ಪತ್ರದಲ್ಲಿ ನಾನು ಹಾಗೆ ಅಭಿಪ್ರಾಯ ವ್ಯತ್ಯಾಸ ಮಾಡಿದುದರಿಂದ ತನಗೆ ಬಹಳ ಸಂಕಟವಾಗಿದೆಯೆಂದು ಬರೆದಿರುವನು. ನನ್ನ ಮೇಲೆ ಈ ರೀತಿ ಆರೋಪಿಸುವುದು ಇದೇನೂ ಹೊಸದಲ್ಲ. 'ದಕ್ಷಿಣ ಆಫ್ರಿಕದ ಸತ್ಯಾಗ್ರಹ ಕಾಲಕ್ಕೆ ಜನರಲ್ ಸ್ಮಟ್ಸರವರು ಸಹ ನನ್ನ ಮೇಲೆ ಈ ಆರೋಪ ಹೊರಿಸಿದ್ದರು. ಆದರೆ ನಾನು ಮಾಡಿದ್ದೇ ಸರಿಯೆಂದು ಮುಂದೆ ಅವರಿಗೂ ಅನಿಸಿತು.

'ನನ್ನದು ಯಾವಾಗಲೂ ರಾಜಿಯ ಸ್ವಭಾವ. ಮೈರಿಯ ಅಭಿಪ್ರಾಯಕ್ಕೆ ನಾನು ಬಲು ಬೇಗ ಒಪ್ಪುವೆನೆಂದು ನನ್ನ ಮೇಲೆ ಆರೋಪವಿದೆ.

ಸ್ವಾತಂತ್ರ್ಯದ ತಿರುಳು

'ಇಷ್ಟಾಂತೇ ಇಸವಿಯಲ್ಲಿ ನಾನು ಯರವಾಡ ಸೆರೆಮನೆಯಲ್ಲಿದ್ದಾಗ ಒಬ್ಬ ಪತ್ರಿಕೋದ್ಯಮಿಯು ನನ್ನಲ್ಲಿಗೆ ಬಂದನು, ಆ ಕಾಲದಲ್ಲಿಯೇ ನಾನು ಸ್ವಾತಂತ್ರ್ಯದ ತಿರುಳು ಎಂಬುದನ್ನು ಉಪಯೋಗ ಮಾಡಿದೆನು. ಕ್ಷಣಕ್ಷಣಕ್ಕೆ ಮಾಯವಾಗುವ ಸ್ವಾತಂತ್ರ್ಯಛಾಯೆಗಿಂತ ಅದರ ತಿರುಳೆಷ್ಟೇ ದೊರೆತರೆ ನನಗಂತೂ ಸಮಾಧಾನವಾಗುವುದೆಂದು ಆಗ ನಾನು ಹೇಳಿದೆನು. ಯುದ್ಧದ ಉದ್ದೇಶಗಳನ್ನು ವಿವರಿಸುವ ಸಮದಲ್ಲಿ ಅತ್ಯುತ್ತಮವಾದ ಸಂಪೂರ್ಣ ಸ್ವರಾಜ್ಯವೇ ನನಗೆ ಬೇಕೆಂದು ನಾನು ಹೇಳಿದ್ದು ನಿಜ. ಆದರೆ ನನ್ನ ಮೊದಲಿನ ಅಭಿಪ್ರಾಯಕ್ಕೂ ಇದಕ್ಕೂ ವಿರೋಧವೇನೂ ಇಲ್ಲ.

ಸುಲಿಗೆ ಮಾಡುವ ಸ್ವರಾಜ್ಯ?

'ದೇಶದ ಉದ್ದೇಶವನ್ನು ಕಡಿಮೆ ತರದ್ದಾಗಿ ಮಾಡಿದರೆ ನಾನು ದೇಶದ್ರೋಹಿಯಾಗುವೆನು. ಆದುದರಿಂದ ಸಾಮಂತ ಸ್ವರಾಜ್ಯವು ಸಂಪೂರ್ಣ ಸ್ವಾತಂತ್ರ್ಯಕ್ಕಿಂತ ಕಡಿಮೆ ತರಗತಿಯದ್ದಾಗಿದ್ದರೆ ನನಗೆ ಸಂಪೂರ್ಣ ಸ್ವಾತಂತ್ರ್ಯವೇ ಬೇಕು. ಆದರೆ ಅವೆರಡೂ ಒಂದೇ ತರಗತಿಯದವಾಗಿದ್ದರೆ ಅದರ ಮಾತು ಬೇರೆ. ಆ ಮೇಲೆ ಸಾಮಂತಸ್ವರಾಜ್ಯವನ್ನಾದರೂ ಹಿಂದೂದೇಶಕ್ಕೆ ಅನ್ವಯಿಸುವಾಗ ಅದರ ಅರ್ಥವೇನೆಂದು ವಿವರಣೆಮಾಡಿದ್ದೇನೆ. ಏಕೆಂದರೆ ಸಾಮಂತಸ್ವರಾಜ್ಯವು ಬಿಳಿಯ ಜನರಿಗಷ್ಟೇ ಇದೆ. ಯೂರೋಪಿಯನರಲ್ಲದವರನ್ನು ಆ ದೇಶಗಳಲ್ಲಿ ಸುಲಿಗೆ ಮಾಡಲಾಗುತ್ತದೆ. ಆದರೆ ಹಿಂದೂಸ್ಥಾನವು ಮಾತ್ರ ಅಂತಹ ಸ್ವರಾಜ್ಯಕ್ಕೆ ಒಪ್ಪದು.

ಆಶ್ರಿತರಾಜ್ಯಗಳ ಕುರಿತು ಮಹಾತ್ಮರ ಸಲಹೆ

ಮಹಾತ್ಮಾಜಿಯವರು ಒಂದು ವ್ಯಕ್ಟನೆ ಹೊರಡಿಸುತ್ತಾ ಆಶ್ರಿತರಾಜರ ಮಿತ್ರನು ನಾನಿದ್ದೇನೆ. ನಾನು ವಿಚಾರಿಸ್ತಿದ್ದ ಸ್ವತಂತ್ರ ಹಿಂದೂಸ್ಥಾನದಲ್ಲಿ ಅವರಿಗೆ ಸ್ಥಾನವಿದೆ. ಆದರೆ ಸಣ್ಣ ಸಣ್ಣ ನರೇಂದ್ರರು ತಮಗೆ ಎಂದೂ ಇರಲು ಶಕ್ಯವಿಲ್ಲದ ಅಧಿಕಾರಿಗಳನ್ನು ಪ್ರಜೆಗಳಿಗೆ ಬಿಟ್ಟುಕೊಡುವುದು ಲೇಸು. ದೊಡ್ಡ ದೊಡ್ಡ ನರೇಂದ್ರರು ಭೇಗನೇ ಉತ್ತಮ ಸುಧಾರಣೆಗಳನ್ನು ಮಾಡುವುದು ಅಗತ್ಯವೆಂದು ಕಳೆದ ವಾರದ ಹರಿಜನದಲ್ಲಿ ಬರೆಯುತ್ತಾರೆ.

ಯೂರೋಪಿನ ಯುದ್ಧದ ಕುರಿತು ಮಹಾತ್ಮರ ಅಭಿಪ್ರಾಯ

'ವಸ್ತು ಸ್ಥಿತಿಗಳನ್ನು ವಿಚಾರಿಸಿದರೆ ಯುದ್ಧವು ಇನ್ನೂ ನಡೆದಿಲ್ಲ. ಎರಡು ಪಕ್ಷದವರೂ ನಾಶಕಾರಕ ಹೊಸ ಹೊಸ ಉಪಕರಣಗಳನ್ನು ತಯಾರು ಮಾಡುತ್ತಾರೆ. ಹಾನಿಗಳನ್ನು ಇಕ್ಕಡೆಯವರೂ ತಪ್ಪಿಸುತ್ತಾರೆ. ಆದರೆ ಯುದ್ಧದಲ್ಲಿ ನೀತಿಯ ಪ್ರಶ್ನೆ ಮುಂದೆ ಬಂದಿಲ್ಲ. ನ್ಯಾಯಕ್ಕಾಗಿ ಕಾದಾಡುವುದು ಎಂಬನಿರ್ಧಾರವು ಇನ್ನೂ ಖಂಡಿತವಾಗಬೇಕಾಗಿದೆ ಅದು ಆಗದೆಇಂದಿನ ಸೆಮ.ಸ್ಯೆಗೆ ಪರಿಹಾರವಿಲ್ಲ' ಎಂದು ಮಹಾತ್ಮಾಜಿಯವರು ಹರಿಜನದಲ್ಲಿ ಒಂದು ಲೇಖನ ಬರೆದಿರುವರು.

THE

BANK OF MANGALORE LTD.,

MANGALORE

ESTD 1931

Branches:-

Mudabidri & Padubidri.

Fixed Deposits will be received at following rates of interest

For 3 months		3½%
" 6 "		4%
" 12 "		5%
" 24 "	& upwards	5½%

Interest Payable Quarterly.

Savings Bank deposit 3½% on daily balances.

All kinds of bankingbusiness transacted

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗಿಸಲ್ಪಡುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್ (ರಜಿ)

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

ನೋಟೀಸು

ಕುಂದಾಪುರ ಡಿ। ಮುನ್ಸೀಫ್ ಕೋರ್ಟಿನಲ್ಲಿ

ಕ್ರಮಸಂಖ್ಯೆ 33/1938

R. E. P. No 80/1939

1 ವಾದಿ- ಅನಂತ ನಾಯಕ, ಸುಬ್ರಾಯ ನಾಯಕರ ಮಗ, ಉಪ್ಪಿ ತಾಲೂಕು ಬಡೋಡಿ ಗ್ರಾಮದ ನಾಸ್ತಾನದಲ್ಲಿರುವವ

2 ಪ್ರತಿವಾದಿರು—1ನೇ ಪ್ರತಿವಾದಿ ವೆಂಕಟ್ರಮಣ ನಾಯಕ, ವಿಶ್ವೇಶ್ವರ ನಾಯಕರ ಮಗ, ಗುಂಡ್ಮಿ ಗ್ರಾಮ.

4ನೇ ಪ್ರತಿವಾದಿ ವೆಂಕಟಗಿರಿ ನಾವಡ, ರಾಮಚಂದ್ರ ನಾವಡರ ಮಗ, ಗುಂಡ್ಮಿ ಗ್ರಾಮ.

7ನೇ ಪ್ರತಿವಾದಿ ಪುಟ್ಟಯ್ಯ ಯನೆ ನರಶಿಂಹ ನಾಯಕ, ರಾಮಚಂದ್ರ ನಾಯಕರ ಮಗ, ಉಪ್ಪಿ ತಾಲೂಕು ಮುಡಬಡವು ಗ್ರಾಮ.

9ನೇ ಪ್ರತಿವಾದಿ ತೇರಬೀದಿ ಸುಬ್ರಾಯ, ಕೃಷ್ಣಪ್ಪಯ್ಯನವರ ಮಗ, ಗುಂಡ್ಮಿ ಗ್ರಾಮ.

10ನೇ ಪ್ರತಿವಾದಿ ನಾರಾಯಣ ಉಸ್ಸ, ಸುಬ್ಬ ಉಡ್ಡರ ಮಗ, ಗುಂಡ್ಮಿ ಗ್ರಾಮ.

13ನೇ ಪ್ರತಿವಾದಿ ಸಣ್ಣಪ್ಪಮಯ್ಯ, ನಾಗಪ್ಪಯ್ಯನವರ ಮಗ, ಗಿಳಿಯಾರ ಗ್ರಾಮದ ಪರತಟ್ಟನಲ್ಲಿರುವವ

3 ವಾದಿಯು ಮೇಲ್ಕಂಡ ಪ್ರತಿವಾದಿರು ವಗೈರೆರ ಮೇಲಿಪಡದ ಮೇಲ್ಕಂಡ ಡಿಕ್ರಿಯ ಋಣಗಳ ಬಗ್ಗೆ ಸದ್ರಿ ಡಿಕ್ರಿಯಲ್ಲಿ ಕಾಣಿಸಿದ ಆಸ್ತಿಗಳನ್ನು ಏಲಂ ಮಾಡುವರೆ ಏಲಂ ಇಸ್ತಿಹಾರು ಹಾಜರುಪಡಿಸಿದ್ದಾನೆ ಸದ್ರಿ ಏಲಂ ಇಸ್ತಿಹಾರಿನ ಕರ್ತಗಳನ್ನು ನಿಶ್ಚಯಿಸುವರೆ ತಾ. 6-1 1940ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನ್ನಗೆ ಇಟ್ಟಿದೆ. ಆ ಕುರಿತು ಆಕ್ಷೇಪ ಇದ್ದರೆ ಸದ್ರಿ ತಾರೀಕಿಗೆ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಹೇಳತಕ್ಕದ್ದು. ಇದಕ್ಕೆ ತಪ್ಪದರೆ ಸದ್ರಿ ಅಮ್ಲಜ್ಜಾರಿಯಲ್ಲಿ ಎಕ್ಸಪಾರ್ಟಿಯಾಗಿ ತೀರ್ಮಾನಿಸಲಾದೀತು.

ಮೊಕ್ಕಾಂ, ಕುಂದಾಪುರ
8-12-39

K. Narayana Shenai,
ಅರ್ಜಿದಾರವಾದಿ ಕಡೆ ವಕೀಲ.

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ತಾರೀಕು **22-12-'39**ರಿಂದ ತಾರೀಕು **31-12-'39**ರ ವರೇಗೆ!

ಸೀತಾನದಿ ಜಾನುವಾರು ಸಂತೆ

ಜಾನುವಾರುಗಳನ್ನು ಪಡಕೊಳ್ಳುವವರಿಗೆ ಇದೇ ಅತ್ಯುತ್ತಮ ಸಂದರ್ಭ!

ಕಾರ್ಕಳ ತಾಲೂಕಿನ ಸೋಮೇಶ್ವರ ಬಳಿ ಸೀತಾನದಿ ಎಂಬಲ್ಲಿ

ನಮ್ಮ ಜಿಲ್ಲೆಯ ಉಡುಪಿ, ಕುಂದಾಪುರ ಮತ್ತು ಕಾರ್ಕಳ ತಾಲೂಕಿನವರಿಗೆ ಅನುಕೂಲವಾಗುವಂತೆ ಏರ್ಪಡಿಸಿರುತ್ತದೆ.

ಪ್ರಯಾಣಿಕರಿಗೆ ಅನುಕೂಲವಾಗುವಂತೆ ಅಗತ್ಯವಿದ್ದಲ್ಲಿ ಸ್ಪೆಶ್ಯಲು ಸರ್ವಿಸು ಚಾಲು ಮಾಡುವ ಯೋಗ್ಯ ವ್ಯವಸ್ಥೆ ಮಾಡಲಾಗುವುದು.

JOINT MANAGERS,

The Combined Booking Agency, MANGALORE

The Joint-Booking Office, KODIALBAIL.

(Regd)

ಅಮೃತಾಂಜನ

ಕಲೆಬೇನೆ, ಶಿರೋಬೇನೆ ಕಾಳುಕು, ಕುತ್ತಿಗೆ, ಭುಜ, ಹಲ್ಲುಬೇನೆಗಳಿಗೂ ಎದೆನೋವು, ಪಾಯುಗಳು, ಬಾತ-ಕೊಳ್ಳುವುದು ಚೇಳು ವಿಷ ಮುಂತಾದ ಬೇನೆ, ವಕ್ಕವಾತ, ಗಾಯ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಕಜ್ಜಿ, ಹುಳುಕಡ್ಡಿ, ಸಿಕ್ಕ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲಂಟೈನ್

ಉಪಯೋಗಿಸಿರಿ

ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ತೇಜ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ, ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗೆ ಕೇ ಸಾಕು 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಿಡೇಪಿ.
P. O. Peridepi (ನೆಲ್ಲೂರು ಡಿ.)

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ--ಅವ್ವಲ್ ಶರದ ಗುಡ್ಡು ಮುಡಿಗೆ	1—13—0	1—14—0
,, ದುಯಂ ,, ,,		
,, ಅವ್ವಲ್ ಸುಗ್ಗಿ ,,		—
,, ದುಯಂ ,, ,,		—
ಅಕ್ಕಿ ಅವ್ವಲ್ ಗುಡ್ಡು ,, ಹಳ್ಳು	4—14—0	
,, ದುಯಂ ,, ,,	4—8—0	
,, ಅವ್ವಲ್ ಸುಗ್ಗಿ ,,	4—8—0	4—8—
,, ದುಯಂ ,, ,,	4—4—0	4 6—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	47—8—0	57—8—0
,, ಸಿಪ್ಪೆ ಇದ್ದದು ,,	50—0—0	60—0—0
ಕೊಬ್ಬರಿ ಆಫೀಸು ಖಂಡಿಗೆ	72—8—0	85—0—
,, ದಲ್ಲಾಸಂದಿ ,,	—	—
ತೆಂಗಿನ ಎಣ್ಣೆ ಮಣಕ್ಕೆ	5—2—0	5—8—0
ಸಿಪ್ಪೆಯಿದ್ದ ಅಡಿಕೆ 1000ಕ್ಕೆ	2—0—0	2—12—0
ಗೇರುಬೀಜ ಮುಡಿಗೆ	3—0—0	3—12—0
ಕಬ್ಬಿನ ಬೆಲ್ಲ ಖಂಡಿಗೆ	37—8—0	50—0—0
ಒಳ್ಳೇಮೆಣಸು ಹಂದ್ರಡ್ಡೇಟಿಗೆ	19—0—0	20—8 0

ತೇ. 22-12-1939 ವಾರ್ಷಿಕ ಚಂದಾರೂ. 2-0-0 ಅಂಚೆ ವೆಚ್ಚ ಸೇರಿ ರೂ.2-12-0 Regd.No.M341

ಸ್ವದೇಶಾಭಿಮಾನಿ

ಸಂಪುಟ 33] ತಾರೀಕು 22-12-1939 [ಸಂಚಿಕೆ 50

The Bombay Life Assurance Company, Ltd.

(Estd. 1908)

COMPARE

Your Life Assurance with any other property you possess

What is its Guaranteed Value

If you live-today-a few years more-when you are old?

If you die-to your family and dependants?

REMEMBER THAT

If you live, Life Insurance takes the place of your professional income during your old age

If you die, it provides your family with enough income for their maintenance and the education of your children

"BOMBAY LIFE" offers all that is best in LIFE ASSURANCE

1938 RECORD

Completed Business	Rs	14 91,000
Life Assurance Fund	Rs	1 17 69 748
Total Assets	Rs	1 31,28 998

To insure or to represent it pays you to consult

KOCHIKAR BROTHERS LTD.,

MADRAS BRANCH SECRETARIES,

Bombay Life Building,

Sir Lalubhai Samaldas Road,

Gandhi Nagar, UDIPI

OR ANY OF THEIR FOLLOWING OFFICES,

Puthiyara Calicut — Car Street Mangalore — Visweswarapuram Circle Bangalore City — Post Box No 337 Mount Road, Madras

Gautam Nivas Charni Road Girgaum Bombay No 4. — Central Station Road Trivandrum

PHYSICAL FITNESS

is the first essential in games and in every social activity

You need not worry hereafter for your impaired vitality premature old age and nervous break-down if you try

"BHUVANENDRA AMRITHPRASH"

which will tone the nervous system, build healthy tissues and enrich the blood.

Thus keeps you fresh and sprightly.

Bhuvanendra Products, Ltd.,

Katapady, S. Kanara.

(BRANCH—KUMTA, N. KANARA)

Stockist U. Panduranga Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್

ಕಟಪಾಡಿ, - ದ. ಕನ್ನಡ

ಸ್ಥಳೀಯ ಸ್ಟೋಕಿಸ್ಟರು (ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.

Edited Printed & Published by A. S. Kamath at the Sharada Press, Car Street, Mangalore

ESTD. 1906

ಸ್ವದೇಶಾಭಿಮಾನಿ

SWADESHABHIMANI

ಸಾಂಚಿಯ ಸಾರನಾಥ ಸ್ತೂಪ

★ KANNADA ILLUSTRATED WEEKLY ★

ಜಾತೀಯವಾದಿಗಳನ್ನು ಹಿಂದಿಟ್ಟು ಸ್ವಾತಂತ್ರ್ಯವಾದಿಗಳು ಮುಂದೆ ಬರಬೇಕು

ಜಾತೀಯ ಭೂತದ ಉಚ್ಚಾಟನೆ ಯಾರಿಂದ ಹೇಗಾಗಬೇಕು?

ಸ್ವಾತಂತ್ರ್ಯ ಆಂದೋಲನದ ಧುರ್ಭಾಗ್ಯದಿಂದ ಜಾತೀಯ ಭೂತದ ಹಾವಳಿಯು ಈಗ ಮಿತಿಮೀರಿರುವುದು. ಈ ಭೂತದ ಉಚ್ಚಾಟನೆಗೆ ಬಹಳ ಪ್ರಯತ್ನಗಳು ನಡೆದಿವೆ. ಆದರೆ ಅವುಗಳಲ್ಲಿ ಯಾವುವೂ ಸಫಲವಾಗಿರುವುದಿಲ್ಲ. ಈ ಭೂತದ ಹಾವಳಿಯಿಂದ ಮುನ್ನಡೆದ ಮಾರ್ಗವು ತುಡೆದು ಹೋಗಿರುವುದು.

ಏಕೆ ಹೀಗಾಗಿದೆ? ಇದನ್ನು ಪ್ರತಿಯೊಬ್ಬ ದೇಶ ಹಿತೈಷಿಯೂ ಸ್ವಲ್ಪ ಚಿಂತಿಸಬೇಕಾಗಿರುವುದು. ಏಕಂದರೆ ಜಾತೀಯ ಭೂತದ ಉಚ್ಚಾಟನೆಯಾಗದೆ ದೇಶೋದ್ಧಾರವು ಬೇರೆ ಯಾವ ಉಪಾಯದಿಂದಲೂ ಸಾಧ್ಯವಿಲ್ಲ. ಕೆಲವರು ಇದನ್ನು ಪ್ರಾಂತಿಕ ಸಮಸ್ಯೆಯನ್ನಾಗಿ ತಿಳಿಯಬೇಕೆನ್ನುತ್ತಾರೆ. ಮತ್ತೆ ಕೆಲವರು ಇದನ್ನು ಅಖಿಲ ಭಾರತ ಪ್ರಶ್ನೆಯನ್ನಾಗಿ ತಿಳಿಯಬೇಕೆನ್ನುತ್ತಾರೆ. ಕಾಂಗ್ರೆಸೂ, ಮುಸ್ಲಿಂಲೀಗೂ ಜಾತೀಯ ಪ್ರಶ್ನೆಯನ್ನು ಅಖಿಲ ಭಾರತೀಯ ಸಮಸ್ಯೆಯನ್ನಾಗಿ ತಿಳಕೊಂಡಿವೆ. ಆದರೆ ಕಾಂಗ್ರೆಸಿನಂಥ ರಾಜಕೀಯ ಸಂಸ್ಥೆಯು ಮುಸ್ಲಿಂಲೀಗಿನಂಥ ಜಾತಿ ಸಂಸ್ಥೆಯೊಡನೆ ಒಡಂಬಡಿಕೆ ಮಾಡಿಕೊಳ್ಳಲಿಕ್ಕೆ ಮಾಡಿದ ಪ್ರಯತ್ನಗಳೆಲ್ಲ ವಿಫಲವಾಗಿರುವುವು. ಯಾಕಂದರೆ ಜಾತೀಯ ಸಮಸ್ಯೆಯು ಪ್ರಾಂತಿಕ ಅಥವಾ ಅಖಿಲ ಭಾರತೀಯ ಪ್ರಶ್ನೆಯೆಂದು ಇವು ಮಾಡಿದ ಪ್ರಯತ್ನಗಳಲ್ಲಿ ಯಾವುವೂ ಸಮರ್ಪಕವಾಗಿರುವುದಿಲ್ಲ.

ರಾಜಕೀಯ ಮುಂದಾಳುಗಳ ಕರ್ತವ್ಯ

ಬೇರೆ ಬೇರೆ ಜಾತಿ ಮತ ಪಂಗಡಗಳ ಹಿತಾಸಕ್ತಿಗಳು ಕೆಲವು ಮಟ್ಟಿಗೆ ಭಿನ್ನ ಭಿನ್ನವಾಗಿರುತ್ತವೆ ಎಂಬುದನ್ನು ಎಲ್ಲರೂ ಒಪ್ಪಬೇಕಾಗಿದೆ. ಯಾರು ಇದನ್ನು ಒಪ್ಪುವುದಿಲ್ಲವೋ ಅವರಿಗೆ ಪರಿಸ್ಥಿತಿಯ ಪರಿಜ್ಞಾನವು ಸ್ವಲ್ಪ ಮಾತ್ರವಾದರೂ ಇರುವುದಿಲ್ಲವೆನ್ನಬಹುದು. ಆದರೆಈ ಹಿತಾಸಕ್ತಿಗಳು ಎನ್ನುವೊತ್ತಕ್ಕೂ ದೇಶದ ರಾಜಕೀಯ ಪ್ರಕೃತಿಗೆ ವಿಘ್ನಗಳನ್ನು ತಂದು ಹಾಕಕೂಡದು. ಅವು ದೇಶದ ರಾಜಕೀಯ ಪ್ರಕೃತಿಯನ್ನು ಕೆಡಿಯುವುದಾದರೆ, ಅಂಥವು ಮುಸಿಸಲ್ಪಡುವುದು ಅವುಗಳ ಅಲ್ಲ. ಹಿಂದೂ ಮುಸಲ್ಮಾನ ಎನ್ನದೆ ಎಲ್ಲರೂ ರಾಜಕೀಯ ದೃಷ್ಟಿಯುಳ್ಳವರಾಗಿರಬೇಕು. ಏಕಂದರೆ ಅನ್ನ ಬಟ್ಟೆಯ ಕೊರತೆಯುಂದೆ ಹಿಂದುಗಳಂತೆ ಮುಸಲ್ಮಾನರೂ, ಅದರಂತೆ ಇತರರೂ ಒಂದೇ ರೀತಿಯಿಂದ ಪೀಡಿತರಾಗಿದ್ದಾರೆ. ದೇಶವು ರಾಜಕೀಯ ಸ್ವಾತಂತ್ರ್ಯವನ್ನು ಪ್ರಾಪ್ತಮಾಡಿಕೊಳ್ಳದೆ ಅದಕ್ಕೆ ಆರ್ಥಿಕ ಸ್ವಾತಂತ್ರ್ಯವು ಪ್ರಾಪ್ತವಾಗುವುದಿಲ್ಲ. ಅದು ಆಗದೆ ಅನ್ನ ಬಟ್ಟೆಯ ಪ್ರಶ್ನೆಯನ್ನು ಬಿಡಿಸಲಿಕ್ಕಾಗುವುದಿಲ್ಲ. ಆದುದರಿಂದ ಎಲ್ಲ ಜಾತಿ ಮತ ಪಂಗಡಗಳು ಭಿನ್ನ ಭಾವವನ್ನಿಟ್ಟುಕೊಳ್ಳದೆ ದೇಶದ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಪ್ರಯತ್ನಿಸಿ ತಮ ಪ್ರಯತ್ನಗಳಲ್ಲಿ ಸಫಲರಾಗಬೇಕಾದದ್ದು ಅಗತ್ಯವಾಗಿದೆ. ದೇಶದ ಮುಂದೆ ರಾಜಕೀಯ ಸಮಸ್ಯೆಯು ಪ್ರಧಾನವಾಗಿರಬೇಕು. ಜಾತೀಯ ಸಮಸ್ಯೆಯು ಗೌಣವಾಗಿದೆ. ಆದುದರಿಂದ ಜಾತಿವಾದಿಗಳೊಡನೆ ಜಾತೀಯ ಸಮಸ್ಯೆಯ ಮಾತನ್ನೆತ್ತುವುದು ಗುಡ್ಡಕ್ಕೆ ಮಣ್ಣನ್ನು ಹೊತ್ತಂತಾಗಿರುವುದು. ಯದ್ವಾತದ್ವಾ ತಿಳಕೊಂಡಿರುವ, ಅಂದರೆ ಜಾತೀಯ ಪ್ರಶ್ನೆಯನ್ನು ಪ್ರಧಾನವಾಗಿಯೂ, ರಾಜಕೀಯ ಪ್ರಶ್ನೆಯನ್ನು ಗೌಣವಾಗಿಯೂ ತಿಳಕೊಂಡಿರುವ-ಜಾತಿ ವಾದಿಗಳು ತಮ್ಮ ಫಲವನ್ನು ಬಿಟ್ಟು ಕೊಡುವುದು ಅಸರೂಪ. ಆದುದರಿಂದ ಅವರೊಡನೆ ಒಡಂಬಡಿಕೆಯಾಗಲಿಕ್ಕೆ ಶತಮಾನಗಳೇ ಕಳೆದು ಹೋಗಬೇಕಾದೀತು. ಇದನ್ನು ನಮ್ಮ ರಾಜಕೀಯ ಮುಖಂಡರು ತಿಳಕೊಳ್ಳುವದು ಅವರ ಕರ್ತವ್ಯವಾಗಿದೆ.

ಜಾತಿವಾದಿಗಳು ಮುಸಲ್ಮಾನರಲ್ಲಿಯಂತೆ ಹಿಂದುಗಳಲ್ಲೂ ಇದ್ದಾರೆ. ಸ್ವಾತಂತ್ರ್ಯವಾದಿಗಳು ಹಿಂದುಗಳಲ್ಲಿರುವಂತೆ ಮುಸಲ್ಮಾನರಲ್ಲಿಯೂ ಇದ್ದಾರೆ. ಜಾತಿವಾದಿಗಳನ್ನು ಅವರಪ್ಪಕ್ಕೆ ಬಿಟ್ಟು ಬಿಟ್ಟು ಎರಡೂ ಸಮಾಜಗಳ ಸ್ವಾತಂತ್ರ್ಯವಾದಿಗಳು ಜಾತೀಯ ಸಮಸ್ಯೆಯ ಕುರಿತು ಒಂದು ಇತ್ಯರ್ಥಕ್ಕೆ ಬರುವುದು ಸುಲಭ; ಅವರು ಇತ್ಯರ್ಥಕ್ಕೆ ಬರುವುದು ಅಗತ್ಯ. ದೇಶದ ಉಜ್ವಲ ಭವಿಷ್ಯವು ಜಾತಿವಾದಿಗಳನ್ನಲ್ಲ, ಅದರೆ ಸ್ವಾತಂತ್ರ್ಯವಾದಿಗಳನ್ನು ಅವಲಂಬಿಸಿ ಇದೆ. ಯಾಕಂದರೆ ದೇಶಕ್ಕೆ ಸ್ವಾತಂತ್ರ್ಯವು ಪ್ರಾಪ್ತವಾದಾಗ ಎಲ್ಲರನ್ನು ಪೀಡಿಸುವ ಅನ್ನ ಬಟ್ಟೆಗಳ ಸಮಸ್ಯೆಯು ಮೊದಲು ಬಿಡಿಸಲ್ಪಡುತ್ತದೆ. ಅದು ಬಿಡಿಸಲ್ಪಟ್ಟಾಗ ಜಾತೀಯ ಸಮಸ್ಯೆಗೆ ಪ್ರಾಧಾನ್ಯವೇ ಉಳಿಯುವುದಿಲ್ಲ. ಅದು ಇದ್ದರೂ ಇಲ್ಲದಂತೆ ಸುಲಭ ಕೀಮ್ಮಾನಕ್ಕೆ ಬರುತ್ತದೆ.

ಶ್ವಾಸಕೋಶಗಳ ಬಾಧೆಯನ್ನು ದೂರವಾಗಿರಿಸಿರಿ!

ನೀವು ಶ್ವಾಸಕೋಶಗಳನ್ನು ದುರ್ಬಲಗೊಳಿಸುವ ಶೀತ, ದೀರ್ಘಕಾಲದ ಕೆಮ್ಮು, ಗಂಟಲು ನೋವು ಮೊದಲಾದವುಗಳಿಗೆ ತುತ್ತಾದರೆ, ಕ್ರಿಮಿನಾಶಕ ಶ್ವಾಸನೀಯ ಪೆಪ್ಸ್ ಮಾತ್ರೆಗಳನ್ನು ಸೇವಿಸಿರಿ. ಈ ಎಚ್ಚರಿಕೆಯು ನಿಮ್ಮ ಶ್ವಾಸಕೋಶಗಳ ಬಾಧೆಯನ್ನು ದೂರಕಳಿಸಿ, ನಿರೋಗಿಯವು ಸಂಭವಿಸಬಹುದಾದಲ್ಲಿ ತಡೆಗಟ್ಟುವುದು.

ಪೆಪ್ಸು ನಿಮ್ಮ ಬಾಯೊಳಗೆ ಕರಗುತ್ತಿರುವಾಗ ಅದರಿಂದ ಕೂಡಿದ ಔಷಧೀಯ ಧೂಮವು ಶ್ವಾಸೇಂದ್ರಿಯಗಳನ್ನು ಪ್ರವೇಶಿಸುವುದು. ಇದ್ದರಿಂದ ಶ್ವಾಸೇಂದ್ರಿಯಗಳೆಲ್ಲವೂ ಗುಣಪಡಿಸಿರಿ. ಅದರ ಮೇಲಕ್ಕಿರುವ ಜವ್ವುದ ಪರೆಯ ಬಾಹುಬಿಕೆಯು ಕಡಿಮೆಯಾಗುತ್ತದೆ. ಪೆಪ್ಸು ಶೀತವನ್ನು ನಾಶಮಾಡಿ ಕಫದ ಕ್ರಿಮಿಗಳನ್ನು ನಾಶಮಾಡಿ ಎಂಥಾ ಕಠಿಣ ತರದ ಶೀತ ಅಥವಾ ಕೆಮ್ಮುಗಳನ್ನೂ ಗುಣಪಡಿಸುವುದು.

ಎಲ್ಲ ಔಷಧಿ ವ್ಯಾಪಾರಿಗಳ ಪೆಪ್ಸನ್ನು ರೂ. 1ರಂತೆ ಮಾರುತ್ತಾರೆ.

ಏಜಂಟ್:—
ಮೆಸರ್ಸ್ ದಾಧಾ ಮತ್ತು ಕಂಪೆನಿ ಪಾರ್ಕ್‌ಟೌನ್ ಮದ್ರಾಸು

ಯಾವಾಗಲೂ ಪೆಪ್ಸನ್ನು ಪಯೋಗಿಸಿರಿ

PEPS

ಕ್ರಿಮಿನಾಶಕ ಶ್ವಾಸನೀಯ ಮಾತ್ರೆಗಳು

THE

BANK OF MANGALORE LTD.,

MANGALORE

ESTD. 1931

Branches:-

Mudabidri & Padubidri.

Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly.

Savings Bank deposit 3½% on daily balances.

All kinds of bankingbusiness transacted

U. K. BHUJANGA NAYAK

CLOTH COMMISSION AGENT

SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ಕಯಾರಾಗುವ ಎಲ್ಲ ತರದ ಶೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

ಜಿಲ್ಲಾ ಸಮಾಚಾರ

ಮಂಗಳೂರು

ನಗರ ಸಭೆ:—ಮಂಗಳೂರು ನಗರ ಸಭೆಯು ತಾ ೧೮ರಂದು ಸಂಜೆ ಟೀರ್ ಮ್ಯಾನರಾದ ಶ್ರೀ ವೆಂಕಟ್ರಾಯ ಬಾಳಿಗರ ಅಧ್ಯಕ್ಷತೆಯಲ್ಲಿ ನೇರಿತು. ಅದರಲ್ಲಿ ದಿನಕ್ಕೆ ಐದು ತಾಸುಗಳಂತೆ ಶಾಲಾ ಸಮಯವನ್ನೂ ವರ್ಷಕ್ಕೆ ೩೨೦ ಶಾಲಾ ದಿನಗಳನ್ನೂ ಮಾಡುವ ಸೂಚನೆಯು ಹುಡುಗರ ಆರೋಗ್ಯಕ್ಕೆ ಬಾಧಕವೆಂದೂ, ದಿನಕ್ಕೆ ನಾಲ್ಕು ವರೆ ತಾಸಿನ ಶಾಲಾ ಸಮಯವೂ ವರ್ಷಕ್ಕೆ ೩೨೦ ದಿನಗಳ ಶಾಲಾ ದಿನಗಳೂ ಆಗಬೇಕೆಂದೂ ನಿರ್ಣಯವಾಯಿತು

ವೆಬ್‌ಸ್ಟರ್ ಮಾರ್ಕೆಟಿನ ಪುನರ್ರಚನೆ ಬಗ್ಗೆ ಸರ್ಕಾರದಿಂದ ಸಿಗುವ ಅಂ,೦೦೦ ರೂಪಾಯಿಗಳ ಸಾಲವನ್ನು ೧೯೪೦ನೇ ಮಾರ್ಚ್ ಮೊದಲನೆಯ ದಿನ ತೆಗೆಯುವುದಾಗಿ ನಿರ್ಣಯವಾಯಿತು ಆ ಬಗ್ಗೆ ಹಿಂದಿನ ಆಂದ ಜುನಟ್ಟಿಯನ್ನು ವಿಮರ್ಶಿಸುವರೆ ಒಂದು ಸಮಿತಿಯು ನಿರ್ಪಟ್ಟಿತು

ತೆರಿಗೆದಾರರ ಸಭೆ:—ಮಂಗಳೂರು ಮುನಿಸಿಪಲ್ ತೆರಿಗೆದಾರರ ಸಂಘದ ಸಭೆಯೊಂದು, ಕಳೆದ ಆದಿತ್ಯವಾರ ಶ್ರೀ, ಎಸ್, ಬಿ ಪಿ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಪಳ್ಳೇರಿಯಲ್ಲಿ ಜರುಗಿತು

ಕೇಪ್ಟನ್ ಕನಕಸಭಾಪತಿಯ ಬೆರಿ – ಸಂಸ್ಥಾನ ಅಸಿಸ್ಟಾಂಟ್ ಸೈಕ್ಷರ್ ಓಫ್ ಪಬ್ಲಿಕ್ ಹೆಲ್ತ್ ಆದ ಕೇಪ್ಟನ್ ಕನಕ ಸಭಾಪತಿಯವರು, ತಾ ೧೬ರಂದು ಮಂಗಳೂರಿಗೆ ದಯೆಯನ್ನಾಡಿದ್ದು ಜಿಲ್ಲಾ ಹೆಲ್ತ್ ಆಫೀಸರರಾದ ಶ್ರೀ ಸೈ ಶಿವರಾಮಯ್ಯನವರೊಂದಿಗೆ ಜಿಲ್ಲೆಯ ಮಂಗಳೂರು ಉಡುಪಿ ಮತ್ತು ಕಾರ್ಕಳ ತಾಲೂಕುಗಳಲ್ಲಿರುವ ಎರಡೆಂದು ಗ್ರಾಮಗಳನ್ನು ಸಂದರ್ಶಿಸಿ, ಗ್ರಾಮಗಳ ಸ್ಥಿತಿಗತಿಗಳನ್ನು ಸ್ವತಃ ತಿಳಿದುಕೊಂಡರು

ಮಜೂರ ಮುಖಂಡರು:-ಸುಲಬಾದಿನ ಮಜೂರ ಮುಖಂಡರಲೊಬ್ಬರಾದ ಶ್ರೀ ಮಂಜುನಾಥರಾಯರು ಕಳೆದ ಶುಕ್ರವಾರ ಮಂಗಳೂರಿಗೆ ಬಂದಿದ್ದು ಶನಿವಾರ ಸಂಜೆ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಮಜೂರರಿಗಾಗಿ ಅಭ್ಯಾಸಗೋಷ್ಠಿಗಳನ್ನು ನಡೆಸಿ, ಅವರಿಗೆ ಪ್ರಕೃತದ ಕೆಲಸಗಾರರ ಸ್ಥಿತಿ ಹಾಗೂ ಮಜೂರ ಕಾಯಿದೆಗಳ ಪರಿಚಯ ಮಾಡಿಕೊಟ್ಟರು

ಕೆನರಾ ಹೈಸ್ಕೂಲು—ಸ್ಥಳೀಯ ಕೆನರಾ ಹೈಸ್ಕೂಲಿನ ವರ್ಧಂತಿ ಮಹೋತ್ಸವವು ತಾ. ೨೩ನೇ ಮಂಗಳವಾರ ಸಂಜೆ ೫ಗೆ ಶ್ರೀ. ಬಿ. ವೆಂಕಟ್ರಾಯ ಬಾಳಿಗ, ಬಿ ಎ ಬಿ. ಎಲ್., ಎಂ ಎಲ್ ಎ, ಮುನಿಸಿಪಲ್ ಚೆಯರ್‌ಮೇನ್ ಇವರ ಅಧ್ಯಕ್ಷತೆಯಲ್ಲಿ ಜರುಗಿತು

ಶಾಲೆಯ ಮುಖ್ಯೋಪಾಧ್ಯಾಯರಿಂದ ಗತ ವರ್ಷದ ವರದಿ ವಾಚನ, ಆಟ ಮತ್ತು ಪಾಟಗಳ ಸ್ಪರ್ಧೆಯಲ್ಲಿ ಜಯಶೀಲರಾದವರಿಗೆ ಬಹುಮಾನವಿತರಣೆ ಸಮಾರಂಭವೂ ಅಧ್ಯಕ್ಷರ ಭಾಷಣವು ನಡೆದ ಮೇಲೆ ಹಲವು ನಾಟಕ ಪ್ರಹಸನಾದಿಗಳಿಂದ ಕಾರ್ಯಕ್ರಮವು ಸಾಂಗವಾಗಿ ಕೊನೆಗೊಂಡಿತು. ಮರುದಿನ ಹಳೆ ವಿದ್ಯಾರ್ಥಿಗಳ ಸಭೆಯೂ ರಾತ್ರಿ ಔತಣವೂ ಜರುಗಿತು.

ಕಾಂಗ್ರೆಸು ಪ್ರತಿನಿಧಿ ಚುನಾವಣೆ

ರೂಮಿಗೆದ ಕಾಂಗ್ರೆಸ ಅಧಿವೇಶನದ ಪ್ರತಿನಿಧಿಗಳ ಚುನಾವಣೆಯು ಇದೇ ಜನೇವರಿ ತಿಂಗಳಲ್ಲಿ ನಡೆಯುವದಿದ್ದು ಆ ಸಂಬಂಧ ಮಂಗಳೂರು ಜಿಲ್ಲೆಯಲ್ಲಿ ಚುನಾವಣೆಗಳನ್ನು ಯೋಗ್ಯ ರೀತಿಯಿಂದ ಸಾಗಿಸಲು ಶ್ರೀ. ಎಸ್. ಶೇಷಗಿರಿರಾಯರು ಜಿಲ್ಲಾ ಚುನಾವಣಾ ಅಧಿಕಾರಿಗಳಾಗಿ ನಿಯಮಿಸಲ್ಪಟ್ಟಿರುವರು.

ಕೊಂಕಣಿ ಭಾಷಾಪ್ರೇಮಿಗಳಲ್ಲಿ ವಿನಂತಿ

ಕಾರವಾರದಲ್ಲಿ ನೇರಿದ ಪ್ರಥಮ ಕೊಂಕಣಿ ಪರಿಷತ್ತಿನ ಕಾರ್ಯದರ್ಶಿಗಳಾದ ಶ್ರೀ ಎಂ. ಎಂ. ಶ್ಯಾನಭಾಗ್ ವಕೀಲ್ ಇವರು ಆ ದಿನದ ಪರಿಷತ್ತಿನ ನಿರ್ಣಯವಾದ ರೂಪಾಗಿನುಸಾರವಾಗಿ ಕೆಲಸ ಮಾಡಲು ಇಲ್ಲಿಗೆ ಬಂದಿರುವರು. ಆದುದರಿಂದ ತಾ ೨೦ ೧೨-೩೯ರಂದು ಸಂಜೆ ೫॥ ಗಂಟೆಗೆ ಕೆನರಾ ಹೈಸ್ಕೂಲ್ ಭವನೇಂದ್ರ ಸಭಾ ಭವನದಲ್ಲಿ ಕೊಂಕಣಿ ಭಾಷಾಪ್ರೇಮಿಗಳ ಸಭೆಯಿದೆ ನಿವೃತ್ತ ಬಿ ಜಡ್ಜರಾದ ಶ್ರೀ ಎಂ ನರಸಿಂಗರಾಯರು ಅಧ್ಯಕ್ಷತೆ ವಹಿಸಲು ಒಪ್ಪಿರುವರೆಂದೂ, ಆದುದರಿಂದ ಎಲ್ಲರಿಗೂ ಸ್ವಾಗತವಿದೆಯೆಂದೂ ಶ್ರೀ ಎ ಶ್ರೀನಿವಾಸ ಪೈಗಳು ತಿಳಿಸುತ್ತಾರೆ

ಕಾರ್ಕಳ

ಮಂಗಳೂರು ಕೇಂದ್ರದಲ್ಲಿ ಇಲ್ಲಿಂದ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ರಾಷ್ಟ್ರಭಾಷಾ ಪ್ರವೇಶಿಕ ಮತ್ತು ವಿಶಾರದ ಪರೀಕ್ಷೆಗಳನ್ನು ಕಳೆದ ನವಂಬರ ತಿಂಗಳಲ್ಲಿ ಕೊಟ್ಟ ಐದು ಮಂದಿಯ ಪೈಕಿ ಶ್ರೀಗಳು ದ ಕಮಲಾಕ್ಷ ಭಟ್ಟ ಅರ್ ಪೈಕುರಿ ಶೆಣೈ ಮತ್ತು ಕೆ ರಮಾನಾಥ ಭಟ್ಟ ಇವರು ವಿಶಾರದ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆಂದು ಸ್ಥಳೀಯ ಒಂದೇ ಪ್ರಚಾರಕ ಶ್ರೀ ಕಟಪಾಡಿ ಶ್ರೀನಿವಾಸ ಶೆಣೈಯವರು ತಿಳಿಸುತ್ತಾರೆ

ಶ್ರೀ ವೆಂಕಟ್ರಮಣ ವಿದ್ಯಾ ಇಲಾಖಾ ಬೋರ್ಡಿನ ಜೊತೆ ಸದಸ್ಯರ ಒಂದು ಸಭೆಯು ಕಳೆದ ವಾರ ಕೂಡಿ ಶ್ರೀ ಸಿ ಮಂಜುನಾಥ ಕಾಮತ ರವರು ಎರಡನೆ ಬಾರಿಗೆ ಆ ಬೋರ್ಡಿನ ಸದಸ್ಯರಾಗಿ ಸರ್ವಾನುಮತಿಯಿಂದ ಆರಿಸಲ್ಪಟ್ಟಿರುವರು

ಕಾಸರಗೋಡು

ಶಿಶುಸಪ್ತಾಹ.—ಪೆರಡಾಲ ಬೋಯ್ಸ್ ಶಾಲೆ ಮತ್ತು ಎಂ ಎಸ್ ಕಾಲೇಜು ಇವೆರಡು ಶಾಲೆಗಳ ಸಹಕಾರದಿಂದ ಬದಿಯಡ್ಕದಲ್ಲಿ ಬದಿಯಡ್ಕ ಪಂಚಾಯತ ಬೋರ್ಡಿನ ಸಹಾಯದಿಂದ, ಆರೋಗ್ಯ ಮತ್ತು ಶಿಶುಸಪ್ತಾಹಗಳು ಅನೇಕ ಕಾರ್ಯಕ್ರಮಗಳಿಂದ ಯಶಸ್ವಿಯಾಗಿ ಜರುಗಿತು ಅನೇಕ ಸ್ಪರ್ಧೆಗಳು ವಿವಿಧ ವಿನೋದಗಳೂ ಏರ್ಪಡಿಸಲಾಗಿತ್ತು ಬಾಲಕರಿಗೆಬಹುಮಾನ ವಿತರಣೆಗಳನ್ನು ಮಾಡಲಾಯಿತು

ಹಳೆಯ ವಿದ್ಯಾರ್ಥಿ ಸಂಘ:—ಪೆರ್ಡಾಲ ಎಂ ಎಸ್ ಕಾಲೇಜಿನ ಹಳೆಯ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಶ್ರೀ ಕಡಂಗೋಡ್ಲು ಶಂಕರ ಭಟ್ಟರ ಅಧ್ಯಕ್ಷತೆಯಲ್ಲಿ ತಾ ೨೩ರಂದು ಬಹಳ ವಿಜೃಂಭಣೆಯಿಂದ ನೆರವೇರಿತು ಅಧ್ಯಕ್ಷರು ತಮ್ಮ ವಿಚಾರ ಪರಿಪೂರ್ಣವಾದ ಭಾಷಣದಲ್ಲಿ ಪೌರಸ್ತ್ಯ ವಿದ್ಯಾ ಸಂಸ್ಕೃತಿಗಳ ಮಹತ್ವವನ್ನು ವರ್ಣಿಸಿ, ಅದರ ಪಾಲನೆಗಾಗಿ ಮಾಡತಕ್ಕ ಕರ್ತವ್ಯದ ಕುರಿತೂ, ಮಾತೃಭಾಷಾ ಮಂದಿರಕ್ಕೆ ಹಳೇ ವಿದ್ಯಾರ್ಥಿಗಳು ಸಲ್ಲಿಸತಕ್ಕ ಸೇವೆಯ ಕುರಿತೂ ಅನೇಕ ಉಪಯುಕ್ತ ಸಲಹೆಗಳನ್ನಿತ್ತರು. ರಾತ್ರಿ ನಾಟಕ ಮೊದಲಾದ ವಿವಿಧ ವಿನೋದಾವಳಿಗಳೆದ್ದುವು

ಕಾಲೇಜ್ ವರ್ಧಂತಿ—ತಾ. ೨೪ ರಂದು ಪೆರ್ಡಾಲ ಎಂ. ಎಸ್ ಕಾಲೇಜಿನ ವರ್ಧಂತ್ಯುತ್ಸವವು ಜಿಲ್ಲಾ ಜಡ್ಜರಾದ ಶ್ರೀ, ಪಿ ರಾಜಗೋಪಾಲಾಚಾರ್ಯರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿತು. ಪ್ರಿನ್ಸಿಪಾಲರಿಂದ ವರದಿವಾಚನ, ಮಹನೀಯರ ಭಾಷಣ ಅಧ್ಯಕ್ಷ ಭಾಷಣಗಳೇ ಮೊದಲಾದವುಗಳು ನಡೆದ ಮೇಲೆ ಶಾಲಾ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆಗಳಾದವು ರಾತ್ರಿ ನಾಟಕ ವಿವಿಧ ವಿನೋದಾವಳಿಗಳಿದ್ದುವು

ಕುಂದಾಪುರ

ಪಂಚಾಯತು ಬೋರ್ಡು, ಬೈಂದೂರು ಬೈಂದೂರು ಸರ್ಕಾರಿನ ೩೦ ಗ್ರಾಮಗಳಲ್ಲಿ ೧೩ ಗ್ರಾಮಗಳ ಪಂಚಾಯತು ಬೋರ್ಡುಗಳ ಮೆಂಬರರೂ ಮತ್ತು ಎಲ್ಲಾ ಗ್ರಾಮಗಳ ಗ್ರಾಮ ಉದ್ಯೋಗಸ್ಥರೂ, ಸದ್ರಿ ಸರ್ಕಾರಿನ ಜಿಲ್ಲಾ ಬೋರ್ಡು ಮೆಂಬರ್ ಶ್ರೀ, ಬಿ ಸುಬ್ಬಣ್ಣ ಶೆಟ್ಟಿ ಕೂಡುವಿಕೆಯಿಂದ ೧೯೪೦ನೇ ಜನವರಿ ೩ನೇ ವಾರದ ಪ್ರಾರಂಭದ ೩ ದಿವಸಗಳ ವರೆಗೆ ಸೂರತ್ ಜಿಲ್ಲಾ ಬೋರ್ಡಿನ ಗ್ರಾಮೋದ್ಧಾರ ವಾರವನ್ನು ಆಚರಿಸುವುದೆಂತ ನಿಶ್ಚಯಿಸಿದ್ದಾರೆ ಬೈಂದೂರು ಸರ್ಕಾರಿನ ಈಗಿರುವ ೧೩ ಗ್ರಾಮಗಳ ಪಂಚಾಯತ ಬೋರ್ಡುಗಳಲ್ಲದೆ ಇನ್ನುಳಿದ ೧೪ ಗ್ರಾಮಗಳಲ್ಲಿ ಗ್ರಾಮ ಪಂಚಾಯತು ಬೋರ್ಡುಗಳನ್ನು ೧೯೪೦ನೇ ಇಸವಿ ಮಾರ್ಚ ತಾ ೩೦ರೊಳಗೆ ಸ್ಥಾಪಿಸುವರೆ ಇನ್ಸ್‌ಪೆಕ್ಟರ್ ಓಫ್ ಲೋಕಲ್ ಬೋರ್ಡ್ ಮತ್ತು ಜಿಲ್ಲಾ ಪಂಚಾಯತು ಆಫೀಸರುಗಳ ಮುಖಾಂತರ ಪ್ರಯತ್ನ ಮಾಡಿರುವರೆಂದು ತಿಳಿಯುತ್ತೇವೆ

ರೇಡಿಯೋವ್ಯವಸ್ಥೆ ದಶಂಬರ ತಾ ೧೯ನೇ ಮಂಗಳವಾರ ಮಧ್ಯಾಹ್ನ ೪॥ ಗಂಟೆ ಸಮಯ ಬೈಂದೂರು ಸರ್ವಜನಿಕ ಮೈದಾನದ ಮುಂದಿಗಡೆ ಇರುವ ಬೋರ್ಡ ಮಿಡ್ಲ್ ಸ್ಕೂಲಿನಲ್ಲಿ ಬೈಂದೂರು, ನಡುವಣ, ಉಪ್ಪುಂದ, ಪಡ್ಗಂ, ಎತ್ತೆರೆ, ತಿರುವು ಈ ಎಲ್ಲಾ ಗ್ರಾಮಗಳ ಜನರ ಅಲ್ಪದೆ ಸದ್ರಿ ಶಾಲಾ ವಿದ್ಯಾರ್ಥಿಗಳ ಪ್ರಯೋಜನಾರ್ಥವಾಗಿ ರೇಡಿಯೋ ಯಂತ್ರವನ್ನು ಇರಿಸಲಾಗಿದೆ ಈ ಯಂತ್ರದಿಂದ ಪ್ರತಿ ದಿವಸವೂ ಮಧ್ಯಾಹ್ನ ೪॥ ಗಂಟೆಯಿಂದ ೮ ಗಂಟೆ ವರೆಗೆ ಲೋಕದ ಕೆಲವು ರೇಡಿಯೋ ಸ್ಟೇಷನುಗಳಿಂದ ವಾರ್ತೆಗಳನ್ನೂ ಮತ್ತು ಗಾಯನಗಳನ್ನೂ ಮಿಡ್ಲ್ ಸ್ಕೂಲಿನ ಮುಂಭಾಗದಲ್ಲಿರುವ ಹೂದೋಟದಲ್ಲಿ ಜನರು ಕೂಡಿ ಕೇಳುವ ವ್ಯವಸ್ಥೆ ಮಾಡಿದ್ದಾರೆ ಈ ಯಂತ್ರವನ್ನು ತಗಿಸಲು ಸಹಾಯ ಮಾಡಿದ ಊರಿನ ಶ್ರೀಮಂತರಿಗೂ ಸಾಹುಕಾರರಿಗೂ, ಸರಕಾರಿ ಮತ್ತು ಜಿಲ್ಲಾ ಬೋರ್ಡ ನೌಕರರಿಗೂ ಶ್ರೀ, ಬಿ ಸುಬ್ಬಣ್ಣ ಶೆಟ್ಟಿ ತ್ಯಾಂಪನೆಗಳನ್ನು ತಿಳಿಸುತ್ತಾರೆ—

ಮೆಟಿರ್ನಿಟಿ ವಾರ್ಡ್:—ಬೈಂದೂರು ಲೋಕಲ್ ಫಂಡ್ ಆಸ್ಪತ್ರೆಯ ಕಂಪೌಂಡಿನಲ್ಲಿ ಬೈಂದೂರು ಮತ್ತು ಅದರ ಸುತ್ತುಮುತ್ತಲಿನ ಗ್ರಾಮಗಳ ಸಾರ್ವಜನಿಕರ ಸಹಾಯದಿಂದ ಕಟ್ಟಿಸಿದ 'ಮೆಟಿರ್ನಿಟಿ ವಾರ್ಡ್' ಇದೇ ಬರುವ ಜನವರೀ ತಾರೀಕು ೧೫ ಇಸ್ವಿ ೧೯೪೦ ಸೋಮವಾರ ದಿವಸ ಶ್ರೀ, ಸಿ ಜಿ ಶೆಟ್ಟಿ ಎಮ್ ಎಲ್ ಎ ಇವರಿಂದ ತೆರೆಯಲ್ಪಡುವುದು ಈ ಸಮಾರಂಭಕ್ಕೆ ಜಿಲ್ಲೆಯ ಎಲ್ಲಾ ಬೋರ್ಡ ಮೆಂಬರರೂ ಮತ್ತು ಇತರ ಮಹನೀಯರೂ ಬರಬೇಕಾಗಿ ಮೆಟಿರ್ನಿಟಿ ವಾರ್ಡ್ ಕಮಿಟಿಯ ಪರವಾಗಿ ಶ್ರೀ, ಬಿ ಸುಬ್ಬಣ್ಣ ಶೆಟ್ಟಿ ಈ ಮುಖಾಂತರ ವಿನಂತಿಸಿಕೊಳ್ಳುತ್ತಾರೆ

ಕೋಟೇಶ್ವರ:—ಗೌಡಸಾರಸ್ವತ ಬ್ರಾಹ್ಮಣ ಧರ್ಮದವರಿಂದ ಹೊಸತಾಗಿ ಕಟ್ಟಿಸಿದ ದೇವಸ್ಥಾನದಲ್ಲಿ ಇದೇ ಬರುವ ಮಾಘ ಶುಕ್ಲ ೩ ಯು ಬುಧವಾರ ತಾ. ೧೪—೨—೪೦ ದಿವಸ ಶ್ರೀ ರಾಮದೇವರನ್ನು ಪ್ರತಿಷ್ಠಿಸಬೇಕೆಂತ ಈ ಊರಿನ ಶ್ರೀಮಾನರ ಸಭೆ ಸೇರಿ ಮುಹೂರ್ತ ನಿಶ್ಚಯಿಸಿ ಆ ಬಗ್ಗೆ ವಿನಂತಿ ಪತ್ರಿಕೆಯನ್ನು ಶ್ರೀ ಸಂಸ್ಥಾನ ಕಾಶಿ ಮಠಾಧೀಶ ಶ್ರೀಮತ್ಸುಕೃತೀಂದ್ರ ಶ್ರೀ ಪಾದಂಗಳವರ ಸನ್ನಿಧಾನಕ್ಕೆ ಕಳುಹಿಸಿ ಕೊಡೋಣಾಗಿದೆ.

ತೋಟಿಗಳ ಮುಷ್ಕರ:—ಉಡುಪಿ ನಗರದ ತೋಟಿಗಳು ಮತ್ತು ಜಾಡಮಾಲಿಗಳು ಕೆಲವೊಂದು ಕಾರಣದಿಂದಾಗಿ ತಾ. ೧೭ರಿಂದ ಮುಷ್ಕರವನ್ನಾರಂಭಿಸಿರುವರು. ಮೂರು ದಿನಗಳ ನಂತರ ಉಡುಪಿ ಮುನ್ಸಿಪಲ್ ಅಧಿಕಾರಿಗಳು ಪರಊರುಗಳಿಂದ ತೋಟಿಗಳನ್ನು ತರಲು ಪ್ರಯತ್ನಿಸಿದ ಫಲವಾಗಿ ಮಂಗಳೂರಿನಿಂದ ೯ ಜನರು ಮತ್ತು ಕಾರ್ಕಳದಿಂದ ೧೧ ಜನರು ಒಟ್ಟಿಗೆ ೨೦ ಜನರು ತರಲ್ಪಟ್ಟು ಕೆಲಸವನ್ನಾರಂಭಿಸಿರುವರು.

ಶ್ರೀ ಎಚ್ ಸುಬ್ಬರಾಯರ ನಿಧನ

ಡಿಸ್ಟ್ರಿಕ್ಟ್ ಬೋರ್ಡಿನ ನಿವೃತ್ತ ಹೆಡ್‌ಕ್ಲಾರ್ಕರಾಗಿದ್ದ ಎಚ್ ಸುಬ್ಬರಾಯರು ತನ್ನ 75ನೇ ವಯಸ್ಸಿನಲ್ಲಿ ತಾ 12-12-39ರಲ್ಲಿ ಕಾರ್ಕಳದಲ್ಲಿ ದಿವಂಗತರಾದರೆಂಬ ವಾರ್ತೆಯು ವಿಷಾದ ಕರವಾಗಿದೆ ಇವರು ತಮ್ಮ ಸರಳ ಸ್ವಭಾವ, ವಿನಯಾದಿಗಳಿಂದ ಜನಪ್ರಿಯರಾಗಿದ್ದರು. ಮೃತರ ಬಂಧುಬಳಗದವರ ದುಃಖದೊಂದಿಗೆ ನಾವೂ ಸಹಭಾಗಿಗಳಾಗಿದ್ದೇವೆ

ಮೃತರ ಪುತ್ರರಾದ ಶ್ರೀ ಎಚ್ ದೇವರಾಯರು "ನನ್ನ ತಂದೆಯವರ ನಿಧನದ ಕುರಿತು ಸಂಬಂಧಿಕರಿಂದಲೂ, ಸ್ನೇಹಿತರಿಂದಲೂ ದುಃಖ ಸೂಚಕಪತ್ರಗಳು ದಿನಂಪ್ರತಿ ಬರುತ್ತಿವೆ. ಅವಕ್ಕೆ ಪ್ರತ್ಯುತ್ತರಪ್ರತ್ಯೇಕ ಉತ್ತರವೀಯುವುದು ಅಸಾಧ್ಯವಾಗಿದೆ ಹೀಗೆ ಪತ್ರಬರೆದವರಿಗೆಲ್ಲಾ ನಾನು ಚಿರಋಣಿಯಾಗಿದ್ದೇನೆ." ಎಂದು ತಿಳಿಸುತ್ತಾರೆ

ಕರ್ನಾಟಕ

ಬೆಳಗಾವಿ

ಸಾಹಿತ್ಯ ಸಮ್ಮೇಳನ—ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನವು ತಾ. ೨೨ರಂದು ಬೆಳಗಾವಿಯಲ್ಲಿ ಜರಗಿತು. ಸಮಸ್ತ ಕರ್ನಾಟಕದಿಂದ ಹಲವು ಮಂದಿ ಸಾಹಿತಿಗಳು ಸಮ್ಮೇಳನಕ್ಕೆ ಆಗಮಿಸಿದ್ದರು ಸಮ್ಮೇಳನದ ಅಧ್ಯಕ್ಷರಾದ ಶ್ರೀ ಮುದವೀಡು ಕೃಷ್ಣರಾಯರನ್ನು ಸ್ಟೇಜಿನಲ್ಲಿ ಸ್ವಾಗತಿಸಿ ಮೆರವಣಿಗೆಯಿಂದ ಕೊಂಡೊಯ್ದರು ಹಾಡಿಯುದ್ದಕ್ಕೂ ಜಯಘೋಷಗಳು ಕೇಳಿಬರುತಿದ್ದುವು

ಅಧ್ಯಕ್ಷರೊಡನೆ ಕಳೆದ ವರ್ಷದ ಪರಿಷತ್ತಿನ ಅಧ್ಯಕ್ಷರಾದ ಶ್ರೀ ದಿವಾಕರರೂ ಆಗಮಿಸಿದ್ದರು ಪರಿಷತ್ತಿನ ಸಭಾ ಕಾರ್ಯದ ಪ್ರಾರಂಭದಲ್ಲಿ ಅಧ್ಯಕ್ಷರನ್ನು ಸೂಚಿಸಿ ಅನುಮೋದಿಸುವಾಗ, ಶ್ರೀ. ಮಾಸ್ತಿ ವೆಂಕಟೇಶ ಅಯ್ಯಂಗಾರ್, ಶ್ರೀ. ದ ರಾ ಬೇಂದ್ರೆ, ಶ್ರೀ. ದಿವಾಕರ ಮೊದಲಾದವರು ಸಮಯೋಚಿತ ಭಾಷಣಗಳನ್ನು ಮಾಡಿದರು ಸ್ವಾಗತ ಗೀತೆಯು ಹಾಡಲ್ಪಟ್ಟಿತು. ಶ್ರೀ ಎಂ ಪಿ ವಾಲಿಯವರು ಸ್ವಾಗತ ಭಾಷಣ ಮಾಡಿದರು ಶ್ರೀ ಮುದವೀಡು ಕೃಷ್ಣರಾಯರು ಅಖಂಡ ಒಂದುವರೆ ತಾಸುಗಳ ತನಕ ವಿಚಾರಪರಿಪೂರ್ಣವಾದ ಉದ್ದಾಮ ಭಾಷಣ ಮಾಡಿದರು.

ಈ ವರ್ಷದ ಪರಿಷತ್ತಿನ ಘಟನಾವಳಿಯಲ್ಲಿ ವಿಶೇಷ ಬದಲಾವಣೆಗಳಾಗಲಿವೆಯೆಂದು ತಿಳಿದು ಬಂದಿದೆ ಹಿಂದೆ ಪರಿಷತ್ತಿನ ಅಧ್ಯಕ್ಷರು ಕೇವಲ ಪೆಸರಿಗೆ ಮಾತ್ರ ಅಧ್ಯಕ್ಷರಾಗಿದ್ದು, ಉಪಾಧ್ಯಕ್ಷರಿಗೆ ಸರ್ವಾಧಿಕಾರಗಳಿರುತ್ತಿದ್ದುದರಿಂದ, ಈ ವರ್ಷ ಅರಿಸಲ್ಪಟ್ಟ ಅಧ್ಯಕ್ಷರಿಗೆ ಒಂದು ಇಡೀ ವರ್ಷದ ವರೆಗೆ ಪೂರ್ಣ ಕೆಲಸಗಳು ಇರದೇ ಕೆಂದೂ ಅವರಿಗೆ ಹಿಂದಿಗಿರುತ ಹೆಚ್ಚಿನ ಸ್ವಾತಂತ್ರ್ಯಗಳಿರಬೇಕೆಂದೂ ಇನ್ನೂ ಕೆಲವು ತಿದ್ದುಪಡಿಗಳಿಂದ ಪರಿಷತ್ತಿನ ಘಟನಾವಳಿಯಲ್ಲಿ ಬದಲಾವಣೆಗಳಾಗುವವೆಂದೂ ತಿಳಿದುಬರುತ್ತದೆ.

ಯುದ್ಧವಾರ್ತೆ!



ಜಗತ್ತಿನ ಶಾಂತಿಗಾಗಿ ಜಗದ್ಗುರುಗಳ ಹಂಬಲ!

ೀರ ಫಿನ್ನರ ಪ್ರಚಂಡ ಸಾಹಸ! ರಶ್ಯಕ್ಕೆ ಬೆಂಬಲ ಬೇಕಂತೆ!!

ಟಿಸ್ಕ ರಾಷ್ಟ್ರಗಳಿಗೆ ನಷ್ಟ!

ನ್-ರಶ್ಯಾ ಯುದ್ಧ

ಕಳೆದ ಶಾರದತಿಯಿಂದ ಸೈನ್ಯವು ಫಿನ್ ಂಡಿನ ಗಡಿಯಲ್ಲಿ ಒಟ್ಟು ಸೇರಿನಲ್ಪ ತು ಅದರ ಮುನ್ಸುಗ್ಗುತ್ತಿರುವ ಂದು ಸುದ್ದಿ ಬಂದಿತ್ತು ಆದರೆ ಫಿನ್ ಂಡಿನ ಸೈನಿಕರ್ ರಶ್ಯನೆರನ್ನು ಮುಂದು ರಿಯದಂತೆ ಬಲವಂತವಾಗಿ ಕಾದಿ ಂದಕ್ಕಟ್ಟುತ್ತಿರುವುದರಿಂದ ಸ್ಕಾಲಿನನು ಳವಳಗೊಂಡಿರುವುದಾಗಿ ತಿಳಿದು ಬಂದಿ ದೆ. ಆದಷ್ಟು ಬೇಗನೇ ಯುದ್ಧವನ್ನು ಮುಗಿಸಿಬಿಡಬೇಕೆಂದು ಆತನ ಸಾ ನೆಯಾಗಿದೆ. ಫಿನ್‌ಲೆಂಡಿನಂತಹ ಚಿಕ್ಕ ರಾಷ್ಟ್ರವು ರಶ್ಯದಂತಹ ಪ್ರಬಲ ರಾಷ್ಟ್ರ ದೊಡನೆ ಅಮಿತ ಸಾಹಸದಿಂದ ಹೀಗೆ ಗಾಡಾಡ್ತಿರುವುದು ಪ್ರಪಂಚದನ್ನೇ ಗಲಿಬಿಗೆಗೊಳಿಸಿದೆ ಫಿನ್ನರ ಸಾಹಸವನ್ನು ಲ್ಲರೂ ಪ್ರಶಂಸಿಸುತ್ತಿದ್ದಾರೆ ಪರಾ ಗ್ರಮಿಗಳಾದ ಫಿನ್ನರೊಡನೆ ಯುದ್ಧ ಮಾಡುತ್ತಿರುವಾಗ, ಹಿಂದೆ ಬೀಳುವ ಂದರ್ಭವೊದಗುತ್ತಿರಲು, ಅದರಿಂದ ಶ್ಯನದು ಹೇಡಿಗಳಂತೆ ಸರಿಯು ನಿಲ್ಲುವಾರ ದೆಂದು ಅವರನ್ನು ಹುರಿದುಂಬಿಸಲು ಶ್ಯದ ಕೆಲವು ಸೈನ್ಯಾಧಿಕಾರಿಗಳು ಮುಂದೆ ಬಂದು ಸೈನಿಕರನ್ನು ಹುರುಪು ಗೊಳಿಸುತ್ತಾರೆ

ರಶ್ಯನರ ಹಲವು ವಿಮಾನಗಳು ಫಿನ್ನರ ಪ್ರಧಾನ ನಗರವಾದ ಹೆಲ್ಸಂಕಿಯ ಮೇಲೆ ಬಾಂಬಿನ ಮಳೆ ಕರೆದಿವೆ ನಿರವಧಾ ನಾಗಿರಕರ ಮೇಲೆಯೂ ರಶ್ಯನ್ ವಿಮಾ ನಗಳು ಬಾಂಬುಗಳನ್ನೆಸೆಯುತ್ತಿವೆ

ರಶ್ಯದ ಸೈನಿಕರು ಫಿನ್‌ಲೆಂಡಿನಲ್ಲಿ ಬಹು ದೂರ ನುಗ್ಗಿ ಫಿನ್‌ಲೆಂಡನ್ನು ಎರಡು ಸಾಲು ಮಾಡಿರುವರಾಗಿ ವಾರ್ತೆ

ಜರ್ಮನ್-ಬ್ರಿಟಿಸ್

ಫ್ರಾನ್ಸುಗಳ ಯುದ್ಧ

ಎಂದಿನಂತೆ ಸಮುದ್ರ ಯುದ್ಧವೇ ಭಧರಿಂದ ಸಾಗುತ್ತಿದೆ ಬ್ರಿಟಿಷ್ ಹಡ ಗುಗಳು ಮುಳುಗುವೆ ಜರ್ಮನರ ಕೆಲವು ಹಡಗುಗಳನ್ನು ಸಂಕೆಟದಲ್ಲಿ ಕೆಡಹಲು ಅವುಗಳು 'ಆತ್ಮಹತ್ಯೆ' ಮಾಡಿ ಕೊಂಡವು ಗ್ರಾಫ್‌ಸ್ಪೀ ಹಡಗದಂತೆ ಜರ್ಮನಿಯ ಕೊಲಂಬಸ್ ಎಂಬ ಹಡ ಗವೂ ತಾನಾಗಿ ಮುಳುಗಿತು ಗ್ರಾಫ್ ಸ್ಪೀ ಹಡಗದಲ್ಲಿದ್ದ ೧೩೨ ಮಂದಿಯನ್ನು ಸೆರೆ ಹಿಡಿದಿರುವರೆಂದೂ, ಅದರ ಕೆಪ್ಟನ್ ನಾದ ಲಾಂಗ್ಸ್ ಡೋರ್ಫನು ಆತ್ಮಹತ್ಯ ಮಾಡಿಕೊಂಡಿರುವುದಾಗಿಯೂ ತಿಳಿದಿ.

ನಾರ್ವೆ, ಸ್ವೀಡನ್, ಡೆನ್ಮಾರ್ಕ್ ಈ ತಟಸ್ಥ ರಾಷ್ಟ್ರಗಳ ಹಡಗುಗಳೂ ಗುತ್ತ ಹಡಗುಗಳಿಂದ ಮುಳುಗಿಸಲ್ಪಟ್ಟಿವು

ಪಶ್ಚಿಮ ರಣರಂಗದಲ್ಲಿ ಹೆಪ್ಪುಗಟ್ಟುವ ಹಿಮ!

ಪಶ್ಚಿಮ ರಣರಂಗ

ಪಶ್ಚಿಮ ರಣರಂಗದಲ್ಲಿ ಚಳಿಯು ವಿಪರೀತವಾಗಿದೆ ಹಿಮವು ನಿರಂತರ ಬೀಳುತ್ತಿದೆ ಹಾಗಾಗಿ ಹೆಚ್ಚು ಸೈನಿಕ ಚಟುವಟಿಕೆಗಳು ಇರುವುದಿಲ್ಲ

ವಿಮಾನ ಯುದ್ಧಗಳೂ ತೀವ್ರವಾಗಿ ನಡೆಯುತ್ತಿವೆ ಬ್ರಿಟಿಷ್ ವಿಮಾನಗಳು ಜರ್ಮನ ಸೈನ್ಯವನ್ನು ಸಂದರ್ಶಿಸಿ ಹೋಗ ದವು ಹಾಲೆಂಡಿನ ಯುಟ್ರೆಕ್ಟ್ ನಗರ ದಲ್ಲಿ ವಿಮಾನ ಯುದ್ಧವು ನಡೆಯಿತು

ಸೀನ್ ಫ್ರೆಡ್ ಡರ್ಗವನ್ನು ಬೆಳೆಸಿ ಕಟ್ಟುತ್ತಿರುವರಾಗಿ ಸುದ್ದಿ

ಮುಂದಕ್ಕೆ ಬೇಸಗೆ ಕಾಲದಲ್ಲಿ ಭಯಂಕರ ಯುದ್ಧವನ್ನು ಸುರುಮಾಡಲು ಇಂದು ಇಳ್ಳಡಿಯವರೂ ಒಳಗೆ ಸಿದ್ಧತೆ ನಡೆಸುತ್ತಿರುವರಾಗಿ ತಿಳಿದುಬರುತ್ತದೆ

ಕೊಲೊಂಬಸ್ ಹಡಗವು ಅಮೇರಿಕ ದಲ್ಲಿ ತಾನಾಗಿಯೇ ಮುಳುಗಿಕೊಂಡಿತು ಈ ಹಡಗದ ಬರವನ್ನೇ ಹಾರೈಸಿ ಬ್ರಿಟಿಸ್ ಹಡಗುಗಳು ದಾರಿಯಲ್ಲಿ ನಿಂತಿದ್ದವು ಶತ್ರುಗಳ ಕೈಗೆ ಸಿಗುವುದು ಬೇಡವೆಂದು ಅದ ಹಾಗೆ ಮುಳುಗಿರುವುದಾಗಿ ತಿಳಿದಿದೆ

ಉತ್ತರ ಸಮುದ್ರದಲ್ಲಿ ಸಿಟಿ ಓಫ್ ಕೋಟೆ ಎಂಬ ಭಾರೀ ಹಡಗು ತೋಟೆಯಿಂದ ಧ್ವಂಸವಾಯಿತು ಡೇರಿಯೋ ಎಂಬ ಬ್ರಿಟಿಷ್ ಹಡಗೂ ಮುಳುಗಿತು

ಫಿನ್‌ಲೆಂಡಿನ ಯುದ್ಧದಲ್ಲಿ ರಷ್ಯವು ಮುಂದೆಮತ್ತುವುದಾಗಿ ತಿಳಿದಿದೆ!

ಯುದ್ಧದಾರಂಭವಾದಂದಿನಿಂದ ಜರ್ಮನಿಯ ೨೩ ಹಡಗುಗಳು ನಾಶವಾದುವೆಂದೂ, ಇವು ೧೪೦೦೦೦ ಟನ್ ತೂಕವುಳ್ಳವುಗಳೆಂದೂ ತಾ ೨೦ರಂದು ಬ್ರಿಟಿಷ್ ಸರಕಾರವು ಪ್ರಕಟಪಡಿಸಿದೆ ಒಟ್ಟು ೧೯ ಜರ್ಮನ್ ಹಡಗುಗಳು ನಿತ್ರರಾಷ್ಟ್ರಗಳ ಸ್ವಾಧೀನವಿದೆಯೆಂದೂ ತಿಳಿದಿದೆ

ಜರ್ಮನ್ ಗೆಸ್ಟಪೋ ಸೈನ್ಯದ ನಾಯಕನಾದ ಹೆರ್ ಹಿಮ್ಲರನು ರೋಮಿಗೆ ತೆರಳಿರುವನು

ಅಮೇರಿಕ ೨೧ ರಾಷ್ಟ್ರಗಳು ತಾವು ತಟಸ್ಥವಾಗಿರುವೆವೆಂದು ಪುನಃ ಸಾರಿ ಹೇಳಿ, ಯುದ್ಧ ಹಡಗುಗಳನ್ನು ರಕ್ಷಿಸುವುದಿಲ್ಲವೆಂದು ಹೇಳಿವೆ

ಎಸ್ಟೋನಿಯದ ಹಡಗು ಉಲೋಗ ಎಂಬುದು ಜರ್ಮನ್ ಧಾಳಿಗೆ ಮುಳುಗಿತು ಸ್ಕಾಟಿಷ್ ಟ್ರಾಲರ್ 'ಟ್ರಿಸಿಟಿ' ಎಂಬುದು ಜರ್ಮನ್ ಧಾಳಿಗೆ ಭಗ್ನವಾಯಿತು 'ಅಡಾಲ್ಫ್ ವಾರ್ಟ್' ಎಂಬ ಸ್ವೀಡಿಷ್ ಹಡಗೂ ತೋಟೆಗೆ ತಗಲಿ ಮುಳುಗಿತು

ಇಟಲಿಗೂ ಜರ್ಮನಿಗೂ ಬಾಲ್‌ಸಾನೋ ಪ್ರದೇಶದ ವಿಷಯ ಬಿಡದೆ ಬಿಡದಂದಾಯಿತು.

ಗ್ರಾಫ್‌ಸ್ಪೀ ಹಡಗಿಗೆ ಹೆಚ್ಚಿನ ಸಮಯಾನುಕೂಲವನ್ನು ಕೊಡದ ವಿಷಯದಲ್ಲಿ ಜರ್ಮನಿಯು, ಉರುಗ್ವೇ ಸರಕಾರದ ಮೇಲೆ ತೀವ್ರ ಪ್ರತಿಭಟನೆ ತೋರಿಸಿತ್ತಷ್ಟೆ? ಈ ವಿಷಯದಲ್ಲಿ ತಾವು ಮಾಡಿದ್ದು ಸರಿಯೆಂದೂ, ಜರ್ಮನಿಯ ಪ್ರತಿಭಟನೆಯನ್ನು ಧಿಕ್ಕರಿಸಿ, ಉರುಗ್ವೇ ಸರಕಾರವು ಒಂದು ಪ್ರಕಟಣೆಕೊಟ್ಟಿದೆ

"ಈ ಯುದ್ಧದಲ್ಲಿ, ಒಂದೋ ನಾವು ಪ್ರಬಲ ಪಂಚಾಯಿಗಳೆನಿಸಿ ಕಾದಾಡಿ ಸಾಯಬೇಕು ಇಲ್ಲವೇ ಗೆಲ್ಲಬೇಕು" ಹೀಗೆ ಜರ್ಮನಿಯ ಪ್ರಚಾರ ಮಂತ್ರಿ ಗೋಬೆಲ್ಸನು ಹೇಳಿದನು



ಡಲಾಡಿಯರು

ಸ್ಪೆಂಡ್ ಪ್ರಧಾನರಾದ ಡಲಾಡಿಯರು ತಮ್ಮೊಂದು ಭಾಷಣದಲ್ಲಿ ಫಿನ್ನರಿಗೆ ಸ್ವಾಸ್ಥಿನಿಂದ ಸಹಾಯಕೊಡುವುದಾಗಿ ಹೇಳಿದರು ಎನ್ನರ ಸಾಹಸಗಳನ್ನು ಕೊಂಡಾಡಿ ಅವರಿಗೊದಗಿದ ಸಂಕಷ್ಟದಲ್ಲಿ ತಮ್ಮ ಸಹಾನುಭೂತಿಯನ್ನು ಸೂಚಿಸಿದರು

ರಕ್ಷದ ಸಂಕಟ

ರಶ್ಯ ಎನ್‌ಲೆಂಡ್ ಯುದ್ಧದಲ್ಲಿ ಇತ್ತೀಚೆಗೆ ಫಿನ್ನರು ವಿಜಯಗಳಾಗುವ ವಾರ್ತೆಯೇ ಬರುತ್ತಿದೆ ಅನೇಕ ಸಲ, ರಶ್ಯನರನ್ನು ಹಿಂದಕಟ್ಟಿ ಫಿನ್ನರ ತಮ್ಮ ಅತುಲ ಸಾಹಸವನ್ನು ತೋರಿಸಿದರು

ಹೀಗಾಗಿ ರಶ್ಯವು ಇಂದಿನ ಯುದ್ಧದಲ್ಲಿ ತನಗೆ ಜರ್ಮನಿಯು ಬೆಂಬಲ ಕೊಡಬೇಕಾಗಿ ಒಂದು ವಿನಂತಿಯನ್ನು ಹಿಟ್ಲರನಿಗೆ ಕಳುಹಿಸಿರುವುದಾಗಿಯೂ, ಅದಕ್ಕೆ ಹಿಟ್ಲರನು ನಕಾರ ಉತ್ತರವಿತ್ತಿರುವುದಾಗಿಯೂ ಬಲವಾದ ವದಂತಿಯಿದೆ

ಆಂಗ್ಲ-ಜಪಾನರ ವ್ಯವಹಾರ

ಟೋಕಿಯೋದಲ್ಲಿ ಆಂಗ್ಲ ಜಪಾನ ಸರಕಾರಗಳೊಳಗೆ ಮಾತುಕತೆ ನಡೆಯುತ್ತಿರುವುದಾಗಿಯೂ, ಹಿಂದಿನ ಟ್ರಿನಿಸ್ಟನ್ ಸ್ವೀಕರಣವು ಈ ಮಾತುಕತೆಯಲ್ಲಿ ತೀರ್ಮಾನಕ್ಕೆ ಬರುವುದಾಗಿಯೂ ತಿಳಿದಿದೆ

ಜರ್ಮನ್ ರಶ್ಯಗಳ ರಕ್ತ ಸಂಬಂಧ

'ರಶ್ಯ ಮತ್ತು ಜರ್ಮನಿಗಳ ಅನ್ಯೋನ್ಯತೆಯು ರಕ್ತದಿಂದ ಹುಟ್ಟುಗೂಡಿನಲ್ಪಟ್ಟಿದೆ'ಯೆಂದು ಸ್ಕಾಲಿನನು ಹೇಳಿದನು

ಕಳೆದ ವಾರದಲ್ಲಿ ತಟಸ್ಥರಾಷ್ಟ್ರಗಳ ನ್ನಿಟ್ಟು ಹಡಗಗಳು ಮುಳುಗಿದುವು

ಪೋಪರ ಶಾಂತಿಯ ಯತ್ನ!

'ಅನ್ಯಾಯದಿಂದ ದರ್ಪ ದುರಹಂಕಾರಗಳಿಂದ ನಿರಪರಾಧಿಗಳಾದ ಮಕ್ಕಳು ಹೆಂಗಸರು, ನಾಗರಿಕರು ಮೊದಲಾದವರ ಮೇಲೆ ಬಾಂಬ ಮೊದಲಾದ ವುಗಳನ್ನೆಸೆಯುವ ಮಾರಣ ಕೆಲಸವು ಖಂಡಿತವಾಗಿಯೂ ದೇವರಿಗೆ ಮೆಚ್ಚದ ಕೆಲಸವೆಂದೂ, ಅದುದರಿಂದ ಇಂದಿನ ಪ್ರಬಲರಾಷ್ಟ್ರಗಳು ಯುದ್ಧ ಸಂದರ್ಭಗಳನ್ನುಬಿಟ್ಟುಕೊಟ್ಟು ಂಚಿನಾಡಿಕೊಳ್ಳಬೇಕೆಂದೂ ಶಾಂತಿಸಂಧಾನಗಳ ಕಾರ್ಯದಲ್ಲಿ ಅಮೇರಿಕದ ಅಧ್ಯಕ್ಷರಾದ ರೂಸ್‌ವೆಲ್ಟರು ನ್ಯಾಯ ಕೈ ವಹಿಸಬೇಕೆಂದೂ ಪೋಪರು ಹೇಳಿದರು.

ಭಾರತೀಯ ವೃತ್ತಾಂತ

ಮದ್ರಾಸ್ ಪ್ರಾಂತ್ಯದ ಸಹಕಾರ ಸಂಸ್ಥೆಗಳ ಉದ್ಯಮಿಗಳ ಸಮ್ಮೇಳನವು ಡಿಸೆಂಬರ್ ೨೫ರಲ್ಲಿ ನಡೆಯಿತು

ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯ ಎಂಬ ಶಬ್ದಗಳಿಗೆ ಒಂದೇ ರೀತಿಯ ಅರ್ಥ ಸರಿಯಲ್ಲ ಪ್ರಜಾಪ್ರಭುತ್ವದಲ್ಲಿ ವ್ಯಕ್ತಿಯ ಸ್ವಾತಂತ್ರ್ಯವನ್ನು ಬಧಿಸುವ ಅನೇಕ ನಿಯಮಗಳೂ ವಿಧಿಗಳೂ ವಿಧಾನಗಳಿರುತ್ತವೆ' ಎಂದು ಸರ್ ಸ್ಟಾಫರ್ಡ್ ಕ್ರಿಪ್ಸರವರು ಬೊಂಬಾಯಿಲ್ಲೊಂದು ಕಡೆ ಭಾಷಣ ಮಾಡುತ್ತಾ ಹೇಳಿದರು ಯಾರೋಪಿನಲ್ಲಿ ಸ್ವತಂತ್ರ ರಾಷ್ಟ್ರಗಳಿಲ್ಲವೆಂದೂ ಹೇಳಿದರು

ಸರ್ ಜಾನ್ ಉಡಾಹೆಡ್‌ರವರು ಇಂದಿನಾ ಕಾನಿಸನಿನ ೨೬ನೇ ಕಲಮಿನ ಪ್ರಶ್ನೆರ ಎತ್ತೈಸರರಾಗಿ ನೇಮಕವಾಗಿರುವರು

ಪರೀಕ್ಷೆಯಲ್ಲಿ ನಕಲು ಮಾಡಿದ್ದರಿಂದ ರೊರಿಕ ಶಿಕ್ಷೆಯ ಪರಿಣಾಮವಾಗಿ ಅಲಹಾಬಾದಿನ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯೊಬ್ಬನು ರೈಲಿಗೆ ಸಿಕ್ಕಿ ಆತ್ಮಹತ್ಯೆ ಮಾಡಿಕೊಂಡನು

ಮುಸ್ಲಿಂ ಲೀಗು ಕಾಂಗ್ರೆಸ್ ಮಂತ್ರಿಮಂಡಳಗಳ ಮೇಲೆ ಮಾಡಿರುವಆರೋಪ ಪಟ್ಟಿಗಳನ್ನು ನಿಷ್ಪಕ್ಷಪಾತವಾಗಿ ವಿಚಾರ ಮಾಡಲು ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಸಂಸ್ಥೆಗಳ ಪ್ರತಿನಿಧಿಗಳ ಒಂದು ಕಮಿಷನನ್ನೂ ಸ್ಥಾಪಿಸಬೇಕೆಂದು ಮಿಸ್ಟರ್ ಅಬುಲ್ ಮಜೀದ್ ಸಿಂಧಿಯವರು ಮಾಡಿದ ಸಲಹೆಯನ್ನು ಮೌಲಾನಾ ಅಬುಲ್ ಕಲಾಂ ಆಜಾದರು ಒಪ್ಪಿರುವರು

ಅಖಿಲಭಾರತ ಸ್ವಾತಂತ್ರ್ಯ ದಿನವನ್ನು ಜನವರಿ ೨೬ರಲ್ಲಿ ಮಹಾಮಂಡಲಿಯಂತೆ ಆಚರಿಸಿಬೇಕೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ತಿಳಿಸಿದೆ

'ಬ್ರಿಟಿಷ್ ಪ್ರಾಂತಗಳಲ್ಲಿ ಯಾವ ರಾಜಕೀಯ ಪಂಗಡಗಳೂ ಸೇರದ ಮಂತ್ರಿಮಂಡಲಗಳು ಸ್ವಾಮಿನಿಯಾಗಬೇಕು ವಕ್ಷ ಸರ್ಕಾರಗಳಿಗಿಂತ ರಾಷ್ಟ್ರೀಯ ಸರ್ಕಾರವೇ ಮೇಲು' ಎಂದು ಮದ್ರಾಸಿನ ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ಯರು ಕುಂಭಕೋಣದಲ್ಲಿ ಭಾಷಣಮಾಡುತ್ತಾ ಹೇಳಿದರು.

ತಿರ ವಾಂಕೂರು ಸರ್ಕಾರದವರು ತಮ್ಮ ಸಂಸ್ಥಾನದಲ್ಲಿಯೇ ಒಂದು ಸಾಬಾನು ಕಾರ್ಖಾನೆಯನ್ನು ಸ್ಥಾಪಿಸುವರು

ಹೈದರಾಬಾದಿನಲ್ಲಿ ದಿಸೆಂಬರ್ ೧೯ರಲ್ಲಿ ಭಾಷಣಮಾಡುತ್ತ ಹೇಳಿದರು ಹೈದರಾಬಾದ್ ಕಾಂಗ್ರೆಸ್ಸಿನವರೂ ಇತರ ಮುಖಂಡರೂ ರಾಜಕೀಯ ಸುಧಾರಣೆಗಳಿಗಾಗಿ ಚಳುವಳಿ ನಡೆಸಬೇಕು ಎಂದೆ ಅವರು ಹೇಳಿದರು

ಅಖಿಲಭಾರತ ಪರಿಷತ್ತುಗಳು

ಅಳ್ಳೂರದಲ್ಲಿ ತಾ ೨೬ರಂದು ಜರಗಿದ ಅಖಿಲ ಭಾರತ ಶಿಕ್ಷಣ ಪರಿಷತ್ತಿನ ಉದ್ಘಾಟನೆಯ ಸಮಾರಂಭದನ್ನು ಪಂಡಿತ ಸೀತಾರಾಮಶಾಸ್ತ್ರಿಯವರಿಂದ ಮತ್ತು ನಮ್ಮ ಸ್ವಾತಂತ್ರ್ಯ ಸಂಗ್ರಾಮ ಮತ್ತು ಇನ್ನು ಮೇಲೆ ಹೆಚ್ಚು ತೀವ್ರನೆಗವ ಸಂಭವವಿರುವದರಿಂದಲೂ ಮುಂದಿನ ಸಲದ ಸ್ವಾತಂತ್ರ್ಯ ದಿನಾಚರಣೆಗೆ ವಿಶೇಷ ಮಹತ್ವ ಬಂದಿರುವದು ಆದ್ದರಿಂದ ಆ ಹೊತ್ತಿನ ದಿವಸ ನಾವು ನಮ್ಮ ರಾಷ್ಟ್ರೀಯ ಸ್ವಾತ್ರ್ಯ ಸಿದ್ಧಾಂತವನ್ನು ಘೋಷಿಸಬೇಕಲ್ಲದೆ ಆ ಹೋರಾಟದ ಸಿದ್ಧತೆಯನ್ನು ಮಾಡಬೇಕು ಆದ್ದರಿಂದ ವರ್ಕಿಂಗ್ ಕಮಿಟಿಯಾದವತ್ತೂ ಕಾಂಗ್ರೆಸ್ ಕಮಿಟಿಗಳನ್ನು ಕಾಂಗ್ರೆಸಿನವರಿಗೂ ಆ ಪ್ರತಿಜ್ಞೆಯನ್ನು ಅಂದಿನ ದಿವಸ ಕರಿಯಲ್ಪಡತಕ್ಕ ಸಾರ್ವಜನಿಕ ಸಭೆಗಳಲ್ಲಿ ತೆಗೆದುಕೊಳ್ಳಲು ಕೇಳಿಕೊಳ್ಳುವುದೆ

ಬಂಗಾಳದಲ್ಲೂ ಅಸ್ಪೃಶ್ಯತೆ ಮತ್ತು ಅಂಗ ದೌರ್ಬಲ್ಯದ ವಿಷಯಕ ಸಭೆಗಳು ಜರುಗಿದ್ದರೆ ಅವರು ಪ್ರತಿಜ್ಞೆಯನ್ನು ತೆಗೆದುಕೊಳ್ಳುವ ಸೆಗಳಲ್ಲಿ ಸೈಯ ಕ್ತಿಕಾನಿಯಾಗಿ ಸಾಮೂಹಿಕವಾಗಿಯಾಗಲಿ ತೆಗೆದುಕೊಳ್ಳತಕ್ಕದ್ದು ಮತ್ತು ಹೀಗೆ ಪ್ರತಿಜ್ಞೆ ತೆಗೆದುಕೊಂಡ ಮೇಲೆ ಕಾಂಗ್ರೆಸು ಸಂಸ್ಥೆಗಳೂ ವೈಕ್ತಿಗಳೂ ತಮ್ಮ ಸ್ವಾಂತಕ್ಕೆ ಕಾಂಗ್ರೆಸು ಕಮಿಟಿಗಳಿಗೆ ತಮ್ಮ ಹೆಸರು ಹಾಗೂ ವಿಳಾಸಸಹಿತ ಕಳಿಸತಕ್ಕದ್ದು

ಪ್ರತಿಜ್ಞೆಯನ್ನು ತೆಗೆದುಕೊಳ್ಳುವ ಮನಸ್ಸಿಲ್ಲದವರು ಮೇಲೆ ಬರೆದಿರುವಂತೆ ಪ್ರತಿಜ್ಞೆಯನ್ನು ಹೇಳಿದವು ವರ್ಕಿಂಗ್ ಕಮಿಟಿಯ ಇಚ್ಛೆಯಲ್ಲಿ ಅಹಿಂಸಾತ್ಮಕ ಸಂಸ್ಥೆಯಲ್ಲಿ ಒತ್ತಾಯಿಕ್ಕೆ ಸ್ಥಲವೂ ಎಡೆ ಸಿಗದು ಸಮಯ ಕಾಯದೆ ಭಂಗವನ್ನು ಸುರು ಮಾಡಿದರೆ ಅದರ ಅವಶ್ಯಕ ಕಾರಾಗೃಹಗಳನ್ನು ಶಿಸ್ತಿನಿಂದ ನಾಲಿಸಬೇಕಾಗುತ್ತದೆ

ದಕ್ಷಿಣಭಾರತ ಹಿಂದೀ ಪ್ರಚಾರಸಭೆಯ ಒಂಬತ್ತನೇ ವಾರ್ಷಿಕ ವದವೀದಾನ ಸಮಾರಂಭದ ದಿನವು ಮುಂಬಯಿಯಲ್ಲಿ ಮಾಜಿ ಪ್ರಧಾನರಾದ ಶ್ರೀ ಬಿ. ಜಿ. ಖೇರರ ಅಧ್ಯಕ್ಷತೆಯಿಂದ ಜರುಗಿತು.

ಕಾಶೀ ವಿಶ್ವವಿದ್ಯಾನಿಲಯಕ್ಕೆ ವರ್ಷ ಹಿಂದರ ಒಂದು ಲಕ್ಷ ರೂಪಾಯಿ ಸಾಕಾಗದೆ ಬರುತ್ತದೆಯೆಂದೂ, ಅದನ್ನು ಭಾರತ ಸರಕಾರವೂ, ಜನತೆಯೂ ನಿರೇಂದ್ರೂ ಉದಾರ ಸಹಾಯ ಮಾಡಿ ಪರಿಹರಿಸಬೇಕೆಂದೂ ವಿದ್ಯಾನಿಲಯದ ವೈಸ್ ಛಾನ್ಸಲರರಾದ ಸರ್ ರಾಧಾಕೃಷ್ಣನ್‌ರವರು ಒಂದು ವಿನ್ನಹ ಹೊರಡಿಸಿದ್ದಾರೆ

ಗೋರಕಪುರದಲ್ಲಿ ತಾ ೨೨ರಂದು ಹಿಂದೂ ಮುಸ್ಲಿಂ ಗೊಂದಲವಾಯಿತು ಗೀತಾ ಜಯಂತಿಯ ಸಂಬಂಧ ಮೆರವಣಿಗೆಯು ನುಸಿದಿಯು ಬಳಿ ಹಾದು ಹೋದ ದೇ ಇದರ ಕಾರಣವೆಂದು ತಿಳಿದಿದೆ

ಮುಂಬಯಿಯಲ್ಲಿ ವಿಮೋಚನಾ ದಿನಾಚರಣೆಯು ನಡೆಯಿತ, ಜನ್ಮಾಂಬೇಡ್ಕರ್ ಮೊದಲಾದವರು ಕಾಂಗ್ರೆಸಿನ ಮೇಲೆ ಆರೋಪ ಹೊರಿಸಿ ಪ್ರಲಾಪಿಸಿದರು ಮದ್ರಾಸಿನಲ್ಲಿ ನಿಷೇಧಾಜ್ಞೆ ಹೇರಿ ಕೆಲವು ಕಡೆಗಳಲ್ಲಿ ದಿನಾಚರಣೆಯು ನಡೆಯಿತು

ಮಂಜಾಬಿನ ಪ್ರಧಾನಿಯಾದ ಸರ್ ಸಿಕಂದರ್ ಹಯಾತ್‌ಖಾನರು ಬೊಂಬಾಯಿಗೆ ಬಂದಿದ್ದು ಅಲ್ಲಿ ಜಿನ್ನರನ್ನು ಕಂಡು ಮಾತನಾಡಿದರು ಅಲ್ಪ ಸಂಖ್ಯಾತ ಸಮಸ್ಯೆಯ ಕುರಿತು ಅವರು ಮಾತನಾಡಿದ್ದುದಾ ತಿಳಿಯುತ್ತದೆ

ಭಾರತೀಯ ನೌಕಾ ಉದ್ಯೋಗಿಗಳ ಬಿಡುಗಡೆ

ತಮಗೆ ಕೊಟ್ಟ ಭಡ್ತಿಯಂತೆ ಸರಕಾರವು ನಡೆಯಲಿಲ್ಲವೆಂದು ತಮ್ಮ ಪ್ರತಿಭಟನೆಗಾಗಿ ಸೂಚಿಸಿದ ಒಗೆ ಸುಮಂದಿ ಭಾರತೀಯ ನೌಕಾ ಉದ್ಯೋಗಿಗಳನ್ನು ಸೆರೆಯಲ್ಲಿಟ್ಟಿದ್ದರಷ್ಟೆ ಈಗ ಅವರನ್ನೆಲ್ಲಾ ಕಳುಹಿಸಿ ಎಲ್ಲರ ಬಿಡುಗಡೆ ಮಾಡಿ ತಿಂಗಳ ಅವರಿಗೆ ಕೆಲಸ ಕೊಟ್ಟಿರುವರೆಂದು ತಿಳಿದ ಬಂದಿದೆ

ಬೆಳ್ಳಿಯ ಬೆಲೆ

ಬೆಳ್ಳಿಯ ಬೆಲೆಯ ಏರಿದಂತೆ, ಭಾರತ ಸರಕಾರವು ಬಹಳ ಮಂಜಾಗ್ರತೆ ವಹಿಸುತ್ತಿರುವುದಾಗಿ ತಿಳಿದಿದೆ

ಸರ್ ಮೋರಿಸ್ ಗ್ವಾಯರ್

ಬಾರತದ ಪ್ರಧಾನ ನ್ಯಾಯಾಧೀಶರಾದ ಸರ್ ಮೋರಿಸ್ ಗ್ವಾಯರ್‌ರು ಕಾಶೀ ವಿಶ್ವ ವಿದ್ಯಾನಿಲಯದ ವದವೀದಾನ ಸಮಾರಂಭದ ಭಾಷಣದಲ್ಲಿ, ದೇಶಗಳ ಬೇರೆ ಬೇರೆ ಕಡೆಗಳ ರಾಜ್ಯಘಟನೆಗಳ ಕುರಿತು ವಿವರಿಸುತ್ತಾ, ಬಹು ಮಂದಿಯ ಮತಗಣನೆಯಿಂದ ಮಾಡುವ ರಾಜ್ಯಘಟನಾ ಸಮಿತಿಗಿಂತ ಕೆಲ ಮಂದಿ ಪ್ರತಿನಿಧಿಗಳಿಂದ ಚುನಾಯಿಸುವ ರಾಜ್ಯಘಟನಾ ಸಮಿತಿಯು ಶ್ರೇಷ್ಠವಾದುದು ಎಂದು ಹೇಳಿದರು ಭಾರತದ ಸಮಸ್ಯೆಯ ಬಗ್ಗೆ ಹಾರ ಮಾಡಲು ಹೊಸ ನಿಯಮಗಳನ್ನೇ ಮಾಡಬೇಕಾಗಿದೆಯೆಂದರು

ಹೊಸ ವರ್ಷದ ಅಭಿನಂದನೆ!

ನಮ್ಮ ಚಂದಾದಾರರಿಗೂ, ಜಾಹೀರಾತುದಾರರಿಗೂ ವಾಚಕರಿಗೂ, ಬರೆಹಗಾರರಿಗೂ, ಪ್ರತಿನಿಧಿಗಳಿಗೂ ಬಿಜಂಟಿರಿಗೂ, ಪ್ರೋತ್ಸಾಹಕರಿಗೂ ಮತ್ತು ಎಲ್ಲಾ ಹಿತಚಿಂತಕರಿಗೂ

ಇದೀಗ ಬರುವ

ಹೊಸ ವರ್ಷವು

ಆನಂದದಾಯಕವಾಗಲೆಂದು ನಾವು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

To

Our Subscribers Advertisers

Readers Writers Representatives

Agents Well wishers & Patrons we wish

A Bright & Happy New Year

ಹಿಂದೂ ಮುಸ್ಲಿಂ ಐಕ್ಯಸಂದೇಶವನ್ನು ಜನತೆಯ ಹೃದಯಕ್ಕೆ ಮುಟ್ಟಿಸುವೆವು!

ರಾಷ್ಟ್ರಪತಿಗಳ ವಿಚಾರಪೂರ್ಣ ನಿರ್ಧಾರ

ಸರ್ಕಾರರಿಗೆ ಮಹಾತ್ಮರ ಅಭಿನಂದನೆ ರಾಯಲ್ ಕಮಿಶನಿನ ಅಯೋಗ್ಯವಿಚಾರ

ಕಾಂಗ್ರೆಸಿನ ಸ್ವಾತಂತ್ರ್ಯ ಪ್ರತಿಜ್ಞೆ!

ಸರ್ಕಾರರ ರಾಜೀನಾಮೆಗೆ ಕಾರಣವೇನು?

ಮಂತ್ರಿಮಂಡಳವನ್ನು ರಚಿಸಿದ ಮೊದಲಿನಿಂದ ಇಲ್ಲಾ ಕಾರ್ಯಗಳೂ ಸರಾಗವಾಗಿ ನಡೆದುವು. ಆ ಮೇಲೆ ಮಂತ್ರಿಮಂಡಳ

ಜಲಾಂತರ್ಗಾಮಿ ನಾವೆಗಳು

ನಿಂದಾಸ್ಪದ ಭೀಕರ ಯುದ್ಧಾಸ್ತ್ರ

[ಎಷ್ಟು ಹಡಗುಗಳು ಮುಳುಗಿದುವು? ಗೊತ್ತಿದೆಯೆ? ಎನಿತೊಂದು ನಷ್ಟವಾಯಿತು? ನಿರಪರಾಧೀ ಜನರು ಎಷ್ಟು ಮಂದಿ ಮೃತ್ಯು ಮುಖರಾದರು? ರಾಷ್ಟ್ರಗಳ ವ್ಯಾಪಾರ ವಹಿವಾಟುಗಳು ಹೇಗೆ ಯಾದುವು? ನಿಜವಾಗಿ ಇಂದು ಸಮುದ್ರಯಾನವೆಂದರೆ ಮೃತ್ಯು ಪ್ರಯಾಣವಾಗಿಹೆ! ಸುತ್ತಲೂ ಎತ್ತಲೂ ಮರಣ ಭೀತಿ! ಆಕಾಶದಲ್ಲಿ ಹಾರಾಡಿ ಬಾಂಬೆಸೆವ ವಿಮಾನಗಳನ್ನು ಕಾಣಬಹುದು' ಎದುರಾಗಿ ಬರುವ ವಿರೋಧೀ ಹಡಗವನ್ನು ನೋಡಬಹುದು! ಆದರೆ ಕಾಣದಂತೆ, ಕೇಳದಂತೆ, ಅನಿರೀಕ್ಷಿತವಾಗಿ ಬಂದು ಹಾನಿಗೊಳಿಸುವ ಜಲಾಂತರ್ಗಾಮಿ ನಾವೆಗಳ ಉಪಟಳವು ತಡೆಯಲಾರದುದು!]

ಬ್ರಿಟಿಷರ 'ಕರೇಜಸ್' 'ರೋಯಲ್ ಓಕ್' ಮೊದಲಾದ ಮಹಾಮಹಾ ಹಡಗುಗಳನ್ನು ಜರ್ಮನರ ಜಲಾಂತರ್ಗಾಮಿ ನಾವೆ (Sub-marines)ಗಳು ಮುಳುಗಿಸಿದವು ಎಂದು ವಾರ್ತೆ ಬರುತ್ತಿರುವಾಗ ಸಹಜವಾಗಿ ಪ್ರತಿಯೊಬ್ಬನಿಗೂ ಅಂತಹ ನಾವೆಗಳ ವಿಷಯವಾಗಿ ತಿಳಿವ ಕುತೂಹಲವು ಹೆಚ್ಚಿದೆ. ಅದರ ಪೂರ್ವಾಪರಗಳನ್ನು ಈಗ ವಿಚಾರಿಸುವ.

ಯಾವಾಗ ಯಾರು ರಚಿಸಿದರು?

ಕಳೆದ ಶತಮಾನಗಳಲ್ಲಿ ಅಮೇರಿಕದಲ್ಲಿ ಸ್ವಾತಂತ್ರ್ಯಕ್ಕಾಗಿ ಯುದ್ಧವಾಯಿತು. ತಮಗೆ ತೊಂದರೆ ಕೊಡುತ್ತಿರುವ ಶತ್ರುಗಳ ಹಡಗುಗಳನ್ನು ನಾಶಮಾಡಬೇಕೆಂದು ನಿಶ್ಚಯಿಸಿದ ಒಬ್ಬ ಬುದ್ಧಿಶಾಲಿಯಾದ ವೈಜ್ಞಾನಿಕನು, ನೀರಿನಡಿಯಲ್ಲಿ ಗುಪ್ತವಾಗಿ ಸಂಚರಿಸುವ ದೋಣಿಯೊಂದನ್ನು ರಚಿಸಿದನು. ಅದೇ ಇಂದಿನ ಜಲಾಂತರ್ಗಾಮಿ ನಾವೆಯಾಗಿದೆ! ಇದು ೧೭೭೫ರೆಂದು ಬೋಸ್ಟನ್ ನಗರದಲ್ಲಿ ನಡೆಯಿತು!

ನೀರ ಮೇಲೆ ಕೊಡವನ್ನು ಕಮಚಿಕೆಳಗೆ ದಬ್ಬಿದರೆ ಕೊಡದೊಳಗೆ ನೀರು ಹೋಗುವುದಿಲ್ಲವೆಷ್ಟೆ? ಈ ರೀತಿಯಿಂದಲೇ ಈ ದೋಣಿಯೂ ನೀರಿನೊಳಗೆ ಇಳಿಯುವುದು. ಅದಕ್ಕೆ ಒಳಗಡೆಯೊಂದು ಮೇಲ್ಗಡೆಯೊಂದು ಬಾಗಿಲುಗಳು ಇವೆ. ಮೇಲಿನ ಬಾಗಿಲಿನ ಲೋಹದ ಭಾರದಿಂದ ಅದು ಕೆಳಕ್ಕೆ ಜಗ್ಗುವುದು. ಹೊರಗಿನ ವಸ್ತುಗಳನ್ನು ನೋಡಲು ಅದರೊಳಗೆ ಕಿಟಕಿಗಳಿವೆ. ಎಂಜಿನಿನ ಮೂಲಕ ಬೇಕಾದ ಕಡೆಗೆ ತಿರಿಗಿಸಬಹುದಾಗಿದೆ ಇದರ 'ಮುಂಗಡೆಯಲ್ಲಿ ಟಾರ್ಪೆಡೋ ಎಂಬ ಶತ್ರು ಹಡಗುಗಳನ್ನು ಜಜ್ಜಿ ಹುದಿಹುದಿಯಾದುವ ಆಯುಧವೊಂದನ್ನು ಇಟ್ಟಿರುತ್ತಾರೆ. ಈ ಟಾರ್ಪೆಡುಗಳು ಬಹಳ ತೀವ್ರಗತಿಯುಳ್ಳವುಗಳಾಗಿರುತ್ತವೆ ನಾವೆಯನ್ನು ಅಂದು ಬಹುಕಾಲ ನೀರೊಳಗೆ ಇಡಲು ಸಾಧ್ಯವಿರದೆ ಆಗಾಗ ಅರ್ಧ ತಾಸಿಗೊಮ್ಮೆ ನೀರ ಮೇಲೆ ಬರಬೇಕಾಗಿತ್ತು.

ರಚನೆಯಲ್ಲಿ ಪ್ರಗತಿ

ಇಂದಿನ ಜಲಾಂತರ್ಗಾಮಿ ನಾವೆಗಳು ಬಹಳ ಪ್ರಗತಿ ಹೊಂದಿವೆ ಅಂದಿನ ಮೊದಲ ನಾವೆಯ ರಚನೆಯನ್ನು ಕಂಡು ಯೂರೋಪಿನ ಸಕಲ ರಾಷ್ಟ್ರಗಳೂ ತಮ್ಮ ತಮ್ಮ ಉಪಯೋಗಗಳ ಸಲುವಾಗಿ ಅನೇಕ ನೂತನ ಯಂತ್ರ ಸಾಮಾಗ್ರಿಗಳ ಸುಲಭತೆಯುಳ್ಳ ಅಂತಹ ನಾವೆಗಳನ್ನು ಕಟ್ಟಿದರು ಇಂದು ಒಳಗಡೆ ವಿದ್ಯುದ್ದೀಪಗಳೇ ಮೊದಲಾದ ಸೌಕರ್ಯಗಳಿವೆ ಅವು ಸಾವಿರಾರು ಟನ್ನು ಭಾರದವುಗಳಿರುತ್ತವೆ ಶಕ್ತಿ ಆಕಾರ ಸೌಕರ್ಯಗಳು ಹೆಚ್ಚಿದ್ದು ಅಂದು ಬಿತ್ತಿದ ವಿಷ ಬೀಜವೇ ಇಂದು ದೊಡ್ಡ ವಿಷ ವೃಕ್ಷವಾಗಿ ಪರಿಣಮಿಸಿದ!

ಜರ್ಮನ್ ಜಲಾಂತರ್ಗಾಮಿ ನಾವೆಗಳು

ಜರ್ಮನರ ಯುಬೋಟ್ ಹಾವಳಿ!

ಜರ್ಮನರ ಯುಬೋಟುಗಳೆಂಬ ಜಲಾಂತರ್ಗಾಮಿ ನಾವೆಗಳು 'ಇಂದಿನ ಯುದ್ಧದಲ್ಲಿ ಬಹಳ ಹಾನಿಕಾರಕಗಳಿವೆ. ಎಷ್ಟೋ ಹಡಗುಗಳನ್ನು ಅವು ಮುಳುಗಿಸಿದವು. ಒಂದು ಹಡಗು ಹೋಗುವುದೆಂದರೆ ಮಿಲಿಯಾಂತರ ರೂಪಾಯಿಗಳ ನಾಶ! ಅಂತಹ ಸಾವಿರಾರು ಹಡಗುಗಳು ಮುಳುಗುವುದೆಂದರೆ ಒಂದು ರಾಷ್ಟ್ರಕ್ಕೆ ಎಷ್ಟು ನಷ್ಟವಾಗಲಾರದು ಎಂಬುದನ್ನು ನಾವು ಊಹಿಸಿ ತಿಳಿಯಬಹುದು.

ಒಂದು ಯುಬೋಟಿನಲ್ಲಿ ಹಲವು ಟಾರ್ಪೆಡೋಗಳೆಂಬ ಸಿಡಿದ ಮದ್ದಿನ ಆಯುಧಗಳಿವೆ. ಒಂದು ಗುಂಡಿಯನ್ನು ಒತ್ತಿದ ಕೂಡಲೇ ಆ ಟಾರ್ಪೆಡೋಗಳು ಹೊರಟು ಸಮೀಪವಿರುವ ಶತ್ರು ಹಡಗಕ್ಕೆ ಹೋಗಿ ಬಡಿದು ಸಿಡಿವವು ಅದರಿಂದ ಎಂತಹ ಹಡಗವಾದರೂ ಒಡೆದು ಭಗ್ನ ಭಗ್ನವಾಗಿ ಬಿಡುವುದು.

ಉಸಿರಾಟವೆಂತು?

ಹಿಂದಕ್ಕೆ ಕೇವಲ ಅರ್ಧ ತಾಸುಗಳಷ್ಟು ಮಾತ್ರ ಇವುಗಳು ನೀರಿನೊಳಗೆ ಮುಳುಗಿ ನಿಲ್ಲುತ್ತಿದ್ದುವು. ಆದರೆ ಈಗ ಬಹಳಕಾಲ ನಿಲ್ಲ ಬಲ್ಲುವು ಆದರೆ ಮೇಲೆ ಎಂದಾದರೊಮ್ಮೆ ಬರದೆ ಅವುಗಳಿಗೆ ಸಾಧ್ಯವೇ ಇಲ್ಲ ಸಂಪೂರ್ಣಹಡಗು ಮೇಲೆ ಬರದಿದ್ದರೂ, ಅದರ ತುದಿಯಾದರೂ ಮೇಲೆಬಂದು ಗಾಳಿ ಹೀರಬೇಕು.

ಇಂದು ಕಳೆದ ಮಹಾಯುದ್ಧ ಕಾಲಕ್ಕಿಂತ ಈ ನಾವೆಗಳು ಬಹಳ ಪ್ರಗತಿ ಹೊಂದಿ ಹಾವಳಿ ಹೆಚ್ಚು ಮಾಡುತ್ತಿವೆ. ಆದರೆ ಇವುಗಳನ್ನು ತಡೆಯುವ ಯತ್ನಗಳೂ ಇತ್ತೀಚೆಗೆ ಬಹಳವಾಗಿ ನಡೆಯುತ್ತವೆ!

ಪರ್ವತಾರೋಹಣವು ಮಾನವನ ಸಹನಾ ಶಕ್ತಿಯನ್ನು ಪರೀಕ್ಷಿಸುವುದಕ್ಕೆ ಬಹಳ ಶ್ರೇಷ್ಠವಾದ ಸಾಧನವಾಗಿರುತ್ತದೆ ಜಗತ್ತಿನ ಅತ್ಯುನ್ನತ ಶಿಖರಗಳನ್ನು ಏರಬೇಕೆಂದು ಪಣತೊಟ್ಟ ಮನುಷ್ಯನ ಪ್ರತಿಜ್ಞೆಗೆ ಬಹಳ ಕೆಡುಕಾದ ಹವೆಯಿಂದ ಕೂಡಿದ ಹಿಮಾಲಯ ಪರ್ವತಗಳು ಬಹಳ ಭಂಗವನ್ನುಂಟುಮಾಡುತ್ತವೆ ಇತ್ತೀಚೆಗೆ ಹಿಮಾಲಯ-ಪರ್ವತಾರೋಹಣವನ್ನು ಕೈಕೊಂಡ ಪೋಲ್ಂಡಿನ ಬಳಿದ ಮೇಲ್ವಿಚಾರಕರಾದ ಡಾಕ್ಟರರು 'ಓವಲ್ಟಿನ್'ನನ್ನು ಕಯಾರಿಸುವವರಿಗೆ ಬರೆದ ಪತ್ರವೊಂದು ಓದುಗರಿಗೆ ಬಹಳ ಸ್ವಾರಸ್ಯವಾಗಿ ಕಂಡುಬಾರದಿರದು ಈ ಪತ್ರದಲ್ಲಿ 'ಓವಲ್ಟಿನ್ ಪರ್ವತಾರೋಹಣದಂತಾ ತ್ರಾಸದಾಯಕವಾದ ಈ ಕಾರ್ಯದಲ್ಲಿ ಪೋಲೆಂಡಿನ ಪರ್ವತಾರೋಹಿ ದಳದವರಿಗೆ ಆಹಾರ ಪಾನೀಯವಾಗಿ ಯಾವ ರೀತಿಯಲ್ಲಿ ಸುಖವಾಯಿತೆಂದು ವಿವರಿಸಿರುವರು ಪತ್ರವು ಈ ಕೆಳಗಿನಂತಿದೆ.—

'ಪೋಲೆಂಡಿನ ಪರ್ವತಾರೋಹಿ ದಳದ ನಾಯಕರಾದ ಮಿ. ಎಡವರ್ ಕಾರ್ಪಿನ್ಸ್ಕಿಯವರ ತೀಕ್ಷ್ಣಚೇತನ ನಿಧನದಿಂದ ನೀವು ಬಹುಮಾನವಿತ್ತ ಒಂ ಪೌಂಡು ಓವಲ್ಟಿನಿನ ಗುಣ ವಿವೇಚನೆಯನ್ನು ನಿಮಗೆ ಇಷ್ಟರ ತನಕ ಬರೆಯಲು ಆಗಲಿಲ್ಲ. ಪರ್ವತಾರೋಹಿ ದಳದ ಇತರರಿಬ್ಬರು ಸದಸ್ಯರು ಈ ವಿಷಯ ನಿಮಗೆ ಬರೆಯಲು ನನಗೆ ಹೇಳಿರುತ್ತಾರೆ. ನಾನು ಈ ಪರ್ವತಾರೋಹಿ ದಳದ ವೈದ್ಯಕೀಯ ಚಿಕಿತ್ಸಕನಾದುದರಿಂದ ಪರ್ವತಾರೋಹಿಗಳು ತಮ್ಮ ಸಾಹಸದ ಕೆಲಸದಿಂದ ಮರಳಿ ನಂದಾದೇವಿ ಮತ್ತು ತ್ರಿಶೂಲಿ ಪರ್ವತಗಳ ಬುಡದ ತಮ್ಮ ಬಿಡಾರಕ್ಕೆ ಬಳಲಿ ಬಂದಾ 'ಓವಲ್ಟಿನ್' ಪಾನೀಯವನ್ನು ಕುಡಿಯಲು ಕೊಡುತಿದ್ದೆನು. ಈ ಪಾನೀಯವು ಉತ್ತೇಜಕವಾದ ಆಹಾರವು ಮಾತ್ರವಲ್ಲ, ದಣುವಿಕೆಯನ್ನು ಹೋಗಲಾಡಿಸಿ ನವಚೈತನ್ಯವನ್ನುಂಟುಮಾಡುವ ಉತ್ತಮ ಔಷಧಿಯಾಗಿರುತ್ತದೆ.

ಪೋಲಿಷ್ ಪರ್ವತಾರೋಹಿಗಳು ನಿಮ್ಮ ಬಹುಮಾನವನ್ನು (ಓವಲ್ಟಿನ್) ಬಹಳವಾಗಿ ಪ್ರಸಂಶಿಸಿರುತ್ತಾರೆ. ಪರ್ವತಾರೋಹಿಗಳು ಆಲ್ಮೋರ ಸ್ಟೇಷನಿಗೆ ಬಂದೊಡನೆ ತಮ್ಮ ತಮ್ಮ ಮನೆಗೆ ಹೊರಟು ಹೋಗಿರುತ್ತಾರೆ. ನಾನು ನಿಮ್ಮಲ್ಲಿಗೆ ಹಿಂತಿರುಗಿ ಅಲ್ಲಿಂದ ಈ ವರುಷ ಮೇ ತಿಂಗಳಲ್ಲಿ ಹೊಂಟಿರುವ ದಳವನ್ನು ಸೇರಿರುವೆನು.'

ಅವಳ ಅತಿಯಾದ ರಕ್ತದ ಒತ್ತಾಟವು ಕಡಿಮೆಯಾಯಿತು

ಮತ್ತು ಬೊಜ್ಜಾಗಿ ಬಲಿತ ದೇಹವು ಸ್ವಲ್ಪ ಕೃಶವಾಯಿತು—ಕ್ರುಶನ್ ಲವಣಕ್ಕೆ ವಂದನೆಗಳು

ರಕ್ತದ ಅತಿಯಾದ ಒತ್ತಾಟಕ್ಕೆ ಒಂದು ಕಾರಣವು ಅತಿಯಾದ ಕೊಬ್ಬು ದೇಹದಲ್ಲಿರುವುದು ಸಾವಿರಾರು ಡಾಕ್ಟರರು ಹೇಳುತ್ತಾರೆ ಹೆಚ್ಚಾದ ಕೊಬ್ಬನ್ನು ದೇಹದಿಂದ ನಾಶನಾಡಿದರೆ ಬೊಜ್ಜಾಗಿ ಬೆಳೆದ ದೇಹದವರು ರಕ್ತದ ಒತ್ತಾಟದಿಂದ ನಿವೃತ್ತರಾಗಬಹುದು ಈ ಹೆಂಗಸು ಕ್ರುಶನ್ ಲವಣವನ್ನು ಸೇವಿಸಿದರಿಂದ ಅಪುಗಳಿಂದ ನಿವೃತ್ತಳಾದಳು ಅವಳ ಪತ್ರವನ್ನು ಓದಿರಿ.

'ನನಗೆ ರಕ್ತದ ಒತ್ತಾಟುವಿಕೆ ಮತ್ತು ಬೆನ್ನಿನ ಮೇಲೆ ನೋವು ಇದ್ದಿತು ಅದಲ್ಲದೆ ಯಾವಾಗಲೂ ನನಗೆ ಬಚ್ಚುತಿತ್ತು ಮತ್ತು ನಾನು ಭಾರದಲ್ಲಿ ೨೦ ರಾತ್ಲು ಹೆಚ್ಚಾಗಿದೆ. ಎರಡು ಸೀಸೆ 'ಕ್ರುಶನ್ ಲವಣ'ವನ್ನು ನಾನು ಸೇವಿಸಿದೊಡನೆ ಒಂದು ವಾರದಲ್ಲಿಯೇ ಏಳು ರಾತ್ಲು ಭಾರವು ಕಡಿಮೆಯಾಯಿತು. ಬೆನ್ನಿನ ಬೇನೆಯು ನಿಂತಿತು. ರಕ್ತದ ಒತ್ತಾಟವಿಕೆಯು ಕಡಿಮೆಯಾಯಿತು ಈಗ ನಾನು ಅತ್ಯಂತ ಸುಖಿಯಾಗಿದ್ದೇನೆ ಮತ್ತು ಒಳ್ಳೇಯ ಆರೋಗ್ಯದಲ್ಲಿದ್ದೇನೆ. ಕ್ರುಶನ್ ಲವಣಕ್ಕೆ ವಂದನೆಗಳು ನಾನು ಅದನ್ನೇ ಯಾವಾಗಲೂ ಹೊಗಳುತ್ತೇನೆ

(ಮಿಸೆಸ್ ಡಿ. ಡಬ್ಲ್ಯೂ.)

ನಿಮ್ಮ ದೇಹದ ಅವಯವಗಳು ಯಾವಾಗ ಚೈತನ್ಯಯುಕ್ತವಾಗಿಲ್ಲವೋ ಆಗ ದೇಹದಲ್ಲಿದ್ದ ಕಶ್ಮಲವು ಹೊರಗೆ ತಳ್ಳಲ್ಪಡುವುದಿಲ್ಲ. ಆ ಕಶ್ಮಲವು ದೇಹವನ್ನು ಸೇರುತ್ತದೆ ಈ ಕಶ್ಮಲವು ರಕ್ತದ ಹರಿವಿಕೆಯನ್ನು ತಡೆಯುತ್ತದೆ ಮತ್ತು ರಕ್ತನಾಳಗಳನ್ನು ಒತ್ತುತ್ತದೆ. ಕ್ರುಶನ್ ಕ್ವಾರಗಳ ಮತ್ತು ಲವಣಗಳ ಸಮ್ಮೇಳನವಾಗಿರುತ್ತದೆ ಮತ್ತು ದೇಹದ ಎಲ್ಲಾ ಅವಯವಗಳನ್ನು ಶುಚಿಕರಿಸುತ್ತದೆ ರಕ್ತವನ್ನು ಶುದ್ಧವಾಗಿರಿಸುತ್ತದೆ. ಇದರಿಂದ ಶುಚಿಯಾದ ರಕ್ತವು ನಿಮ್ಮ ದೇಹದ ವಿವಿಧ ಅಂಗಾಂಗಗಳನ್ನು ಪ್ರವೇಶಿಸುತ್ತದೆ. ಕ್ರುಶನ್ ಲವಣವು ಎಲ್ಲಾ ಕೆಮಿಸ್ಟರಲ್ಲಿಯೂ, ಸ್ಟೋರುಗಳಲ್ಲಿಯೂ, ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ.

No 1V.

ಪ್ರಾಂತಿಕ ಸ್ವರಾಜ್ಯವೆಂಬುದು ಬರಿಯ ಮೋಸದ ಮಾಯಾಜಾಲ!

ಅದು ಸ್ವರ್ಗಸುಖವಲ್ಲ! ನಿಜವಾಗಿ ನರಕ ಬಂಧನ!

ಮಂತ್ರಿಗಳೊಬ್ಬರ ಹೃದಯೋದ್ಗಾರ

ಇಕ್ಕಟ್ಟಿನ ಇಸವಿಯ ರಾಜಕೀಯ ಸಂಸಾರಣೆಗನುಗುಣವಾದ ಪ್ರಾಂತಿಕ ಸ್ವರಾಜ್ಯವು ಹಿಂದುಸ್ಥಾನದ ಎಲ್ಲ ಪ್ರಾಂತ್ಯಗಳಲ್ಲಿಯೂ ಬಹಳ ಯಶಸ್ವಿಯಾಗಿರುವದೆಂದು ವಾಯ್ಸರಾಯರು ಅದನ್ನು ಮುಕ್ತಕಂಠದಿಂದ ಹೊಗಳಿದ್ದಾರೆ. ಪ್ರಾಂತಿಕ ಸ್ವರಾಜ್ಯದಲ್ಲಿ ಜನರು ಸ್ವರ್ಗ ಸುಖವನ್ನು ಅನುಭವಿಸುತ್ತಿದ್ದಾರೆ ಎಂದು ಅವರು ತಮ್ಮ ಕೃಪ್ಟಿಯನ್ನು ಸೂಚಿಸಿದ್ದಾರೆ.

ಅದರೆ ಪ್ರಾಂತಿಕ ಸ್ವರಾಜ್ಯವು ನಮ್ಮ ದೇಶದಲ್ಲಿ ಯಶಸ್ವಿಯಾಗಿದೆ ಎಂದು ಹೇಳಲಿಕ್ಕೆ ಯಾವ ಆಧಾರ ಪ್ರಮಾಣಗಳೂ ಇರುವದಿಲ್ಲ. ಪ್ರಾಂತಿಕ ಸ್ವರಾಜ್ಯಘಟನೆಯು ತುಂಬಾ ಮೋಸದೋಷ ಕುಂದುಕೊರತೆಗಳಿಂದ ತುಂಬಿಕೊಂಡಿರುತ್ತದೆ ಈ ಸ್ವರಾಜ್ಯದಲ್ಲಿ ರೂಪಾಯಿಗ-ಎರಡಾಣೆಯಷ್ಟರ ಅಧಿಕಾರವು ಮಾತ್ರ ಜನರ ಕೈಗೆ ಬಂದಿರಬಹುದು ಆದ್ದರಿಂದಲೇ ಕಾಂಗ್ರೆಸಿನಂಥ ಪ್ರಬಲ ರಾಜಕೀಯ ಸಂಸ್ಥೆಗೆ ಕೂಡ ಪ್ರಾಂತಿಕ ಸರಕಾರಗಳನ್ನು ನಡೆಸಿ ಇರುವದು ಅಸಾಧ್ಯವೆಂದು ಕಂಡು ಬಂದಿತು ಹನ್ನೊಂದು ಪ್ರಾಂತ್ಯಗಳ ಪೈಕಿ ಎಂಟು ಪ್ರಾಂತ್ಯಗಳಲ್ಲಿ ಅಧಿಕಾರ ಸೂತ್ರವನ್ನು ಕೈಗೆ ತೆಗದುಕೊಂಡ ಕಾಂಗ್ರೆಸ್ ಮಂತ್ರಿಮಂಡಲಗಳು ರಾಜನಾಮೆಯನ್ನಿತ್ತು ಹೊರಬಂದುವು ವಿಷಯದ ಸ್ಪಷ್ಟೀಕರಣವನ್ನು ಬಹುಸಂಖ್ಯೆಯ ಮೇಲಿಂದ ಮಾಡುವುದು ಪ್ರಜಾಸತ್ತೆಯ ನೀತಿನೀತಿಯಾಗಿದೆ ಅದಕ್ಕನುಸಾರ ಹೇಳುವದಾದರೆ ನಮ್ಮ ದೇಶದಲ್ಲಿ ಬ್ರಿಟಿಷರ ವರದಾನವಾಗಿರುವ ಪ್ರಾಂತಿಕ ಸ್ವರಾಜ್ಯವು, ಸಫಲವಾಗಿಲ್ಲವೆಂದೇ ಹೇಳಬಹುದು ಏಕಂದರೆ ಹನ್ನೊಂದು ಪ್ರಾಂತ್ಯಗಳ ಪೈಕಿ ಏಳು ಪ್ರಾಂತ್ಯಗಳಲ್ಲಿ ಕಾಂಗ್ರೆಸ ಮಂತ್ರಿಮಂಡಲಗಳ ರಾಜನಾಮೆಯಿಂದ ಅವುಗಳ ಸ್ಥಾನದಲ್ಲಿ ಬೇರೆ ಮಂತ್ರಿಮಂಡಲಗಳನ್ನು ಸ್ಥಾಪಿಸಲಿಕ್ಕಾಗದೆ ಗವರ್ನರುಗಳು ಸರ್ವಾಧಿಕಾರಗಳನ್ನು ತಮ್ಮ ಕೈಗೆ ತೆಗದುಕೊಳ್ಳಬೇಕಾಗಿ ಬಂದಿತು. ಗವರ್ನರುಗಳ ಸರ್ವಾಧಿಕಾರವು ಪ್ರಾಂತಿಕ ಸ್ವರಾಜ್ಯದ ಸಫಲತೆಯ ಒರೆಗಲ್ಲಾಗುವದಿಲ್ಲ.

ಬಹುಸಂಖ್ಯಾಕ ಪ್ರಾಂತ್ಯಗಳಲ್ಲಿ ಮಂತ್ರಿಮಂಡಲಗಳ ಮೂಲಕ ಶಾಸನ ಕಾರ್ಯವು ನಡೆಯುತಿದ್ದುದಾದರೆ ಪ್ರಾಂತಿಕ ಸ್ವರಾಜ್ಯ ಸಫಲವಾಯಿತೆಂದು ಹೇಳಬಹುದಾಗಿತ್ತು. ಈಗ ಅದು ಸಫಲವಾಗಿದೆ ಎಂದು ಹೇಳುವದು, ಜನರ ಕಣ್ಣಿಗೆ ಮಣ್ಣು ಹಾಕುವ ವ್ಯರ್ಥ ಪ್ರಯತ್ನವಾಗಿದೆ.

ಮಂತ್ರಿಗಳೊಬ್ಬರ ಸರ್ಟಿಫಿಕೇಟು

ಬಹುಸಂಖ್ಯಾಕ ಪ್ರಾಂತ್ಯಗಳಲ್ಲಿ ಮಂತ್ರಿಮಂಡಲಗಳು ರಾಜಿನಾಮೆಯನ್ನಿತ್ತು ಗವರ್ನರುಗಳು ಸರ್ವಾಧಿಕಾರವನ್ನು ವಹಿಸಿಕೊಳ್ಳಬೇಕಾಯಿತು ಎಂಬುದರಿಂದ ಮಾತ್ರ ಪ್ರಾಂತಿಕ ಸ್ವರಾಜ್ಯಕ್ರಮವು ಅಸಫಲವಾಯಿತೆಂದು ಹೇಳುವದಲ್ಲ. ಈಗ ಅಧಿಕಾರ ನಡೆಸುತ್ತಿರುವ ಕಾಂಗ್ರೆಸ್ಸಲ್ಲದ ಮಂತ್ರಿಮಂಡಲದ ಒಬ್ಬ ಮಂತ್ರಿಯುಕೂಡ—'ಪ್ರಾಂತಿಕ ಸ್ವರಾಜ್ಯವೆಂಬುದು ಒಂದು ದೊಡ್ಡ ಮೋಸ. ಮಂತ್ರಿಗಳು ಜನೋಪಕಾರದ ಯಾವ ಮಹತ್ವದ ಕೆಲಸವನ್ನೂ ಮಾಡದಂತೆ ಅವರ ಕೈಗಳು ಕಟ್ಟಿಹಾಕಲ್ಪಟ್ಟಿವೆ ರಾಷ್ಟ್ರಹಿತಕ್ಕೆ ಸಾಧಕವಾದ ಯಾವದಾದರೊಂದು ಯೋಜನೆಯನ್ನು ತಯಾರಿಸಿದಾಗ—ಆರ್ಥಿಕ ವಿಭಾಗವು ಹಣವಿಲ್ಲವೆಂಬ ರಾಗಾಲಾಪನೆಯನ್ನು ಮೊಡಿ ಯೋಜನೆಯೂ ಮೂಲೆಸೇರುವಂತೆ ಮಾಡುತ್ತದೆ ಎಂದಿರುವರು. ಅಂತೂ ಆರ್ಥಿಕ ಖಾತೆಯ ಅಧಿಕಾರಗಳು ಈ ಸ್ವರಾಜ್ಯದಲ್ಲಿ ಸರ್ವತಂತ್ರರೆನಿಸಿದ್ದಾರೆ ಸರಕಾರದಲ್ಲಿ ಮಂತ್ರಿಗಳು ಅವರನ್ನು ಮೀರಿ ಏನನ್ನೂ ಮಾಡಲಾರದವರಾಗಿರುವರು.

